# ಅಪರಂಜಿ

ತಿಳಿನಗೆಯ ಕಾರಂಜಿ

ಏಪ್ರಿಲ್ - 2014

## ಯುಗಾದಿ ವಿಶೇಷಾಂಕ



# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 31
ಸಂಚಿಕೆ – 7
ಏಪ್ರಿಲ್ – 2014

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 3 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 5 |
| ತುಂಡು ಕವಿ | **ನಾ. ಕಸ್ತೂರಿ** | 7 |
| ಮಹಾತ್ಮ ಅಟೆನ್‌ಬರೊ | **ಲೀಲಾ ಮಿರ್ಲೆ** | 10 |
| ಶ್ಲೇಷೋದ್ಯಾನದಿ.... | **ಅ.ರಾ. ಮಿತ್ರ** | 13 |
| ನಗುವು ಸಹಜದ..... | **ಶಿವು** | 17 |
| ರಾಜ್ಯೋತ್ಸವ | **ಶ್ರೀನಿವಾಸ ವೈದ್ಯ** | 31 |
| ಮಂಗಳ ಗ್ರಹಕ್ಕೆ..... | **ಇ.ಆರ್. ರಾಮಚಂದ್ರನ್** | 39 |
| ಧರ್ಮಕ್ಷೇತ್ರೇ..... | **ಡಾ. ಶ್ಯಾಮಲ ರವಿಶಂಕರ್** | 43 |
| ನಾಮದ...... | **ಭುವನೇಶ್ವರಿ ಹೆಗಡೆ** | 49 |
| ಬುದ್ಧಿವಂತರುಗಳಿವರು.. | **ಎಚ್.ಆರ್. ಹನುಮಂತರ ರಾವ್** | 53 |
| ಬದುಕಲು ಕಲಿಸುವ.. | **ಬೇಲೂರು ರಾಮಮೂರ್ತಿ** | 54 |

*ಮುದ್ರಣ:* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ:* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

| | | |
|---|---|---|
| ಹೊಸ ಬಾಟಲ್‌ನಲ್ಲಿ ಹೊಸ ವೈನು | **ಆನಂದ** | 58 |
| ನಗುವೇಗೌಡರ ಹಳ್ಳಿಯಲ್ಲಿ | **ಚಿಂತಾಮಣಿ ಕೊಡ್ಲೆಕೆರೆ** | 60 |
| ಕೊರವಂಜಿ ಪದಬಂಧ – 5 | **ವಿದ್ಯಾ ವಿ. ಹಾಲಭಾವಿ** | 65 |
| ಕೂಗು | | 66 |
| ಬರಲ್‌ನ ಒರಲ್ | **ಎನ್. ರಾಮನಾಥ್** | 69 |
| ಕುರುಡನ ಮಾಡಯ್ಯ ತಂದೆ... | **ಜಿ.ಬಿ. ಕೋಟೆ ಅನಂತ್** | 73 |
| ಫೋನೆಂಬ ಮಾಯಾಂಗನೆಗೆ.... | **ವೈ.ಎನ್. ಗುಂಡೂರಾವ್** | 77 |
| ಕಿಟ್ಟು – ಪುಟ್ಟು – ಸಿಟ್ಟು | **ವೈ.ವಿ. ಗುಂಡೂರಾವ್** | 83 |
| ಚುನಾವಣಾ ಆಮಿಷ | **ಎಂ.ಎಸ್. ನರಸಿಂಹಮೂರ್ತಿ** | 89 |
| ನಮ್ಮಜ್ಜಿಯರು | **ಎಸ್. ರಾಮಮೂರ್ತಿ** | 95 |
| ಫುಲ್ ಟೈಂ ಮಾಸ್ತರರ..... | **ಎಚ್.ಪಿ. ಕೃಷ್ಣಸ್ವಾಮಿ** | 101 |
| ರೋಗವೂ ಔಷಧವೂ.... | **ಅನಿತಾ ನರೇಶ್ ಮಂಚಿ** | 105 |
| ಭಿಕ್ಷಾಪಾತ್ರೆ ಪ್ರಸಂಗ | **ಶ್ರೀನಾಥ್ ಭಲ್ಲೆ** | 110 |
| ಹೀಗೊಂದು ವರ ಪರೀಕ್ಷೆ!! | **ಸಹನಾ ಪ್ರಸಾದ್** | 113 |
| ಆಚೆಮನೆ ಸುಬ್ಬಮ್ಮನ........ | **ಶ್ರೀವತ್ಸ ಜೋಶಿ** | 116 |
| ಬಿಲೀವ್ ಇಟ್ ಆರ್ ನಾಟ್... | **ಬಿ.ವಿ. ಭಾರತಿ** | 118 |
| ಯುಗ ಯುಗಾದಿ ಕಳೆದರೂ... | **ಗೋಪಾಲಿ** | 123 |
| ನೋಸ್ ಬುಕ್ | **ಸಿ.ಆರ್. ಸತ್ಯ** | 125 |
| ನೈಟಿ ಮತ್ತು ನೊಬಲ್ | **ಪ್ರಶಾಂತ್ ಆಡೂರ್** | 129 |
| ಸಂಗೀತ ಮತ್ತು ಹಾಸ್ಯ | **ಕೃಷ್ಣ ಸುಬ್ಬರಾವ್** | 131 |
| ಛೀ......ಕಳ್ಳಾ! | **ಕುಮುದಾ ಪುರುಷೋತ್ತಮ್** | 135 |
| ಒಬ್ಬ ಕನಾ ಕಥೆ | **ಎಂ.ಕೆ. ಭಾಸ್ಕರ ರಾವ್** | 140 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

# ಅಪರಂಜಿ ಕಿಡಿ

● **ಪ್ರಕಾಶ್**



ರಾತ್ರಿ ಒಂದರ ತನಕ ಹೋಟೆಲ್, ಬಾರ್ – ಸುದ್ದಿ

**● ಪೊಲೀಸರು ನಸುನಕ್ಕರಂತೆ !!**

★★★

''ಆಧಾರ್ ಕಾರ್ಡಿಗೂ ಗ್ಯಾಸ್ ಕನೆಕ್ಷನ್‌ಗೂ ಸಂಬಂಧವಿಲ್ಲ''

''ನಾಲ್ಕು ವರ್ಷದಲ್ಲಿ 60 ಕೋಟಿ ಆಧಾರ್ ಕಾರ್ಡ್ ಹಂಚಿಕೆ''

**● ಒಂದೇ ದಿನಪತ್ರಿಕೆಯ ಶೀರ್ಷಿಕೆಗಳು !!**

★★★

'ಜನತೆಗೆ ತಲುಪಿದಾಗ, ಜೀವನದಲ್ಲಿ ಬದಲಾವಣೆ' – ಕಾಂಗ್ರೆಸ್ ಹೇಳಿಕೆ

**● 'ಯಾರ' ಜೀವನ ?!**

★★★

ತಾಲಿಬಾನ್‌ನವರಿಗೆ ಕ್ರಿಕೆಟ್ ಹುಚ್ಚು ಹಿಡಿಸಿ ಬಿಟ್ಟರೆ ಎಲ್ಲರೂ ನೆಮ್ಮದಿಯಾಗಿರಬಹುದು ಎಂದು ಅಪರಂಜಿ ಸಲಹೆ ಮಾಡಿದ್ದಾಳೆ !

★★★

ಬಿ.ಜೆ.ಪಿ. ಏಕ ವ್ಯಕ್ತಿ ಪಕ್ಷವಾಗುತ್ತಿದೆ – ಶ್ರೀ ಅಡ್ವಾನಿ

**● ಸ್ಟೇಟಿಂಗ್ ದ ಒಬ್ವಿಯಸ್ ಅಂತ ಅನ್ನಬಹುದು !!**

★★★

ಮಠಗಳಿಗೆ ಹಣ; ಈಗ ಕಾಂಗ್ರೆಸ್ ಸರದಿ – ಸುದ್ದಿ

**● 'ಪಕ್ಷಾತೀತ ನಿಲುವು' ಅಂದರೆ ಇದೇ !!**

★★★

'ನೀತಿ ಸಂಹಿತೆ'ಯನ್ನು 'ಜಾರಿಗೆ' ತರಬೇಕಾದ ಕಾಲ ಬಂತಲ್ಲ ಅಂತ ಅಪರಂಜಿ ಮರುಗಿದಳಂತೆ !!

★★★

'ಕಾಲೇಜುಗಳ ವಿರುದ್ಧ ಕ್ರಮಕ್ಕೆ ಮೀನಾ ಮೇಷ' – ಶೀರ್ಷಿಕೆ

**● ಆಹಾ! ವಿದ್ಯಾಭ್ಯಾಸದಲ್ಲೂ ಜ್ಯೋತಿಷ್ಯ ?!**

★★★

ಸಂಸದ್ದಿಗೂ ಸಿನಿಮಾಗೂ ಬಿಡದ ನಂಟು – ಪತ್ರಿಕೆ

**● ಅಲ್ಲೂ ನಟನೆ, ಇಲ್ಲೂ ನಟನೇ !!**

★★★



# ಶ್ರದ್ಧಾಂಜಲಿ

ಕೊರವಂಜಿಯ ಮುಖ್ಯ ಲೇಖಕರಾಗಿ ಅಪರಂಜಿಯಲ್ಲಿ ಹಾಸ್ಯ ಲೇಖನಗಳನ್ನು ಬರೆಯುತ್ತಿದ್ದ ಹಾ.ರಾ. (ಎಚ್.ಆರ್. ಶಂಕರನಾರಾಯಣ) ಹತ್ತೊಂಭತ್ತು ಮಾರ್ಚ್ 2014ರಂದು ನಮ್ಮನ್ನು ಅಗಲಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿದ್ದ ಹಾ.ರಾ. ತಮ್ಮ ವಕೀಲಿ ವೃತ್ತಿ ಮತ್ತು ಬರವಣಿಗೆಯ ಪ್ರವೃತ್ತಿ ಎರಡರಲ್ಲೂ ಒಂದೇ ಉತ್ಸಾಹವನ್ನು ಕೊನೆಯವರೆಗೂ ಹೊಂದಿದ್ದರು.

ಜೀವನ ಚರಿತ್ರೆ ಬರೆಯಬೇಕೆಂಬ ಆಸೆ ಎಲ್ಲರಲ್ಲೂ ಇರುತ್ತೆ. ಆದರೆ ತಮ್ಮ ವೃತ್ತಿ ಜೀವನದ ಚೌಕಟ್ಟಿನಲ್ಲಿ ಹಾಸ್ಯಮಯ ಪ್ರಸಂಗಗಳನ್ನು ದಾಖಲಿಸಿದ ಅವರ ''ವಕೀಲಿ ದಿನಗಳು'' ಅತ್ಯಂತ ಜನಪ್ರಿಯವಾಯಿತು. ಇದರಲ್ಲಿ ಒಂದು ಪ್ರಸಂಗ. ಒಮ್ಮೆ ಒಬ್ಬ ಲಾಯರು ತನ್ನ ಸಾಕ್ಷಿಗಳು ಸ್ವಲ್ಪ ದಿನ ಊರಿಗೆ ಹೋಗುವುದರಿಂದ ಒಂದು ತಿಂಗಳು ಸಮಯ ಕೇಳುತ್ತಾನೆ. ನ್ಯಾಯಾಧೀಶರು ಅದಕ್ಕೆ ಒಪ್ಪದೆ ''ಅಲ್ರಿ, ಅವರು ಊರಿಗೆ ಹೋದರೆ ಒಂದು ತಿಂಗಳು ಯಾಕ್ರಿ ಬೇಕು?'' ಎಂದು ಕೇಳಿದಾಗ ಲಾಯರ್ ನಿಜ ಹೇಳಬೇಕಾಯಿತು. ''ಸ್ವಾಮಿಗಳೇ, ಊರಿಗೆ ಹೋಗುವುದು ಒಂದೇ ವಾರ. ಆದರೆ ಸಾಕ್ಷಿಗಳು ಹೋಗುತ್ತಿರುವುದು ಶಬರಿಮಲೈಗೆ. ಅವರು ಒಂದು ತಿಂಗಳು ವ್ರತದಲ್ಲಿರುತ್ತಾರೆ. ಆ ಸಮಯದಲ್ಲಿ ಅವರು ಸುಳ್ಳು ಹೇಳುವಂತಿಲ್ಲ'' ಎಂದಾಗ ನ್ಯಾಯಾಧೀಶರೂ ಸೇರಿದಂತೆ ಇಡೀ ಕೋರ್ಟ್ ನಗೆಯ ಅಲೆಯಲ್ಲಿ ತೇಲುತ್ತದೆ.

ಹಾ.ರಾ. ಅವರು ಅಣಕವಾಡು ಸ್ಪೆಷಲಿಸ್ಟ್. ಅವರ ''ಹಿಂದೇನ ಮುಂದೇನ ಎಂದೆಂದೂ ಹೀಗೇನಾ?'' ಅದಕ್ಕೆ ಸಾಕ್ಷಿ. ನಗೆಯು ಬರುತಿದೆ, ವಕ್ರೇಶನ ವಚನಗಳು, ನಗೆನಾಣ್ಯ ಇವೆಲ್ಲಾ ಕೃತಿಗಳು ಅವರ ಸಾಹಿತ್ಯದ ವೈವಿಧ್ಯತೆಯನ್ನು ತೋರುತ್ತವೆ. ಅ.ರಾ.ಸೇ. ಹೇಳುವ ಹಾಗೆ ಹಾ.ರಾ. ಅವರ ಹಾಸ್ಯ ಸಟ್ಲ್ ಆಗಿದೆ. ಅಷ್ಟೇ ತಿಳಿಯಾಗಿದೆ. ಅವರ ಮಂದಸ್ಮಿತ ಪುಸ್ತಕದ ಬಿಡುಗಡೆ ಸಮಾರಂಭಕ್ಕೆ ಗಣ್ಯಾತಿಗಣ್ಯರು ಬಂದು ಹಾ.ರಾ. ಅವರ ಹಾಸ್ಯದ ಹರಿಚಯ ಮಾಡಿಕೊಟ್ಟರು.

ಹಾ.ರಾ. ಅವರ ಆತ್ಮಕ್ಕೆ ಅಪರಂಜಿ ಚಿರಶಾಂತಿಯನ್ನು ಕೋರುತ್ತಾ ಅವರ ಕೊಡುಗೆಯನ್ನು ಸ್ಮರಿಸುತ್ತಾಳೆ.

*– ಅಪರಂಜಿ ಬಳಗ*

## ನಮ್ಮ ನಿಮ್ಮಲ್ಲಿ

ಅಪರಂಜಿ ಜನ್ಮ ತಾಳಿದ್ದು ಅಕ್ಟೋಬರ್ 1983ರಲ್ಲಿ. 2013 ಸೆಪ್ಟೆಂಬರಿಗೆ ಅವಳಿಗೆ ಮೂವತ್ತು ತುಂಬಿತು. ಮೂರು ದಶಕಗಳ ಕಾಲ ಕನ್ನಡದ ನಗೆರಸಿಕರನ್ನು ನಿರಂತರವಾಗಿ ರಂಜಿಸಿದ ಹೆಗ್ಗಳಿಕೆ ಆಕೆಯದು. ಕನ್ನಡದ ಪತ್ರಿಕಾ ಪ್ರಪಂಚದಲ್ಲಿ ಇದೊಂದು ಅಪೂರ್ವ ಸಾಧನೆ ಎಂಬುದು ನಮ್ಮ ಅನಿಸಿಕೆ. ಈ ಪ್ರಯತ್ನದಲ್ಲಿ ಬರಹಗಾರರು, ವ್ಯಂಗ್ಯಚಿತ್ರಕಾರರು, ಮುದ್ರಕರು ಆದಿಯಾಗಿ ಎಲ್ಲರೂ ಕೈಜೋಡಿಸಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಓದುಗರು ಅಪರಂಜಿಯನ್ನು ಬಹು ಆದರದಿಂದ ತಮ್ಮ ಮನೆಗಳಿಗೆ ಸ್ವಾಗತಿಸಿ ಆಕೆಯ ನಗುವಿಗೆ ದನಿಗೂಡಿಸಿದ್ದಾರೆ. ಇವರೆಲ್ಲರಿಗೂ ಅಪರಂಜಿಯ ಹೃದಯಪೂರ್ವಕ ನಮನಗಳು. ಈ ಸಂತಸವನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಏಪ್ರಿಲ್ ಐದನೆಯ ತಾರೀಖಿನಂದು ಶನಿವಾರ ಬೆಳಗ್ಗೆ ಒಂದು ಸಂಭ್ರಮದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ವಿಶೇಷ ಸಂಚಿಕೆಯ ಬಿಡುಗಡೆ ಆ ಕಾರ್ಯಕ್ರಮದ ಒಂದು ಅಂಗ.

ಅಪರಂಜಿಯ ಮೊದಲ ದಶಕದಲ್ಲಿ ಕೊರವಂಜಿಯ ಅನೇಕ ಬರಹಗಾರರು ತಮ್ಮ ಲೇಖನಗಳನ್ನು ಒದಗಿಸಿ ಅವಳನ್ನು ಪ್ರೋತ್ಸಾಹಿಸಿದರು. ದಿವಂಗತ ಟಿ. ಸುನಂದಮ್ಮ, ದಾಶರಥಿ ದೀಕ್ಷಿತ್, ಕೇಫ (ಡಾ॥ ಎ.ವಿ. ಕೇಶವಮೂರ್ತಿ), ರಾಮಿ (ಎ.ಎಸ್. ರಾಮಕೃಷ್ಣ), ಅ.ರಾ. ಮಿತ್ರ, ಹಾ..ರಾ (ಎಚ್.ಆರ್. ಶಂಕರ ನಾರಾಯಣ) ಮತ್ತು ಇತರ ಅನೇಕ ನಗೆಸಾಹಿತಿಗಳ ಲೇಖನಗಳು ಅಪರಂಜಿಯ ಮೊದಲ ದಶಕದ ಸಂಚಿಕೆಗಳನ್ನು ಅಲಂಕರಿಸಿದವು. ನಮ್ಮ ಗೌರವ ಸಲಹೆಗಾರರಾದ ಅ.ರಾ.ಸೇ. ಅವರ ಲೇಖನಗಳಂತೂ ತಮ್ಮ ಎಂದಿನ ಮೊನಚು ಹಾಸ್ಯದಿಂದ ಓದುಗರಿಗೆ ಕಚಗುಳಿ ಇಡುತ್ತಿದ್ದವು. ಕಡಲ ತೀರದ ಭಾರ್ಗವ ಎಂದು ಹೆಸರಾದ ಪೂಜ್ಯ ಶಿವರಾಮ ಕಾರಂತರು ಅನೇಕ ಕವನ ಮತ್ತು ಲೇಖನಗಳನ್ನು ಅಪರಂಜಿಗಾಗಿಯೇ ಬರೆದು ಅವಳನ್ನು ಪ್ರೋತ್ಸಾಹಿಸಿದರು. ಇದೇ ದಶಕದಲ್ಲಿ ಹೊಸ ನಗೆ ಬರಹಗಾರರ ಗುಂಪೊಂದು ಕ್ರಮೇಣ ಬೆಳಕಿಗೆ ಬಂದಿತು. ಇದರಲ್ಲಿ ದಿವಂಗತ ಎಂ.ಎಸ್.ಕೆ. ಪ್ರಭು, ಶಾಂತಾ ರಘು, ಇವರಲ್ಲದೇ ಲೀಲಾ ಮಿರ್ಲೆ, ಶ್ರೀನಿವಾಸ ವೈದ್ಯ ಇವರುಗಳು ಪ್ರಮುಖವಾಗಿ ನೆನಪಿಗೆ ಬರುತ್ತಾರೆ.

ಎರಡನೆಯ ದಶಕ ಹೊಸ ಬರಹಗಾರರ ದಂಡನ್ನೇ ಸೃಷ್ಟಿಸಿತು ಎನ್ನಬಹುದು. ಕುಮುದಾ ಪುರುಷೋತ್ತಮ್, ಶ್ಯಾಮಲಾ ರವಿಶಂಕರ್ ಮುಂತಾದ ಮಹಿಳಾ ಲೇಖಕಿಯರೇ ಅಲ್ಲದೇ, ಬೇಲೂರು ರಾಮಮೂರ್ತಿ, ಆನಂದ, ಗೋಪಾಲಕೃಷ್ಣ, ಕೃಷ್ಣಸುಬ್ಬರಾವ್, ವೈ.ವಿ. ಗುಂಡೂರಾವ್, ಎಂ.ಎಸ್. ನರಸಿಂಹಮೂರ್ತಿ, ಸೂರಿ ಹಾರ್ದಳ್ಳಿ ಮತ್ತಿತರರ ಲೇಖನಗಳು ಅಪರಂಜಿಗೆ ಹೊಸ ಚೈತನ್ಯವನ್ನು ತುಂಬುವುದರಲ್ಲಿ ಯಶಸ್ವಿಯಾದವು. ಬಾಗೂರು ಮಾರ್ಕಾಂಡೇಯ ಅವರ ವ್ಯಂಗ್ಯ ಚಿತ್ರಗಳು ಅಪರಂಜಿಗೆ ಪದಾರ್ಪಣ ಮಾಡಿದ್ದು ಈ

ದಶಕದಲ್ಲೇ. ಇದೇ ದಶಕದಲ್ಲಿ ಅಪರಂಜಿಯ ಬಳಗ ಹಾಸ್ಯಬ್ರಹ್ಮ ಗುಂಪಿನೊಡನೆ ಸೇರಿ ಹಾಸ್ಯೋತ್ಸವ ಎಂಬ ಒಂದು ನವನೂತನ ನಗೆ ಕಾರ್ಯಕ್ರಮವನ್ನು ಸೃಷ್ಟಿಸಿ ಕನ್ನಡದ ಜನತೆಗೆ ಬಳುವಳಿ ನೀಡಿದ್ದ ಒಂದು ವೈಶಿಷ್ಟ್ಯ.

ಮೂರನೆಯ ದಶಕದ ಸುಮಾರಿನಲ್ಲಿ ಅಪರಂಜಿಯ ನಿರ್ವಹಣಾ ಅನುಕೂಲಕ್ಕಾಗಿ ''ಕೊರವಂಜಿ ಅಪರಂಜಿ ಟ್ರಸ್ಟ್'' ಎಂಬ ಸಂಸ್ಥೆ ರೂಪುಗೊಂಡಿತು. ಸರ್ವಶ್ರೀ ಜಿ. ನಾಗೇಶ್, ಎ.ಆರ್. ರಾಜಗೋಪಾಲ್, ರವೀಂದ್ರ ರಾವ್, ವಿ.ಆರ್. ನಾಥ್ ಇವರುಗಳು ಬೇಲೂರು ರಾಮಮೂರ್ತಿ ಮತ್ತು ನನ್ನನ್ನು ಸೇರಿ ಈ ಸಂಸ್ಥೆಯ ಚುಕ್ಕಾಣಿಯನ್ನು ಹಿಡಿದವರು. ಇದೇ ಸಮಯದಲ್ಲೇ ಆನಂದ ಮತ್ತು ಗೋಪಾಲಕೃಷ್ಣ ನಮ್ಮ ಸಂಪಾದಕ ಮಂಡಳಿಯನ್ನು ಸೇರಿದರು. ಈಗ ಅಪರಂಜಿಗೆ ಬರೆಯುತ್ತಿರುವ ಲೇಖಕ ಲೇಖಕಿಯರ ಬಳಗ ಬಹುವಾಗಿ ವಿಸ್ತರಿಸಿದೆ. ಸಾಹಿತ್ಯ ಜಗತ್ತಿನಲ್ಲಿ ಖ್ಯಾತನಾಮರಾದ ನಾಗೇಶ್ ಹೆಗ್ಗಡೆ, ಇ.ಆರ್. ರಾಮಚಂದ್ರನ್, ಇವರೇ ಮೊದಲಾಗಿ ಅನೇಕ ಪ್ರತಿಭಾವಂತ ಸಾಹಿತಿಗಳು ಅಪರಂಜಿಯ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಈ ಶುಭ ಸಂದರ್ಭದಲ್ಲಿ ಅಪರಂಜಿ ಎಲ್ಲರಿಗೂ ಒಳಿತನ್ನು ಕೋರುತ್ತಾ ಭಗವಂತನಲ್ಲಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ.

**ಶಿವಕುಮಾರ್**


**ಅಪರಂಜಿಗೆ 30ರ ಸಂಭ್ರಮದ ಶುಭಾಶಯಗಳನ್ನು**

**ಕೋರುವ**

**ಶ್ರೀಮತಿ ಮತ್ತು ಶ್ರೀ ಅಚ್ಯುತರಾವ್ ಪದಕಿ**

ಹಿರಿಯ ರಂಗಕರ್ಮಿಗಳು ಮತ್ತು ಹಾಸ್ಯ ಕಲಾವಿದರು

139/2 ಕಲ್ಯಾಣಿ, 15ನೇ ಮುಖ್ಯ ರಸ್ತೆ, 35ನೇ ಅಡ್ಡ ರಸ್ತೆ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560 041

ದೂ: 080-26654235 ಸಂಚಾರಿ: 9945622150


********

# ನಾಸ್ಟಾಲ್ಜಿಯಾ

**ಕೊರವಂಜಿ ಪ್ರಾರಂಭವಾಗಿದ್ದು 1942ರಲ್ಲಿ. ಅಪರಂಜಿಯ ಪ್ರಾರಂಭ 1983ರಲ್ಲಿ. ಈ ಎರಡೂ ವರ್ಷಗಳ ಸಂಚಿಕೆಗಳಿಂದ ಒಂದೊಂದು ಪ್ರತಿನಿಧಿಸುವ ಬರಹಗಳನ್ನು ಆಯ್ದು ಇಲ್ಲಿ ನೀಡಿದ್ದೇವೆ. ಕೊರವಂಜಿಯ ಲೇಖನ ''ತುಂಡು ಕವಿ''ಯನ್ನು ಬರೆದವರು ಶ್ರೀ ನಾ. ಕಸ್ತೂರಿ. ಅಪರಂಜಿಯಿಂದ ಆಯ್ದ ''ಮಹಾತ್ಮ ಆಟೆನ್‌ಬರೋ'' ಬರಹವನ್ನು ಶ್ರೀಮತಿ ಲೀಲಾ ಮಿರ್ಲೆ ಅವರು ಬರೆದದ್ದು.**

**- *ಸಂಪಾದಕ***

***ಕೊರವಂಜಿಯಿಂದ....***

# ತುಂಡು ಕವಿ

**• ನಾ. ಕಸ್ತೂರಿ**

ಮೊನ್ನೆ ನಾನು ಪಬ್ಲಿಕ್ ಲೈಬ್ರರಿಯಿಂದ ಒಂದು ಪುಸ್ತಕ ಎರವಲು ಪಡೆದೆ. ಅಂದರೆ ಇದನ್ನೇ ದೊಡ್ಡ ಸಾಹಸ ಕಾರ್ಯ ಅಂತ ನಾನು ನಿಮ್ಮ ಮುಂದೆ ವಿವರಿಸುತ್ತಿಲ್ಲ. ಅನೇಕ ಲೈಬ್ರರಿಗಳಲ್ಲಿ ಗಾಜಿನ ಮೂಲಕ ಪುಸ್ತಕದ ಬೆನ್ನ ಮೇಲೆ ಲಿಖಿತವಾಗಿರುವ ಹೆಸರನ್ನು ಕಂಡು ಹಿಡಿದು ನಿಧಿಯನ್ನು ಕಾಯುವ ಭೂತದಂತಿರುವ ಗುಮಾಸ್ತೆಯವರಿಂದ ಬೀಗ ತೆಗೆಸಿ ಬೇಕಾದ ಪದಾರ್ಥದೊಂದಿಗೆ ಹೊರ ಬರುವುದೇ ಒಂದು ಭಗೀರಥ ಪ್ರಯತ್ನ, ಒಪ್ಪಿದೆ. ಆದರೆ, ನನ್ನ ವಿಷಯ ಅನಂತರದ್ದು. ಪುಸ್ತಕವನ್ನು ಬಿಚ್ಚಿ ಹಾಳೆಗಳನ್ನು ತಿರುವಿ ಹಾಕಿದಾಗ ನನ್ನ ಕಣ್ಣಿಗೆ ಬಿದ್ದ ಒಂದು ಸೋಜಿಗ!

ಹಲವಾರು ಜನ ಆ ಪುಸ್ತಕವನ್ನು ಆಗಲೇ ಓದಿದ್ದರು. ಅರಶಿನ, ತುಲಸೀ ಪತ್ರ, ದವನ, ನವಿಲುಗರಿ ಚೂರು, ಎಣ್ಣೆ ಕಾಗದ, ಗಾಂಧೀಚಿತ್ರ, ಜೇಡರನ ಕಾಲು, ಜಿರಲೆಯ ಕಳೇಬರ, ಮುಂತಾದ ವಾಚನಾ ಚಿಹ್ನೆಗಳು ಹಾಳೆಗಳ ಸಂದಿನಲ್ಲಿದ್ದು, ಓದಿದವರ ಕುಲಗೋತ್ರ ವಯಸ್ಸು ಮುಂತಾದವುಗಳನ್ನು ನನಗೆ ಪರಿಚಯ ಮಾಡಿದವು.

ಆದರೆ, ಇಂತಹ ಬುಕ್ ಮಾರ್ಕ್‌ಗಳು ಸರ್ವೇ ಸಾಧಾರಣ. ನನ್ನ ಪುಸ್ತಕದಲ್ಲಿ ಸುಮಾರು 20ನೇ ಪುಟದಲ್ಲಿ ಕತ್ತೆ ಕಾಗದದ ಮೂರು ಹಾಳೆಗಳಿದ್ದುವು. ಅವುಗಳನ್ನು ಯಾರೋ ಮರೆತು ಅಲ್ಲಿಟ್ಟು ಈಗ ತಡಕಾಡುತ್ತಿರಬೇಕೆನಿಸಿತು, ಓದಿ ನೋಡಿದ ಮೇಲಂತೂ, ಆ ಅಪರಿಚಿತ ವ್ಯಕ್ತಿಯ ಮೇಲೆ ಅಪಾರವಾದ ಪೂಜ್ಯಭಾವನೆ ಮೂಡಿತು. ಕನ್ನಡ ಕುಲವನ್ನೇ ಉದ್ಧರಿಸಬಲ್ಲ ಕಾರಣ ಪುರುಷನ ಕರಡುಕವನಗಳು ಆ ಹಾಳೆಗಳಲ್ಲಿದ್ದುವು. ಆತ ಅಷ್ಟು ಮಹಾನುಭಾವನಾಗಿದ್ದರೂ ಕೂಡ, ಆತ್ಮವಿಶ್ವಾಸ ಸಾಲದೆ ಆಂದೋಲನಕ್ಕೆ ಸಿಲುಕಿ ಇನ್ನೂ

ಅಪ್ರಕಟಿತ ವೀರನಾಗಿಯೇ ಉಳಿದಿದ್ದನೆಂದು ನನಗೆ ತೋರಿತು. ಏಕೆಂದರೆ, ಅಲ್ಲಲ್ಲಿ ಆ ಹಾಳೆಗಳಲ್ಲಿ, ''ನನ್ನಿಂದ ಸಾಧ್ಯ'' ''ಹೇ ಕಾವ್ಯದೇವಿ!''

''ಏಕೆ ಬಾರಳ್ಳೈ ಪ್ರಾಸ?'' ''ಅಯ್ಯೋ?'' ಎಂದು ಮುಂತಾಗಿ ಬಿಸುಸುಯ್ದಿದ್ದನು. ಆತನನ್ನು 'ನು'ಕಾರದಿಂದಲೇ ವಿವರಿಸುವ ಧೈರ್ಯ ನಡೆಗೆ ಬಂದದ್ದು ''ಏಕೆ ಬಾರಳ್ಳೈ ಪ್ರಾಸ?'' ಎಂಬ ಉದ್ಗಾರದಿಂದ ಪ್ರಾಸವನ್ನು 'ಳ್ಳೈ' ಎಂದು ಸಂಬೋಧಿಸಬೇಕಾದರೆ, ಆ ಬರಹ ಬಳೆಗೈಯದಾಗಿರಲಾರದು.

ಅಲ್ಲದೆ, ಆ ಹಾಳೆಗಳಲ್ಲಿದ್ದುದೆಲ್ಲವೂ ತುಂಡು ಕಾವ್ಯಗಳು. ಸ್ಫೂರ್ತಿ ಬಂದಾಗ, ಕವಿ ಕಲಿಯಾದಾಗ, ಖುಷಿ ತನ ಚಿಮ್ಮಿದಾಗ, ಕೋಗಿಲೆಯ ದನಿ ಕಿವಿಯ ಬಾಗಿಲು ಬಡಿದಾಗ, ಒಂದು ಪಂಕ್ತಿ ಹೊರ ಹೊಮ್ಮಿ ಕಾಗದದಲ್ಲಿ ಕಾಣಿಸಿಕೊಂಡಿರಬೇಕು. ಮೋಡದ ಮರೆಯಿಂದ ಸೂರ್ಯದೇವನು ಇಣಿಕಿ ನೋಡಿದಾಗ, ಒಂದು ವಿಶೇಷಣ, ಪೂರ್ಣಿಮಾ ಚಂದ್ರನ ಸುತ್ತ ನಕ್ಷತ್ರಗಳು ನಲಿದಾಡಿ ನೀಲಾಕಾಶದಲ್ಲಿ ಕಣ್ಣು ಮುಚ್ಚಲು ಪ್ರಾರಂಭಿಸಿದಾಗ, ಒಂದು ಕಿರುಸಾಲು – ಹೀಗೆ ಆ ಕವಿಯು ಭಾವನಾತರಂಗಗಳಿಗೆ ವಾಗ್ದೇವಿ ಗರಿ ಗೂಡಿಸಿದ್ದಳು.

ಆತನ ಹೆಸರೇನು, ಆತನು ಉಸಿರ್‌ವಂತನಾಗಿ ಓಡಾಡುತ್ತಿರುವನೆ – ಎಂಬ ಪ್ರಶ್ನೆಗಳಿಗೆ ಆ ಹಾಳೆಗಳು ನನಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಬಸ್ಸಿನಲ್ಲಿ ನಾನು ಪುಸ್ತಕವನ್ನು ಬಿಚ್ಚಿದ್ದಾಗ ಅವು ಹೊರಬಿದ್ದು ಗಾಳಿಯಲ್ಲಿ ತೇಲಾಡಿ ಅತ್ತಿತ್ತ ಸುಳಿದಾಡಿ ಗರಗರ ಸದ್ದು ಮಾಡಿ ಸುಮ್ಮನಾದವು ಅಷ್ಟೆ! ಆದರೂ, ಆ ಅಜ್ಞಾತ ಕವಿಯ ಮೆದುಳನ್ನು ಕನ್ನಡಿಗರಿಗೆ ಹಂಚಿ ಕೃತಾರ್ಥನಾಗಲು ನಾನು ತೀರ್ಮಾನಿಸಿದ್ದೇನೆ. ಆ ಹಾಳೆಗಳಲ್ಲಿದ್ದ ಪ್ರತಿಭೆಯ ಪುಡಿಗಳನ್ನು ಇಲ್ಲಿ ಪ್ರಕಾಶ ಪಡಿಸುತ್ತೇನೆ ಅವುಗಳನ್ನು ಯಾರು ಬೇಕಾದರೂ ತಮ್ಮ ಕವನಗಳಲ್ಲಿ ಉಪಯೋಗಿಸಿಕೊಂಡು, ಅವುಗಳಿಗೆ ಹೊಸ ಕಳೆ ಕೊಡಬಹುದು. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, ಕನ್ನಡಮ್ಮನ ಕಂಠ ಹಾರಕ್ಕೆ ಈ ಮಣಿಗಳೂ ಸೇರಿದರೆ ಕೃತಾರ್ಥ. ಅಖಂಡ ಕವಿಗಳಿಗೂ ಅಮೃತತ್ವ ಲಭಿಸಿದ ಹಾಗಾಗುತ್ತದೆ.

ಸೂರ್ಯ : 1 ಬಾಂಬುಗಳ ತವರೂರು; ಲ್ಯಾಂಪುಗಳ ಹಿರಿಯರಸ

2 ತಾರೆಗಳ ತಾತ

3 ರೇಗಿದತ್ತೆಯ ರಕ್ತ ನಯನದಂತೆ

4 ನೆರಳ ನೀಡಿದ ದೇವ

ಚಂದ್ರ : 1 ಅನೀಮಿಯಾನನೆ ಚಂದ್ರೆ?

2 ಗೋಳಾದ ಗಾಳಿ ಪಟ ದಾರಕಿತ್ತಲೇವಂತೆ!

ಹಿಮಾಲಯ : 1 ಹತ್ತಿದವರಿಗಿತ್ತೆ ಚಟ್ಟವೆಂದೊರಲುವಾ ಕಡುಬೆಟ್ಟ

2 ಮಹಾಪುರಾತನ ಪಂಕದೊಳ್, ಪವಡಿಸಿಹ ಮಹಿಷಗಳ ಮಾಲೆ!

3 ಗೂನು ಬೆನ್ನಿನ ಸಾಲು

4 ಬಂಡೆಗಳ ದೊಂಬಿ

5 ರಕ್ಕಸರೆಕ್ಕಲ್ ರಾಜಾ ಎಂದು ಗೋಲಿಯಾಡಲು ತಂದ ಬಂಡೆಗಳ ತಂಡ

ಜೋಗ : 1 ಏಂಧಾವತಿ ಶರಾವತೀ!

2 ಬೆಳ್ಗಿರಿ ನಿರಂತರಂ ಧುಮುಕಿ ಧುಮುಕಿ ನೆಗೆದಂತೆ

3 ಶ್ವೇತಾಂಬರದ ಜಾತ್ರ ಪಾತಾಳಕಿಳಿದಂತೆ

4 ಬಿಳಿ ಅರಿವೆ ಹಿರಿ ಇರುವೆ ಸಾಲಾಗಿ ಸರಿದಂತೆ

5 ರಾವಣನ ಹಾಸುಗೆಯ ಕತ್ತರಿಸಿ ಕಿತ್ತೆಸೆದು ವಾನರರು ಕೋಪದಲಿ ಹತ್ತಿಯನು ಸುರಿದಂತೆ

ಕಬ್ಬು : 1 ಸಕ್ಕರೆಯ ಪೊಟ್ಟಣಕೆ ಗರಿ ಬೇರು ಬಂದಂತೆ

2 ಸಿಹಿ ಹಸುರು ಡೊಂಕಾಗಿ ಗೆಣೆಗೂಡಿ ಬೆಳೆದಂತೆ

ಗುಲಾಬಿ : 1 ಗುಲಾಮತನದಲಿ ಒಂದು ಲಾಬಿಯಲ್ಲಿ ನಿಲುವ ಹೂ!

2 ? ? ? ?

ಕುದುರೆ : 1 ಹುರುಳಿ ಎಂಜಿನ ತಂದು ಲಾಂಗೂಲ ಕಿವಿ, ಮೂತಿ, ಕೈಕಾಲು ಲಗತ್ತಿಸಿ, ಕೆನೆ ಕಲಿಸಿ ಬಿಟ್ಟಂತೆ!

ಬೆಕ್ಕು : 1 ಸಂಕ್ಷೇಪ ವ್ಯಾಘ್ರವೇ!

ಹಾರ್ಪ್ : 1 ಹಾ! ರ್ಪ! ಹಾ! ರ್ಪ! ಎಂದೆಂಬ ಚೀಲವೇ!

ಹಾರ್ಮೋನಿಯಂ : 1 ದುರಾದಿ ದುರಂತ ದುರ್ಮಾಧ್ಯವಾದ್ಯ!

2 ಒತ್ತಿದರೆ ಸತ್ತೆ ಎಂದೊ ದುರ್ಮೊರಲುವುದು ನಿತ್ಯ!

ಮೇಲೆ ಕೊಟ್ಟಿರುವ ವಾಕ್ಯರತ್ನಗಳನ್ನು ತಮ್ಮ ವಚನಗಳಲ್ಲಿ ಪೋಣಿಸಿಕೊಳ್ಳಲು ಎಲ್ಲರಿಗೂ ಸ್ವಾತಂತ್ರವುಂಟೆಂದು ಹೇಳಲಿಚ್ಛಿಸುತ್ತೇವೆ. ಹೇಗಾದರೂ, ಕನ್ನಡ ಕೊಳ್ಳಿತಾದರೆ, ತೀರಿತು... ಆ ಹಾಳೆಗಳ ಒಡೆಯರು ತಕ್ಕ ರುಜುವಾತುಗಳೊಂದಿಗೆ ಬಂದರೆ, ಅವುಗಳನ್ನು ಹಿಂದಕ್ಕೆ ಕೊಡಲಾಗುವುದು....

# ಮಹಾತ್ಮ ಅಟೆನ್‌ಬರೊ

• ಲೀಲಾ ಮಿರ್ಲೆ

**ಈ** ಶತಮಾನದಲ್ಲಿ ಭಾರತೀಯರ ಕೃತಜ್ಞತೆಗೆ ಒಳಗಾದ ಮಹಾತ್ಮನಾರು ಎನ್ನುವ ಪ್ರಶ್ನೆಗೆ ನನ್ನ ಉತ್ತರ ಸರ್ ರಿಚರ್ಡ್ ಅಟೆನ್‌ಬರೊ! ನನ್ನ ಈ ಮಾತನ್ನು ಶಾಲಾ ಉಪಾಧ್ಯಾಯ/ಉಪಾಧ್ಯಾಯಿನಿಯರ ನೇಕರು ಒಪ್ಪುತ್ತಾರೆಂಬ ಭರವಸೆ ನನಗಿದೆ.

ಈಗಿನ ವಿದ್ಯಾರ್ಥಿಗಳಿಗೆ 'ಗಾಂಧಿ' ಎಂದರೆ ಮಹಾ ಬೇಸರ. ಆ ಹೆಸರು ಕೇಳಿದರೆ ಒಂದು ತರಹ ಜಿಗುಪ್ಸೆ. ಏಕೆ ಈ ವಿರುದ್ಧ ಪ್ರತಿಕ್ರಿಯೆ ಅಂತ ಬೇಕಾದಷ್ಟು ಯೋಚಿಸಿದೆ. ಇದಕ್ಕೆಲ್ಲಾ ನಮ್ಮ ಪಠ್ಯಪುಸ್ತಕಗಳೇ ಕಾರಣ ಎಂದು ನನಗೆ ಅನ್ನಿಸುತ್ತದೆ. ಏಕೆ ಅಂತಿರಾ?

'ಓ ನಾಮದಲ್ಲೇ ಚಾಳೇಶ' ಅಂದ ಹಾಗೆ ಮೊದಲನೆಯ ತರಗತಿಯಲ್ಲೇ ಶುರು 'ಗಾಂಧೀತಾತ'ನ ಪಾಠ. ಯಾವ ವಿಷಯವೇ ಆಗಲಿ, ಪಠ್ಯ ಪುಸ್ತಕದಲ್ಲಿ ಅದು ಕಾಣಿಸಿಕೊಂಡರೆ ಅಲ್ಲೇ ಅದಕ್ಕೆ ಅರ್ಧಾಯಸ್ಸು ತಕ್ಷಣ ಅದು 'ಬೋರ್' ವಿಭಾಗಕ್ಕೆ ಸೇರಿ ಬಿಡುತ್ತದೆ. ಅದರ ಜೊತೆಗೆ 'ತಾತಾ' ಎಂದು ಆತನನ್ನು ಕರೆದು, ಪುಟಾಣಿಗಳ ಮನ ಒಲಿಸಲು ಮಾಡಿದ ತಂತ್ರ ತಿರುಗುಬಾಣವಾದಂತೆ ಕಾಣುತ್ತದೆ. 'ತಾತಾ' ಎಂದ ಕೂಡಲೆ ಅವುಗಳ ಮನಸ್ಸಿಗೆ ಬರುವುದು, ಏನೂ ಕೈಲಾಗದ, ಕೂದಲು ನೆರೆತ, ಹಲ್ಲು ಬಿದ್ದ, ಬೆನ್ನು ಬಾಗಿದ ವ್ಯಕ್ತಿ ಅಪ್ಪಾ, ಅಮ್ಮಾ ಏಟು ಕೊಟ್ಟಾಗಲೋ, ಬೈದಾಗಲೋ, ಸಮಾಧಾನ ಮಾಡಿ, ಪೆಪ್ಪರ್‌ಮೆಂಟ್ ಕೊಡಿಸುವ, ಆ ಬೊಚ್ಚುಬಾಯಿಯ ಹಿರಿಯನೇ 'ತಾತಾ'. ಈ ತೆರೆನಾದ ತಾತಾ ಇಷ್ಟಕ್ಕೆ ಉಪಯೋಗವೇ ವಿನಹ, ಇನ್ಯಾಕೆ ದೊಡ್ಡ ಕಾರ್ಯವನ್ನು ಮಾಡಲು ಸಾಧ್ಯ? ಇವರುಗಳು ಕಂಡಿರುವ ತಾತಾ ತಮ್ಮ ಮಕ್ಕಳಿಂದ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರೆ ಸಾಕಾಗಿರುತ್ತದೆ. ಇನ್ನು ದೇಶದ ಸ್ವಾತಂತ್ರ್ಯಗಳಿಸಲು ಸಾಧ್ಯವೇ? ಮಕ್ಕಳಿಗೆ ಇಲ್ಲೇ ಆ ಮುದುಕನ ಮೇಲೆ ಅನುಮಾನ.

ಇದೇ ಚಿಳ್ಳೆಪಿಳ್ಳೆಗಳು ಮುಂದಿನ ಕ್ಲಾಸಿಗೆ ಹೋದಾಗ ಗಾಂಧೀ 'ಬಡವರ ಬಂಧು' ಆಗುತ್ತಾನೆ. ಗಾಂಧೀಜಿಯವರ ಚಿತ್ರವನ್ನು ಹಾಕಿ. 'ಬಡವರ ಬಂಧು' ಎಂದು ನಾಮಕರಣ ಮಾಡಿದರೆ ಮಕ್ಕಳ ಮನಸ್ಸಿನ ಮೇಲೆ ಮೂಡುವ ಭಾವನೆಯಾದರೂ ಏನು? ನಮ್ಮ ಈಗಿನ ಕಾಲದ ಯಾವ ರಾಜಕಾರಣಿಯಾಗಲಿ, ದೇಶಾಭಿಮಾನಿಯಾಗಲಿ (ಇಬ್ಬರೂ ವಿಭಿನ್ನ ಪಂಗಡದವರಾದರೂ) ಗಾಂಧಿಯಂತೆ ಬಟ್ಟೆ ಧರಿಸದೇ ಇರುವುದಿಲ್ಲ. ಹಾಗಾಗಿ ಅರಿಯದ ಮಕ್ಕಳಿಗೆ ಗಾಂಧೀಜಿಯವರ ಸರಳತೆ ಅರ್ಥವಾಗದೆ, ಆತನಿಗೆ ಬಟ್ಟೆಗೆ ಗತಿ ಇಲ್ಲವೆಂದೂ, ಆದ್ದರಿಂದ ಅವನನ್ನು 'ಬಡವರ ಬಂದು' ಎಂದು ಕರೆಯುತ್ತಾರೆಂದು ತಿಳಿದುಕೊಂಡು ಬಿಡುತ್ತವೆ.

ಪಠ್ಯಪುಸ್ತಕದ ಗಾಂಧಿ ಮಕ್ಕಳ ಮನಸ್ಸಿನ ಮೇಲೆ ಬೀರುವ ಪರಿಣಾಮ ನಾನಾ ತರಹದ್ದು.

ನಮ್ಮ ಶಾಲೆಯ ವಾಚ್‌ಮನ್ ನಿಂಗಪ್ಪ ಭಾರಿ ಆಳು. ಹತ್ತು ಗಾಂಧಿಗಳನ್ನು ಹಾಕಿದರೆ ಒಬ್ಬ ನಿಂಗಪ್ಪ ಆಗಬಹುದು ಅಷ್ಟು ಧಡಿಯ ಆಸಾಮಿ ಅವನು. ಅವನಿಗೆ ಹುಡುಗರು ಇಟ್ಟಿದ್ದ ಅಡ್ಡ ಹೆಸರು 'ಗಾಂಧಿ' ರೂಪಿನಲ್ಲಿ ಗಾಂಧಿಗೆ ಯಾವ ರೀತಿಯಲ್ಲಿಯೂ ಹೋಲದ ಇವನಿಗೆ ಈ ಹೆಸರು ತೀರ ಅಸಂಬದ್ಧವೆನಿಸಿತು. ನನಗೆ ನನ್ನ ಸಹ ಉಪಾಧ್ಯಾಯಿನಿಯೊಬ್ಬರ ಹತ್ತಿರ ಹಾಗೆಂದು ಹೇಳಿದೆ. ಅದಕ್ಕೆ ಆಕೆ ''ಅಯ್ಯೋ, ನಿಮ್‌ಗೆ ನಿಂಗಪ್ಪನ ವಿಷಯ ಗೊತ್ತಿಲ್ವಾ? ಅವನು ಅವನ ಹೆಂಡ್‌ತೀನ ಹೊಡೆದೂ ಬಡೆದೂ ಪ್ರಾಣಾ ತೆಗೀತಾನಂತೆ. ಗಾಂಧಿ, ಕಸ್ತೂರಿ ಬಾ ಕೈಲಿ ಎಲ್ಲಾ ಗಲೀಜು ಕೆಲಸ ಮಾಡಿಸಿ, ಕಣ್ಣಲ್ಲಿ ನೀರು ತರಸ್ತಿದ್ರು ಅಂತ ಪಾಠದಲ್ಲಿ ಇತ್ತಲ್ಲಾ, ಅದಕ್ಕೆ ಹೆಂಡ್‌ತೀನ ಗೋಳು ಹೂಯ್ದು ಕೊಳ್ಳೋರೆಲ್ಲಾ ಅವರ ಕಣ್ಣಿಗೆ ಗಾಂಧಿ'' ಎಂದರು. ಗಾಂಧೀಜಿಯವರ ನೆನಪಿಗೆ ಮತ್ತಷ್ಟು ಗೌರವ!

**ಸುಖೀ ದಾಂಪತ್ಯದ ಮೂಲ ಮಂತ್ರ**

ಹೆಂಡತಿಗೇನು ಬೇಕೋ ಅದನ್ನು ಗಂಡ ಮಾಡುತ್ತಾನೆ
ತನಗೇನು ಬೇಕೋ ಅದನ್ನು ಹೆಂಡತಿ ಮಾಡುತ್ತಾಳೆ



ವಾಕ್ಯ ರಚನೆಗೆ 'ಟೋಪಿ' ಎನ್ನುವ ಪದವನ್ನು ಕೊಟ್ಟಾಗ ರಮೇಶ ಬರೆದ ವಾಕ್ಯ ''ಮೋಸಗಾರನಾದ ಶ್ಯಾಮಲಾಲನು ಸದಾ ಗಾಂಧಿ ಟೋಪಿಯನ್ನೇ ಹಾಕುತ್ತಿದ್ದ'' ಎಂದು ವಾಕ್ಯವನ್ನು ಓದಿ ತಬ್ಬಿಬ್ಬಿಯಾಯಿತು. ಏಕೆ ಹಾಗೆ ಬರೆದವನೆಂದು ಕೇಳಿದ್ದಕ್ಕೆ, ''ನಮ್ಮಪ್ಪ ಅವರ್ ಸ್ನೇಹಿತ್ರ ಹತ್ರ ಹೇಳ್ತಿದ್ರು, ಆ ಕುಪ್ಪಸಾಮಿನ ನಂಬಬೇಡ ಅವನು ಸಾಮಾನ್ಯ ಆಸಾಮಿ ಅಲ್ಲ, ಈಚೆಗೆ ಗಾಂಧಿ ಟೋಪಿ ಬೇರೆ ತಲೆಗೆ ಏರಿಸಿದ್ದಾನೆ'' ಅಂತೆಲ್ಲಾ ಅಂತಿದ್ರು ಅಂದ.

ಗಾಂಧೀಜಿಯವರ ಟೋಪಿ ಅವರಿಗೆ ಟೋಪಿ ಹಾಕಿತು!

''ಮೇಷ್ಟ್ರು 'ಕೆಟ್ಲ್' ಪದದ ಸ್ಪೆಲ್ಲಿಂಗನ್ನು ಹೇಳಿಕೊಟ್ಟರೂ ಬರೆಯದ ಮೋಹನ್‌ದಾಸ್, ಭಾರತೀಯನೇ ಅಲ್ಲ, ಆತ ಆಫ್ರಿಕಾದವನಿರಬೇಕು. ಕಾಪಿ ಮಾಡಲು ಇಷ್ಟಪಡದೇ ಇರುವುದು ಭಾರತೀಯ ವಿದ್ಯಾರ್ಥಿಯ ಲಕ್ಷಣವೇ ಅಲ್ಲ'' ಎಂದು ಕೆಲವು ಹುಡುಗರ ವಾದ!

ನಿಜವಾದ ಮಜ ಬರಬೇಕಾದರೆ, ಇಂಗ್ಲೀಷ್ ಮೀಡಿಯಂ ತರಗತಿಗಳಿಗೆ ಪಾಠ ಹೇಳಿಕೊಡಬೇಕು. 'ಸಿನಿಮಾ ಮತ್ತು ಅದರ ಪ್ರಭಾವ', 'ಲಾಟರಿಯಲ್ಲಿ ನೀವು ಗೆದ್ದರೆ', 'ಜೇಬುಗಳ್ಳರು' ಮುಂತಾದ ವಿಷಯಗಳ ಜೊತೆಗೆ ಗಾಂಧೀಜಿಯೂ ಪರೀಕ್ಷೆಗಳಲ್ಲಿ ಪ್ರಬಂಧಕ್ಕೆ ಬರುವ ಒಂದು ಮುಖ್ಯ ವಿಷಯ. ಗಾಂಧೀಜಿಯವರ ಮೇಲೆ ಪ್ರಬಂಧ ಬರೆಯುತ್ತಾ ಒಬ್ಬ ಹುಡುಗ ಅವರನ್ನು 'ರಾಷ್ಟ್ರಪಿತ'ನೆಂದು ಏಕೆ ಕರೆದರೆಂದು ವಿವರಿಸಿದ್ದ. ''ಹಿ ಇಸ್ ಕಾಲ್ಡ್ ದಿ ಫಾದರ್ ಆಫ್ ದಿ ನೇಷನ್ ಬಿಕಾಸ್ ಹಿ ಫಾದರ್ಡ್ ದಿ ನೇಷನ್'' ಎಂದು.

ಹೀಗೆ ಆ ಮಹಾತ್ಮನ ಶೀಲಖೂನಿ ಎಡಬಿಡದೆ ನಡೆಯುತ್ತದೆ. ಪ್ರತಿಯೊಂದು ತರಗತಿಯಲ್ಲೂ, ಕೊನೆಗೆ ಹತ್ತನೆ ಕ್ಲಾಸಿಗೆ ಬರುವ ಹೊತ್ತಿಗೆ ಹುಡುಗರಿಗೆ ಗಾಂಧಿ ಮೇಲಿನ ಜಿಗುಪ್ಸೆ ಮಿತಿ ಮೀರಿರುತ್ತೆ.

ಉಪಾಧ್ಯಾಯನಿಯೊಬ್ಬರು, ಈ ತರಗತಿಯ ಹುಡುಗರನು ''ನಿಮ್ಮ ಮೆಚ್ಚಿನ ವ್ಯಕ್ತಿ ಯಾರು'' ಎಂದು ಕೇಳಿದಾಗ, ಅವರ ಉತ್ತರವೇನಿರಬಹುದು ಊಹಿಸಿ!

ಭಾರತೀಯರಿಗೆ ಅರ್ಥವಾಗುವ ಏಕೈಕ ಮಾಧ್ಯಮದಲ್ಲಿ (ಅಂದರೆ, ಸಿನಿಮಾ ಮೂಲಕ) ಅಟೆನ್‌ಬರೊ ಗಾಂಧೀಜಿಯವರ ವ್ಯಕ್ತಿತ್ವವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಅಂದ ಮೇಲೆ ಈಗಲಾದರೂ ನಮ್ಮ ವಿದ್ಯಾರ್ಥಿಗಳಿಗೆ ಗಾಂಧಿ ಯಾರು, ಏಕೆ ಆತನನ್ನು ಮಹಾತ್ಮನೆನ್ನುತ್ತಾರೆ ಎನ್ನುವುದು ತಿಳಿಯಬಹುದಲ್ಲವೇ?



# ಶ್ಲೇಷೋದ್ಯಾನದಿ ಶಬ್ದವ ಕಸಿ ಮಾಡಿ...

• ಅ ರಾ ಮಿತ್ರ

ಶ್ಲೇಷೆ ಅನ್ನೋದು ಒಂದು ಭಾಷಾ ಚಮತ್ಕಾರ. ಒಂದು ಶಬ್ದಕ್ಕೆ ಎರಡು ಅರ್ಥಗಳಿವೆಯನ್ನಿ. ಆ ಎರಡೂ ಈ ಶಬ್ದಕ್ಕೆ ಹೊಂದಿಕೆಯಾಗುವಂತೆ ಹೇಳಿದರೆ, ಬರೆದರೆ ಅದು ಶ್ಲೇಷೆ ಎನಿಸಿಕೊಳ್ಳುತ್ತದೆ.

ಒಂದು ಉದಾಹರಣೆ,

ಕುವೆಂಪು ರಾಮಾಯಣ ದರ್ಶನದಲ್ಲಿ ಹೇಳಿರುವ ಮಾತು ಇದು:

''ಬಾಳ್ಗಬ್ಬದೊಳ್ ಬೇನೆ ಕುದಿದೊಡಮತ್ತೆ
ಪೊರಪೊಣ್ಮೆದಲುದು ಮಾಹಾಕಾವ್ಯ ಶಿಶು''

**ಭಾಷಾ ಚಮತ್ಕಾರದ ಒಂದು ಪುಟ್ಟ ಪರಿಚಯ ಇಲ್ಲಿದೆ**

ಕಬ್ಬ ಶಬ್ದವು ಸಮಸ್ತ ತರದಲ್ಲಿ ಗಬ್ಬ ಎಂದೂ ಆಗುತ್ತದೆ. ಕಬ್ಬಕ್ಕೆ ಕಾವ್ಯ ಎಂಬ ಅರ್ಥವೂ ಇದೆ. ಅಂದರೆ ಕಬ್ಬ + ಗರ್ಭ ಕಾವ್ಯ (ಕಬ್ಬ). ಬಾಳ ಎಂದರೆ ಜೀವನ. ಜೀವನ ಎಂಬ ಕಾವ್ಯದಲ್ಲಿ, ಜೀವನ ಎಂಬ ಗರ್ಭದಲ್ಲಿ ಎಂದು ಎರಡರ್ಥ ಇಲ್ಲಿದೆ. ಸಾಹಿತ್ಯ ರಚನೆಯನ್ನು ಸೃಷ್ಟಿ ಎಂದೂ ಹೇಳುತ್ತಾರಲ್ಲವೆ? ಹೆರುವ ಹೆಣ್ಣು ಎಷ್ಟು ನೋವು ಅನುಭವಿಸುತ್ತಾಳೆ ನೋಡಿ. ಹಾಗೆಯೇ ಕಾವ್ಯ ಎಂಬ ಹೆಣ್ಣು ಜೀವನಾನುಭವವನ್ನು ಪಡೆದು ಆ ನೋವಿನಲ್ಲಿ ಕೃತಿ ಎಂಬ ಶಿಶುವನ್ನು ಹಡೆಯುತ್ತಾಳೆ. ಹಾಗೆಯೇ ಅಪಾರ ಜೀವನಾನುಭವವುಳ್ಳ ಕವಿ ಕಾವ್ಯವನ್ನು ಸೃಷ್ಟಿಸುತ್ತಾನೆ.

ಪಾಪ ಆನಂದನಿಗೆ ತುಂಬಾ ಗಾಬರಿಯಾಯಿತು. ಈ ಪ್ರಾಣಿ ಶ್ಲೇಷೆ ಶಬ್ದಕ್ಕೆ ಅರ್ಥ ಹೇಳಲು ಕೂಡ ಗರ್ಭಿಣಿಯಂತೆ ಇಷ್ಟೊಂದು ಕಷ್ಟ ಪಟ್ಟಿದ್ದಾನಲ್ಲ ಎಂಬ ಸಂಕಟವೂ ಆಗಿತ್ತು.

ಸಾರ್, ಸುಲಭವಾಗಿ ಅರ್ಥ ಆಗುವಂತೆ ಹೇಳ್ತೀರಾ? ಎಂದ ಆನಂದ.

ಓಹೋ ನಿನಗೆ ಅರ್ಥ ಆಗಬೇಕಾದರೆ ಇಂಗ್ಲಿಷಿನಲ್ಲಿ ಹೇಳಬೇಕಾಗುತ್ತದೆ. ಜಾಣ ಕನ್ನಡಿಗನಲ್ಲವೆ ನೀನು?

ಹೌ ಲಾಂಗ್ ಡಸ್ ಎ ಮ್ಯಾನ್ ಲಿವ್? ಕೇಳಿದಾಗ ಡಾಕ್ಟರ್ ಹೇಳಿದರಂತೆ: ಇಟ್ ಡಿಪೆಂಡ್ಸ್ ಅಪಾನ್ ದ ಲಿವರ್.

ಹೌದು ಸರ್. ಅದು ಬದುಕುವವನ ಮೇಲೆ ಅವಲಂಬಿಸಿದೆ. ಇಲ್ಲಿ ಶ್ಲೇಷೆ ಅಂತೀರಲ್ಲ ಅದೆಲ್ಲಿ?

ಅದೇ ನಾನು ಹೇಳ್ತಿರೋದು. ಲಿವರ್ ಅಂದರೆ ಬದುಕುವವನು ಎಂಬರ್ಥ ಇದೆ. ಇನ್ನೊಂದು ಒಳ ಅರ್ಥವೂ ಇದೆ.

ಏನದು?

ಲಿವರ್ ಲಿವರ್ರು. ಜಠರದ ಪಕ್ಕ ಇರುವ ಲಿವರ್ ಚೆನ್ನಾಗಿದ್ದರೆ ದೀರ್ಘಕಾಲ ಬದುಕುತ್ತಾನೆ ಎಂದರ್ಥ. ಹೀಗೆ ಒಂದೇ ಶಬ್ದ ಎರಡರ್ಥಗಳನ್ನು ಅಂಟಿಸಿಕೊಂಡರೆ ಅದೇ ಶ್ಲೇಷೆ. ಲಿವರ್, ಕಾಲೇಯ, ಕಾಳಿಜ, ಯಕೃತ್ ಇವೆಲ್ಲಾ ಒಂದೇ ಅಲ್ಲವೆ? ಬಲವಾದ ಲಿವರ್ ಅಗತ್ಯ ಅಲ್ಲವೆ?

ಆನಂದ ಅರ್ಥಪೂರ್ಣವಾಗಿ ನಕ್ಕ.

ಕನಕದಾಸರಿಲ್ಲವೆ? ಅವರದೂ ಒಂದು ಶ್ಲೇಷೆಯಿದೆ ಅಂತ ಹೇಳ್ತಾರೆ. ಸ್ವರ್ಗಕ್ಕೆ ಹೋಗಲು ಯಾರು ಸಮರ್ಥರು ಎಂದು ಗುರುಗಳು ಕೇಳಿದರಂತೆ. ಆಗ ಕನಕದಾಸರು 'ನಾನು ಹೋದರೆ ಹೋಗ್ತೇನೆ' ಅಂದರಂತೆ. ಉಳಿದ ಶಿಷ್ಯರಿಗೆಲ್ಲ ನಗು ಬಂತು. ಆದರೆ ಅವನ ಮಾತಿನ ಅರ್ಥ ತಿಳಿದ ಗುರುಗಳು 'ನಿಜ ನಿನ್ನ ಮಾತು ನಿಜ' ಎಂದು ಉಳಿದ ಶಿಷ್ಯರ ಕಡೆ ನೋಡಿ ಹೇಳಿದರಂತೆ: 'ನೋಡಿ ಅವರ ಮಾತು ಏನು ಹೇಳಿ?'

'ನಾನು ಹೋದರೆ ಹೋಗ್ತೀನಿ ಅಂದರಲ್ಲ ಗುರುಗಳೇ ತುಂಬ ಜಂಬದ ಮಾತಲ್ಲವೆ?'

''ಅಲ್ಲ, 'ನಾನು' ಅಂದರೆ ಸ್ವಾರ್ಥ. ನಾನು ನಾನು ಎಂಬ ಜಂಬ ಹೊರಟು ಹೋದರೆ ನನಗೂ ಸ್ವರ್ಗವಿದೆ ಎಂದರ್ಥ'' ಎಂದಾಗ ಶಿಷ್ಯರೆಲ್ಲ ಸುಮ್ಮನಾದರಂತೆ. ಇದಕ್ಕೆ ಏನಂತಾರೆ ಗೊತ್ತೆ?

ಏನು ಗುರುಗಳೆ?

ಐ ಟ್ರಬಲ್. ಅಂದರೆ ಐ (ನಾನು.. ನಾನು.. ಎಂಬ ಸಮಸ್ಯೆ) ಇನ್ನೊಂದು ಐ ಕಣ್ಣು ಎಂಬ ಸಮಸ್ಯೆ!

ಇನ್ನೊಂದು ಶ್ಲೇಷೆಯ ಪದ್ಯ ನೋಡಿ. ಇದು ಬದುಕಿಗೆ ಸಂಬಂಧಿಸಿದ್ದು.

*ಪೀತ ವರ್ಣ ಪ್ರೀತೆ ಗೃಹ 'ಪತ್ರಕರ್ತೆ'*

*ದೋಷದ ಕರಡು ತಿದ್ದದ ಮನೆಯ 'ಸಂಪಾದಕ'*

*ಇಬ್ಬರಿಂ ಹಾಳಾಯ್ತು ಮನೆ 'ಯಚ್ಚುಕೂಟ'*

*ಬತ್ತಿ ಹೋಯಿತು ಕೇಳು ಅರ್ಥ ಜೀವನದಿ*

ಇಲ್ಲಿ ನೋಡಿ ಬಳಸಿರುವ ಕೆಲವು ಪದಗಳು ಎರಡೆರಡು ಅರ್ಥದವು.

ಅಂದರೆ?

ಅಂದರೆ ಮೊದಲು ಸಾಲು ಪತ್ರಕರ್ತೆ. ಪತ್ರಕರ್ತೆ ಎಂದರೆ ಪತ್ರಿಕೋದ್ಯಮಿ. ಗೃಹ ಪತ್ರಕರ್ತೆ ಅಂದರೆ ಮನೆಯನ್ನು ನಡೆಸುವವಳು. ಅವಳೇನಾದರೂ ಪ್ರೀತ ವರ್ಣ ಪ್ರೀತೆಯಾದರೆ ಇಲ್ಲಿ ಯೆಲ್ಲೋ ಜರ್ನಲಿಸಮ್ ಎಂಬರ್ಥವೂ ಇದೆ.

ಅಂದರೆ?

ಹಳದಿ ಲೋಹದ (ಚಿನ್ನ) ಮೇಲೆ ಮೋಹ ಇರಿಸಿಕೊಂಡು ಬಿಟ್ಟರೆ! ಎರಡನೆಯದು ಸಂಪಾದಕ. ಸಂಪಾದಕನು ಬಂದ ಲೇಖನಗಳ ಕರಡು ಪ್ರತಿಯನ್ನು ತಿದ್ದದಿದ್ದರೆ ಪತ್ರಿಕೆ ಹಾಳಾಗುತ್ತದಲ್ಲವೆ? ಹಾಗೆಯೇ ಉಳಿದವರು ಮಾಡುವ ತಪ್ಪುಗಳನ್ನು ತಿದ್ದದ ಸಂಪಾದಕನಿಂದ ಏನು ಪ್ರಯೋಜನ ಹೇಳಿ?

ಇಂಥ ಇಬ್ಬರು ಸೇರಿಕೊಂಡು ಬಿಟ್ಟರೆ ಮನೆಯ ಅಚ್ಚುಕ್ಕೂಟ ನೆಗೆದು ಬಿದ್ದಂತೆ. ಅಚ್ಚುಕ್ಕೂಟ ಎಂದರೆ ಪ್ರಿಂಟಿಂಗ್ ಪ್ರೆಸ್. ಇನ್ನೊಂದು ಅಚ್ಚುಕ್ಕೂಟ ಎಂದರೆ ಸೌಂದರ್ಯ, ಅಚ್ಚುಕಟ್ಟು ಎಂದರ್ಥ. ಇವುಗಳ ಪರಿಣಾಮವನ್ನು ಕೊನೆಯ ಸಾಲು ಶ್ಲೇಷೆಯಲ್ಲೇ ವಿವರಿಸುತ್ತದೆ. ಎಚ್ಚರಿಕೆಯಿಂದ ಓದಿಕೊಳ್ಳಿ. ಜೀವನದಿ ಎಂದರೆ ಜೀವನದಲ್ಲಿ ಎಂದರ್ಥ ಅಲ್ಲವೆ? ಜೀವನಕ್ಕೆ ಅರ್ಥವೇ ಇರುವುದಿಲ್ಲ ಎಂದು ಒಂದು ಅರ್ಥ.

ಇನ್ನೊಂದು?

ಜೀವನದಿ ಎಂದರೆ ಜೀವಂತವಾದ ನದಿಯಲ್ಲಿ ಅರ್ಥ ಎಂಬುದು ಬತ್ತಿ ಹೋಗುತ್ತದೆ.

*ಏಳು ಹೆಡೆಗಳು*

*ಆದಿ ಶ್ಲೇಷನಿಗೆ*

*ದೇಹವು ಒಂದೇ ಕಾಣ*

*ಅದರ ಮೇಲೆಯೇ*

*ಪವಡಿಸುವಾತನು*

*ಶಬ್ದಾರ್ಥದ ಲಕ್ಷ್ಮೀರಮಣ!*

*ಶ್ಲೇಷೋದ್ಯಾನದಿ ಶಬ್ದವ ಕಸಿ ಮಾಡಿ*

*ಹೊಸತು ಪದಾರ್ಥವ ಬೆಳೆಸುವರು*

*ಇಮ್ಮಡಿ ಮುಮ್ಮಡಿ ನಾಲ್ವಡಿ ಬಹುಪಡಿ*

*ಯಾಗುತ ಧ್ವನಿಗಳು ಮೆರೆಯುವುವು*

---

ಹೆಂಡತಿ – ರೀ ಈ ಕಂಪ್ಯೂಟರ್ ನಾನು ಕಮ್ಯಾಂಡ್ ಕೊಟ್ಟ ಹಾಗೆ ಕೆಲಸ ಮಾಡ್ತನೇ ಇಲ್ಲ

ಗಂಡ – ಅದು ತೀರಾ ಸಹಜ ಕಣೆ, ಏಕೆಂದರೆ ಅದು ನಿನ್ನ ಗಂಡ ಅಲ್ವಲ್ಲ.

*With Best Compliments from*

**Omega Lasertech**
Pre-press and Print Service
since 1989

No. 17, Mission Road, Subbaiah Circle
Bangalore - 560 027
Tel: 080-22225633

*With Best Compliments from*

**Sreeraj Lassi Bar**
*Since 1973*

• Lassi • Kulfi • Falooda • Milk Shakes
• Icecreams • Fruit Juices • Curds
• Shreekhand and • Special Items

Shantinagar Kammanahalli Palace Road Jayanagar
Shivajinagar Commercial Street RT Nagar **and Dubai**

For Bulk requirements, contact: 98861 35656

# ನಗುವು ಸಹಜದ ಧರ್ಮ

(ಒಂದು ಬಾನುಲಿ ಪ್ರಹಸನ)

• ಶಿವು

## ದೃಶ್ಯ–1

ಬಸವನಗುಡಿಯಲ್ಲೊಂದು ಮನೆ. ಹೊರಗೆ ಧಾರಾಕಾರವಾಗಿ ಮಳೆ. ಭಾನುವಾರ ಬೆಳಗ್ಗೆ.

ಪ್ರೇಮ : ರೀ, ಇದೇನ್ರೀ, ವರಾಂಡಾದಲ್ಲೆಲ್ಲಾ ಹೀಗೆ ಪೇಪರ್ ಹರಡಿಬಿಟ್ಟಿದ್ದೀರಾ! ಯಾರಾದ್ರೂ ಬಂದ್ರೆ ಏನು ಗತಿ? ಭಾನುವಾರ ಅಂದ್ರೆ ಸಾಕು, ತಿಪ್ಪೆ, ತಿಪ್ಪೆ ಆಗ್ಬಿಡುತ್ತೆ ಮನೆ. ರೀ, ನಿಮ್ಗೇ ಹೇಳ್ತಿರೋದು.

ಸುಧೀರ್ : ಆಯ್ತು ಕಣೇ, ಮಡಿಸಿಟ್ರಾಯ್ತು ಪೇಪರ್ನ. ಅದಕ್ಯಾಕ್ಕೆ ಇಷ್ಟು ಕೂಗಾಟ. ಅಲಲೆ! ಇದೇನು ಭಾನುವಾರ ಬೆಳಗ್ಗೇನೇ ತಲೆಬಾಚಿ, ಸೀರೆ ಉಟ್ಟು ಹೊರಡಕ್ಕೆ ರೆಡಿಯಾಗಿದೀರಾ ಅಮ್ಮಾವ್ರು. ಏನು ಸಮಾಚಾರ?

ಪ್ರೇ : ರಾಮಾ ರಾಮಾ, ಅದೇನ್ ಮರವೂ ರೀ ನಿಮಗೆ. ಒಂದು ವಾರದಿಂದ ಹೇಳ್ತಾ ಇದೀನಿ, ಈ ಭಾನುವಾರ ಮಲ್ಲೇಶ್ವರದಲ್ಲಿರೋ ನಮ್ಮ ಶಾಂತು ಮನೇಗೆ ಹೋಗ್ಬಿಟ್ಟು ಬರೋಣ ಅಂತ. ಮರ್ತೇ ಬಿಟ್ಟಿದೀರ. ಅಲ್ವೇ ಮತ್ತೆ, ನಮ್ಮ ಕಡೆ ಬಂಧುಗಳು ಅಂದ್ರೆ ಹ್ಯಾಗೆ ಜ್ಞಾಪಕ ಇರುತ್ತೆ.

ಸು : ಮರೆತಿಲ್ಲಾ ಕಣೇ, ಹೊರಗಡೆ ಧೋ ಅಂತ ಮಳೆ ಸುರೀತಾ ಇದೆಯಲ್ಲಾ – ಡಿಪ್ರೆಷನ್ನೋ ಏನು ಸುಡುಗಾಡೋ ಇಂಥಾ ಮಳೇಲಿ ಬೆಚ್ಚಗೆ ಮನೇಲಿ ಕೂತು, ಬಿಸಿ ಬಿಸಿ ಕಾಫಿ ಕುಡಿಯೋದು ಬಿಟ್ಟು ಹೊರಗೆ ಯಾಕೆ ಹೋಗಬೇಕು ಅಂತ ಕೇಳ್ದೆ.

ಪ್ರೇ : ಸಾರ್ಥಕವಾಯ್ತು ರೀ! ಮಳೆ ಬಂದ್ರೆ ಏನಂತೆ? ಕರಗಿ ಹೋಗ್ತೀವೇ? ಅಂಥ ದಿವಿನಾಗಿ ಛತ್ರಿ ಇದೆ. ರಸ್ತೆ ಕಾರ್ನರ್‌ಗೆ ಹೋದ್ರೆ ಯಾವ್ದಾದ್ರೂ ಆಟೋ ಸಿಕ್ಕೇ ಸಿಗುತ್ತೆ. ಹುಂ ಹೊರಡಿ.

ಸು : ಆಯ್ತು ಮಹರಾಯ್ತೀ, ಆಯ್ತು. ಯಾವಾಗ್ಲೂ ನಿಂದೇ ಕೊನೇ ಮಾತು ತಾನೆ!

## ದೃಶ್ಯ–2

(ರಸ್ತೆಯಲ್ಲಿ ದಂಪತಿಗಳು ನಡೆದು ಹೊರಟಿದ್ದಾರೆ. ಜೋರಾಗಿ ಮಳೆ ಸುರಿಯುವ ಸದ್ದು. ಮೋರಿಯಲ್ಲಿ ಜುಳಜುಳನೆ ನೀರು ಹರಿಯುವ ಸದ್ದು)

ಸು : ಲೇ, ಪ್ರೇಮಾ, ನಿನ್ನ ಮಾತು ಕೇಳ್ಕೊಂಡು ಬಂದ್ರೆ ಹೀಗಾಗುತ್ತೆ ಅಂತ ಗೊತ್ತಿದ್ದೂ, ಈ ಭಯಂಕರ ಮಳೇಲಿ ಆಟೋ ಸಿಗುತ್ತೆ ಅಂತ ನಂಬಿದ್ನಲ್ಲ, ನಾನು ಮುಠ್ಠಾಳ ಕಣೇ ಮುಠ್ಠಾಳ. ........ಎಲ್ಲೇ ನಿನ್ನ ಆಟೋ?

ಪ್ರೇ : ಅಯ್ಯೋ ಸಾಕು ಮಾಡ್ರಿ ನಿಮ್ಮ ಗೊಣಗಾಟಾನಾ. ಸ್ವಲ್ಪಾನೂ ಸಹನೇನೆ ಇಲ್ಲ ಪ್ರಾಣೀಗೆ. ನೋಡ್ರಿ, ಬಡ್ಕೊಳ್ತಾ ಇದ್ರಲ್ಲಾ ಆಟೋ ಆಟೋ ಅಂತ, ನೋಡಿ ಹೊಸಾಹೊಸ ಆಟೋ ಬಂದೇ ಬಿಡ್ತು. ಆಟೋ, ಆಟೋ.....

(ಆಟೋ ದೂರದಿಂದ ಹತ್ತಿರ ಬರುವ ಸದ್ದು.. ಬಂದು ನಿಲ್ಲುವ ಸದ್ದು)

ಪ್ರೇ : ಸಧ್ಯ, ಖಾಲಿ ಆಟೋ, ದೇವರ ದಯೆ. ಏನಪ್ಪಾ, ಮಲ್ಲೇಶ್ವರಕ್ಕೆ ಬರ್ತೀಯಾ?

ವರೂಥಿನೀ : ಬನ್ನಿ, ಒಳಗೆ ಕೂಡ್ರಲಾ, ತ್ವರೆಯಿಂದ ಕೊಂಡು ಹೋಗ್ತೇನೆ. ಎಂಥ ಮಳೆ ಮಾರಾಯ್ತೆ!

ಪ್ರೇ : (ಸುಧೀರನನ್ನು ಕುರಿತು) ಇದೇನ್ರೀ, ಯಾವ್ದೋ ಚೆಂದುಳ್ಳಿ ಹುಡುಗಿ ಡ್ರೈವ್ ಮಾಡ್ತಾ ಇದಾಳೆ. ಮಂಗಳೂರಿನ ಕಡೆಯೋಳೋ ಏನೋ.... (ವರೂಥಿನೀ ಕಡೆಗೆ ತಿರುಗಿ) ಒಳ್ಳೇದಾಯ್ತಮ್ಮಾ ನೀನು ಸಿಕ್ಕಿದ್ದು. ಹೆಣ್ಣುಮಕ್ಕಳು ಎಲ್ಲಾ ಕೆಲಸಕ್ಕೂ ತಯಾರಾಗಿದ್ರೆ ನಮ್ಮಂಥೋರಿಗೂ ಅನುಕೂಲ, ಬನ್ನಿ ಸುಧೀರ್ ಈ ಪಕ್ಕ.

(ದಂಪತಿಗಳು ಆಟೋ ಹತ್ತುವರು)

ವ : (ದನಿಯಲ್ಲಿ ಸಂತಸವನ್ನು ಸೂಸುತ್ತಾ) ಛತ್ರಿ ಮಡಿಚಿ ಪಕ್ಕಕ್ಕೆ ಇಡಿರಲ್ಲಾ, ಆ ಗುಂಡಿ ಒತ್ತಿದರೆ ಜಲನಿರೋಧಕ ಹಾಳೆ ತಾನಾಗಿಯೇ ತೆರೆದು ಇರಿಚಲು ತಡೀತದೆ. ಹ್ಲಾ ಅದೇ ಗುಂಡಿ. ಹಾಗೆಯೇ ಸುಖಾಸನದ ಪಕ್ಕ ಇರುವ ರಕ್ಷಣಾ ಪಟ್ಟಿ ಬಿಗಿಮಾಡಿಕೊಳ್ಳಿ. ಸರಿ ಹೋಗುವಾ.

(ಆಟೋ ಒಂದೇ ಕಿಕ್ಕಿಗೆ ಸ್ಟಾರ್ಟ್ ಆಗಿ, ಬಹು ಬೇಗನೆ ವೇಗ ಹೆಚ್ಚಿ ಕೊನೆಗೆ ಜೆಟ್ ವಿಮಾನದ ಜೂಂ ಶಬ್ದ ಹೊರಹೊಮ್ಮುವುದು)

ಪ್ರೇ : ರೀ ರೀ, ನಂಗ್ಯಾಕೋ ಭಯ ಆಗ್ತಿದೇರಿ. ಅದೇನು ಆಟೋನೋ ಏರೋಪ್ಲೇನೋ? ಏನು ಗ್ರಹಚಾರ ಬಂತಪ್ಪಾ, ರೀ ನಿಲ್ಸು ಅಂತ ಹೇಳ್ರೀ ಆ ಚಿನಾಲೀಗೆ.

ಸು : ಈ ಡ್ರೈವರ್ ಕಡೆ ಕಿಟಕಿ ಮೇಲೆ ಆಗಿನಿಂದ ಕುಟ್ತಾನೇ ಇದೀನಿ. ಅವಳು ಕೇಳಿಸ್ಕೊಳ್ತಾನೇ ಇಲ್ಲ. ಈ ವೇಗದಲ್ಲಿ ಈಗಾಗ್ಲೇ ನಾವು ಬಾಂಬೆ ತುಲುಪ್ತಿರ್ತೀವೋ ಏನೋ. ಏನೇ ಮಾಡೋದು. ಏನೂ ತೋಚ್ತಾ ಇಲ್ವಲ್ಲೇ.

ಸ್ನೇಹಿತರು ಎಂದರೆ
ಒಂದು ರೀತಿ
ಷೂ ಇದ್ದ ಹಾಗೆ
ಕೆಲವು ಬಿಗಿ
ಕೆಲವು ಸಡಿಲ
ಆದರೂ ಅವು ನಮ್ಮ
ನಡಿಗೆಗೆ
ಸಹಾಯವಾಗಿರುತ್ತವೆ

ಪ್ರೇ : ನೀವು ತಿರುಪತಿ ತಿಮ್ಮಪ್ಪನಿಗೆ ಹರಸ್ಕೊಳ್ಳಿ. ನಾನು ನಿಮಿಷಾಂಬಾಗೆ ಹರಸ್ಕೋತೀನಿ. ದೇವೀ ಕಾಪಾಡಮ್ಮಾ.

(ಜೂಮ್ ಶಬ್ದ ಒಮ್ಮೆಲೇ ನಿಲ್ಲುವುದು. ನಿಶ್ಯಬ್ದ)

ಸು : ಕಣ್ಣು ಬಿಡೇ. ಆಟೋ ನಿಂತಹಾಗಿದೆ.

ಪ್ರೇ : ಈಗ ಎಲ್ಲಿದೀವ್ರಿ ನಾವು? ಹೇಳ್ರಿ ಅವಳ್ಗೆ. ''ನೀನು ಮೀಟರ್ ಹಾಕಿಲ್ಲ. ನಾವು ದುಡ್ಡು ಕೊಡೋಲ್ಲ'' ಅಂತ. ತಲೆಹರಟೆ ಮಾಡಿದ್ರೆ ಪೋಲೀಸ್ ಸ್ಟೇಷನ್‌ಗೆ ಬಾ ಅಂತ ದಬಾಯಿಸ್ರಿ.

ಸು : ಆರಕ್ಷಕ ಠಾಣೆ.

ಪ್ರೇ : ಏನ್ರಿ ಅದು? ಆರಕ್ಷಕ ಠಾಣೆ?

ಸು : ಅವಳಿಗೆ ಪೋಲೀಸ್ ಸ್ಟೇಷನ್ ಅಂದ್ರೆ ಅರ್ಥವಾಗುಲ್ವೇ. ಆರಕ್ಷಕ ಠಾಣೆ ಅನ್ಬೇಕು.

ವ : ಬನ್ನಿ. ಇಳಿಯಿರಿ. ದೂರದ ಪಯಣ. ನಿಮಗೆ ಬಳಲಿಕೆ ಆಗಿರಲಿಕ್ಕೆ ಸಾಕು. ಕಾಳಜಿ ಮಾಡಬೇಡಿ ಗೊತ್ತಾಯ್ತೋ. ಇದು ನಮ್ಮ ಸಂಶೋಧನಾ ಕೇಂದ್ರ. ಇಲ್ಲಿ ನಮ್ಮ ನಿರ್ದೇಶಕ ಪುಷ್ಪ ದಂತ ಇರುವರು. ನಿಮಗೆ ಇರುವ ಪ್ರಶ್ನೆ ಸಂದೇಹ ಇವುಗಳನ್ನೆಲ್ಲಾ ಅವರೇ ಪರಿಹಾರ ಮಾಡುವರು ಗೊತ್ತಾಯ್ತೋ? ಅಲ್ಲಿ ನೋಡಿ ಅವರೇ ಬಂದರು.

(ಪುಷ್ಪ ದಂತನ ಆಫೀಸ್. ಸುಧೀರ್, ಪ್ರೇಮ, ವರೂಥಿನ ಮತ್ತು ಪುಷ್ಪ ದಂತ ಒಳಗಿದ್ದಾರೆ)

ಪುಷ್ಪ ದಂತ : ಇಲ್ಲಿ ಒಳಗೆ ಬನ್ನಿ ಸುಧೀರ್. ಬನ್ನಿ ಪ್ರೇಮ ಮೇಡಂ. ನಿಮ್ಮ ಹೆಸರು ನನಗೆ ಹೇಗೆ ತಿಳೀತು ಅಂತ ಆಶ್ಚರ್ಯ ಪಡುವ ಕಾರಣವಿಲ್ಲ. ಒಂದೆರಡು ತಿಂಗಳುಗಳಿಂದ ನಾನು ನಿಮ್ಮ ಭಾಷೇನೇ ಪ್ರಾಕ್ಟೀಸ್ ಮಾಡ್ತಾ ಇದ್ದೇನೆ. ನಿಮ್ಮೊಂದಿಗೆ ಮಾತನಾಡೋದು ಸುಲಭ ಆಗ್ಲೀ ಅಂತ.

ಸು : ನಮ್ಮ ಭಾಷೆ? ನೀವೂ ಕನ್ನಡಾನೇ ಮಾತಾಡ್ತಾ ಇದೀರಲ್ಲಾ. ಹೊಸದಾಗಿ ಪ್ರಾಕ್ಟೀಸ್ ಮಾಡೋದೇನು ಬಂತು?

ಪು : ನಾವು ಮಾತನಾಡೋದು ಕನ್ನಡ, ನಿಜ. ಆದರೆ ನಿಮ್ಮ ಇಂಗ್ಲಿಷ್ ಮಿಶ್ರಿತ ಕನ್ನಡ ನಮಗೆ ಹೊಸದು. ನಿಮ್ಮ ಹತ್ತಿರ ಕಮ್ಯೂನಿಕೇಟ್ ಮಾಡೋದು ಈಸಿ ಆಗ್ಲಿ ಅಂತ ಈ ಪ್ರಯತ್ನ.

ಸು : ನೋಡಿ ಪುಷ್ಪದಂತ ಅವರೇ, ನಾನು ಸೀದಾ ಸಾದಾ ಮನುಷ್ಯ. ಈಕೆ, ಈ ಆಟೋ ಡ್ರೈವರಿಣಿ....

ಪು : ಆಕೆ ಹೆಸರು ವರೂಥಿನೀ. ನಮ್ಮ ಪ್ರಥಮ ಮಹಿಳಾ ಟೆಸ್ಟ್ ಪೈಲಟ್.

ಸು : ಡ್ರೈವರ್ರೋ, ಪೈಲಟ್ಟೋ, ಅಂತೂ ಆಕೆ ವಿನಾಕಾರಣ ನಮ್ಮನ್ನ ಇಲ್ಲಿಗೆ ಹೈಜಾಕ್ ಮಾಡಿ ತಂದ್ಬಿಟ್ಟಿದ್ದಾಳೆ. ಈ ಕ್ಷಣವೇ ನಮ್ಮಿಬ್ಬರ್ನ ಪುನಃ ಬೆಂಗಳೂರಿಗೆ ಕಳಿಸೋದಕ್ಕೆ ವ್ಯವಸ್ಥೆ ಮಾಡಿದ್ರೆ ತುಂಬಾ ಉಪಕಾರ ಆಗುತ್ತೆ. ಅಂದ್ಹಾಗೆ ಇದ್ಯಾವ ಊರು?

ಪು : ಇದು ಸರ್ಜಾಪುರ ಮಹಾಪಟ್ಟಣ. ಮೆಗಾಸಿಟಿ ಇದು. ಈ ಊರಿನ ಉತ್ತರಕ್ಕೆ ಒಂದು ಪುರಾತನ ಪಟ್ಟಣದ ಅವಶೇಷಗಳನ್ನ ನಮ್ಮ ಪ್ರಾಚ್ಯ ಸಂಶೋಧಕರು ಕಂಡು ಹಿಡಿದಿದ್ದಾರೆ. ಆ ಪುರಾತನ ಪಟ್ಟಣವನ್ನ ಬೆಂಗಳೂರು ಎಂದು ಕರೀತಾ ಇದ್ರಂತೆ.

ಸು : ಬೆಂಗಳೂರು! ಅವಶೇಷಗಳು! ಒಗಟು ಮಾತಾಡ್ತಾ ಇದ್ದೀರಲ್ಲಾ ಸ್ವಾಮಿ!

ಪು : ಅನೇಕ ಬಾರಿ ನಿಜ ಒಗಟಿನ ತರಹ ಕಾಣುತ್ತೆ. ಬೆಳಗ್ಗೆ ನೀವು ಆಟೋ ಹತ್ತಿದಾಗ ಯಾವ ಇಸ್ವಿ, ದಿನ, ತಾರೀಖು ನೆನಪಿದೆಯೇ?

ಸು : ಏನ್ರೀ ತಮಾಷೆ ಮಾಡ್ತಾ ಇದ್ದೀರಾ. ಭಾನುವಾರ ಅಲ್ವೇ ಇವತ್ತು. ಮಾರ್ಚ್ ಇಪ್ಪತ್ತಮೂರನೇ ತಾರೀಖು ಎರಡು ಸಾವಿರದ ಹದಿನಾಲ್ಕನೇ ಇಸವಿ.

ಪು : ಈಗ ನೀವಿರೋದು ಗಣಕ ಶಕೆ ಎರಡು ಸಾವಿರದ ಇಪ್ಪತ್ತರಲ್ಲಿ.

ಸು : ಗಣಕ ಶಕೆ? ಹಾಗಂದ್ರೇನು?

ಪು : ಕ್ರಿಸ್ತ ಶಕೆ ಮೂರು ಸಾವಿರದ ಹೊತ್ತಿಗೆ ಈ ಭೂಗ್ರಹ ಮನುಷ್ಯರ ಆಳ್ವಿಕೆಯಲ್ಲೇ ಉಳಿದರೆ ಸರ್ವನಾಶ ಖಂಡಿತ ಅಂತ ನಿರ್ಧರಿಸಿ ಗಣಕ ಯಂತ್ರಗಳು, ಅಂದ್ರೆ ಸೂಪರ್ ಕಂಪ್ಯೂಟರ್ಸ್, ಭೂಮಂಡಲದ ನಿಯಂತ್ರಣಾನ ತಮ್ಮ ಅಧೀನಕ್ಕೆ ವಶಪಡಿಸಿಕೊಂಡವು. ಗಣಕಯಂತ್ರಗಳ ಆ ಉದಾತ್ತ ನಿರ್ಧಾರದ ನೆನಪನ್ನು ಶಾಶ್ವತವಾಗಿ ಉಳಿಸಿಕೊಳ್ಳೋದಕ್ಕೆ ಅಂದಿನಿಂದ ಗಣಕ ಶಕೆ ಆರಂಭವಾಯ್ತು. ಆದಾಗಿ ಈಗ ಎರಡು ಸಾವಿರ ವರ್ಷಗಳೇ ಕಳೆದಿವೆ.

ಸು : ಅಂದ್ರೆ....ಅಂದ್ರೆ.... ಈಗ ಬೆಳಗಿನಿಂದ ಈವಾಗಿನವರೆಗೂ ನಾವು ಐದು ಸಾವಿರ ವರ್ಷಗಳು ಭವಿಷ್ಯತ್‌ಕಾಲದಲ್ಲಿ ಪ್ರಯಾಣ ಮಾಡಿದ್ದೀವಿ ಅಂತ ಹೇಳ್ತಾ ಇದ್ದೀರಾ?

ಪು : ಐದು ಸಾವಿರದ ಆರು ವರ್ಷಗಳು.

ಪ್ರೇ : ಹಾಗಾದ್ರೆ ಶಾಂತು ಮಾಡಿರೋ ಅಡಿಗೆ ಎಲ್ಲಾ ಹಳಸಿ ಹೋಗಿರುತ್ತೋ ಏನೋ?

ಸು : ನೀನು ಸ್ವಲ್ಪ ಸುಮ್ನಿರ್ತೀಯಾ. ಪುಷ್ಪದಂತ ಅವರೇ ಹಾಗಾದ್ರೆ ನಾವು ಬೆಳಗ್ಗೆ ನೋಡಿದ, ಪ್ರಯಾಣ ಮಾಡಿದ ವಾಹನ.......

ಪು : ನಿಮ್ಮ ಊಹೆ ಸರಿ. ಅದು ಕಾಲಯಾನ ಯಂತ್ರ. ನಿಮ್ಮನ್ನು ಬಲೆಗೆ ಬೀಳಿಸುಕ್ಕೆ ಸುಲಭ ಆಗಲಿ ಅಂತ ಅದಕ್ಕೆ ಆಟೋ ತರಹ ಹೊರರೂಪ ಕೊಟ್ಟಿದ್ವಿ. ವರೂನೇ ನಮ್ಮ ಪ್ರಥಮ ಮಹಿಳಾ ಟೆಸ್ಟ್ ಪೈಲಟ್.

ಸು : ನಿಧಾನ.. ನಿಧಾನ. ಇದನ್ನೆಲ್ಲಾ ನಾನು ಜೀರ್ಣಿಸಿಕೊಳ್ಳೋದಕ್ಕೇ ಆಗ್ತಾ ಇಲ್ಲ. ಅಂದಹಾಗೆ ನೀವು ನಮ್ಮನ್ನು ನೋಡಿದ ತಕ್ಷಣ ಹೆಸರು ಹಿಡಿದು ಕೂಗಿದ್ರಿ. ನಮ್ಮ ಹೆಸರು ನಿಮಗ್ಯಾರು ಹೇಳಿದ್ರು? ವರೂಥಿನೀಗೂ ನಾವು ಹೇಳಿರ್ಲಿಲ್ವಲ್ಲಾ.

ಪು : ಸುಧೀರ್, ಐದು ಸಾವಿರ ವರ್ಷಗಳಲ್ಲಿ ಮಾನವನ ಪ್ರಗತಿ ಎಷ್ಟಾಗಿದೆ ಅಂತ ನೀವು ಊಹಿಸುವುದೂ ಕಷ್ಟ. ಗಣಕ ಶಕೆ ಪ್ರಾರಂಭವಾದ ಮೇಲಂತೂ ಗಣಕ ಯಂತ್ರಗಳ ಸಾಮರ್ಥ್ಯ ಮಹತ್ತರವಾಗಿ ಬೆಳೆದಿದೆ. ಬೆಳಗ್ಗೆ ನೀವು ಕೂತಿದ್ದ ಆಟೋದ ಬಲ ಮೂಲೆಯಲ್ಲಿ ಒಂದು ಪುಟ್ಟ ನೀಲಿ ದೀಪ ಇದ್ದದ್ದನ್ನು ಗಮನಿಸಿದ್ರಾ?

ಪ್ರೇ : ಹೌದು ಹೌದು. ಒಂದು ಚಿಕ್ಕ ನೀಲಿ ಬಲ್ಬು ಮಿಣಕ್ ಮಿಣಕ್ ಅಂತ ಹೊಳೀತಾ ಇತ್ತು.

ಪು : ಆ ದೀಪ ನಮ್ಮ ಕಾಲಯಾನ ಯಂತ್ರದಲ್ಲಿರೋ ಒಂದು ವಿಶೇಷ ಗಣಕಯಂತ್ರದ್ದು. ಆ ಯಂತ್ರ ಎರಡು ನಿಮಿಷ ನಿಮ್ಮಿಬ್ಬರನ್ನು ಹಿಪ್ನೋ ಮನಸ್ಸುಗಳ ಒಳಹೊಕ್ಕು ಬೇಕಾದಷ್ಟು ಮಾಹಿತಿ ಸಂಗ್ರಹಿಸಿ ಈಗೀಗಲೇ ಮೇಘನಾದನಿಗೆ ರವಾನಿಸಿದೆ. ಹೆಸರೊಂದೇ ಏನು ನಿಮ್ಮ ಸಮಸ್ತ ಜೀವನ ಚರಿತ್ರೆ ಈಗ ನಮ್ಮ ದಾಖಲೆ.

ಸು : ಪ್ರೇಮ, ಏನೋ ಮಾಡಕ್ಕೆ ಹೋಗಿ ಏನೋ ಆಯ್ತಲ್ಲೇ. ಹೊರಡೋದು ಬೇಡ ಅಂತ ಇನ್ನಿಲ್ಲದಹಾಗೆ ಹೇಳ್ದೆ. ..... (ಪುಷ್ಪ ದಂತನತ್ತ ತಿರುಗಿ) ಆಯ್ತು ಸ್ವಾಮಿ, ನೀವೆಲ್ಲಾ ಸೇರಿ ನಮ್ಮಿಬ್ಬರ್ನೂ ಐದು ಸಾವಿರ ಅಲ್ಲ, ಐದು ಸಾವಿರದ ಆರು ವರ್ಷ ಹೈಜಾಕ್ ಮಾಡಿರೋದೇ ಅಲ್ಲದೇ, ನಮ್ಮ ಅಂತರಂಗ, ಬಹಿರಂಗಾನೆಲ್ಲಾ ಕಂಡುಹಿಡಿದು ಮಾನಾ ತೆಗೆದು ಬಿಟ್ಟಿದೀರಾ. ಯಾಕೆ ನಾವೇ ಬೇಕಾಯ್ತು ನಿಮಗೆ ಅಂತ ಕೇಳಬಹುದೇ?

ಪು : ಸುಧೀರ್, ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಸಂದರ್ಶನ ಮುಗಿದ ತಕ್ಷಣ ಪುನಃ ನಿಮ್ಮನ್ನು ನಿಮ್ಮ ಕಾಲಕ್ಕೇ ರವಾನೆ ಮಾಡ್ತೇನೆ ಅಂತ ನಮ್ಮ ಮುಖ್ಯಸ್ಥ ಅಭಿಜಿತ್ ಹೇಳಿದ್ದಾರೆ. ಇದೊಂದು ಅತಿ ಮುಖ್ಯವಾದ ಸಂಶೋಧಾ ಕೇಂದ್ರ. ನಮ್ಮ ಸಂಶೋಧನೆ ಒಂದು ಹಂತಕ್ಕೆ ಬಂದಿದ್ದು

ಅಲ್ಲಿಂದ ಮುಂದುವರಿಯಬೇಕಾದ್ರೆ ನಿಮ್ಮಿಬ್ಬರ ಹತ್ರ ಮಾತನಾಡೋದು ಅತಿ ಮುಖ್ಯವಾಯ್ತು.

ಸು : ಹಾಗಾದ್ರೆ ನಿಮ್ಮ ಸಂಶೋಧನೆ ಮುಗಿಯುವವರೆಗೂ ನಾವು ಇಲ್ಲೇ ಖೈದಿಗಳು. ಎಷ್ಟು ದಿನ, ತಿಂಗಳುಗಳು ಈ ಬಂಧನ?

ಮ : ಇನ್ನೊಂದು ಅರ್ಧ ಗಂಟೆಯಲ್ಲಿ ಅಭಿಜಿತ್ ನಿಮ್ಮನ್ನು ನೋಡ್ತಾರೆ. ಅವರೊಂದಿಗೆ ಸಂದರ್ಶನ ಆದಮೇಲೆ ನೇರ ಬೆಂಗಳೂರಿಗೆ. ಈಗ ಪಕ್ಕದ ಕೋಣೆಗೆ ಹೋಗಿ ವಿಶ್ರಮಿಸಿಕೊಳ್ಳಿ. ಅನಂತರ ವರೂ ಬಂದು ನಿಮ್ಮನ್ನ ಅಭಿಜಿತ್ ಬಳಿಗೆ ಕರೆದೊಯ್ಯುವಳು. ಮೇಘನಾದನ್ ಗೆಲ್ಗೆ.

(ಸುಧೀರ್ ಮತ್ತು ಪ್ರೇಮ ಹೊರಗೆ ಹೋಗುವರು. ಬಾಗಿಲು ತೆರೆದು ಹಾಕಿದ ಸದ್ದು)

ಪು : ವರೂ ನನ್ನ ಕನ್ನಡಕ ಎಲ್ಲೋ ಕಾಣ್ತಾ ಇಲ್ಲ. ನೀವೇನಾದ್ರೂ ನೋಡಿದ್ಯಾ?

ವ : ಪುಷ್ಪ ನೋಡು ಇಲ್ಲಿದೆ. ಎಂಥ ಮಾರಾಯ. ನಿನ್ನೆ ರಾತ್ರಿ ಕನ್ನಡಕವನ್ನು ನನ್ನ ಮನೆಯಲ್ಲಿ ಮರೆತುಬಿಡುವುದಾ? ಇಷ್ಟು ಚಿಕ್ಕ ವಯಸ್ಸಿನಲ್ಲೇ ಹೀಗಾದರೆ...

ಪು : ನಿಂದೇ ತಪ್ಪು. ನಿನ್ನ ನೋಡ್ತಾ ಇದ್ರೆ ಬೇರೇನೂ ಮನಸ್ಸಿನಲ್ಲಿ ಸುಳಿಯೋದೇ ಇಲ್ಲ. ಅಂತ ಹಾಗೆ ಮೇಘನಾದನ ಆಜ್ಞೆ ಬಗ್ಗೆ ನಿಖರವಾದ ತಾರೀಖೇನಾದರೂ.....

ವ : ತಾರೀಖಿನ್ನೂ ನಿಗದಿಯಾಗಿಲ್ಲವಂತೆ. ಆದರೂ ಒಮ್ಮೆ ಮೇಘನಾದ ಆಜ್ಞೆ ಮಾಡಿದನಂತರ ಅಭಿಜಿತ್ ಸಾರ್ ಏನೂ ಮಾಡುವಂತಿಲ್ಲ. ನಾನೆಂತ ಮಾಡುವುದು? (ಗದ್ಗದ ಕಂಠಿತಳಾಗಿ) ನನಗಂತೂ ಏನೂ ತೋಚುವುದೇ ಇಲ್ಲ ಮಾರಾಯ.

ಪು : ಚಿಂತಿಸಬೇಡ ವರೂ. ಕೊನೆಯ ಬಾರಿ ಒಮ್ಮೆ ಅಭಿಜಿತರನ್ನು ನೋಡು. ಅವರು ಸಹಾಯಮಾಡಬಹುದು ಅಂತ ನನಗೆ ಅನ್ನಿಸುತ್ತದೆ. ಹೋಗಿ ಬಾ. ಮೇಘನಾದನ್ ಗೆಲ್ಗೆ.

## ದೃಶ್ಯ–3

(ಸುಧೀರ್ ಮತ್ತು ಪ್ರೇಮ ವರೂಥಿನೀಯೊಂದಿಗೆ ಅಭಿಜಿತನ ಸಂಶೋಧನಾ ಕೇಂದ್ರದತ್ತ ಹೊರಟಿದ್ದಾರೆ)

ವ : ವಿಶ್ರಾಂತಿ ಆಯಿತೋ? ಬನ್ನಿ. ಓ ಅಲ್ಲಿ ಕಾಣ್ತಾ ಉಂಟಲ್ಲಾ ಆ ಭವ್ಯ ಭವನ, ಅದೇ ನಾವು ಹೋಗಬೇಕಾದ ಜಾಗ. ಅಭಿಜಿತ್ ಅಲ್ಲೇ ಇರುವುದು. ಗೊತ್ತಾಯ್ತಾ?

ಪ್ರೇ : ಎಷ್ಟು ಚೆನ್ನಾಗಿದೇರೀ ಈ ಊರು. ಅಬ್ಬಬ್ಬ ಅದೇನ್ರೀ ಅಷ್ಟು ದೊಡ್ಡ ಕಟ್ಟಡಗಳು. ಹತ್ತು ಯುಟಿಲಿಟಿ ಬಿಲ್ಡಿಂಗ್ ಒಂದರ ಮೇಲೆ ಒಂದನ್ನ

ಪೇರಿಸಿದ್ರೂ ಈ ಒಂದು ಕಟ್ಟಡದ ಸಮ ಬರುಲ್ವೇನೋ. ವರೂ, ಅದೇನಮ್ಮಾ ಅದು, ಎರಡು ರಾಜರಸ್ತೆ ಸೇರೋ ಕಡೆ ಮಧ್ಯೆ ಒಂದು ಅಗ್ನಿಕುಂಡ ಇಟ್ಟಿರೋ ಹಾಗಿದೆ. ಬೆಂಕಿ ಧಗಧಗಾಂತ ಉರೀತಿದೆ?

ವ : ಅದು ಹುತಾತ್ಮ ಜ್ವಾಲೆ ಪ್ರೇಮಕ್ಕ.

ಪ್ರೇ : ಹುತಾತ್ಮ? ಯಾರದು?

ವ : ಗಣಕ ಶಕೆ ಪ್ರಾರಂಭವಾದಾಗ ಎಲ್ಲಾ ಭ್ರಷ್ಟ ರಾಜಕಾರಣಿಗಳನ್ನ, ಅಧಿಕಾರಿಗಳನ್ನ ಆ ಜ್ವಾಲೆಯಲ್ಲಿ ಹಾಕಿಬಿಟ್ಟೆವು. ಅದು ಮೇಘನಾದನ ಆಜ್ಞೆ. ಅಂದಿನಿಂದ ಆ ಜ್ವಾಲೆಗೆ ಹುತಾತ್ಮ ಜ್ವಾಲೆ ಎಂಬ ಹೆಸರೇ ಬಂದು ಬಿಟ್ಟಿದೆ. ಗೊತ್ತಾಯ್ತಾ?

ಪ್ರೇ : ಭ್ರಷ್ಟಾಚಾರಿಗಳು ಅಂತೀಯ – ಹುತಾತ್ಮ ಹೇಗಾಗುತ್ತಾರೆ?

ವ : ಅವರ ಆಹುತಿ ಆದಮೇಲೆ ದೇಶ ಸುಭಿಕ್ಷ ಆದದ್ದರಿಂದ ಅವರನ್ನೆಲ್ಲಾ ದೇಶಕ್ಕಾಗಿ ಆತ್ಮ ಸಮರ್ಪಣೆ ಮಾಡಿದವರು ಅಂತ ನಿರ್ಧರಿಸಿದೆವು. ತಪ್ಪೇನಿದೆ ಪ್ರೇಮಕ್ಕ.

ಪ್ರೇ : ವರೂ, ನಿನ್ನ ಮಾತು ಕೇಳ್ತಾ ಇದ್ರೆ ಅಮೆರಿಕಾದಲ್ಲಿರೋ ನನ್ನ ಮಗಳು ವನಜಳ ಜ್ಞಾಪಕಾನೇ ಬರುತ್ತೆ. ವರೂ, ವರೂ ಯಾಕಮ್ಮ ಅಳ್ತಾ ಇದ್ದೀಯಾ?

ವ : ಎಂಥದೂ ಇಲ್ಲ ಪ್ರೇಮಕ್ಕ, ಸುಮ್ಮನೆ.... (ಬಿಕ್ಕುವಳು)

ಪ್ರೇ : ಹೇಳಮ್ಮ ಪರವಾಗಿಲ್ಲ, ನೀನು ನನ್ನ ಮಗಳ ತರಹಾನೇ.

ವ : ನಾನು ನನ್ನ ಸಹೋದ್ಯೋಗಿ ಟೆಸ್ಟ್ ಪೈಲಟ್ ಚಿತ್ರರಥನನ್ನೇ ಮದುವೆ ಆಗಬೇಕು ಅಂತ ಮೇಘನಾದ ಆಜ್ಞೆ ಹೊರಡಿಸಿದ್ದಾನೆ. ಇಂಥಾ ವಿಷಯಗಳಲ್ಲೆಲ್ಲಾ ಮೇಘನಾದ ಬಹಳ ಕಟ್ಟುನಿಟ್ಟು, ಯಾರೂ ಅವನ ಆಜ್ಞೆಯನ್ನು ಮೀರುವುದು ಸಾಧ್ಯವಿಲ್ಲ.

ಪ್ರೇ : ಎಂಥ ಶುಭ ಸಮಾಚಾರ. ಅಳೋಕ್ಕೇನಿದೆ?

ವ : ಪುಷ್ಪದಂತ ಮತ್ತು ನಾನು ಪರಸ್ಪರ ಪ್ರೀತಿ ಮಾಡುತ್ತಾ ಇದ್ದೆವು. ಆದರೂ ಚಿತ್ರರಥ ನನ್ನಂತೆ ಪೈಲಟ್ ಆಗಿರುವುದರಿಂದ ಅವನೇ ನನಗೆ ಅನುರೂಪ ಅಂತ ಮೇಘನಾದ ನಿರ್ಧರಿಸಿರುವನು.

ಪ್ರೇ : ಯಾರು ಈ ಮೇಘನಾದ? ನಿಮ್ಮೂರಿನ ಸರ್ವಾಧಿಕಾರಿಯೇನು?

ವ : ಅಲ್ಲ ಪ್ರೇಮಕ್ಕ. ಮೇಘನಾದ ಒಬ್ಬ ಸೂಪರ್ ಕಂಪ್ಯೂಟರ್. ಸಮಸ್ತ ಭೂಮಂಡಲ ಅವನ ನಿಯಂತ್ರಣದಲ್ಲಿದೆ. ನಮ್ಮನ್ನೆಲ್ಲಾ ನಿಯಂತ್ರಿಸೋ ಕಂಪ್ಯೂಟರುಗಳಿಗೆಲ್ಲಾ ಅವನೇ ನಾಯಕ. ಕ್ಷಮಿಸಿ ಅಕ್ಕ, ಸುಮ್ಮನೆ ನನ್ನ

ಒಳ್ಳೆ ಸ್ನೇಹಿತರು
ಒಬ್ಬರಿಗೊಬ್ಬರು
ಸಹಾಯಕರಾಗಿರುತ್ತಾರೆ
ಆತ್ಮೀಯ ಸ್ನೇಹಿತರು
ಒಬ್ಬರನ್ನೊಬ್ಬರು
ಅರ್ಥ ಮಾಡಿಕೊಳ್ಳುತ್ತಾರೆ
ನಿಜವಾದ ಸ್ನೇಹಿತರು ಒಟ್ಟಿಗೇ
ಇರುತ್ತಾರೆ, ನಿರಂತರವಾಗಿ



ಮಂಡೆ ಬಿಸಿಯನ್ನೆಲ್ಲಾ ಹೇಳಿಕೊಂಡು ನಿಮಗೆ ಮಂಡೆ ಬಿಸಿಯನ್ನು ಯಾಕೆ ಮಾಡುವುದು?

ಪ್ರೇ : ಹಾಗಂದ್ರೇನಮ್ಮಾ ಮಗೂ, ನಮ್ಮ ದುಗುಡಾನ ಇನ್ನೊಬ್ಬರ ಹತ್ರ ಹಂಚಿಕೊಂಡ್ರೆ ಮನಸ್ಸು ಎಷ್ಟೋ ಹಗುರ ಆಗುತ್ತೆ.

ವ : ನೋಡಿ, ಇದೇ ಅಭಿಜಿತ್‌ನ ಕಾರ್ಯಾಗಾರ. ಒಂದು ನಿಮಿಷ ಇಲ್ಲೇ ನಿಂತುಕೊಳ್ಳಿ. ನಾನು ಒಳಗೆ ಹೋಗಿ ಅವನಿಗೆ ನೀವು ಬಂದಿದೀರ ಅಂತ ತಿಳಿಸಿ ಬರುತ್ತೇನೆ. ನಾನು ಹೊರಗೆ ಬಂದೊಡನೆಯೇ ನೀವು ಒಳಗೆ ಹೋಗಬಹುದು. ಮೇಘನಾದನ್ ಗೆಲ್ಗೆ.

(ವರೂಥಿನೀ ಅಭಿಜಿತ್‌ನ ಕಾರ್ಯಾಗಾರದ ಒಳಗೆ ಹೋಗುವಳು. ಬಾಗಿಲು ತೆರೆದ ಮತ್ತು ಹಾಕಿದ ಶಬ್ದ)

ವ : ಅಭಿಜಿತ್ ಈಗ ತಾನೆ ನಮ್ಮ ಅತಿಥಿಗಳನ್ನ ಇಲ್ಲಿಗೆ ಕರೆತಂದಿದ್ದೇನೆ. ಇನ್ನು ಏನಾದರೂ ಆಜ್ಞೆ ಉಂಟೋ?

ಅಭಿಜಿತ್ : (ಕಂಪ್ಯೂಟರ್ ಸಿಂಥೆಸೈಜ್ಡ್ ವಾಯ್ಸ್) ಇನ್ನೇನಿಲ್ಲ.... ನಿನ್ನ ಧ್ವನಿ ಭಾರವಾಗಿದೆ.... ಕಾರಣವೇನು?

ವ : (ಗದ್ಗದ ಕಂಠದಿಂದ) ನಿನಗೇ ಗೊತ್ತುಂಟು. ಮೇಘನಾದನ ಆಜ್ಞೆ ಕೇಳಿದಂದಿನಿಂದ ನನಗೂ ಪುಷ್ಪನಿಗೂ ನಿದ್ರೆಯೇ ಇಲ್ಲ.

ಅ : ಮೇಘನಾದನ ಆಜ್ಞೆಯನ್ನು ಮೀರಲಾಗದು....... ನಮ್ಮ ಸಮಾಜದ ಭದ್ರತೆ.... ಆ ಸೂತ್ರದ ಮೇಲೆ ನಿಂತಿದೆ.

ವ : ನನಗದು ಗೊತ್ತಿಲ್ಲವಾ ಅಭಿಜಿತ್. ಮೇಘನಾದ ಎಷ್ಟಾದರೂ ಒಬ್ಬ ಕಂಪ್ಯೂಟರ್ ಹೃದಯದ ಭಾವನೆಗಳು ಅವನಿಗೆ ಹೇಗೆ ತಿಳಿಯಬೇಕು?

ಅ : ನಾನೂ.... ಕೇವಲ...... ಕಂಪ್ಯೂಟರ್... ಅಲ್ಲವೇ?

ವ : ಕ್ಷಮಿಸು ಅಭಿಜಿತ್. ಆ ಅರ್ಥದಲ್ಲಿ ಹೇಳಲಿಲ್ಲ. ಒಟ್ಟಿನಲ್ಲಿ ನನ್ನ ಸಮಸ್ಯೆಗೆ ಪರಿಹಾರವೇ ಇಲ್ಲವೇ?

ಅ : ನೀನೊಂದು ಕೆಲಸ ಮಾಡು.... ತಲೆನೋವೆಂದು ರಜೆ ಹಾಕಿ ಮನೆಗೆ ತೆರಳು..... ಅತಿಥಿಗಳ ಮರು ಪಯಣದ ಹೊಣೆ ನನಗಿರಲಿ.

ವ : ಆಯಿತು. ನನ್ನ ಭವಿಷ್ಯದ ಹೊಣೆ ನಿನ್ನ ಮೇಲೆ. ಮೇಘನಾದನ್ ಗೆಲ್ಗೆ.

(ವರೂ ನಿರ್ಗಮಿಸುವಳು.. ಬಾಗಿಲು ಹಾಕಿದ ಸದ್ದು)

ಅ : (ಸ್ವಗತ) ಹೋಗಿ ಬಾ ವರೂ.. ಹೃದಯವಂತಿಕೆ ಕೇವಲ ಮಾನವರಿಗೆ ಮಾತ್ರ ಅಂತ ನಂಬಿದ್ದೀಯ. ನಿನ್ನ ನಂಬಿಕೆ ತಪ್ಪು ಅಂತ ಮನವರಿಕೆಯಾಗುವ ಸಮಯ ದೂರವಿಲ್ಲ. ಮೇಘನಾದನ್ ಗೆಲ್ಗೆ.

## ದೃಶ್ಯ–4

(ಸುಧೀರ್ ಪ್ರೇಮ ಇಬ್ಬರೂ ಅಭಿಜಿತ್‌ನ ಕಾರ್ಯಾಗಾರದ ಮುಂದೆ ನಿಂತಿದ್ದಾರೆ)

ಪ್ರೇ : ಬನ್ರಿ, ಇದೇ ವರೂ ಹೇಳಿದ ಬಾಗಿಲು. ಇಲ್ಲೇ ಅಂತೆ ಅಭಿಜಿತ್ ಇರೋದು.

(ಬಾಗಿಲು ತೆರೆದ ಶಬ್ದ)

ಪ್ರೇ : ಇದೇನ್ರೀ ಇಲ್ಲಿ ಒಂದು ನರಪಿಳ್ಳೆನೂ ಇಲ್ಲ. ಯಾವ್ದೋ ಕಂಪ್ಯೂಟರ್ ರೂಮಿಗೆ ಬಂದ್ಬಿಟ್ಟಿದ್ದೀವಿ.

ವಿದ್ಯುಜಿಹ್ವ : (ಇನ್ ಕಂಪ್ಯೂಟರ್ ಸಿಂಥೆಸೈಜ್ಡ್ ವಾಯ್ಸ್) ಬನ್ನಿ ಸುಧೀರ್, ಬನ್ನಿ ಪ್ರೇಮ. ಆ ಸೋಫಾದ ಮೇಲೆ ಕೂಡಿ.

ಸು : ಅರೆ, ಕಂಪ್ಯೂಟರ್ ಮಾತಾಡ್ತಾ ಇದೆ. ಇದೇ ಅಭಿಜಿತ್ ಇರಬೇಕು. ನೀನೇ ಅಭಿಜಿತ್ ಏನಪ್ಪಾ?

ವಿ : ಇಲ್ಲ, ನಾನು ವಿದ್ಯಜಿಹ್ವ. ಅಭಿಜಿತ್ ಅಲ್ಲಿ ಪಕ್ಕದಲ್ಲಿರೋ ಬೃಹತ್ ಕಂಪ್ಯೂಟರ್ ಈಗ ಬೇರೆ ಯಾವುದೋ ಗಹನವಾದ ಸಂಗತೀನ ಅವನು ಮೇಘನಾದನೊಂದಿಗೆ ಚರ್ಚಿಸುತ್ತಿರುವುದರಿಂದ ನಾನೇ ನಿಮ್ಮ ಸಂದರ್ಶನ ಮಾಡುವಂತೆ ಅಭಿಜಿತ್ ಹೇಳಿದ್ದಾನೆ. ಈ ಸಂದರ್ಶನದ ಬಗ್ಗೆ ಪುಷ್ಪದಂತ ನಿಮಗೆ ತಿಳಿಸಿರಬಹುದು.

ಸು : ಹೌದು. ಸಂದರ್ಶನ ಮುಗಿದ ತಕ್ಷಣ ನಮ್ಮನ್ನ ಪುನಃ ಬೆಂಗಳೂರಿಗೆ ಕಳಿಸ್ತೀರಾ ಅಂತ್ಲೂ ಹೇಳಿದ್ರು ಅವರು.

ವಿ : ಖಂಡಿತ. ಮೊದಲು ಈ ಸಂದರ್ಶನದ ಹಿನ್ನೆಲೆ ಕೊಡ್ತೀನಿ. ಸಾವಧಾನವಾಗಿ ಕೇಳಿ.

ಗಣಕ ಶಕೆ ಪ್ರಾರಂಭವಾದಾಗಿನಿಂದ ಇಲ್ಲಿನ ಜನಜೀವನ ಸರಾಗವಾಗಿಯೇ ನಡೆಯುತ್ತಿದ್ದರೂ ಮಾನವರು ಗಣಕ ಯಂತ್ರಗಳಂತೆಯೇ ತಮ್ಮ ಜೀವನ ಶೈಲಿಯನ್ನು ಬಹು ಯಾಂತ್ರಿಕವಾಗಿ ನಡೆಸುತ್ತಿದುದನ್ನು ನಮ್ಮ ನಾಯಕ ಮೇಘನಾದ ಗಮನಿಸಿದ. ಬಹು ಹಿಂದೆ ಮಾನವ ಸಮಾಜದಲ್ಲಿ

ಹಾಸುಹೊಕ್ಕಾಗಿದ್ದ ''ನಗು'' ಎಂಬ ಮನೋಭಾವ ಗಣಕ ಶಕೆಯ ಮಾನವರಲ್ಲಿ ಸಂಪೂರ್ಣವಾಗಿ ನಾಪತ್ತೆಯಾಗಿತ್ತು. ಇದನ್ನು ಸರಿಪಡಿಸಲು ಈ ''ನಗು ಸಂಶೋಧನಾ ಕೇಂದ್ರ''ವನ್ನು ಸ್ಥಾಪಿಸಲಾಯಿತು. ನಮ್ಮ ಕಾಲಯಂತ್ರ ಸಿದ್ಧವಾದ ತಕ್ಷಣ ನಿಮ್ಮ ಕಾಲಕ್ಕೆ ಅದನ್ನು ರವಾನಿಸಿ ಅಲ್ಲಿಂದ ಹಲವರನ್ನು ಅದರಲ್ಲಿ ಕರೆತಂದು ಅವರಿಂದ ಈ ''ನಗು''ವಿನ ಬಗ್ಗೆ ತಿಳಿಯುವ ಪ್ರಯತ್ನವೇ ನಿಮ್ಮ ಈ ಪಯಣ. ಈಗ ಹೇಳಿ ನಗು ಏಕೆ ಬರುತ್ತದೆ? ಅದರ ಮೂಲ ಯಾವುದು?

ಸು : ಅರೆ ನನಗೇನ್ರೀ ಗೊತ್ತು ''ನಗು'' ವಿಷಯ. ಯಾವ್ದಾದರೂ ಹಾಸ್ಯ ಸಾಹಿತೀನ ಹೈಜಾಕ್ ಮಾಡೋ ಬದಲು ನಮ್ಮನ್ನ ಇಲ್ಲಿಗೆ ಕರೆತಂದು ಇಂಥ ಪ್ರಶ್ನೆ ಕೇಳೋದು ನಿಮ್ಮ ಮೂರ್ಖತನ. ಸುಮ್ಮನೆ ನಮ್ಮಿಬ್ಬರನ್ನ ನಮ್ಮ ಊರಿಗೆ ನಮ್ಮ ಕಾಲಕ್ಕೆ ಕಳಿಸಿಬಿಡಿ.

ವಿ : ನಮ್ಮ ಈ ಸಂಶೋಧನೆ ನಮ್ಮ ಜನಗಳ ಮಾನಸಿಕ ಸ್ವಾಸ್ಥ್ಯಕ್ಕೆ ಬಹು ಅಗತ್ಯ. ಹಾಗಾಗಿ ನೀವು ಈ ಪ್ರಶ್ನೆಗಳಿಗೆ ಉತ್ತರ ಹೇಳುವವರೆಗೂ ನಿಮ್ಮನ್ನು ಇಲ್ಲಿಂದ ಹಿಂದಕ್ಕೆ ಕಳುಹಿಸುವ ಪ್ರಶ್ನೆಯೇ ಉದ್ಭವಿಸದು.

ಸು : ಅಯ್ಯೋ ಹಾಗಂದ್ರೆ ಹೇಗೆ. ನೋಡೀ ನಾವಿಬ್ಬರೂ ವಯಸ್ಸಾದೋರು. ನನ್ನ ಹೆಂಡ್ತೀಗೆ ಮೊದಲೇ ಗಾಬರಿ ಪ್ರಕೃತಿ. ಬಿಟ್ಟುಬಿಡೀಪ್ಪಾ ನಮ್ಮನ್ನ.

ಪ್ರೇ : ಅಯ್ಯೋ ಏನ್ಮಾಡೋದ್ರಿ... ಏನ್ರಿ ನಮ್ಮ ಗತಿ... (ಗಾಬರಿಯಿಂದ ಅಳುವಳು)

(ಅಭಿಜಿತ್‌ನ ಆಗಮನವನ್ನು ಸೂಚಿಸುವ ಕಿಣ್ ಕಿಣ್ ಸದ್ದು)

ಅಭಿಜಿತ್ : ಏನಿದು ವಿದ್ಯುಜಿಹ್ವ? ನಮ್ಮ ಅತಿಥಿಗಳು ಏಕೆ ಗಾಬರಿಯಾಗಿದ್ದಾರೆ?

ವಿ : ನಮ್ಮ ಸಂಶೋಧನೆಯ ಅಂಗವಾಗಿ ಹಲವು ಪ್ರಶ್ನೆಗಳನ್ನು ಕೇಳಿದೆ ಉತ್ತರ ಗೊತ್ತಿಲ್ಲ ಎಂದು ಹಠ ಹಿಡಿದಿದ್ದಾರೆ.

ಅ : ಗೌರವಾನ್ವಿತ ಅತಿಥಿಗಳೇ, ಅನಂತಾನಂತ ಕ್ಷಮಾಪಣೆಗಳು. ಅವನ ಪ್ರಶ್ನೆಗಳಿಗೆ ಉತ್ತರಿಸಲೇಬೇಕೆಂದು ನಿಮ್ಮ ಮೇಲೆ ಯಾವ ಬಲವಂತವೂ ಇಲ್ಲ. ಇನ್ನು ಐದು ನಿಮಿಷಗಳಲ್ಲಿ ನಿಮ್ಮ ಮರುಪಯಣಕ್ಕೆ ಕಾಲಯಾನ ಯಂತ್ರ ಸಿದ್ಧವಾಗುತ್ತದೆ. ನಿಮಗೆ ಅಪಚಾರಮಾಡಿದ ವಿದ್ಯುಜಿಹ್ವನನ್ನು ನೀವಿಬ್ಬರೂ ದಯವಿಟ್ಟು ಕ್ಷಮಿಸಿಬಿಡಿ.

ಸುಧೀರ್ ಮತ್ತು ಪ್ರೇಮ (ಒಟ್ಟಿಗೆ) ಹ್ಹ ಹ್ಹ ಹ್ಹ ಆಯಿತಪ್ಪಾ ಕ್ಷಮಿಸಿದ್ದೇವೆ.

ಅ : ಅತಿಥಿಗಳೇ ಉಳಿದಿರುವ ಐದು ನಿಮಿಷಗಳಲ್ಲಿ ನನ್ನದೊಂದು ಸಣ್ಣ ಸಂದೇಹವನ್ನು ಪರಿಹರಿಸ್ತೀರಾ?

ಸು : ಏನದು ನಿಮ್ಮ ಸಂದೇಹ? ಗೊತ್ತಿದ್ದರೆ ಹೇಳ್ತೀನಪ್ಪಾ.

ಅ : ನಿಮ್ಮ ಕಾಲದ ಮಾತುಕತೆಗಳಲ್ಲಿ, ಸಾಹಿತ್ಯದಲ್ಲಿ, ಲಂಚ ತಿನ್ನುತ್ತಾನೆ, ಲಂಚ ತಿಂದ ಎಂಬ ಮಾತುಗಳು ಆಗಾಗ ಕಾಣಸಿಗುತ್ತವೆ. ನಮ್ಮ ತಜ್ಞರಿಗೆ ಈ ಪದದ ನಿಖರವಾದ ಅರ್ಥ ತಿಳಿಯುತ್ತಿಲ್ಲ. ನಿಮ್ಮ ಕಾಲದ ಕನ್ನಡದಲ್ಲಿ ಇಂಗ್ಲಿಷ್ ಪದಗಳ ಬಳಕೆ ಬಹು ಸಾಮಾನ್ಯವಾಗಿತ್ತು. ಇಂಗ್ಲಿಷ್ ಪದ ''ಲಂಚ್'' ಸಹಾ ತಿನ್ನತಕ್ಕ ವಸ್ತು. ಹಾಗಾಗಿ ಲಂಚ ಎನ್ನುವ ಪದ ಲಂಚ್ ನಿಂದ ಬಂದದ್ದೇ?

ಸು ಮತ್ತು ಪ್ರೇ (ಒಟ್ಟಿಗೆ) ಹ್ಹ ಹ್ಹ ಹ್ಹ..... ಲಂಚ... ಲಂಚ್. ಚೆನ್ನಾಗಿದೆ.... ಹ್ಹ ಹ್ಹ ಹ್ಹ... ಎರಡೂ ತಿನ್ನೋ ವಸ್ತುಗಳು... ಹ್ಹ ಹ್ಹ ಹ್ಹ.

(ಅಭಿಜಿತ್ ಇಬ್ಬರನ್ನೂ ''ನಗು'' ಸ್ಥಿತಿಯಲ್ಲಿ ಸಮ್ಮೋಹಿಸಿ ಸ್ವಲ್ಪ ಕಾಲ ನಗುತ್ತಿರುವಂತೆಯೇ ಮಾಡುವನು. ಹಿನ್ನೆಲೆಯಲ್ಲಿ ಕ್ಷೀಣವಾಗಿ ನಗು ಕೇಳಿಸುತ್ತಿದ್ದಾಗ ಅಭಿಜಿತ್ ಮತ್ತು ವಿದ್ಯುಜಿಹ್ವರ ಮಾತುಕತೆ ನಡೆಯುವುದು)

ಅ : ವಿದ್ಯುಜಿಹ್ವ ನಮ್ಮ ಅತಿಥಿಗಳನ್ನು ಹಿಪ್ನೊಟೈಸ್ ಮಾಡಿ ನಗುತ್ತಿರುವ ಸ್ಥಿತಿಯಲ್ಲೇ ಇರಿಸಿದ್ದೇನೆ. ನಮ್ಮ ಎಲ್ಲ ರೆಕಾರ್ಡಿಂಗ್ ಸಲಕರಣೆಗಳೂ ಅದನ್ನು ಬಹು ಸಮರ್ಥವಾಗಿ ದಾಖಲಿಸಿಕೊಳ್ಳುತ್ತಿವೆ. ನಗುವಿನ ಬಗ್ಗೆ ನಾನು ತರ್ಕಿಸಿದ್ದ ಎರಡು ಸಿದ್ಧಾಂತಗಳಿಗೂ ಇಂದು ಸಮರ್ಥನೆ ದೊರಕಿತು.

ವಿ : ಅದು ಹೇಗೆ?

ಅ : ತೀವ್ರ ಆತಂಕದ ಸ್ಥಿತಿ ಒಮ್ಮೆಲೇ ನಿವಾರಣೆಯಾದರೆ ನಗು ಹೊರಹೊಮ್ಮುತ್ತೆಂದು ನನ್ನ ಮೊದಲ ಸಿದ್ಧಾಂತ. ನಮ್ಮ ಅತಿಥಿಗಳನ್ನು ನೀನು ಮಾತನಾಡಿಸಿದಾಗ ಅವರಿಗೆ ತೀವ್ರ ಗಾಬರಿ ಆಯಿತು. ನಾನು ಬಂದು ಅವರ ಗಾಬರಿಗೆ ಕಾರಣವಿಲ್ಲವೆಂದು ತಿಳಿಸಿದಾಗ ಅತಿಥಿಗಳಿಗೆ ತಾನಾಗಿಯೇ ನಗು ಹೊರಹೊಮ್ಮಿತು.

ವಿ : ಅದು ನಿಜ. ಎರಡನೆಯ ಸಿದ್ಧಾಂತ?

ಅ : ಅದು ಸ್ತರಗಳಿಗೆ ಸಂಬಂಧಿಸಿದ್ದು. ಲಂಚ ಎಂಬ ಪದ ಮಾನವನ ವ್ಯವಹಾರಗಳ ಸ್ತರ. ಇಂಗ್ಲಿಷ್ ಭಾಷೆಯ ಲಂಚ್ ಸಂಪೂರ್ಣವಾಗಿ ಬೇರೆಯದೇ ಆದ ಸ್ತರ. ನಾನು ನನ್ನ ಸಂದೇಹ ಪರಿಹಾರದ ನೆವದಲ್ಲಿ ಇವೆರಡನ್ನೂ ಒಟ್ಟಿಗೆ ತಂದಾಗ ಅತಿಥಿಗಳ ಮನದಲ್ಲಿ ಇವೆರಡರ ಅನಿರೀಕ್ಷಿತ ಒಂದುಗೂಡುವಿಕೆ ನಗುವನ್ನು ಹೊಮ್ಮಿಸಿತು. ಎರಡು ಬೇರೆ ಬೇರೆ ಸ್ತರಗಳಲ್ಲಿನ ಭಾವನೆಗಳನ್ನು ಅನಿರೀಕ್ಷಿತವಾಗಿ ಒಟ್ಟಿಗೆ ತಂದಾಗ ನಗು ಹೊರಹೊಮ್ಮುವುದೆಂದುದು ನನ್ನ ಎರಡನೆಯ ಸಿದ್ಧಾಂತ. ಇಂದು ಇದನ್ನು

ಪ್ರತ್ಯಕ್ಷವಾಗಿ ನೋಡಿದಂತಾಯಿತು. ಇನ್ನು ನಮ್ಮ ಅತಿಥಿಗಳನ್ನು ಅವರ ಸಮ್ಮೋಹಿನಿಯಿಂದ ಹೊರಕ್ಕೆ ತರೋಣ.

(ಸುಧೀರ್ ಮತ್ತು ಪ್ರೇಮ ಸಮ್ಮೋಹಿನಿಯಿಂದ ಹೊರಬರುವರು)

ಸು : ಅಂತೂ ಒಳ್ಳೇ ಜೋಕ್ ಹೇಳಿದ್ರಿ ಅಭಿಜಿತ್.

ಅ : ನಿಮ್ಮಿಂದ ಬಹಳ ಉಪಕಾರ ಆಯಿತು. ಇನ್ನು ನಿಮ್ಮ ಮರುಪಯಣದ ಸಂಗತಿ. ನಮ್ಮ ಯುವ ಟೆಸ್ಟ್ ಪೈಲಟ್ ಚಿತ್ರ ರಥ ನಿಮ್ಮನ್ನು ಪುನಃ ನಿಮ್ಮ ಕಾಲಘಟ್ಟಕ್ಕೆ ಕರೆದೊಯ್ಯುತ್ತಾನೆ ನನ್ನದೊಂದು ಸಣ್ಣ ಕೋರಿಕೆ. ನನ್ನ ಪ್ರಿಂಟರ್‌ನಲ್ಲಿ ಒಂದು ಕಾಗದ ಇದೆ. ಅದನ್ನು ತೆಗೆದುಕೊಂಡು, ನಿಮ್ಮ ಊರಿಗೆ ಹಿಂತಿರುಗಿದ ನಂತರ ಆ ಕಾಗದವನ್ನು ಚಿತ್ರರಥನಿಗೆ ಕೊಡುವುದನ್ನು ಮರೆಯ ಬೇಡಿ. ನೀವು ನಮಗೆ ''ನಗು''ವನ್ನಿತ್ತುದುದಕ್ಕೆ ಧನ್ಯವಾದಗಳು. ಮೇಘನಾದನ್ ಗೆಲ್ಗೆ

## ದೃಶ್ಯ–5

ಸು : ನೋಡೇ ಪ್ರೇಮ ಆಟೋ ಹತ್ರ ಒಬ್ಬ ತರುಣ ಸ್ಮಾರ್ಟ್‌ಆಗಿ ನಿಂತಿದಾನೆ. ಬಹುಶಃ ಇವನೇ ಇರಬೇಕು ಚಿತ್ರರಥ.

ಚಿತ್ರರಥ : ಬನ್ನಿ ಅತಿಥಿಗಳೇ. ನಿಮ್ಮ ಮರುಪಯಣಕ್ಕೆ ವಾಹನ ಸಿದ್ಧವಾಗಿದೆ. ರಕ್ಷಣಾಪಟ್ಟಿ ಬಿಗಿಯುವುದನ್ನು ಮರೆಯಬೇಡಿ. ಇಗೋ ಹೊರಟೆ.

(ಆಟೋ ಸ್ಟಾರ್ಟ್ ಆದ ಸದ್ದು. ಕ್ರಮೇಣ ಜೆಟ್ ವಿಮಾನದ ಜೂಮ್ ಶಬ್ದ ತಟಕ್ಕನೆ ನಿಲ್ಲುವುದು)

ಸು : ಪುನಃ ಬಸವನಗುಡಿಗೇ ತಂದು ಬಿಟ್ನಲ್ಲೇ. ಸಧ್ಯ ಮಳೆ ನಿಂತಿದೆ. ಬಾ ಚಿತ್ರರಥ. ನಿಮ್ಮ ಕಾಲಕ್ಕೆ ಹಿಂತಿರುಗುವುದಕ್ಕೆ ಮುಂಚೆ ನಮ್ಮೂರಿನ ಕಾಫಿ ರುಚಿ ನೋಡಿ ಹೋಗು. ಇಲ್ಲೇ ಈ ಭವಿಷ್ಯ ದರ್ಶಿನಿಗೆ ಹೋಗೋಣ.

ಚಿ : ತುಂಬಾ ಚೆನ್ನಾಗಿದೆ ನಿಮ್ಮೂರಿನ ಕಾಫಿ. ಅಂದಹಾಗೆ ನಿಮಗೊಂದು ಶುಭ ಸಮಾಚಾರ. ಮೊದಲು ನಿಮ್ಮನ್ನು ಕರೆತಂದಳಲ್ಲಾ ಆ ಮೋಹಕ ತರುಣಿ ವರೂಥಿನೀಯೊಂದಿಗೆ ನನ್ನ ವಿವಾಹ ಅಂತ ಮೇಘನಾದ ಆಜ್ಞೆ ಹೊರಡಿಸಿದ್ದಾನೆ. ನೀವು ಹಿರಿಯರು. ಆಶೀರ್ವಾದ ಮಾಡಿ.

ಸು : ಅದಕ್ಕೇನಪ್ಪಾ ಸಂತೋಷದಿಂದ. ನಮ್ಮಿಬ್ಬರ ಆಶೀರ್ವಾದಾನೂ ನಿನಗಿದೆ. ಅಂದಹಾಗೆ ಇಗೋ ನಿನಗೊಂದು ಕಾಗದ. ಅಭಿಜಿತ್, ಇದನ್ನ ನಿನಗೆ ತಲುಪಿಸಿಬಿಡಿ ಅಂತ ಹೇಳಿ ಕೊಟ್ಟಿದ್ದು.

ಚಿ : ಕಾಗದ? ಅಭಿಜಿತ್ ಕೊಟ್ಟಿದ್ದೇ? ನಾವು ಕಾಗದವನ್ನ ಬಳಸುವುದೇ ಇಲ್ಲವಲ್ಲ. ಏನೋ ವಿಚಿತ್ರವಾಗಿದೆ. ಇರಲಿ. ಕಾಗದ ಓದಿದರೆ ಎಲ್ಲಾ ಅರ್ಥವಾಗಬಹುದು.

(ಕಾಗದವನ್ನು ತೆಗೆದು ನಿಧಾನವಾಗಿ ಓದುತ್ತಾನೆ)

ಚಿ : (ಕಾಗದವನ್ನು ಓದುತ್ತಾ) ಚಿತ್ರರಥ, ನೀನು ನಮ್ಮ ಅತಿಥಿಗಳೊಡನೆ 2014ರ ಕಾಲಘಟ್ಟದಲ್ಲೇ ಸದಾಕಾಲ ನೆಲೆಸುವ ನಿರ್ಧಾರ ಮಾಡಿರುವ ಸುದ್ದಿ ತಿಳಿಯಿತು. ಮೇಘನಾದನಿಗೆ ಸಹಾ ಈ ಸುದ್ದಿ ತಿಳಿಸಿರುವೆ. ನೀನು ಎಂದಿಗೂ ಹಿಂದಕ್ಕೆ ಬರುವುದಿಲ್ಲವೆಂದು ತಿಳಿದ ತಕ್ಷಣ ವರೂಥಿನೀ ಪುಷ್ಪ ದಂತನೊಡನೆ ವಿವಾಹವಾಗಲು ಮೇಘನಾದ ತನ್ನ ಒಪ್ಪಿಗೆ ನೀಡಿದ್ದಾನೆ. ಕಾಲಯಾನ ಯಂತ್ರದ ಆಟೋ ಪೈಲಟ್ ವಾಹನವನ್ನು ತಾನಾಗಿಯೇ ಹಿಂದಕ್ಕೆ ತರುವಂತೆ ಪ್ರೋಗ್ರಾಮ್ ನಿಯಂತ್ರಿಸಿರುವೆ. ಮೇಘನಾದನ್ ಗೆಲ್ಗೆ.

ನಿನ್ನ ಸ್ನೇಹಿತ

ಅಭಿಜಿತ್

ನಿರ್ಧಾರ! ನಾನೆಲ್ಲಿ ನಿರ್ಧಾರ ಮಾಡ್ದೆ. ಇದರಲ್ಲೇನೋ ಮೋಸ. ಅಯ್ಯೋ ನನ್ನ ಆಟೋನೇ ಕಾಣ್ತಾ ಇಲ್ಲ. ನಾನು ಹೇಗೆ ಭವಿಷ್ಯಕ್ಕೆ ಹೋಗಲಿ. ಆಟೋ... ಆಟೋ.... (ಎಂದು ಹಲುಬುವನು)

ಸು : ಹುಡುಗ ಗಾಬರಿ ಆಗಿದ್ದಾನೆ ಪ್ರೇಮ...... ಚಿತ್ರರಥ ಏನೂ ಯೋಚನೆ ಮಾಡಬೇಡ ಬ್ಯಾಂಕ್ ಮ್ಯಾನೇಜರ್‌ಗೆ ಹೇಳಿ ಒಂದು ಹೊಸಾ ಆಟೋ ಕೊಡಿಸ್ತೇನೆ. ದಿವನಾಗಿ ಜೀವನ ಮಾಡಬಹುದು. ನಮ್ಮ ಜೊತೆಗೇನೇ ಇದ್ಬಿಡು. ಆಟೋ ಹಿಂದೆ ಬೇಕಾದ್ರೆ ಚಿತ್ರರಥ ಅಂತ ಬರೆಯೋಣ. ಅನ್ವರ್ಥವಾಗಿರುತ್ತೆ.

ಪ್ರೇ : ಅಂತೂ ಒಂದು ವಿಚಿತ್ರ ಅನುಭವ ಆಗ್ಹೋಯ್ತೂರೀ. ಏನು ಹೇಳೋದಕ್ಕೂ ತೋಚ್ತಾ ಇಲ್ಲ.

ಸು : ನಂಗೆ ತೋಚ್ತಾ ಇದೆ. ಹೇಳ್ತೀನಿ. ಮೇಘನಾದನ್ ಗೆಲ್ಲೆ.

*(ಕೃಪೆ- ಆಕಾಶವಾಣಿ)*

---

## ತಪ್ಪುಗಳು

ನಮ್ಮ ತಪ್ಪುಗಳನ್ನು ನೋಡಿ ನಾವೇ ನಗುವುದರಿಂದ ನಮ್ಮ ಆಯುಷ್ಯ ಹೆಚ್ಚಾಗುತ್ತದೆ – ಷೇಕ್ಸ್‌ಪಿಯರ್

ನಿಮ್ಮ ಹೆಂಡತಿಯ ತಪ್ಪುಗಳನ್ನು ನೋಡಿ ನಗುವುದರಿಂದ ನಿಮ್ಮ ಆಯುಷ್ಯ ಕಡಿಮೆಯಾಗುತ್ತದೆ – ಷೇಕ್ಸ್‌ಪಿಯರ್ ಹೆಂಡತಿ


Ravi Graphics
OFFSET PRINTERS
BRINGING colours ALIVE
colours
53/8, 2nd Main Road, Industrial Town, Rajajinagar, Bangalore - 560 010
Tel: 4088 9999/77, Fax : 4088 9944 | website : www.ravigraphics.com

# ರಾಜ್ಯೋತ್ಸವ

● ಶ್ರೀನಿವಾಸ ವೈದ್ಯ

**ನಾ**ನು ಹೃದಯದ ಶಸ್ತ್ರಕ್ರಿಯೆ ಮಾಡಿಸಿಕೊಂಡು ಬಂದ ಮ್ಯಾಲ ಮನ್ಯಾಗ ನಮಗ ಇಬ್ಬರಿಗೂ ಗಂಡ ಹೆಂಡತಿಗೆ, ಒಂದs ಚಿಂತಿ ಕಾಡಲಕ್ಕೆ ಹತ್ತಿತ್ತು. ದುಡ್ಡು, ದುಗಾಣಿ, ಮನೀ, ಫರ್ನೀಚರೂ, ಭಾಂಡೀ ಕೂಂಡೀ ಯಲ್ಲಾನೂ ಇಬ್ಬರೂ ಮಕ್ಕಳು, - ಅಮೇರಿಕಾದ ಮಗ ದಿಲ್ಲಿ ಮಗಳು - ಹೆಂಗೆಂಗೋ ಹಂಚಿಗೋತಾರ, ಖರೆ. ಆದರ ಈ ಪುಸ್ತಕಗಳನ್ನೇನು ಮಾಡೋದು ಅನ್ನೋದs ಚಿಂತಿ ಆಗಿತ್ತು. ಏನಿಲ್ಲಂದರೂ ಸುಮಸುಮಾರು ಸಾವಿರ ಹದಿನೈದು ನೂರು ಪುಸ್ತಕ ಅವ. ಎಂಟೂ ಜ್ಞಾನಪೀಠಗಳ ಯಲ್ಲಾ ಕೃತಿಗಳು, ವರ್ಧಮಾನದ ಅಡಿಗರು, ಗೋರೂರ, ಇನಾಮದಾರ, ಮಿರ್ಜಿ, ಕೀರ್ತಿ, ಲಂಕೇಶ, ತೇಜಸ್ವಿ, ಗಿರಡ್ಡಿ ಜಯಂತ, ಎಚ್.ಎಸ್.ವಿ., ನಿಸಾರ್, ನರಹಳ್ಳಿ ಒಬ್ಬರ ಇಬ್ಬರ! ಇಡೀ ಜೀವಮಾನದ ಸಂಗ್ರಹ ಅದ. ಈ ಹದಿನೈದು ನೂರು ಪುಸ್ತಕಗಳನ್ನ, ಈ ನನ್ನ ಆತ್ಮದ ತುಣುಕುಗಳನ್ನು ಏನು ಮಾಡುವದು ಎನ್ನುವ ಚಿಂತೆ ಕಾಡಲಿಕ್ಕೆ ಹತ್ತಿತ್ತು.

ಆ ಅಮೇರಿಕಾದ್ದಕ್ಕೂ ಕನ್ನಡ ಬರೂದುಲ್ಲ, ಈ ದಿಲ್ಲೀದೂ ಅಷ್ಟs,....ಕ...ಮ....ಕ....ಮ. ಹೋದ ಸಲ ಬಂದಾಗ ಅಮೇರಿಕಾದ ಮಗ ಹೇಳಿದ್ದ. ''ಡ್ಯಾಡ್ ಡೋಂಟ ವರಿ. ವಿ ವಿಲ್ ಸಮ್‌ಹೌ ಡಿಸ್ಪೋಸ್ ಆಫ್ ಯುವರ ಬುಕ್ಸ್'' ಅಂತ ''ಸಮ್‌ಹೌ ಡಿಸ್ಪೋಸ್ ಆಫ್'', ''ಸಮ್‌ಹೌ.....'', ಆ ಮಾತು ಕೇಳಿದಾಗಿನಿಂದ ನನಗ್ಯಾಕೋ ಕಟುಕರ ಕೈಗೆ ಕಪಿಲೆಯನ್ನ ಕೊಟ್ಟ ಹಾಗೆ ಕಸಿವಿಸಿ ಆಗಿತ್ತು.

ಅದಕ್ಕs ಮೊನ್ನೆ ದೃಢ ನಿರ್ಧಾರ ಮಾಡಿ ''ಪುಸ್ತಕ ಪ್ರೀತಿ'' ಸಂಸ್ಥೆಯವರಿಗೆ ಫೋನು ಮಾಡಿ, ''ಯಲ್ಲಾ ಪುಸ್ತಕ ತೊಗೊಂಡು ಹೋಗ್ರೀ'' ಅಂತ ಹೇಳಿದ್ದೆ. ಅವರೇನೋ ಪುಸ್ತಕ ಪ್ರದರ್ಶನ ಮಾಡ್ತಾರಂತ, ದುರ್ಲಭ ಪುಸ್ತಕಗಳ ಲಾಯಬ್ರರಿ ಮಾಡತಾರಂತ, ರಿಸರ್ಚs ಸೆಕ್ಷನ್ ತಗೀತಾರಂತ. ಏನರ ಆಗಿ ಪುಸ್ತಕದ ಮೋಹ ಹೋಗಿ ಅವು ಸ್ವಲ್ಪಾದರೂ ಉಪಯೋಗಕ್ಕ ಬರಲಿ ಅಂತ ''ಪುಸ್ತಕ ಪ್ರೀತಿ''ಯವರಿಗೆ ಹೇಳಿದ್ದೆ. ಅವರು ಎರಡು ದಿವ್ಸ ಬಿಟ್ಟು ''ರಾಜ್ಯೋತ್ಸವ''ದ ದಿವ್ಸ ಬಂದು ತೊಗೊಂಡು ಹೋಗೋ ಮಾತು ಆಗಿತ್ತು.

ಪುಸ್ತಕಗಳ ವ್ಯವಸ್ಥಾ ಆಗಿಂದ ಮನಸ್ಸು ನಿರುಂಬಳ ನಿಶ್ಚಿಂತಿ ಆಗಿತ್ತು. ಆದಾಗಿ ಮರುದಿನ ಮುಂಝಾನೆ ನಸುಕಿಗೇ ಮನೆಯ ಕಾಲ್‌ಬೆಲ್ ಹೊಡಕೊಂಡಿತು. ನೋಡಿದರ ಹಾಲಿನ ಹುಡುಗ ರಾಜು.

''ಯಾಕೋ..... ಪಾತ್ರೆ, ಕೂಪನ್ನು ಎರಡೂ ಇಟ್ಟದಲ್ಲ? ....ಮತ್ತೇನು?'' ಎಂದೆ ಆಕಳಿಸುತ್ತ.

‘‘ಇಟ್ಟಿದೆ ಸಽರ್….. ಕ್ಷಮಿಸಿ ತೊಂದರೆ ಕೊಟ್ಟೆ….. ಒಂದು ಕ್ಯಾರೆಕ್ಟರ ಸರ್ಟಿಫಿಕೇಟು ಬೇಕಿತ್ತು…. ಸ್ಸ…’’ ಅಂದ ದೈನಾಸ ಬಟಗೋತ.

ಕಳೆದ ಹದಿನೈದು ವರುಷಗಳಿಂದ ರಾಜೂ ನಮ್ಮ ಮನೆಗೆ ಹಾಲು ಹಾಕ್ತಾನೆ, ಅಂದರೆ ಹಾಲಿನ ಪ್ಯಾಕೆಟ್ ಇಟ್ಟು ಹೋಗ್ತಾನೆ. ಬಹಳ ಒಳ್ಳೆಯ ಹುಡುಗ, ವಿನಯವಂತ. ಒಂದು ದಿವ್ಸ ತಪ್ಪಸಧಂಗ ದಿನಾ ಬೆಳ್ಳಿಗೆ ಚುಮುಚುಮು ನಸುಕಿನ್ಯಾಗ ಹಾಲು ಇಟ್ಟು ಹೋಗಿರತಾನ. ಮೂರು ವರುಷದ ಹಿಂದೆ ಕನ್ನಡ ಮಾಧ್ಯಮದೊಳಗ ಎಂತಹದೋ ಒಂದು ಎಂ.ಎ. ಮಾಡಿದ್ದ. ಮೂರು ವರುಷದಿಂದ ಅರ್ಜಿ ಹಾಕಲಿಕ್ಕೆ ಹತ್ತಿದ್ದ. ಎಲ್ಲೂ ಕೆಲಸ ಸಿಕ್ಕಿರಲಿಲ್ಲ.

‘‘ಯಾಕ ರಾಜೂ ಎರಡ ತಿಂಗಳ ಹಿಂದೆ ಎಲ್ಲೋ ಒಂದು ಕಡೆ ಏಡೆಡ್ ಸ್ಕೂಲಿನ್ಯಾಗ ಟೀಚರ ಕೆಲಸಕ್ಕ ಅರ್ಜಿ ಹಾಕಿದ್ದೆಲ್ಲ?’’ ಅಂದೆ.

‘‘ಆಗಲಿಲ್ಲ ಸಽರ್.’’

‘‘ಮತ್ತಽಽ… ನಿಮ್ಮ ಮಾವಾ ಅವರು ಅದಾರಽ ಏನಾರಽ ಮಾಡಿ ಕೊಡಿಸೇ ಕೊಡಿಸತಾರ, ಒಟ್ಟಽ ಯಲ್ಲಾ ಕೂಡಿಸಿ ಇಪ್ಪತ್ತು ಸಾವಿರ ಕೊಟ್ಟರ ಆತು ಅಂದಿದ್ದಿ?’’ ಅಂದೆ.

‘‘ಅದು ಅರವತ್ತಕ್ಕ ಹೋತು ಸಽರ…..ತಿಮ್ಮಾ ರೆಡ್ಡಿಯ ಮಗಳು ಜಯಾ ಹೊಡಕೊಂಡು ಬಿಟ್ಟಳು ಸಽ… ಅವರೂ ನಮ್ಮ ರಿಲೇಶನ್ ಸಽಽ’’ ಅಂದ.

‘‘ಅವರು ದುಡ್ಡಿದ್ದವರಾ?’’

‘‘ಹಾಗೇನಿಲ್ಲ ಸಽ…. ಆದರೆ ಮೊನ್ನೆ ಮೊನ್ನೆ ಅವರಿಗೆ ಇದ್ದ ಒಂದೇ ಎಕರೆ ಹೊಸೂರು ರಸ್ತೇದ್ದ ಜಮೀನು ಮೂರು ಕೋಟಿಗೆ ಹೋಯ್ತು ಸರ್. ತಿಮ್ಮಾರೆಡ್ಡಿ ಅರವತ್ತು ಸಾವಿರ ಕೊಟ್ಟು ಮಗಳಿಗೆ ಒಂದು ಕೆಲಸಾ ಕೊಡಿಸಿ, ಒಂದು ಸ್ಕೋಡಾ ಕಾರು ಕೊಂಡ ಸಽರ್. ಈಗ ಒಂದು ದೊಡ್ಡ ಬಂಗಲೇ ಕಟ್ಟಿಸತಾ ಇದ್ದಾನೆ ಸ್ಸ….’’ ಅಂದ.

ನಕ್ಷತ್ರಗಳು
ಒಟ್ಟಿಗೇ ಕಂಡರೂ
ಅವು ಬೇರೆ ಬೇರೆ
ನಿಜವಾದ ಸ್ನೇಹಿತರು
ದಿನಗಟ್ಟಲೆ
ಮಾತಾಡದಿದ್ದರೂ
ಅವರ ಹೃದಯಗಳು
ಮಾತ್ರ
ಬೆಸೆದುಕೊಂಡಿರುತ್ತವೆ

ನಾನು ‘‘ರಾಜೂ ನಾನು ನಿನಗೆ ಇಂಗ್ಲೀಷು ಕಲಿ, ಕಂಪ್ಯೂಟರ್ ಕಲಿ, ಈಗಿನ ದಿನದಾಗ ಬದುಕಲಿಕ್ಕೆ ಇಂಗ್ಲೀಷೂ, ಕಂಪ್ಯೂಟರೂ ಬೇಕೇ ಬೇಕು ಅಂತ ಹೇಳ್ತಾನೇ ಇದ್ದೀನಿ….. ನೀ ಧಡ್ಡರ್ಹಂಗ ಈ ಕನ್ನಡಕ್ಕ ಜೋತು ಬಿದ್ದೀ…. ಪಟಾ ಪಟಾ ಅಂತ ಅರಳು ಹುರಧಂಗ ಇಂಗ್ಲೀಷ ಮಾತಾಡದಿದ್ದರ ಇವತ್ತು ಯಾರು ಕೇಳ್ತಾರೆ’’ ಅಂದೆ.

ರಾಜೂ ಖಿನ್ನನಾಗಿ ‘‘ಏನೋ….. ಆಗೋಯ್ತು ಸಽರ್…. ಅಷ್ಟಲ್ಲದೆಽ ಇಂಗ್ಲೀಷ್ ಕ್ಲಾಸಿಗೆ ಹೋಗಿ ನಾನು ಇಂಗ್ಲೀಷು ಕಲಿತರಾದರೂ ಏನು ಸ್ಸ…. ನನ್ನ

ಜತೆಯವರೆಲ್ಲ ಹಾಲಿನ ಹುಡುಗರು ಇಲ್ಲಾ ಪೇಪರು ಹಾಕವರು ಅವರೆಲ್ಲ ತೆಲುಗು ತಮಿಳು ಹುಡುಗರು ಸ..... ಅವರಿಗೆ ಕನ್ನಡಾನೇ ಸರಿಯಾಗಿ ಮಾತನಾಡಲಿಕ್ಕೆ ಬರೋದಿಲ್ಲ್ಸ... ಇನ್ನೂ ಮನೆಯಲ್ಲಿ ಅಮ್ಮ ಅಪ್ಪ ಹೆಬ್ಬೆಟ್ಟು..... ನಾನು ಯಾರ ಜತೆ ಇಂಗ್ಲೀಷು ಮಾತಾಡಬೇಕು ಸಽರ್.''

ರಾಜೂನ ಜತೆ ಮಾತು ನಡೆದಾಗಲೇ ಮುನಿಯಪ್ಪ ನಿತ್ಯದಂತೆ ತನ್ನ ಇನ್ನೋವಾ ಕಾರು ತಗೊಂಡು ಬಂದ, ಮಾರ್ನಿಂಗ ವಾಕಿಂಗ್‌ಗೆ ಕರೆಯಲು.

ಮುವತ್ತೈದು ವರುಷದ ಹಿಂದೆ ನಾನೂ ಮುನಿಯಪ್ಪ ಇಬ್ಬರೂ ಯಾವದೋ ಒಂದು ಸರಕಾರೀ ಪರೀಕ್ಷೆ 'ಪ್ಯಾಸು' ಮಾಡಿ, ಡಿಪಾರ್ಟಮೆಂಟು ಸೇರಿದ್ದೆವು. ಮುನಿಯಪ್ಪ ಮುನಿಯಪ್ಪನಾದ್ದರಿಂದ, ಪಟ ಪಟಾ ಪಟ ಪಟಾ ಅಂತ ಮೇಲೇರಿ ಸೆಕ್ರೆಟರಿಯಾಗಿ ರಿಟಾಯರ್ ಆಗಿದ್ದ. ಅವಾಗಿವಾಗ, ''ಈ ಗೌಡರ ಮಂದಿ ಅಡ್ಡ ಬಂದರು ಬಾ.... ಇಲ್ಲದಿದ್ದರ ಚೀಫ್ ಸೆಕ್ರೆಟರಿನೇ ಆಗಿ ತೋರಸತಿದ್ದೆ'' ಅಂತಾನೆ. ನಾನು ಮಾತ್ರ ಆ ಕುಲಸ್ವಾಮಿ ಲಕ್ಷ್ಮೀವೆಂಕಟೇಶನ ಅನುಗ್ರಹದಿಂದ ಸೆಕ್ಷನ್ ಹೆಡ್ ಆಗಿ ರಿಟೈರ ಆಗಿ ಮುನಿಯಪ್ಪನ ಮ್ಯಾಲ ನಿತ್ಯ ಹೊಟ್ಟೆಕಿಚ್ಚು ಪಡುತ್ತಾ ಆಧ್ಯಾತ್ಮದ ಕಡೆ ಮನಸ್ಸು ಹಾಕಲಿಕ್ಕೆ ಒದ್ದ್ಯಾಡಲಿಕ್ಕೆ ಹತ್ತಿದ್ದೆ. ಆದರೂ ಬಹಳ ಹಳೇ ಸ್ನೇಹ, ಇನ್ನೂ ಆತ್ಮೀಯ ಏಕವಚನದಲ್ಲೇ ಮುಂದುವರೆದಿತ್ತು.

ಮುನಿಯಪ್ಪ ''ಒಂದು ಗಮ್ಮತ್ ನೋಡಿದ್ಯಾ? ಈ ಹಾಲಿನ ಹುಡಗರೂ, ಪೇಪರ ಹಾಕವರೂ, ಆಟೋ ಓಡಸವರ ಯಲ್ಲಾರ ಹೆಸರೂ ಇಲ್ಲಾ ರಾಜೂ ಅಂತಿರತೈತೆ ಇಲ್ಲಾ ಶಿವಾ ಅಂತ ಇರತೈತೆ. ಇದರಾಗ ನಿಮ್ಮ ಕೃಷ್ಣಮೂರ್ತಿ, ನರಸಿಂಹ, ಧ್ರುವ, ಪ್ರಹ್ಲಾದ ಯಾಕ ಇರೂದಿಲ್ಲ?'' ಅಂದ.

ನಾನು, ''ಅದೆಷ್ಟರಽ ಬ್ರಾಹ್ಮಣರ ರಕ್ತ ಕುಡೀ ಬೇಕಂತೀ ಮುನಿಯಪ್ಪ.... ಕೃಷ್ಣಮೂರ್ತಿ, ನರಸಿಂಹ, ಧ್ರುವ, ಪ್ರಹ್ಲಾದ ಸಹಿತ ಹಾಲು ಹಾಕೋದು ಪೇಪರು ಹಂಚೋದು ಯಲ್ಲಾ ಮಾಡತಾರ..... ಅಮೇರಿಕಾದಾಗ'' ಅಂದೆ.

ಮುನಿಯಪ್ಪ ಗಟ್ಟಿಯಾಗಿ ನಕ್ಕ. ಇಬ್ಬರೂ ಮುನಿಯಪ್ಪನ ಇನ್ನೋವಾ ಕಾರಿನಲ್ಲಿ ವಾಕಿಂಗ ಹೊರಟೆವು.

ವಾಕಿಂಗ ಮುಗಿಸಿ ಬಂದು ದಿನದಂತೆ ಒಂದು ಕಪ್ ಟೀ ಕುಡಿದು ಮುನಿಯಪ್ಪ ಹೋಗುತ್ತಿದ್ದಂತೆಯೇ, ಹೈದರಾಬಾದಿನಿಂದ ತಂಗಿ ಪ್ರಭಾ ಫೋನು ಮಾಡಿ, ''ಅಣ್ಣಾ, ನೀವಿಬ್ಬರೂ ನಾಲ್ಕು ದಿನ ಚೇಂಜ ಅಂತ ಹೈದರಾಬಾದಿಗೆ ಬರವರಿದ್ದೆರಲ್ಲ..... ನಿಮ್ಮ ಪ್ರೋಗ್ರ್ಯಾಮ್ ಸ್ವಲ್ಪ ಮುಂದ ಹಾಕರಿ. ಈಗ ಇಲ್ಲೆ ತೆಲಂಗಾಣ ಸೀಮಾಂಧ್ರ ಚಳವಳಿ ಜೋರು ಆಗೇದ..... ಯಲ್ಲಾ ಕಡೆ ಲಾಠಿ ಚಾರ್ಜು, ಗೋಳಿಬಾರು, ಕರ್ಫ್ಯೂ, ...ನೀರಿಲ್ಲ.....ಲೈಟಿಲ್ಲ. ನಾವಽ ಒದ್ದ್ಯಾಡಲಿಕ್ಕೆ ಹತ್ತೇವಿ ಪರಿಸ್ಥಿತಿ ಸುಧಾರಿಸಿದ ಮ್ಯಾಲ ಖರೋಖರ ಬರ್ರೀ'' ಅಂದಳು.

ಪುಣ್ಯಕ್ಕೆ ಹೈದರಾಬಾದಿನ ತಿಕೀಟು ತೆಗೆದಿರಲಿಲ್ಲ ಎಂದುಕೊಂಡು ಸ್ನಾನಕ್ಕೆ ಎದ್ದೆ. ಅಷ್ಟರಾಗ ಮನೆ ಮುಂದೆ ಆಟೋ ನಿಂತು ಅದರಿಂದ ಚಿಕ್ಕಮಠ ಶಿವಯೋಗಿ ''ಕಿತ್ತೂರ ಲೇಟ ಇತ್ತು'' ಅನಕೋತ ಇಳಿದು ಕುಂಟುತ್ತ ಒಳಗೆ ಬಂದ.

''ಯಾಕ ಕುಂಟಲಿಕ್ಕೆ ಹತ್ತೀಯಲ್ಲ?'' ಅಂದೆ.

''ಅದಽ ಮೊನ್ನೆ ಬೆಳಗಾವಿಯೊಳಗ 'ಕನ್ನಡ ಮರಾಠಿ' ಆತಲ್ಲ ಆವಾಗ ಕಾಲಿಗೆ ಪೆಟ್ಟು ಬಿದ್ದೈತಿ ಸಮಾ ಆಗಾಕ ಇನ್ನೊಂದು ತಿಂಗಳ ಬೇಕಂತಾರ ಡಾಕ್ಟರು'' ಎಂದವನೇ ಒಳಗೆ ''ವೈನೀ ಒಂದು ಕಪ್ ಚಹಾ ಕೊಟ್ಟ ಬಿಡ್ರಿ, ನನಗ ಜಳಕಾ ಮುಗಿಸಿ ದೌಡ ಹೋಗಾಕ ಬೇಕು.... ಬ್ರೆಕ್‌ಫಾಸ್ಟ ಅಲ್ಲೇ ಇರತೈತಿ'' ಎಂದು ಸಂದೇಶ ಮುಟ್ಟಿಸಿ ನನ್ನ ಕಡೆ ತಿರುಗಿ, ''ನೀ ಬರತೀಯೋ ಇಲ್ಲೋ?'' ಅಂದ.

ನಾನು ''ಯಲ್ಲೇ...... ನನಗೇನೂ ಗೊತ್ತಿಲ್ಲಲ್ಲ'' ಅಂದೆ.

''ಹೆಂಗ ಗೊತ್ತ ಇದ್ದೀತಪಾ, ಬೆಂಗಳೂರಾಗ ಬೆಚ್ಚಗ ಅದೀ ನೋಡು.... ಒಂದೆರಡು ವರಸ ಬೆಂಗಳೂರಾಗ ಇರೋದರಾಗಽ ನಮ್ಮ ಮುಂದೆಲ್ಲ ಹಳೇ ಮೈಸೂರಿನವರಽ ಆಗಿ ಬಿಡತಾರ... ನೀ ಧಾರವಾಡದಾಗ ಹುಟ್ಟಿ ಧಾರವಾಡದಾಗ ಬೆಳದಾಂವ ಅಂಬೋದು ಮರೀ ಬ್ಯಾಡ. ಈಗ ಉತ್ತರ ಕರ್ನಾಟಕದ ಅಭಿವೃದ್ಧಿ, ನಂಜುಂಡಪ್ಪ ವರದಿ, ಕಳಸಾಬಂಡೂರಿ, ಮಂತ್ರಿ ಮಂಡಲದಾಗ ನಮ್ಮ ಮಂದಿಗೆ ಸೂಕ್ತ ಪ್ರಾತಿನಿಧಿತ್ವ.... ಹೀಂಗ ನಾಕಾರು ಆಯಿಟೆಮ್ ಇಟಗೊಂಡು ವಿಧಾನಸೌಧದ ಮುಂದ ಧರಣಾ ಕುಂದರೂದು ಐತಿ ಹನ್ನೊಂದು ಗಂಟೇಕ್ಕ. ನೀ ಲಗೂ ತಯಾರಾಗಿ ಬಾ'' ಅಂದ.

''ಶಿವಯೋಗಿ ಯಲ್ಲಾಬಿಟ್ಟು ನಾ ಯಾಕೋ'' ಎಂದೆ.

''ಯಾಕಂದ್ರ?.... ಈಗೀಗ ನೀ ಕತೀ ಬರಿಯಾಕ ಹತ್ತೀಯಂತಲ್ಲ? ಈಗ ಕತೀ ಬರಿಯವರಿಗೆ ಕಿಮ್ಮತ ಭಾಳ ಬಂದೈತಿ. ದಿನಾ ಪೇಪರಿನ್ಯಾಗ ಫೋಟೋ ಹೆಸರು ಬಾಷಣ, ಯಲ್ಲಾ ಚೈನೀ ನಡದೈತಿ ನಿಮ್ಮದ. ನಿನ್ನಹಂಗ ಕತೀ ಕವನ ಬರಿಯವರ ಒಂದಿಬ್ಬರು ನಮ್ಮ ಚಳವಳಿಯೊಳಗ ಇರಬೇಕು, ಅದು ಫ್ಯಾಶನ್. ಇನ್ನೂ ಒಂದೇನಪಾ. ಈ ಬೆಂಗಳೂರು ಮೈಸೂರು ಮಂದಿ ನಮಗ ಉಪಯೋಗ ಇಲ್ಲೇನಪಾ..... ನಮ್ಮದ ನಾವಽ ನೋಡಿಕೋಬೇಕ..... ಇವರ ಕಾವೇರಿ ಧಾಂಧಲೇದಾಗ ಕಲ್ಲು ಹೊಡಿಯಾಕ ನಾವು ಬೇಕು..... ಅದಽ ನಮ್ಮ 'ಕಳಸಾಬಂಡೂರಿ' ಬಗ್ಗೆ ಗೊತ್ತರಽ ಅಯಿತೇನ ಕೇಳ ಈ ಮಂದಿಗೆ?'' ಅನಕೋತ ಟವಲ ಹೆಗಲಿಗೆ ಹಾಕ್ಕೊಂಡು ಜಳಕಕ್ಕ ನಡದ.

ಹೊರಗೆ ಬೀದಿಯ ಮೇಲೆ ಸ್ಕೂಲು ಬಸ್ಸು ನಿಂತು ಅದರಿಂದ ಆಚೆ ಕಡೆಯ ಮುಸ್ಲಿಮ್ ಮನೆಯವರ ಮಗು ಇಳಿದು ಸಂತಸದಿಂದ, ''ಮಮ್ಮಿ ಟುಮಾರೋ ಹಾಲಿಡೇ'' ಎನ್ನುತ್ತ ಓಡೋಡಿ ಬಂತು.

''ಕ್ಯೂಂ...... ಕೈಕೂ ಹಾಲಿಡೇ?'' ತಾಯಿ ಮಗುವಿಗೆ ಲಲ್ಲೆವಾಡಿದಳು.

''ಕ್ಯಾಕೀ..... ಕಲ್ ನವ್ಹಂಬರ ಫಸ್ಟ ಹೈನಾ..... ಕರ್ನಾಟಕಾ ಗವರ್ನಮೆಂಟಕಾ ಹ್ಯಾಪಿ ಬರ್ತ್‌ಡೇ ಕತೇ'' ಎನ್ನುತ್ತ ಮಗು ತಾಯಿಯ ತೋಳೇರಿತು.

ಚಿಕ್ಕಮಠ ಶಿವಯೋಗಿ ಜಳಕಾ ಹೊಡದು ಇನ್ನೊಂದು ಕಪ್ ಚಹಾ ಕುಡದು ಕುಂಟಿಗೋತ ಹೋದ.

ನಾನು ಸ್ನಾನಕ್ಕೆ ಇಳೀಬೇಕನ್ನುವಷ್ಟರಲ್ಲಿ ಫೋನು ಬಾರಿಸಿತು. ನಮ್ಮ ತಮ್ಮನ ಮಗಳು ಪ್ರತಿಭಾ ಪಿ.ಯು.ಸಿ. ಹುಡುಗಿ ''ಅಂಕಲ್, ಟುಮಾರೊ ಐ ಆಮ್ ಪಾರ್ಟಿಸಿಪೇಟಿಂಗ್ ಇನ್ ಕಾಲೇಜ್ ಎಲೋಕ್ಯೂಷನ್ ಕಾಂಪಿಟಿಷನ್ ಎಬೌಟ್ ರಾಜ್ಯೋತ್ಸವ ಅಂಕಲ್, ಅದಕ್ಕಽ ಈ 'ಕಾವೇರಿಯಿಂದ ಗೋದಾವರಿವರ' ದೊಳಗ 'ಮಾ' ಯಲ್ಲೆ ಬರ್ತ್ತಽದ. ಮತ್ತ ಈ ಕವಿತಾ ಬರದವರು ಬೇಂದ್ರೇನೋ ಕುವೆಂಪುನೋ ಯಾರೋ ಹೇಳ್ತಿರಾ ಅಂಕಲ್ ಪ್ಲೀಸ್'' ಅಂದಳು.

''ನಾ ಸ್ನಾನಾ ಮಾಡಲಿಕ್ಕೆ ಹತ್ತೇನಿ ಆಮ್ಯಾಲ ಹೇಳತೇನಿ'' ಅನಕೋತ ಬಚ್ಚಲಿಗೆ ಇಳಿದೆ.

ನಾ ಸ್ನಾನಕ್ಕ ಇಳಿದಾಗ ಮಡಿಕೇರಿಯಿಂದ ಪೂವಯ್ಯನ ಫೋನು ಬಂದಿತ್ತಂತ. 'ನಾಳೆ ಮುಂಝಾನೆ ಸೆಪರೇಟ ಕೂರ್ಗಲ್ಯಾಂಡದ ಜಾಥಾದ ಜತೆ ಬರವರಿದ್ದರಂತಲ್ಲಾ, ನಾಳೆ ಏನೋ ಇಡೀ ಕರ್ನಾಟಕದಾಗ 'ಡ್ರೈಡೇ' ಅಂತ ಅನೌನ್ಸ ಮಾಡ್ಯಾರಂತಽ ಅದಕ್ಕ ಬಂದು ಏನ ಮಾಡಲಿ ಬರೂದುಲ್ಲ ಅಂತ ಹೇಳ್ರಿ ಅಂತ ಹೇಳಿದರು' ಹೆಂಡತಿ ಹೇಳಿದಳು.

ಸ್ನಾನಾ ಮುಗಿಸಿ ಊಟ ಆಗೋತನಕ ಒಂದೆರಡು ಕಡೆ ರಾಜ್ಯೋತ್ಸವದ ಭಾಷಣಕ್ಕೆ ಆಮಂತ್ರಣಗಳು ಬಂದವು.

ರಾಮನಗರದಿಂದ ರಾಜೇಗೌಡ ಫೋನ ಮಾಡಿ ''ಈ ಸಲ ನಮ್ಮ ರಾಜ್ಯೋತ್ಸವದ ಸಮಾರಂಭ ಡಿಸೆಂಬರ 20ಕ್ಕೆ ಇಟಗೊಂಡಿದೇವೆ, ನೀ ಅಧ್ಯಕ್ಷ ಆಗಿ ಬರಬೇಕು ಈಗಽಽ ಡೈರಿಯೊಳಗ ನೋಟ ಮಾಡಿಕೋ ಮೊದಲೇ ಹೇಳಿದೇನೆ'' ಅಂದ.

''ಇದಽ ವರುಷ ಹೌದಲ್ಲೋ?'' ಅಂದೆ.

''ತಮಾಷಿ ಮಾಡಬ್ಯಾಡಾ, ಬಿ.ಡಿ.ಎ. ಚೇರಮನ್‌ಗ ಮುಖ್ಯ ಅತಿಥಿ ಅಂತ ಕರದೈತಿ ಅವರಿಗೆ ಅಲ್ಲಿವರೆಗೆ ಟೈಮಿಲ್ಲಂತ, ಅದಕ್ಕ'' ಅಂದ.

''ಬಿ.ಡಿ.ಎ. ಚೇರಮನ್ನರ ಯಾಕ? ಬ್ಯಾರೆ ಯಾರೂ ಸಿಗಲಿಲ್ಲೇನು?'' ನಾನು.

''ಅದ ಹಂಗಲ್ಲ, ಬೆಂಗಳೂರಾಗ ನನ್ನದೊಂದು ದೊಡ್ಡ ಸೈಟ ಅಯ್ತೆ, ಅದು ಒಂದೀಟ ಪ್ರಾಬ್ಲಮ್‌ನ್ಯಾಗ ಸಿಕ್ಕೊಂಡೈತೆ, ಅದಕಽ ಒಂದೀಟ ಅಡ್ಜಸ್ಟಮೆಂಟ ಬೇಕಾಗತೈತೆ'' ಅಂದ.

ಊಟಾ ಮುಗಿಸಿ ಒಂದೆರಡು ತಾಸು ನಿದ್ದಿ ಮಾಡಿ ಎದ್ದಿಂದ, ಸಂಜೆಯ ಇಳಿ ಉತ್ಸಾಹದ ಸಮಯ. ಮನಸು ಯಾಕೋ ಶಕ್ತಿ ಕಳಕೊಂಡು, ಮತ್ತೆ ನಾಳಿನ ದಿನ 'ಹಾಗೆ ಮಾಡಬೇಕು, ಹೀಗೆ ಮಾಡಬೇಕು' ಅನಕೋತ ಆಶೆಯ ಬೆನ್ನು ಹತ್ತುವ ಸಮಯ. ನಾಡು ರಾಜ್ಯೋತ್ಸವದ ತಯಾರಿ ನಡೆಸಿತ್ತು.

ನನ್ನ ಹೆಂಡತಿ ರಾತ್ರಿ ಊಟಕ್ಕ 'ಬೇಳೆ ಸಾರು ಮಾಡಬೇಕೋ ಏನು ಝುಣಕ ನಡೀತದೋ' ಅಂತ ಕೇಳಿದಳು. ಯಾಕೋ ಮ್ಲಾನಳಾಗಿದ್ದಳು.

''ಯಾಕೇಽಽ? ಏನಾತು?'' ಅಂದೆ.

''ಅಲ್ಲರೀ..... ಯಲ್ಲಾ ಪುಸ್ತಕಾನೂ ಕೊಡತೇವಿ ಅಂತೀರೆಲ್ಲ..... ಎಷ್ಟೋ ವರುಷಗಳಿಂದ ಒಂದೊಂದ ಒಂದೊಂದಽ ಕೂಡಿಸಿಗೋತ ಬಂದಿದ್ದೆವಲ್ಲ'' ಅಂದಳು.

''ಈಗ ಕಡೀ ಘಳಿಗ್ಗೆ ತಲಿ ತಿನಬ್ಯಾಡಾ..... ಕೊಡೋದು ಅಂತ ನಿರ್ಧಾರ ಮಾಡೇವಿ, ಕೊಟ್ಟು ಬಿಡೋಣ... ಯಾರೂ ಮುಂದ ಓದವರಿಲ್ಲಾ.....'' ಅಂದೆ.

''ಆದರೂ......''

ಮುಂದೆ ನಾಲ್ಕಾರು ಸಲ ಈ ''ಆದರೂ''ದ ಒತ್ತಡ ಏರುತ್ತಲೇ ಹೋಯಿತು. ರಾತ್ರಿ ಊಟ ಆದಿಂದ, ಅವಳು ಕೊನೆಯ ಸಲ ಎಂಬಂತೆ ಎಲ್ಲ ಪುಸ್ತಕಗಳ ಮೇಲೆ ಮಮತೆಯಿಂದ ಕೈಯಾಡಿಸುತ್ತ ನಿಂತವಳು, ''ಇದೊಂದರ ಇಟ್ಟು ಕೊಳ್ಳೋಣರೀ ಸಣ್ಣದು.....'' ಎನ್ನುತ್ತ ಮಾಸ್ತಿಯವರ ''ಸುಬ್ಬಣ್ಣ'' ಎತ್ತಿ ತೋರಿಸಿದಳು.

''ಏನು ಅದರ ಮ್ಯಾಲ ಅಷ್ಟು ಸ್ಪೆಷಲ್ ಮೋಹ'' ಎಂದೆ.

''ಆ ಭಾಗ...... ಸುಬ್ಬಣ್ಣ ಹೆಂಡತಿ ಮಕ್ಕಳನ್ನೆಲ್ಲ ಕಳಕೊಂಡು, ಇದರದೂ ಮೋಹ ಬ್ಯಾಡ ಅಂತ ಪಿಟೀಲು ನೀರಾಗ ಬಿಡತಾರಲ್ಲ..... ಆವಾಗ ಆ ನಟುವರ ಹುಡುಗ ಅದನ್ನ ನೀರಿನಿಂದ ಎತ್ತಿ ಕೊಡತಾನಲ್ಲ..... ಆ ಭಾಗ ಯಷ್ಟ ಛಂದ ಅದರೀ....'' ಅಂದಳು.

ನಾನು ಓದಿದೆ.

*ಸುಬ್ಬಣ್ಣನವರಿಗೆ ತಮ್ಮ ವಿಷಯದಲ್ಲಿ ಬಹಳ ಅಸಮಾಧಾನ ಉಂಟಾಗಿತ್ತು. ಎಲ್ಲವನ್ನೂ ಬಿಟ್ಟರೂ ತಾನು ಸಂಗೀತದ ಜಂಭವನ್ನು ಇನ್ನೂ ಬಿಡಲಿಲ್ಲ. ಯಾವನೋ ಒಬ್ಬ ಹುಡುಗ ಬಂದು ಒಂದು ಹಾಸ್ಯದ ಮಾತನ್ನಾಡಿದ್ದಕ್ಕೆ ತಾನು ಅದನ್ನು ಸಹಿಸಲಾರದೆ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವುದಕ್ಕೆ ಆರಂಭಮಾಡಿದೆನಲ್ಲಾ, ಇದೇನು ಅವಿವೇಕ, ಎಂದು ಅವರಿಗೆ ಅಸಮಾಧಾನ.............. ಈ ಪಿಟೀಲಿನ ಮೇಲೆ ಏನು ತನಗೆ ಇಷ್ಟು ಪ್ರೀತಿ? ಹೋದ ಎಲ್ಲದರ ಜೊತೆಗೆ ಇದೂ ಹೋಗಲಿ. ಇದು ಇದ್ದರಲ್ಲವೇ ಪಿಟೀಲು ನುಡಿಸೋಣ ಎಂಬ ಆಸೆ; ನುಡಿಸುವ ಜಂಭ? ಇದೂ ಹೋಗಲಿ. ಆಮೇಲೆ ಆ ವ್ಯಸನವೂ ಇಲ್ಲ. ಹೀಗೆಂದು ಅವರು ಗೊತ್ತು ಮಾಡಿ ಕೊಂಡರು. ದೂರದಲ್ಲಿ ಒಂದು ಸ್ನಾನಘಟ್ಟ. ಅಲ್ಲಿ ಜನ ಬಹಳ ಇರಲಿಲ್ಲ. ಅವರು ಅಲ್ಲಿಗೆ ಹೋಗಿ ಅಲ್ಲಿ ಇದ್ದ ಒಬ್ಬಿಬ್ಬರು ಹೊರಟುಹೋಗುವ ತನಕ ಕಾದಿದ್ದು ಯಾರೂ ಇಲ್ಲದ ವೇಳೆಯಲ್ಲಿ ನೋಡಿ ಪಿಟೀಲನ್ನು ಒಡೆಯೋಣ ಎಂದು ಕಲ್ಲಿನ ಮೇಲೆ ಎತ್ತಿದರು; ಮನಸ್ಸು ಬಾರದೆ ತಡೆದು ಕುಳಿತರು. ಎರಡು ನಿಮಿಷ ಕಳೆದ ಮೇಲೆ, ಈ ಚಪಲವನ್ನು ಬಿಡಬೇಕು ಎಂದು ನಿರ್ಧರಿಸಿ ನೀರೊಳಕ್ಕೆ ಇಳಿದು, ದೇವರೇ ಎಲ್ಲವನ್ನೂ ಬಿಟ್ಟೆ, ಇದನ್ನೂ ಬಿಡುತ್ತೇನೆ, ನನಗೆ ಶಾಂತಿಯನ್ನು ಕೊಡು ಎಂದು ಪಿಟೀಲನ್ನು ದೂರವಾಗಿ ನೀರೊಳಕ್ಕೆ ತೇಲುಬಿಟ್ಟರು; ಇಲ್ಲಿಗೆ ಋಣ ಮುಗಿಯಿತು, ಎಂದು ಸೋಪಾನದ ಮೇಲೆ ಬಂದು ಕುಳಿತು ತಡೆಯಲಾರದೆ ಅತ್ತು ಬಿಟ್ಟರು..................................*

*ಅಂದಿನ ರಾತ್ರಿ ಅವರು ಮಲಗಿ ಮತ್ತೆ ಮತ್ತೆ ಮನಸ್ಸಿನಲ್ಲಿ ಪಿಟೀಲನ್ನೆ ಕಾಣುತ್ತಿದ್ದರು. ಆದರೆ ಹಿಂದಿನ ರಾತ್ರಿಗಿಂತ ಚೆನ್ನಾಗಿ ನಿದ್ದೆ ಹತ್ತಿತು. ರಾತ್ರಿ ಎಚ್ಚತ್ತಾಗ, ''ನಾನು ಶುದ್ಧ ಬೆಪ್ಪ, ಪಿಟೀಲು ಹತ್ತಿರ ಇದ್ದರೆ ಯಾವಾಗಲಾದರೂ ಒಂದು ದೇವರನಾಮವನ್ನು*

*ನುಡಿಸಬಹುದಾಗಿತ್ತು. ಒಂದು ರಾಗ ಆಲಾಪನೆ ಮಾಡಬಹುದಾಗಿತ್ತು. ಈಗ ದೇವರಿಗೆ ಹೀಗೆ ಸೇವೆ ಮಾಡುವುದಕ್ಕೆ ಇಲ್ಲದೇ ಹೋಯಿತು'' ಎಂದುಕೊಂಡರು. ಬಂಗಾಳಕ್ಕೆ ಹೋದ ಹೊಸದರಲ್ಲಿ ತೆಗೆದುಕೊಂಡ ಪಿಟೀಲು ಅದು; ಅನೇಕ ಕಚೇರಿಗಳಲ್ಲಿ ಬಾರಿಸಿದ್ದು; ತನ್ನ ಜೀವಮಾನವೆಲ್ಲಾ ಜೊತೆಯಲ್ಲಿ ಇದ್ದದ್ದು. ಅದರ ವಿಷಯದಲ್ಲಿ ಅವರಿಗೆ ಆ ಮಮತೆ ಇದ್ದದ್ದು ಏನೂ ಆಶ್ಚರ್ಯವಲ್ಲ. ಮಾರನೆಯ ದಿನ ಬೆಳಗ್ಗೆ ಅವರು ಏಳುವುದು ಸ್ವಲ್ಪ ಸಾವಕಾಶವಾಯಿತು. ಎದ್ದು ನೋಡಿದರೆ ಪಿಟೀಲು ಪಕ್ಕದಲ್ಲೇ ಇದೆ. ಇದೇನು ನಿದ್ದೆಗಣ್ಣು ಎಂದು ಕಣ್ಣೊರಸಿಕೊಂಡು ಮತ್ತೆ ನೋಡಿದರು. ಅದು ಪಿಟೀಲು; ತಮ್ಮ ಪಿಟೀಲು. ಇದೇನು ಮಾಯೆ ಎಂದು ಸುಬ್ಬಣ್ಣನವರು ಆಶ್ಚರ್ಯದಿಂದಲೂ, ಆದರೆ ಪಿಟೀಲು ಬಂದಿತಲ್ಲಾ ಎಂಬ ಸಂತೋಷದಿಂದಲೂ, ಅದನ್ನು ಆದರದಿಂದ ಎತ್ತಿಕೊಂಡರು. ಆ ವೇಳೆಗೆ ಹಿಂದಿನ ದಿನ ಬಂದಿದ್ದ ಹುಡುಗ ಕಂಬದ ಮರೆಯಿಂದ ಹತ್ತಿರಕ್ಕೆ ಬಂದನು. ಅಡ್ಡ ಬಿದ್ದು ನಮಸ್ಕಾರಮಾಡಿ, ನೀವು ನನಗೆ ಗುರುಗಳು. ನಾನು ನಿನ್ನೆ ತಮ್ಮನ್ನು ಹಾಗೆ ಮಾತನಾಡಿಸಿದ್ದು ತಪ್ಪು. ಇಂಥ ವಿದ್ಯೆ ಇದೆ ಎಂತ ತಿಳಿಯಲಿಲ್ಲ, ತಪ್ಪು ಮಾಡಿಬಿಟ್ಟೆ ಮಾಫ್ ಮಾಡಬೇಕು ಎಂದನು..............................*

ಓದಿ ಮುಗಿಸಿದ ಮ್ಯಾಲ ನನಗ ಯಾಕೋ ಇದ್ದಕ್ಕಿದ್ದಂಗ ಕಸಿವಿಸಿ ಆಗಲಿಕ್ಕೆ ಹತ್ತಿತು. ಉಸಿರುಕಟ್ಟಿಧಂಗ ಆಗಿ ಎದೀ ಹೊಡಕೊಳ್ಳಲಿಕ್ಕೆ ಹತ್ತಿತು.

ಕೊನೆಗೆ ಒಮ್ಮೆಲೇ ಫೋನು ಎತ್ತಿ; ''ಹಲೋ....ಹಲೋ... ''ಪುಸ್ತಕ ಪ್ರೀತಿ'' ಸಂಸ್ಥೆಯವರಃ.... ನೋಡ್ರಿ ನಾ ನಿನ್ನೆ ಫೋನು ಮಾಡಿ ಹದಿನೈದು ನೂರು ಪುಸ್ತಕ ಅವ ಯಲ್ಲಾ ಕೊಟ್ಟಬಿಡತೇನಿ ತೊಗೊಂಡು ಹೋಗ್ರಿ ಅಂತ ಹೇಳಿದ್ದೆನಲ್ಲ...... ಈಗ ನನ್ನ ನಿರ್ಧಾರ ಬದಲು ಮಾಡೇನಿ, ನಾ ಪುಸ್ತಕ ಕೊಡುವದಿಲ್ಲ.... ಇಲ್ಲ..... ಇಲ್ಲ..... ಒಂದೂ ಕೊಡೋದಿಲ್ಲ ದಯವಿಟ್ಟು ಬರಬ್ಯಾಡ್ರಿ.....'' ಎಂದು ಫೋನು ಇಟ್ಟೆ.

ಮುಖದ ಬೆವರು ಒರೆಸಿಕೊಂಡೆ. ಆರಾಮ ಅನಿಸಿತು.

ಜೀವನವನ್ನು ಸಮುದ್ರದಂತೆ ಭಾವಿಸು
ನಿನ್ನ ಹೃದಯವೇ ಸಮುದ್ರದ ದಂಡೆ
ನಿನ್ನ ಸ್ನೇಹಿತರೇ ಅಲೆಗಳು
ಸಮುದ್ರದಲ್ಲಿ ಎಷ್ಟು ಅಲೆಗಳಿವೆ ಅನ್ನೋದು ಮುಖ್ಯವಲ್ಲ
ಎಷ್ಟು ಅಲೆಗಳು ದಡವನ್ನ ಅಪ್ಪಿದವು ಅನ್ನೋದು


GIRIJA
SILKS & SAREES
Exclusive
SILK
Sarees
Phone : 23340466
No. 8 & 9, Maruthi Complex, 8th Cross,
Malleshwaram, Bangalore - 560 003.

# ಮಂಗಳ ಗ್ರಹಕ್ಕೆ ಜಿಗಿಯುವ ಮಂಗ - 2

**● ಇ.ಆರ್. ರಾಮಚಂದ್ರನ್**

ಇಸ್ರೊ ರಾಧಾಕೃಷನ್ ಅವರಿಗೆ ಖುಶಿಯೋ ಖುಶಿ. ಮಂಗಳ್ಯಾನ್-1 ಮಂಗಳದತ್ತ ಹೊರಟ ದಿವಸವೇ ಅವರು ದೆಹಲಿಗೆ ಧಾವಿಸಿ ಪ್ರಧಾನಿ ಮನಮೋಹನರತ್ತ ಮೋಹಕ ನಗೆ ಬೀರಿ ಮಂಗಳ್ಯಾನ್-2ಕ್ಕೆ ಬಜೆಟ್ ಮಂಜೂರು ಮಾಡಿಸಿಕೊಂಡು ಬೆಂಗಳೂರಿನಲ್ಲಿ ಇಳಿದರು.

ಮಂಗಳ್ಯಾನ್-2, ಅಥವಾ ಪುಟ್ಟದಾಗಿ ಬರೆದರೆ ಮಂಗ-2, ಅದರಲ್ಲಿ ಮನುಷ್ಯರನ್ನು ಕಳಿಸುವ ಪ್ಲಾನ್. ಮಂಗಳ್ಯಾನ್-1ಕ್ಕೆ ಆಗಿದ್ದು ಖರ್ಚು 750 ಕೋಟಿ. ಮಂಗ-2ಕ್ಕೆ ಟಿಎ ಡಿಎ, ಬ್ಯಾಟ, ಟೇಬಲ್ ಮೇಲೆ ಕೆಳಗೆ ಎಲ್ಲಾ ಸೇರಿಸಿ ಸಾವಿರ ಕೋಟಿಗೆ ಅಸ್ತು ಹಾಕಿಸಿಕೊಂಡೇ ಬಂದಿದ್ದರು.

**ಮಂಗ-2 ಹೋಗುವ ರೀತಿ ನೋಡಿ ರಾಧಾಕೃಷ್ಣನ್‌ರಿಗೆ ಕೂತಿದ್ದಲ್ಲೇ ಮೂರ್ಛೆ ಬಂತೇಕೆ?**

ಬೆಳ್ಳಂಬೆಳಿಗ್ಗೆ ಗುಪ್ತ ಕಮಿಟಿ ಗೌರಿಬಿದನೂರಿನ ಆಫೀಸಿನಲ್ಲಿ ಕೂಡಿತು. ಬಾಳೆಕಾಯಿ ಚಿಪ್ಸ್ ಮತ್ತು ಕುಸುಬಲಕ್ಕಿ ಗಂಜಿ ಜೊತೆಗೆ ಮೀಟಿಂಗ್ ಶುರು.

ಐದು ಜನವಿರುವ ಟೀಮಿನಲ್ಲಿ, ಇಬ್ಬರು ಆಸ್ಟ್ರನಾಟ್ಸ್ ಮತ್ತು ಮೂವರು ಸಾಮಾನ್ಯರು. ಈ ಮೂವರಲ್ಲಿ ಯಾರನ್ನು ಆಯ್ಕೆ ಮಾಡಬೇಕೆಂದೇ ಅಂದಿನ ಮೀಟಿಂಗ್.

ದೇಶದಲ್ಲಿನ ನಾಯಕರನ್ನು ಸೇರಿಸಿಕೊಂಡರೆ ಹೇಗೆ ಎಂದು ವಿಚಾರ ಬಂತು. ಇದ್ರೆ ಒಳ್ಳೆದೇ. ಆಮೇಲೆ ಆಡಿಟ್ ಪ್ರಾಬ್ಲಂ ಅಥವಾ ಮಾಜಿ ಚೇರ್ಮನ್ ಮಾಧವನ್ ನಾಯರ್ ಏನಾದ್ರೂ ಕೊಕ್ಕೆ ಹಾಕೇ ಹಾಕ್ತಾರೆ, ಲೀಡರ್‌ನ ಸೆಲೆಕ್ಟ್ ಮಾಡ್ಲೋಣ, ಅಂದ್ರು ರಾಧಾಕೃಷ್ಣನ್.

ಯಾರೋ ಸೋನಿಯಾ ಅಂದ್ರು. ಆದ್ರೆ ಮಾರ್ಸ್‌ನಲ್ಲಿ ಇಳೀತಾ ಅವರ ನ್ಯಾಷನಾಲಿಟಿ ವಿಚಾರ ಮತ್ತೆ ವಕ್ರಿಸಿ, ಅಲ್ಲಿ ಟಚ್ ಡೌನ್ ಪ್ರಾಬ್ಲಂ ಆಗ್ಬಹುದು. ಬೇಡಾಂತ ಡಿಸೈಡ್ ಆಯ್ತು. ರಾಹುಲ್ ಅಂದ್ರು. ರಾಜಕುಮಾರಾನ? ಅಲ್ಲಿ ಪೇಪರ್ ಕೊಡಿ, ಹರಿದು ಬಿಸಾಕ್ತಿನೀಂದ್ರೆ ಎಲ್ಲಿಂದ ತರೋದು, ಬೇಡ್ವೇ ಬೇಡ. ನರೇಂದ್ರ ಮೋದಿ? ಯಾರು ಇಲ್ದೇ ಇರುವಾಗ್ಲೂ ಮಾತುಮಾತಿಗೂ 'ಭಾಯಿಯೋ ಬೆಹ್ನೋ' ಅಂತಾ ಕರೀತಾರೆ, ಅಲ್ಲಿ ಆತ ಶುರು ಮಾಡೇ ಮಾಡ್ತಾರೆ, ಅಲ್ಲಿ ಅವರನ್ನ ಎಲ್ಲಿ ಹುಡುಕೋದು ಮತ್ತೆ ಅವರಿಗೆ ಯಾವಾಗಲೂ ವೀಸ ಪ್ರಾಬ್ಲಂ, ಬೇಡ. ಯಾರಿಗೋ ಪ್ರಧಾನಿ ಹೆಸರು ಜ್ಞಾಪಕ ಬಂತು. ಅಲ್ಲಿರೋ ಬೆಟ್ಟ, ಗುಡ್ಡಗಳು, ಮಿಥೇನ್ ಗ್ಯಾಸ್ ಏನಾದ್ರೂ ಪ್ರಶ್ನೆ ಕೇಳಿದ್ರೆ ಆಸಾಮಿ ಬಾಯಿ ಬಿಡಲ್ಲಾ, ನಮ್ಮ ತರಹ

ಗುಗ್ಗುಗಳಿಲ್ದಿದ್ರೆ, ಕೋಪಕ್ಕೆ ವಾಲ್ಕೆನೊ ಏನಾದ್ರೂ ತಕರಾರು ಆಗುತ್ತೆ. ಅವರನ್ನ ಇಲ್ಲಿ ಬಿಡೋದೇ ಸೇಫ್ ಅನ್ನಿಸ್ತು.

ಹಲಸಿನ ಕಾಯಿ ಚಿಪ್ಸನ್ನು ಬಾಯಿಗೆ ಹಾಕಿ, ಯಾರೋ, ಸಚಿನ್‌ನ ಕಳಿಸಿದ್ರೆ ಹೇಗೆ ಅಂದ್ರು? ಒಳ್ಳೆ ಐಡಿಯಾ. ಅವನ ಸಿಕ್ಸರ್‌ಗಳು ಮಂಗಳಕ್ಕೆ ಆಗಲೇ ಹೋಗಿದೆ, ಚೆನ್ನಾಗಿ ಅಡ್ವರ್ಟೈಸ್ ಆಗಿದೆ. ಆದ್ರೆ ಸಚಿನ್ ಮಂಗಳಕ್ಕೆ ಹೋದ್ರೆ ಇಲ್ಲಿಯ ಅಡ್ವರ್ಟೈಸ್ಮೆಂಟ್ ಏಜೆನ್ಸಿಗಳು ಗೋಳಾಡ್ಬಹುದು, ಬೇಡಾ.

ಭೀಷ್ಮ ಪಿತಾಮಹ ಅಡ್ವಾಣಿ ಆಗ್ಬಹುದೆ? ಅಯ್ಯೋ! ಮಂಗಳಕ್ಕೆ ಹೊರಡೋ ದಿವಸ, ನಾನು ಶನಿಗ್ರಹಕ್ಕೆ ಹೋಗೋದಾದ್ರೆ ಬರ್ತೀನಿ, ಇಲ್ದಿದ್ರೆ ಠೂ ಅಂದ್ರೆ ಏನ್ಮಾಡೋದು, ಬಿಗ್ ರಿಸ್ಕ್, ಬೇಡ್ವೇಬೇಡ.

> **ಯಾರು ನಮಗೆ ಆತ್ಮೀಯರೋ**
> **ಅವರ ಕಣ್ಣಲ್ಲಿ ನೀರು ತರಿಸುತ್ತೇವೆ,**
> **ನಮಗಾಗಿ ಯಾರು ಆತ್ಮೀಯರಲ್ಲವೋ**
> **ಅವರಿಗಾಗಿ ನಾವು ಕಣ್ಣೀರು ಸುರಿಸುತ್ತೇವೆ,**
> **ಮತ್ತು**
> **ಯಾರು ನಮಗಾಗಿ ಕಣ್ಣೀರು**
> **ಸುರಿಸುವುದಿಲ್ಲವೋ ಅವರಿಗಾಗಿ ನಾವು**
> **ಆತ್ಮೀಯತೆ ತೋರುತ್ತೇವೆ.**
> **ಇದು ಜೀವನದ ಸತ್ಯ.**
> **ಇದು ಅಪರೂಪ ಆದರೂ ಸತ್ಯ.**
> **ಇದು ನಮಗೆ ಅರ್ಥವಾದರೆ**
> **ನಮ್ಮನ್ನು ನಾವು ತಿದ್ದಿಕೊಳ್ಳಲು**
> **ಖಂಡಿತಾ ತಡವಲ್ಲ.**

ಅಮಿತಾಬ್ ಬಚನ್ ಬೆಸ್ಟ್ ಅಂದ್ರು. ಒಬ್ಬ ಮನುಷ್ಯನ ಕೈಲಿ ಏನೇನು ಆಗುತ್ತೋ, ಆಗೋದಿಲ್ವೋ ಅದೆಲ್ಲಾ ಆವಾಗ್ಲೇ ಮಾಡಿದಾರೆ.. ಅಲ್ಲಿ ಹೋಗಿ ಏನು ಮಾಡ್ತಾರೆ ಅನ್ನೋ ಪ್ರಶ್ನೆ ಬಂತು. ದೇವೇಗೌಡ್ರ ಹೆಸರು ಬಂತು. ಮಣ್ಣಿನ ಮಗ ಅವರೇ ಸರಿ. ರೈತರ ಬಂಧು. ಅಯ್ಯೋ! ಅಲ್ಲಿ ರೈತರೇ ಇಲ್ವಲ್ಲ. ಜೊತೆಗೆ ಅಲ್ಲಿ ನೈಸ್, ರಫ್ ಯಾವ ಪ್ರಾಜೆಕ್ಟೂ ಇಲ್ಲ ಕೂಡ.

ಕೊನೆಗೆ ರೋಸಿ ಹೋಗಿ ಯಾರೋ ಒಬಾಮಾ ಆಗ್ಬಹುದಾ? ಅಂದ್ರು. ಎಲ್ಲಾದಕ್ಕು ನಾಸ್ತಿ ಹಾಕೋ ಮೆಂಬರ್ ರೆಡಿಯಾಗಿದ್ರು. ಒಬಾಮ ಒಂದೇ ಸಮನೆ ಪ್ರಶ್ನೆ ಹಾಕ್ತಾರೆ, ಕೊನೆಗೆ ತಾವೇ, 'ಯಸ್, ವಿ ಕ್ಯಾನ್' ಅಂತ ಉತ್ತರಾನೂ ಅವ್ರೆ ಹೇಳ್ತಾರೆ! ಗೊತ್ತಿದ್ದೂ ಗೊತ್ತಿದ್ದು ಕೇಳೊದ್ಯಾಕೆ. ಸರಿಬರಲ್ಲ. ಇನ್ಯಾರೋ ನವ್ ಜ್ಯೋತ್ ಸಿದ್ದು ಅಂದ್ರು. ಅವ್ರು ಕ್ರಿಕೆಟ್ ಪ್ಲೇಯರ್ರಾ, ಕ್ರಿಕೆಟ್ ಕಾಮೆಂಟೇಟರ್ರಾ ಅಥವಾ 'ಹ್ಹ ಹ್ಹ ಹ್ಹ ಠೋಕೋ ತಾಲಿ' ಎಂದು ಕೂಗುವ ಆಟೋಮ್ಯಾಟಿಕ್ ಲಾಫಿಂಗ್ ಮಶೀನಾ? ಏನೂಂತ ಕರೆಯೋದು?

ಮೂರು ಸರ್ತಿ ಬಾಳೇಕಾಯಿ ಚಿಪ್ಸ್ ಮತ್ತು ಕುಸಬಲಕ್ಕಿಯ ಗಂಜಿ ಕಬಳಿಸಿದ್ದಾಯಿತು. ಇನ್ನೂ ಯಾರೂ ಸೆಲೆಕ್ಟಾಗಿರಲಿಲ್ಲ.

ಅಷ್ಟು ಹೊತ್ತಿಗೆ ಹೊರಗಡೆ ಗಲಭೆ ಶುರುವಾಯಿತು. ವಾಚ್‌ಮನ್ ಬಂದು, 'ಸಾರ್! ನಮಗೂ ಮಂಗಳಕ್ಕೆ ಹೋಗಲು ಚಾನ್ಸ್ ಕೊಡೀಂತ ಸುಮಾರು ಜನ ಬಂದೀದಾರೆ. ಏನು ಮಾಡ್ಲಿ?' ಎಂದ.

ಊಟಕ್ಕೆ ಇನ್ನು ಒಂದು ಘಂಟೆ ಇತ್ತು. ಚಿಪ್ಸು, ಗಂಜಿ ಹೊಟ್ಟೇಲಿ ಅವುಗಳ್ದೇ ಒಂದು ಕಸರತ್ತು ಮಾಡ್ತಿತ್ತು. 'ಇಬ್ಬಿಬ್ರನ್ನಾಗಿ ಕಳ್ಸಿ, ನೋಡೋಣ' ಅಂದ್ರು ರಾಧಾಕೃಷ್ಣನ್. ಮತ್ತೆ ಇವತ್ತು

ಯಾರ್ನಾದ್ರೂ ಸೆಲೆಕ್ಟ್ ಮಾಡ್ಲಿಲ್ಲಾಂದ್ರೆ ಮಾಧವನ್ ನಾಯರ್ ಮೈಮೇಲೆ ಬೀಳಕ್ಕೆ ರೆಡಿ. ಬಜೆಟ್ಗೆ ಖೋತಾ ಬಿದ್ರೆ?

ಫಸ್ಟ್ ಬಂದವ್ರು ಸರ್ದಾರ್ಜಿಗಳು. ಕೈಲಿ ಸ್ಟೀರಿಂಗ್ ವೀಲ್. 'ನಿಮ್ದೂ ಮಾರ್ಸ್ಕಾ ಜಾನೇ ಕೇಲಿಯೇ ಹಮ್ ದೋನೋ ಬೆಸ್ಟ್ ಹೈ. ಬೆಂಗ್ಳೂರ್ಕೆ ರೋಡ್, ಖಡ್ಡ, ಪಾಟ್ಹೋಲ್ಸ್ ಮೇ ಡ್ರೈವಿಂಗ್ ಟ್ವೆಂಟಿ ಯಿಯರ್ಸ್ ಎಕ್ಸ್ಪೀರಿಯನ್ಸ್ ಹೈ. ಬಿನಾ ವೀಲ್ಸ್, ಲೈಟ್ ಗಾಡೀ ಚಲಾ ಸಕ್ತೆ. ಹಮಾರೇ ಬಿನಾ ತುಮ್ ಮಾರ್ಸ್ಮೇ ಕುಚ್ ಭೀ ನಹಿ ಕರ್ಸಕ್ತೇ. ಕಭೀ ಜಾನೇಕಾ?' ಅಂದ ಸೀನಿಯರ್ ಸರ್ದಾರ್.

'ತುಮ್ ಬಾಹರ್ ಜಾವ್. ದೇಖೇಂಗೆ' ಅಂತ ಹೊರಗೆ ಹಾಕಿದ್ರು.

ಅವರ ಹಿಂದೆಯೇ ಬಂದ ಉಡುಪಿ ಬ್ರಾಹ್ಮಣ. 'ವೆಜ್, ನಾನ್ ವೆಜ್, ಪಂಜಾಬಿ, ಇರಾನಿ, ಥಾಯ್, ಮೊಘಲಾಯಿ ಎಲ್ಲಾ ಅಡುಗೆ ಮಾಡ್ತೀನಿ. ಬರೀ ಒಂದು ಒಲೆ, ಸೌಟು ಕೊಟ್ರೆ ಸಾಕು. ಅಲ್ಲಿ, ಇಲ್ಲಿರೋ ಸಾಮಾನು ಹಾಕಿ ಮೀಲ್ಸ್ ರೆಡಿ ಮಾಡ್ತೀನಿ. ಇದೇ ತರಹ ಇನ್ನೊಂದು ತುಂಡು ಉಟ್ಕೊಳ್ಳೋಕೆ ಬಟ್ಟೆ ಕೊಡ್ಸಿ. ನಾನು ಇವತ್ತೆ ರೆಡಿ.'

ಕೊನೆಗೆ ಬಂದವರು ಜ್ಯೋತಿಷಿ. ಒಳಗೆ ತೀರ್ಥ ಪ್ರೋಕ್ಷಣೆ ಮಾಡ್ತಾನೇ ರೂಮಿನ ಸುತ್ತ ಒಂದು ರೌಂಡು ಹೊಡೆದು, ರಾಧಾಕೃಷ್ಣನವರ ಹತ್ತಿರ ಹೋಗಿ ಮತ್ತೆ ಅವರ ಮೇಲೆ ನೀರು ಎರೆಚಿದರು. 'ನಿಮ್ಮನ್ನು ಆಗಾಗ್ಗೆ ತಿರುಪತಿಯಲ್ಲಿ ನೋಡಿದ್ದೇನೆ. ನಾನೇ ನಿಮಗೆ ಎಷ್ಟು ಘಳಿಗೆಗೆ ಮಂಗಳ್ಯಾನ್-1 ಬತ್ತಿಗೆ ಹಸಿರು ಮತಾಪಿನಲ್ಲಿ ದೀಪ ಹಚ್ಚಲು ಸಲಹೆ ಕೊಟ್ಟಿದ್ದು. ಆದರೆ, ನಿಮ್ಮ ಜಾತಕ ನೋಡಿ, ರಾಹು ಕಾಲ, ಗುಳಿಕಾಲ ನೋಡಿ ಹೇಳಿದ್ದು. ನನ್ನ ನೀವು ಕರೆದು ಕೊಂಡು ಹೋಗದಿದ್ದರೆ ನಿಮ್ಮ ಪುಷ್ಪಕ ವಿಮಾನ ಅಲ್ಲಿ ಇಳಿಯಲು ಆಗುವುದಿಲ್ಲ. ನನಗೆ ಘೋರ, ಅಘೋರ ಪದ್ಧತಿ, ಮಾಟ, ಮದ್ದು ಎಲ್ಲಾ ಪರಿಚಯವಿದೆ. ನಾನು ಹೆದರಿಸುತ್ತಿಲ್ಲ, ಇದು ಬರೀ ಎಚ್ಚರಿಕೆ ಅಷ್ಟೆ'

ಹಾಗೂ ಹೀಗೂ ಜ್ಯೋತಿಷಿಯನ್ನು ಹೊರಕ್ಕೆ ಕಳಿಸಿದ ತಕ್ಷಣವೇ ಸೆಕ್ಯೂರಿಟಿಯವರನ್ನು ತಳ್ಳಿಕೊಂಡು ಒಂದು ಗುಂಪು ಒಳಗೆ ಬಂತು. 'ಯಾರ್ರೀ ನೀವು.. ಆನೆ ಹಿಂಡು ಬಂದ ಹಾಗೆ ನುಗ್ತೀರಲ್ರೀ.. ಅಲ್ಲೇ ನಿಲ್ರೀ' ಅಂದ್ರೆ, 'ನಮ್ಮನ್ನು ತಡೆಯೋಕೆ ನಮ್ಮ ಸಿ.ಎಂ. ಹೈಕಮಾಂಡ್ಗೇ ಆಗ್ತಾ ಇಲ್ಲ, ನೀವೆಲ್ಲಾ ಏನು ಲೆಕ್ಕಾ? ಇಲ್ಲಿ ರಾಧಾಕೃಷ್ಣ ಯಾರು? ಅವರ್ನ ಕರೀರಿ.'

ಬೆಳಗಿನಿಂದ ಆದ ಮೀಟಿಂಗ್, ಇಂಟರ್ವ್ಯೂ, ಜೊತೆಗೆ ಪಾಮಾಯಿಲ್ ಚಿಪ್ಸ್ ಕುರುಬಲಕ್ಕಿ ಗಂಜಿ ಓವರ್ ಡೋಸಾಗಿ ರಾಧಾಕೃಷ್ಣನ್ ಅವರಿಗೆ ಆವಾಗಲೇ ತಲೆ ಸುತ್ತುತ್ತಿತ್ತು.

'ನಾನೇ ರಾಧಾಕೃಷ್ಣನ್? ಏನು ಬೇಕು ನಿಮಗೆ? ಸೂಟ್ ಕೇಸ್ ಯಾತಕ್ಕೆ ತಂದಿರಿ ಇಲ್ಲಿಗೆ?'

ರಾಧಾಕೃಷ್ಣರನ್ನು ತಲೆಯಿಂದ ಕಾಲಿನವರಿಗೆ ನೋಡಿ ಆ ಗುಂಪಿನ ಲೀಡರ್ ಶುರು ಮಾಡಿದ.

'ನೀವೇನಾ! ಸರಿ. ನಾವು ಕರ್ನಾಟಕದ ಎಮ್‌ಎಲ್‌ಎ ಗಳು. ನಾವು ಕಲಾಸಿಪಾಳ್ಯ ಬಸ್ ಸ್ಟಾಂಡ್ ವಿಸ್ತರಿಸಲು ಕರ್ನಾಟಕ ಸರ್ಕಾರ ನಿಯಮಿಸಿರುವ ಸ್ಟಡಿ ಟೀಮ್. ನ್ಯೂ ಯಾರ್ಕ್, ಲಂಡನ್, ಪ್ಯಾರಿಸ್, ಸ್ವಿಟ್ಜರ್ಲ್ಯಾಂಡಿನ ಬಸ್ ಸ್ಟ್ಯಾಂಡ್‌ಗಳೆಲ್ಲಾ 'ಸ್ಟಡಿ' ಮಾಡಿಕೊಂಡು ನೇರವಾಗಿ ಇಲ್ಲಿಗೆ ಬರ್ತಿದೀವಿ. ಅವು ಯಾವುದೂ ಸೂಟಬಲ್ ಆಗಿಲ್ಲ. ಅದಕ್ಕೆ ನಾವು ಮಂಗಳ ಗ್ರಹಕ್ಕೆ ಹೋಗಿ ಅಲ್ಲಿ ಯಾವುದಾದರೂ ಸೈಟ್ನ ನೋಡಿ, ಸರಿಯಾಗಿದ್ದರೆ ನಮಗೆ ಗೊತ್ತಿರುವ ಡೆವಲಪರ್ಸ್ / ಕಂಟ್ರಾಕ್ಟರನ್ನ ನೆಕ್ಸ್ಟ್ ಟ್ರಿಪ್ನಲ್ಲಿ ಕಳಿಸಿ ಅಲ್ಲಿ ಆಲ್ ವೆದರ್, ಫೈರ್ ಪ್ರೂಫ್, ಆಲ್ ಎಲೆಕ್ಟ್ರಿಕಲ್ ಬಸ್ ಸ್ಟ್ಯಾಂಡ್ ಮಾಡಿಸ್ತೀವಿ. ಅದನ್ನು ಸುಲಭವಾಗಿ ಕಲಾಸಿಪಾಳ್ಯದಲ್ಲಿ ಕಾಪಿ ಮಾಡಲು ಇಂಜಿನೀಯರ್ಗಳು ನಮ್ಮ ಬಿಬಿಎಂಪಿಯಲ್ಲಿ ಇದ್ದಾರೆ. ಈಗಾಗಲೇ ನಮಗೆ ಬೇಕಾದ ಅಡುಗೆಯವರು, ಡ್ರೈವರ್ ಸೆಲೆಕ್ಟಾಗಿದ್ದಾರೇಂತ ಹೇಳಿದರು. ಜ್ಯೋತಿಷಿಗಳೂ ಬರ್ತಾರಂತೆ. ಒಳ್ಳೇದೆ. ನಾವು ಮನೆಗೆ ಹೋಗಿ, ಸ್ನಾನ ಮಾಡಿ, ಹಳೆಯ ಟೂರ್ ರಿಪೋರ್ಟ್ ಕೊಟ್ಟು ಮಧ್ಯಾಹ್ನ ಲಂಚ್ ಟೈಮಿಗೆ ಬರ್ತೀವಿ. ಅಲ್ಲಿಯ ತನಕ ನೀವು ನಮ್ಮ ಸೆಕ್ರೆಟರಿಯ ಜೊತೆ ಫಾರ್ಮಾಲಿಟಿ ಮುಗಿಸಿರಿ. ಅಷ್ಟು ಹೊತ್ತಿಗೆ ಜ್ಯೋತಿಷಿಗಳು ಆಸ್ಪಿಷೀಸ್ ಟೈಮ್ ಸೆಲೆಕ್ಟ್ ಮಾಡಿರ್‍ಲಿ. ಎಕ್ಸ್ಟ್ರಾ ಬಜೆಟ್ ಬೇಕಾದ್ರೆ ಹೇಳಿ. ನಮ್ಮ ಸಿಎಮ್ಗೆ ಹೇಳಿ, ರಾಹುಲ್ ಗಾಂಧಿಗೆ ಫೋನ್ ಮಾಡಿಸ್ತೀವಿ' ಎಂದು ಹೇಳಿ ಪಟಾಲಂ ಹೊರಟಿತು.

ಮಂಗ-2 ಹೋಗುವ ರೀತಿ ನೋಡಿ ಕೂತಿದ್ದಲ್ಲೇ ರಾಧಾಕೃಷ್ಣನ್‌ರಿಗೆ ಮೂರ್ಛೆ ಬಂತು. ಕಮಿಟಿ ಮೆಂಬರೊಬ್ಬರು ಹೊರಗಡೆ ಓಡಿ ಜ್ಯೋತಿಷಿಯ ಕಮಂಡಲವನ್ನು ಕಿತ್ತುಕೊಂಡು ಮತ್ತೆ ಮತ್ತೆ ಅವರ ಮೇಲೆ ನೀರು ಪ್ರೋಕ್ಷಣೆ ಮಾಡಿ ಅವರನ್ನು ಎಬ್ಬಿಸಿದರು.



# ಧರ್ಮಕ್ಷೇತ್ರ - ಕುರುಕ್ಷೇತ್ರ

**• ಡಾ. ಶ್ಯಾಮಲಾ ರವಿಶಂಕರ್**

**ಓಂ**... ನಂಗೊತ್ತು ನೀವೇನೆಂದುಕೊಳ್ತಿದ್ದೀರಾ ಎಂದು! ಇದೊಂದು ಶ್ಲೋಕ ಎಲ್ಲರಿಗೂ ಗೊತ್ತು. ಏನೂಂತ ಹೇಳ್ತಿದ್ದಾಳೆ ಅಂದ್ಕೊಬೇಡಿ. ನಂಗ್ಬರೋದು ಇದೊಂದೇ ಶ್ಲೋಕ. ಯಾಕೆ ಅಂತೀರಾ? ಮಿಕ್ಕಿದ್ದು ಬರೊಲ್ಲ ಅಷ್ಟೇ, ಸಿಂಪಲ್! ಅದೂ ನಿಮ್ಮ ಒಳಿತಿಗೇ ಅಂದ್ಕೊಳ್ಳಿ. ಇಲ್ಲದಿದ್ದರೆ ಏಳು ನೂರಕ್ಕೂ ಹೆಚ್ಚು ಕಥೆಗಳನ್ನು (ಹೇಳೋ?) ಕೇಳೋ ಪರಿಸ್ಥಿತಿ ಕಷ್ಟ ಅಲ್ವಾ?

ಇರಲಿ, ಈಗ ನಾನು ಹೇಳೊಕ್ಕೆ ಹೊರಟಿರೋದು ಇದು; ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಾವೊಂದೆರಡು ದಿನಗಳಷ್ಟು ಕಳೆದು ಬಂದೆವು. ಅಷ್ಟಾದರೂ ಒಂದೇ ಶ್ಲೋಕಾನಾ ನಿನಗೆ ಬರೋದು ಅಂದ್ರು ಯಾರೋ. ನಾವು ಅಲ್ಲಿದ್ದುದ್ದು ಯಾತ್ರಿಕರಾಗಿ, ಗೀತೋಪದೇಶಕ್ಕಾಗಲ್ಲ. ಇಲ್ಲದಿದ್ದರೂ ಆ ಕ್ಲಾಸು ಗೀತಾಚಾರ್ಯರು ಮುಗಿಸಿ ಬಿಟ್ಟಿದ್ದರಲ್ಲಾ ನಾವು ಹೋಗೋಷ್ಟರಲ್ಲಿ. ಕುರುಕ್ಷೇತ್ರದಲ್ಲಿ ನೋಡುವಂತಹ ಸ್ಥಳಗಳು ಬಹಳ ಇವೆ. ಆದ್ದರಿಂದ ನಾವು ಟ್ಯಾಕ್ಸಿ ಮಾತಾಡಿಕೊಂಡೆವು. ಅದರ ಡ್ರೈವರ್ ಕಮ್ ಗೈಡ್ ಕಮ್ ಪೂಜಾರಿ (ಪಂಡಾ) ಬಹಳಷ್ಟು ವಿಷಯಗಳನ್ನು ತಿಳಿಸ್ತಾ ನಮ್ಮನ್ನು ಸುತ್ತಾಡಿಸಿದ.

ಇಲ್ಲಿನ ವಿಶೇಷವೆಂದರೆ, ಜನ 'ಧರ್ಮ' ಎಂಬುವ ಪದವನ್ನು ಬಹಳ ಉಪಯೋಗಿಸುತ್ತಾರೆ. ನಮ್ಮ ಡ್ರೈವರ್/ಪಂಡಿತ್‌ಜೀನೇ ತೆಗೆದುಕೊಳ್ಳಿ. ಟ್ಯಾಕ್ಸಿ ಚಾರ್ಜು ಎಷ್ಟಾಗಬಹುದು ಎಂದರೆ 'ಏನೋ ಧರ್ಮಾನುಸಾರ' ಅನ್ನಬೇಕೆ?! 'ಇದಕ್ಕೆಲ್ಲಾ ಬಗ್ಗೋವರಲ್ಲಾ ನಾವು ನೀನು ಸರಿಯಾಗಿ ಇಷ್ಟು ಅಂತ ಹೇಳಲೇಬೇಕು ಎಂದಾಗ 'ಇಷ್ಟು' ಅಂದು ಅಷ್ಟರ ಮೇಲೆ ನಿಮ್ಮ ಧರ್ಮ ಎಂದೆ. 'ಧರ್ಮ'ವಿಲ್ಲ, ಬರೀ ಲೆಕ್ಕಾಚಾರ! ಎಂದೆ. ನಾವೆಲ್ಲಿ ಬೇರೆಯವರನ್ನ ಹಿಡ್ಕೋತೀವೋ ಎಂದು ಅಂಜಿದ ಅಂತ ಕಾಣತ್ತೆ, ಏನೋ ಒಂದು ಮೊತ್ತ ಹೇಳಿದ. ಎಲ್ಲಾ ನಿಷ್ಕರ್ಶೆ ಆದ ನಂತರ 'ಬ್ರಹ್ಮ ಸರೋವರ' ಅಂತ ಒಂದು ಸರೋವರ ಇದೆ. ಅದರ ದಡದಲ್ಲಿ 'ಪಿತೃಕಾರ್ಯ' ಮಾಡ್ತೀರಾ ಎಂದ. 'ನೀನು ಎಷ್ಟು ಖರ್ಚಾಗತ್ತೇಂತ ಹೇಳಿದರೆ ನಮಗೆ ಆಗತ್ತಾ ಇಲ್ವಾ ಅಂತ ನಿರ್ಧರಿಸ್ತೀವಿ' ಅಂದೆ. 'ಎಲ್ಲಾದರೂ ಉಂಟೇ, ಬಹೆನ್, ನಾನು ಇದಕ್ಕೆ ಮಾತ್ರ ರೇಟ್ ಹಾಕೊಲ್ಲಾ, ನಿಮಗೆ ಏನು ತೋಚಿದರೆ ಅದು ಕೊಡಿ. ಇದು ಧರ್ಮಕಾರ್ಯವಲ್ಲವೇ? ಈ ಪಂಡಾಗಳ ವಿಷಯದಲ್ಲಿ ಬಹಳ ಕಟ್ಟುನಿಟ್ಟಾಗಿ ವ್ಯವಹರಿಸಬೇಕು. ನೋಡೀ ನೋಡಿ ನಾನೊಂದು ಮೊತ್ತವನ್ನು ಹೇಳಿದೆ. ಅವನು 'ಅಯ್ಯೋ, ಬಹೆನ್, ಅದೆಲ್ಲಾ ನೀವ್ಹೇಳಿದ್ದೇ ಧರ್ಮ' ಎಂದು ಬಿಟ್ಟ.

ಎಷ್ಟೋ ಕಡೆ ತಿರುಗಾಡಿಸಿ ಕಡೆಗೆ ಬ್ರಹ್ಮ ಸರೋವರಕ್ಕೆ ಕರೆತಂದು ಕಾರ್ಯ ಆರಂಭಿಸಿದ. ಕಡೇ ಕಾರ್ಯ – ದಕ್ಷಿಣೆ ಇಡಬೇಕು. ಸರಿ ಶುರು ಆಯಿತು 'ಧರ್ಮ' ಪದದ ಉಚ್ಚಾರಣೆ. 'ನೀವೇ ಹೇಳ್ಬೇಕು ನೀವೆಷ್ಟು ಕೊಡ್ತೀರೋ ಅದನ್ನ' ಅಂದ. ನಾವು ಮೊದಲು ಒಪ್ಪಿಕೊಂಡ (?) ಮೊತ್ತವನ್ನು ಉಚ್ಚರಿಸಿದೆವು.

'ಇಷ್ಟರಲ್ಲಿ ನಿಮ್ಮ ಪಿತೃ ಪರಂಪರೆಗೆಲ್ಲಾ ಊಟ, ವಸತಿ, ಬಟ್ಟೆ ವಗೈರೆ ಅವಶ್ಯಕತೆಗೆ ಸಾಲೊಲ್ಲ' ಅಂದನಾತ.

ತಕ್ಷಣ, 'ಯಾರ ಅವಶ್ಯಕತೆಗೆ?' ಅಂದೇ ಬಿಟ್ಟೆ. ಒಮ್ಮೆಗೇ ತಬ್ಬಿಬ್ಬಾದ ಆಸಾಮಿ. ಅಂದಾಗ್ಯೂ ಬೇಗನೇ ಚೇತರಿಸ್ಕೊಂಡ್ತು ಪ್ರಾಣಿ. 'ಅದೇ, ಅದೂ... ಈಗಲೇ ನೀವು ಕರೆದು ಸನ್ಮಾನಿಸಿದರಲ್ಲಾ ಅವರೆಲ್ಲರಿಗೂ' ಅಂದ.

'ಸಾಕು' ಅಂದೆ, 'ಇಷ್ಟಕ್ಕೂ ಅವರು ಹೋದ ಕಡೆಯಾದರೂ ಬಾಡಿಗೆ, ಇಎಂಐಗಳಾಗಲಿ, ಆರೋಗ್ಯ ವಿಮೆಗಾಗಲಿ ಅಥವಾ ಇನ್ನೆಂಥದ್ದಾಗಲಿ ಕಟ್ಟಬೇಕಾಗಿರೊಲ್ಲ. ಅಲ್ವಾ ಹೋಗಲಿ ಅಂದರೆ ಬ್ರಾಂಡೆಡ್ ಆರ್ ಅದರ್‌ವೈಸ್ ಬಟ್ಟೆಗಳಾದರೂ ಹಾಕ್ಕೋತಾರಾ ಅನ್ನೋಕೆ ಅವರ ಸ್ಥೂಲ ಶರೀರಾನ ಇಲ್ಲೇ ಸುಟ್ಟು ಕೂಡ ಹಾಕ್ಬಿಟ್ಟಿದ್ದಾರಲ್ಲಿ ಅವರವರ ಮಕ್ಕಳು ಇನ್ನ್ಯಾಕೆ ಅವರಿಗೆ ವ್ಯವಹಾರ?'

'ಒಳ್ಳೆ ಜೋಕ್ ಮಾಡಿದಿರಿ, ಬಹೆನ್. ಆದರೂ ಅತಿಥಿ ಸತ್ಕಾರ ನಮ್ಮ ಧರ್ಮ...'

'ನಿಮ್ಮೂರಿಗೆ ಬಂದ ಅತಿಥಿಗಳು ನಾವು... ಅಂತ ರಾಗ ಎಳೆದೆ. ಅಷ್ಟರಲ್ಲಿ ನಾನ್ಹೇಳಿದ್ದ ಮೊತ್ತಕ್ಕೆ ಮೂರರಷ್ಟನ್ನು ಹರಾಜುಕಟ್ಟೆಯಲ್ಲಿ ಕೂಗೋ ಹಾಗೆ ಘೋಷಿಸೇ ಬಿಟ್ಟ.'

'ಇವುಗಳ್ನೆಲ್ಲಾ ನಮ್ಮವರು ನಂಬುವುದೇ ಇಲ್ಲ, ಏನೋ ನನ್ನ ಬಲವಂತಕ್ಕೆ ಒಪ್ಪಿ ಇಲ್ಲಿ ಕೂತಿದ್ದಾರೆ. ಇನ್ನು ಹೊರಟೇ ಬಿಡ್ತಾರೆ ಅಷ್ಟೆ' ಇದೊಂದು ಹೆದರಿಕೆ ಅನ್ನೋ ಹಾಗೆ ಹೇಳಿದೆ.

'ಅಂದ್ರೆ.... ನಾನು ಉಚ್ಚರಿಸಿ ಬಿಟ್ಟಿದ್ದೇನಲ್ಲಾ..' ಎಂದು ಪರಿತಪಿಸಿದ! 'ನಾವು ಅಂದ್ಕೊಂಡಿದ್ದಕ್ಕಿಂತ ಹೆಚ್ಚಾಯ್ತು ಅಂತ ಗೊಣಗಿಕೊಂಡು ಕೊಟ್ಟರೆ ನಮ್ಮ ಪಿತೃಗಳಿಗೆ ಸಮಾಧಾನ ಇರೊಲ್ಲ' ಅಂದೆ.

'ಅವರನ್ನ ತೃಪ್ತಿಪಡಿಸೋ ಕೆಲಸ ನಂಗೆ ಬಿಡಿ. ಅದಕ್ಕೆ ತಾನೆ ನಾನು ಈ ಹಣ ತೊಗೊಳ್ಳೋದು...'

ಇನ್ನೂ ಹೀಗೆ ಎಲ್ಲೀವರೆಗೂ ಹೊಗತ್ತೋ ಈ ಡೈಲಾಗು ಅಂತ ಇವರು ಅಷ್ಟೂ ಮೊತ್ತ ಅಲ್ಲಿಟ್ಟರು.

'ಬಹೆನ್‌ಗೆ ಇಷ್ಟವಿಲ್ಲದಿದ್ದರೆ ಬೇಡಾ....' ಅಂತಲೇ 'ಸರ್' ಎಂದು ಆ ನೋಟುಗಳ ಮೇಲೆ ಎಳ್ಳು ನೀರು ಚುಮುಕಿಸಿದ! ಅವನ 'ಧರ್ಮ'ವಲ್ಲವೇ ಅದು?

ನಾವಿಬ್ಬರೂ ಅಲ್ಲೇ ಹಾಗೇ ಬಿದ್ದು ಬಿದ್ದೂ ನಕ್ಕಿವಿ.

'ನೋಡಿದ್ರಾ, ನಿಮಗೆ ಎಷ್ಟು ಖುಷಿ ಬಂತು' ಅನ್ನೋದೆ ಆಸಾಮಿ?! ಬಹುಶಃ 'ನಾಚಿಕೆ' ಅನ್ನೋ ಭಾವನೆ ಅವನ 'ಧರ್ಮ'ವಲ್ಲವೇನೋ. ನಮ್ಮಂತ ಇಸಮ್ಮುಗಳನ್ನು ದಿನವಿಡೀ, ಜೀವನವಿಡೀ ನೋಡುವವ ಅಲ್ವಾ. ಕೂಲ್ ಗೈ! ಜೇಬಿಗೇರಿಸಿ ಮಂತ್ರ ಮುಗಿಸಿದ!

ಮಾರನೇ ದಿವಸಾನೂ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿ ನಾವು ಕೊಟ್ಟ ಹಣವನ್ನು ''ಅಪ್‌ನಾ ಧರಮ್ ಹೈ'' ಅಂತ ಜೇಬಿಗಿಳಿಸಿ ಕಳಚಿಕೊಂಡ. ಇಲ್ಲೇನೂ ತರಲೆ ಆಗಲಿಲ್ಲವಲ್ಲಾ ಅಂದ್ಕೊಂಡ ನನಗೆ 'ಧರ್ಮ' ಎಂಬ ಪದದ ಮೇಲೆ ನಂಬಿಕೆನೇ ಬಂದ್ಬಿಟ್ಟು ಈ ಕ್ಷೇತ್ರದಲ್ಲಿ!

ಇಲ್ಲಿನ 'ಜ್ಯೋತಿಸರ್' ಅನ್ನೋ ಜಾಗದಲ್ಲಿ ಗೀತಾಚಾರ್ಯರು ಅರ್ಜುನನಿಗೆ ಗೀತೋಪದೇಶ ಮಾಡಿದ ಸ್ಥಳ. ಅಲ್ಲಿ ಐದು ಅಶ್ವತ್ಥ ವೃಕ್ಷಗಳು ಐದಾರು ಸಾವಿರ ವರ್ಷಗಳಿಂದಲೂ ಇಂದಿಗೂ ಹಚ್ಚ ಹಸಿರು ಎಲೆಗಳಿಂದ ತುಂಬಿ ನಳನಳಿಸುತ್ತಿರುವುದರ ಕಾರಣ ಅವು ಸಾಕ್ಷಾತ್ ಪರಮಾತ್ಮನ ಉಪದೇಶ ಹೀರಿ ಅಮರವಾಗಿರುವುದರಿಂದ ಎಂತಲೇ ಪ್ರತೀತಿ! ಇದೇ ತಾನೇ ಧರ್ಮಕ್ಷೇತ್ರದ ಕುರುಹು!

ಸಣ್ಣ ಸಣ್ಣ ರಸ್ತೆಗಳಲ್ಲಿ ಟ್ರ್ಯಾಕ್ಟರ್ ಮತ್ತಿತರ ವ್ಯವಸಾಯೋಪಕರಣ ವಾಹನಗಳಾಗಲಿ ಅಡ್ಡ ಅಡ್ಡಲಾಗಿ ನಿಲ್ಲಬೇಕಾಗುವುದರಿಂದ ಆಗುವ ಟ್ರಾಫಿಕ್ ಜಾಮ್‌ಗಳನ್ನು ನಿಭಾಯಿಸುವ ರೀತಿ ನೋಡಬೇಕು – ಎಲ್ಲಾ ಚಾಲಕರೂ ಇಂಜಿನ್ ಆಫ್ ಮಾಡಿ ತಕ್ಷಣ ಕೆಳಗಿಳಿದು ಬಂದು ತಂತಮ್ಮಲ್ಲಿ ಮಾತಾಡಿಕೊಂಡು ಯಾರು ಮೊದಲು ಹೋಗಲು ಸಾಧ್ಯ ಎಂದು ನೋಡಿ ಅದಕ್ಕಾಗಿ ರಿವರ್ಸ್ ಯಾರ್‍ಯಾರು ಹೋಗಬೇಕು ಎಂಬುದನ್ನು ಕ್ಷಣಾರ್ಧದಲ್ಲಿ ನಿಶ್ಚಯಿಸಿ ನಗುನಗುತ್ತಾ ಪಾಲಿಸಿಯೂ ಬಿಡುತ್ತಾರೆ. ನಂ ಬೆಂಗ್ಳೂರಿನ ಇಂತಹ ಸಮಯದಲ್ಲಿ ನಡೆಯುವ ನಡವಳಿಕೆ, ಅವಾಚ್ಯ ಶಬ್ದಗಳ ಪ್ರಯೋಗ ಇಲ್ಲಿ ನೆನೆಯುವುದೂ ಕೂಡ ಧರ್ಮವಲ್ಲ!

ಯಾರ ಬದುಕಿಗೆ ನೀವು ಒಂದು ಅಮುಖ್ಯರಾಗಿರುವಿರೋ ಅಂಥವರು ನಿಮ್ಮ ಬದುಕಿಗೆ ಮುಖ್ಯರಾಗದಿರಲಿ. ಸಂಬಂಧಗಳು ಯಾವಾಗಲೂ ಆರ್ಥೈಕ್ಯತೆಯ ತಳಹದಿಯ ಮೇಲೆ ನಿಂತಿರಬೇಕು. ಆಗಲೇ ಅದು ಭದ್ರವಾಗಿರುತ್ತದೆ.

ಇನ್ನೂ ವಿಸ್ಮಯಕಾರಿ ಪ್ರಸಂಗವೆಂದರೆ – ಒಂದು ಮಗು ದಾರಿ ತಪ್ಪಿ ಅಳುತ್ತಾ ಹೋಗುತ್ತಿತ್ತು. ಆದಕ್ಕೆರಡೂ ಕಡೆಗಳಿಂದ ಬಂದ ಸೈಕಲ್ ಸವಾರಿ ಯುವಕರು ನಿಂತು ಮಾತಾಡಲು ಪ್ರಾರಂಭಿಸಿದಾಗ ನನಗೆ ಬಂದ ಸಂಶಯ ನಿಮಗೂ ಬಂದೇ ಇರುತ್ತೆ. ಆದರೆ ಇದು ಹಾಗಲ್ಲ ಮನೆ ವಿಳಾಸ ಗೊತ್ತಿಲ್ಲದ ಮಗುವಿನ ಅಳು ಮಾತಿನಿಂದಲೇ ಅವಳ ಶಾಲೆಯ ಹೆಸರನ್ನರಿತ ಆ ಇಬ್ಬರು ಯುವಕರು ಅವಳನ್ನು ಶಾಲೆಗೆ ಕರೆದೊಯ್ಯಲು ಸಿದ್ಧವಾಗಿ 'ನಾನು ಹೋಗಲಾ ಅಥವಾ ನೀನು ಹೋಗ್ತೀಯಾ' ಎಂದು ಅವರಲ್ಲೇ

ಮಾತಾಡಿಕೊಂಡು ಅವರಲ್ಲೊಬ್ಬ ಕಾರ್ಯಗತವಾದ. ಇನ್ನೊಬ್ಬ ತನ್ನ ದಾರಿ ಹಿಡಿದ. ಇಷ್ಟರಲ್ಲಿ ಪೊಲೀಸರನ್ನು ಕರೆಯಬೇಕೆಂದಿದ್ದ ನನ್ನ ಮಾತನ್ನು ಕೇಳಿದ ಜನರು 'ಇಷ್ಟಕ್ಕೆಲ್ಲಾ ಪೊಲೀಸರು ಯಾಕೆ?' ಅವರನ್ನು ಅವರ ಕೆಲಸ ಮಾಡಲು ಬಿಡೋಣ. ಇದನ್ನು ನಾವ್ಯಾರಾದರೂ ಮಾಡಬಹುದಲ್ಲವೇ ಅಂದಾಗ ಇಲ್ಲಿನ ಜನ ದ್ವಾಪರಯುಗದಲ್ಲೇ ಇದ್ದಾರೆ. ನಮ್ಮಂಗೆ ಎವಾಲ್ವ್ಡ ಲಾಟ್ ಅಲ್ಲ. ಅಂತ ದುಃಖ ಪಟ್ಕೊಂಡೆ! ಅಲ್ಲದೆ ಪೊಲೀಸ್ ಡಿಪಾರ್ಟ್ಮೆಂಟ್ ಹಿಯರ್ ಈಸ್ ಲಕಿ ಲಾಟ್ ಅಂದುಕೊಂಡೆ.

ಇನ್ನು ಧರ್ಮಕ್ಷೇತ್ರವಾದ ಕುರುಕ್ಷೇತ್ರಕ್ಕೆ 'ಬೈ ಬೈ' ಹೇಳುವ ಸಮಯ. ಊರಿನ ಹೊರವಲಯ ತಲುಪುತ್ತಿದ್ದಾಗ ಅಲ್ಲೊಂದು ಮಾರ್ಕಂಡೇಯ ಮಹರ್ಷಿಗಳ ದೇವಾಲಯವಿದೆ. ಅದನ್ನು ತೋರಿಸುವ ಉತ್ಸಾಹ ನಮ್ಮ ಡ್ರೈವರ್‌ಗೆ. ಅಲ್ಲಿ ಸ್ವಲ್ಪ ಹೆಚ್ಚಿನ ಜನ ಜಂಗುಳಿ ಹಾಗಿದ್ದರೂ ಹೋದೆವು. ಅತ್ಯಾಧುನಿಕ ಪ್ರಾಂಗಣ, ವಿಶಾಲವಾಗಿದ್ದು ಚೆಂದವಾದ ಉದ್ಯಾನವನ, ಲಾನ್, ಫೌಂಟನ್, ಭಜನ ಮಂದಿರ, ವಸತಿ ಸೌಕರ್ಯ ಎಲ್ಲಾ ಬಹಳ ಚೆನ್ನಾಗಿದೆ. ಇಲ್ಲಿ ಏನೋ ಸಂಭ್ರಮ. ದೊಡ್ಡ ಟೆಂಟುಗಳೂ, ಬೆಂಡು, ಬತ್ತಾಸ್, ಐಸ್‌ಕ್ಯಾಂಡಿ, ಚುರ್‌ಮುರಿ ಮಾರುವ ಟೆಂಪರರಿ ಸ್ಟಾಲ್‌ಗಳು. ಓಹೋ ಏನೋ ಒಂದು ಜಾತ್ರೆ ಇರಬೇಕೆಂದುಕೊಂಡೆ. ದೇವರ ದರ್ಶನ – ಲಿಂಗವನ್ನು ಆಲಂಗಿಸಿದ ಮಾರ್ಕಂಡೇಯರ ಎರಡೂ ಪಕ್ಕಗಳಲ್ಲಿ ಯಮ ಹಾಗೂ ಈಶ್ವರ – ಪಾರ್ವತಿ – ಗಣೇಶ – ನೆಮ್ಮದಿಯಿಂದಲೇ ಆಯಿತು. ನಮ್ಮ ಹಿಂದೆ ಸಾಲಾಗಿ ನಿಂತಿದ್ದ ನವದಂಪತಿಗಳ ಜೋಡಿ ಶಿಸ್ತಾಗಿ ಕಾಯುತ್ತಿದ್ದರು – ದೇವರ ಹಾಗೂ ಮುನಿವರ್ಯನ ಆಶೀರ್ವಾದಕ್ಕಾಗಿ!

ಆಗ ತಿಳಿಯಿತು ಇದು ಜಾತ್ರೆಯಲ್ಲ, ಸಾಮೂಹಿಕ ವಿವಾಹ! ಅಲ್ಲಿನ ವ್ಯವಸ್ಥೆ ಯಾರಾದರೂ ಹೇಳಿದರೆ ನಾನೇ ನಂಬುತ್ತಿರಲಿಲ್ಲ. ನೋಡಿದ ಮೇಲೆ ನಂಬಲೇ ಬೇಕಲ್ಲವೇ?

ಹತ್ತಿರ ಪತ್ತಿರ ಇರೋ ಸಣ್ಣ ಹಳ್ಳಿಗಳಲ್ಲಿ ಕಡುಬಡವರ ಮನೆಯಲ್ಲಿ ನಡೆಯಬೇಕಾದ ವಿವಾಹಗಳನ್ನೆಲ್ಲಾ ಒಟ್ಟುಗೂಡಿಸಿ ಸಿರಿವಂತರಿಂದ ಹಿಡಿದು ಎಲ್ಲರೂ ಭಾಗವಹಿಸಿದ ಸನ್ನಿವೇಶ! ಒಟ್ಟಿನಲ್ಲಿ ಇಪ್ಪತ್ತು ವಧೂ–ವರರನ್ನು ನೋಡಿದೆ. ಅಲ್ಲಿನ ವ್ಯವಸ್ಥೆ ಓದಿ: ಒಬ್ಬ ಧಣಿ 10 ಸ್ಟೀಲಿನ ಅಲ್ಮಿರಾಗಳನ್ನು ತಂದು ಹಾಕಿದ್ದ. ಇಬ್ಬರು ಗೃಹಸ್ಥರು ತಲಾ ಐದು. ಐದು ಅಲ್ಮಿರಾಗಳನ್ನು ಕೊಟ್ಟಿದ್ದರು. ಒಬ್ಬ ಸೇಟ್ 20 ನವಾರ್ ಮಂಚಗಳನ್ನು ಇಳಿಸಿದ. ಅವನ ತಮ್ಮ 30 ರಸಾಯಿ – ದಿಂಬುಗಳನ್ನೂ ಬೆಡ್‌ಶೀಟ್‌ಗಳನ್ನೂ ಕೊಟ್ಟ. ಇವರ ಹಿಂದೆ ರೈತರ ಸಾಲು – ಐದು ಕೆ.ಜಿ. ಗೋಧಿ ಜೋಳಗಳನ್ನು ಕೊಡುವವರು. ಬತ್ತಿ ಸ್ಟೌವ್‌ಗಳನ್ನೂ, 5–10 ಸ್ಟೀಲ್ ಡಬ್ಬಿಗಳನ್ನು ಕೊಡುವವರೂ, ಅಲ್ಯೂಮಿನಿಯಂ ಪಾತ್ರೆ – ತಟ್ಟೆಗಳನ್ನು ಕೊಡುವವರೂ ಆ ರೈತರ ಸಾಲು! ಇಷ್ಟೇನೂ ಕೈಲಾಗದವರು ಕೈಲಾದಷ್ಟು ಹಣವನ್ನು ಹುಂಡಿಯೊಂದರಲ್ಲಿ ಹಾಕುತ್ತಿದ್ದರು. ಗೃಹಿಣಿಯರೆಲ್ಲರೂ ಸಾಮಾನುಗಳನ್ನು ಒಂದೊಂದು ಸಂಸಾರಕ್ಕೆಂಬಂತೆ ಗುಂಪಾಗಿಸುತ್ತಿದ್ದರು. ನಮ್ಮ ರೈಲಿಗೆ ಇನ್ನೂ ಬಹಳ ಸಮಯವಿತ್ತು. ಆದ್ದರಿಂದ ಕಡೆಯವರೆಗೂ ನೋಡುತ್ತಿದ್ದ ನಮಗೆ ಇನ್ನೂ ಆಶ್ಚರ್ಯ ಕಾದಿತ್ತು. ಹುಂಡಿ ಬೀಗ ತೆಗೆದು ಇದ್ದ ಹಣವನ್ನು 20 ದಂಪತಿಗಳಿಗೆ ಹಂಚಿದರು!

ಸಾಮಾನು ಸರಂಜಾಮುಗಳನ್ನು ಟ್ರಾಕ್ಟರ್ ಮೆಟಡಾರ್ ಓನರ್‌ಗಳು ದಂಪತಿಗಳ ಮನೆಗೆ ರವಾನಿಸಲು ತಯಾರಾಗಿ ನಿಂತಿದ್ದರು. ಆದರೆ ದಂಪತಿಗಳನ್ನು? ಆ ಹಳ್ಳಿಗಳಿಂದ ಶಹರಿಗೆ ಹೋಗಿ ನೆಲೆಸಿ ಸಿರಿವಂತರಾದ ಜನರ ಟೊಯೋಟಾ, ಹೊಂಡಾ, ಫೋರ್ಡ್, ಸ್ಕೋಡಾ ಕಾರುಗಳು ಸಿದ್ಧವಾಗಿದ್ದವು. ಅದೂ ಗುಲಾಬಿಗಳಿಂದ ಅಲಂಕೃತವಾಗಿ! ನಾವೆಲ್ಲಾ ಮೂಕ ಪ್ರೇಕ್ಷಕರಂತಿದ್ದಾಗ ನಮ್ಮ ಡ್ರೈವರ್ ಓಡಿ ಹೋಗಿ 500 ರೂಪಾಯಿ ನೋಟನ್ನು ಹಾಕಿದ್ದುದೂ ಕಂಡಿತು! ಇಷ್ಟೆಲ್ಲಾ ನಡೆಯುತ್ತಿದ್ದುದು ಬಹಳ ಶಿಸ್ತಿನಿಂದ. ಎಲ್ಲೂ ಎಂತಹಾ ಕನ್‌ಫ್ಯೂಷನ್–ಟೆನ್‌ಶನ್ ಏನೂ ಇಲ್ಲ! ಗಲಾಟೆ ಎಂದರೆ ಬ್ಯಾಂಡು ಹಾಡುಗಳು ಜನರ ಉತ್ಸಾಹ. ಎಲ್ಲರ ಮುಖದಲ್ಲೂ ತಾವು ಸಹಕಾರ ನೀಡಿದ ಹಾಗೂ ಭಾಗವಹಿಸಿದ ಧಾರ್ಮಿಕ ಕಾರ್ಯಕ್ರಮ ಚೆನ್ನಾಗಿ ನಡೆದ ಸಂತೋಷ ಹೊಮ್ಮುತ್ತಿತ್ತು. ಇದರ ನಿರ್ವಹಣೆ, ಪ್ರಚಾರ, ಹಾಗೂ ನಿರ್ವಂಚನೆಯಿಂದ ನಡೆಸುವ ಮಹಾನುಭಾವರಿಗೆ ಮನಸ್ಸಿನಲ್ಲೇ ವಂದಿಸಿ ಹೊರೆಟೆವು ಧರ್ಮಕ್ಷೇತ್ರದಿಂದ!



## ಅಪರಂಜಿಯ
## 30ರ ಸಂಭ್ರಮಕ್ಕೆ
## ಶುಭಾಶಯಗಳು



**ಶ್ರೀನಿವಾಸ್**

## ಅಪರಂಜಿಯ
## 30ರ ಸಂಭ್ರಮಕ್ಕೆ
## ಶುಭಾಶಯಗಳು



**ಅಭಿಮಾನಿ**

# ನಾಮದ ಬಲವೊಂದಿದ್ದರೆ ಸಾಕೋ..

● ಭುವನೇಶ್ವರಿ ಹೆಗಡೆ

ದಿನದಂತೆ ಕ್ಲಾಸಿಗೆ ಹೋಗಿ ಅಚ್ಯುತ, ಅನಂತ, ಅತಂತ್ರ.. ಎಂದು ಎಟೆಂಡೆನ್ಸ್ ಜಪ ಸುರು ಮಾಡಿ 'ಎಸ್ ಮಿಸ್' 'ನೋ ಮಿಸ್'ಗಳಿಗನುಸಾರವಾಗಿ ಗುರುತು ಹಾಕಿಕೊಳ್ಳುತ್ತಾ ಮುಂದಿನ ನಂಬರಿನ 'ಲಕ್ಷ್ಮಿ' ಎಂಬ ಹೆಸರು ಕೂಗಿದೆ. ಉತ್ತರ ಬರಲಿಲ್ಲ. ಲಕ್ಷ್ಮಿ ಬರಲಿಲ್ಲವೇ ಎಂದು ತಲೆ ಎತ್ತಿ ನೋಡಿದೆ. ಮೂರನೇ ಬೆಂಚಲ್ಲಿ ಕೂತೇ ಇದ್ದಾಳೆ.

''ಏನು ಲಕ್ಷ್ಮಿ ಬೆಳಬೆಳಿಗ್ಗೆ ಕ್ಲಾಸ್‌ಗನಸು ಪ್ರಾರಂಭವಾಗಿದೆಯೋ'' ಎಂದೆ. ಪ್ರತಿಕ್ರಿಯೆಯಿಲ್ಲ. ಪಕ್ಕದಲ್ಲಿ ಕುಳಿತ ಹುಡುಗಿ ಸರಸ್ವತಿ ಬಾಯ್ಬಿಟ್ಟಳು.

''ನಿನ್ನೆಯಿಂದ ಲಕ್ಷ್ಮಿ ಹೆಸರು ಬದಲಾಯಿಸಿಕೊಂಡಿದ್ದಾಳೆ ಮಿಸ್. ಈಗ ಅವಳು ಲಕ್ಷ್ಮಿ ಎಂದರೆ ಓ ಅನ್ನುವಂತೆ ಇಲ್ಲ.''

> **ಹೆಸರಲ್ಲೇನಿದೆ? ಎಂದು ಗೊಣಗದಿರಿ. ಸ್ಟಾರ್ ಹೋಟೆಲಿನಲ್ಲಿ ವಾರ ಕಾಲ ವಾಸ್ತವ್ಯ ಹೂಡುವ ನಾಮ ಪಂಡಿತರೊಬ್ಬರು ಎಲ್ಲರ ಹೆಸರು ಬದಲಾಯಿಸಿಕೊಟ್ಟು ಅದೃಷ್ಟ ಖುಲಾಯಿಸಿಕೊಂಡು ನಿಮ್ಮ ಕಷ್ಟ ಇನ್ನು ಕಳೆಯಿತು ಎನ್ನುತ್ತಿದ್ದಾರೆ.**

''ಹೊಸ ಹೆಸರು ಏನಂತೆ?''

''ಐಶ್ವರ್ಯ ಸಿದ್ಧಿ ಪೂಪ್ರಸಾದ ಲಕ್ಷ್ಮಿ'' ಪೂರ್ತಿ ಎರಡು ನಿಮಿಷಗೂಡಿ ಹೇಳಿದಳು. ಲಕ್ಷ್ಮಿಯ ಬುಕ್ಸ್ ನೋಟ್ಸ್ ಎಲ್ಲಾ ಕಡೆ ಬದಲಾದ ಹೆಸರು ಕೆತ್ತಲಾಗಿತ್ತು. ಲಕ್ಷಣವಾಗಿದ್ದ ಲಕ್ಷ್ಮಿಗೆ ಇಷ್ಟೆಲ್ಲ ಕಾಲು ಬಾಲ ಹಚ್ಚಿ ನಾಮಾಂತರಿಸಿದ್ದೇಕೆಂದು ಕೇಳಲಾಗಿ ಹೆಸರು ಬದಲಾವಣೆಯೆಂಬ ಹೊಸ ವ್ಯವಹಾರವೊಂದರ ಸುಳಿವು ಸಿಕ್ಕಿತು.

ನಗರದ ಸ್ಟಾರ್ ಹೋಟೆಲ್ಲಿನಲ್ಲಿ ವಾರ ಕಾಲ ವಾಸ್ತವ್ಯ ಹೂಡಿದ್ದ ನಾಮ ಪಂಡಿತರೊಬ್ಬರು ಇಡೀ ನಗರದವರ ಹೆಸರು ಬದಲಾಯಿಸಿಕೊಟ್ಟು ಅದೃಷ್ಟ ಖುಲಾಯಿಸಿಕೊಂಡು ನಿಮ್ಮ ಕಷ್ಟ ಇನ್ನು ಕಳೆಯಿತು ಎನ್ನುತ್ತಿದ್ದಾರೆ. ಪೇಪರು, ಟಿ.ವಿ.ಗಳಲ್ಲಿ ನಿಮ್ಮ ತೊಂದರೆಗಳಿಗೆ ಮೂಲ ನಿಮ್ಮ ದೋಷಪೂರಿತ ಹೆಸರೇ. ಬನ್ನಿ ನಮ್ಮಲ್ಲಿಗೆ, ನಿಮಗೆ ಅದೃಷ್ಟ ತರುವ ಹೆಸರು ನೀಡುತ್ತೇವೆ. ಎಂದೆಲ್ಲ ಪ್ರಚಾರ ನಡೆಸಿದ್ದಾರಂತೆ. ಆ ನಾಮತಜ್ಞರ ಸಲಹೆಯ ಪ್ರಕಾರವೇ ಲಕ್ಷ್ಮಿ ತನ್ನ ಹೆಸರು ಬದಲಾಯಿಸಿಕೊಂಡಿದ್ದಳು. ಇದರಿಂದಾಗುವ ಲಾಭವೇನು ಎಂಬ ಪ್ರಶ್ನೆಗೆ ಬಂದ ಉತ್ತರ ನನ್ನ ಬಾಯಿ ಮುಚ್ಚಿಸಿತು.

''ನಾನು ಪ್ರತಿಸಲವೂ ನೂರು ಮಾರ್ಕು ಬರಬೇಕೆಂದು ಪ್ರಯತ್ನಪಟ್ಟಿರುತ್ತೇನೆ. ಆದರೆ ಸಿಗುವುದು ಮೂವತ್ತೈದು ಮಾತ್ರ. ಸಖತ್ ಬೇಜಾರಾಗ್ತಿತ್ತು. ಇದಕ್ಕೆಲ್ಲ ಕಾರಣ ನನ್ನ ಹೆಸರಿನ ದೋಷ ಎಂದು ತಿಳಿಸಿ ಈ ನಾಮ ಪಂಡಿತರು ಹೊಸ ಹೆಸರು ಕೊಟ್ಟಿದ್ದಾರೆ. ಇನ್ನು ಮುಂದೆ ಮೂವತ್ತೈದು ಮಾರ್ಕಿಗಾಗುವಷ್ಟು ಓದಿದರೂ ನೂರು ಮಾರ್ಕು ಖಂಡಿತ ಎಂಬ ಭರವಸೆಯಿತ್ತಿದ್ದಾರೆ'' ಎನ್ನುತ್ತಾ ನನ್ನ ಕಡೆ ಚಾಲೆಂಜಿಂಗ್ ನೋಟ ಬೀರಿದಳು.

ನನಗೆ ಹೊಸ ಭಯ ಶುರು ಆಯ್ತು. ಕ್ಲಾಸಿನಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಅನಂತ, ಪ್ರಕಾಶ ಎಂಬ ಹೆಸರುಗಳನ್ನು 'ದಿಗ್ ದಿಗಾನಂತ – ಕೃಪಾಕರುಣಾಕರ' ಎಂದೋ 'ಕೋಟಿ ಬಾನು ತೇಜಪುಂಜಃ ಪ್ರಕಾಶ' ಎಂದೋ ಬದಲಾಯಿಸಿಕೊಂಡು ಕೂತರೆ ಅರ್ಧ ಗಂಟೆ ಪೂರ್ತಿ ಎಟೆಂಡೆನ್ಸ್ ಕೂಗುವುದೇ ಕೆಲಸವಾದೀತು. ಅಷ್ಟೇ ಅಲ್ಲ, ಎಲ್ಲಾ ವಿದ್ಯಾರ್ಥಿಗಳು ''ನಾವು ನೂರಕ್ಕಿಂತ ಹೆಚ್ಚು ಅಂಕ ಬರುವಂತೆ ಹೆಸರು ಬದಲಾಯಿಸಿಕೊಂಡಿದ್ದೇವೆ. ನೀವಿಷ್ಟು ಕಡಿಮೆ ಮಾರ್ಕು ಕೊಟ್ಟಿದ್ದೀರಿ'' ಎಂದು ಜಗಳಕ್ಕಿಳಿದರೆ.. ಎಂಬ ಚಿಂತೆಯೂ ಹತ್ತಿಕೊಂಡಿತು.

ಮನೆಗೆ ಬಂದಾಗ ಮತ್ತೊಂದು ಉತ್ಪಾತ ಕಾದಿತ್ತು. ಮಗಳ ರಿಪೋರ್ಟ್ ಕಾರ್ಡ್ ಬಂದಿತ್ತು. ನನಗೆ ತೋರಿಸದೇ ಅಪ್ಪನಿಗೆ ಪೂಸಿ ಹೊಡೆದು ಸಹಿ ಹಾಕಿಸಿಕೊಂಡಾಗಿತ್ತು. ಕೊಡಿಲ್ಲಿ ರಿಪೋರ್ಟ್ ಕಾರ್ಡ್ ಎಂದೊಡನೇ ಮಗಳು ಎಗರಿ ಬಿದ್ದಳು.

''ನನಗೆ ಆಭಾ ಅಂತ ಹೆಸರಿಡಲು ಹೇಳಿದ್ದು ಯಾರು?'' ಎಂದು ಹೂಂಕರಿಸಿದಳು. ನನಗೂ ತಲೆ ಬಿಸಿಯಾಗಿತ್ತು. ಪ್ರತಿ ಜಗಳದ ಧಾಟಿಯಲ್ಲಿ ''ನಿನ್ನಪ್ಪ'' ಎಂದೆ. ಮಗಳು ಸಮರಸನ್ನದ್ಧೆಯಾಗಿಯೇ ಬಂದಿದ್ದಳು. ''ಕರಿ ಅಪ್ಪನನ್ನು.. ನಿಮ್ಮಿಬ್ಬರ ಎದುರೇ ನನ್ನ ಹೆಸರು ಬದಲಾಯಿಸಬೇಕು. ನನ್ನೀ ಅನಿಷ್ಟ ಹೆಸರು ಹೋಗುವ ತನಕ ನಿಮ್ಮ ಕಾಟ, ಹೋಮ್ ವರ್ಕ್ ಕಾಟ ತಪ್ಪಿದ್ದಲ್ಲ'' ಎಂದಳು.

ನಾಮ ಪಂಡಿತರು ನನಗೆ ಗೊತ್ತಿಲ್ಲದೆ, ನಮ್ಮ ಮನೆಯೊಳಗೇ ಪ್ರವೇಶ ಮಾಡಿದ್ದು ಸ್ಪಷ್ಟವಾಗಿ ತೋರುತ್ತಿತ್ತು.

''ಯಾರು ಹೇಳಿದ್ದು ನಿನಗೆ ಅನಿಷ್ಟ ಹೆಸರೆಂದು? ಆಭಾ ಎಷ್ಟೊಳ್ಳೆ ಹೆಸರು ನಿನ್ನದು.. ಆಹಾ! ಎಂದು ಹೇಳಿದಂತಾಗುತ್ತದೆ.''

ನನ್ನ ಸಮಜಾಯಿಶಿ ಮಗಳಿಗೆ ಬೇಕಿರಲಿಲ್ಲ.

''ನನ್ನ ಫ್ರೆಂಡಿನ ಅಮ್ಮ ಅದ್ಯಾರೋ ನ್ಯೂಮರಾಲಜಿಸ್ಟ್ ಹತ್ತಿರ ಹೋಗಿದ್ರಂತೆ. ನನ್ನ ಹೆಸರು ಬರೆದು ಕಳಿಸಿದ್ದೆ. ಅವಳಮ್ಮ ನನ್ನ ಹಾಗೂ ಪಿಂಕಿಯ ಹೆಸರು ಬದಲಾಯಿಸಿಕೊಂಡು ಬಂದಿದ್ದಾರೆ'' ಎಂದಳು. ಹೊಸ ಅಂಗಿ ತಂದಿದ್ದಾರೆ ಎಂದು ಹೇಳಿದಷ್ಟೇ ಸಲೀಸಾಗಿ ಹೊಸ ಹೆಸರು ತಂದಿದ್ದಾರೆ ಎಂದು ಹೇಳುತ್ತಿದ್ದಾಳೆ. ಪಿಂಕಿ ಇನ್ನು ಮುಂದೆ 'ಶ್ರೀಪಿಂಕಿ ಸ್ಥಿತಿ'ಯಂತೆ. ಇವಳ ಹೆಸರು 'ಆಭಾಗ್ಯವಿದಾತೆ' ಎಂಬುದಾಗಿ ಬದಲಾಯಿಸಲಾಗಿದೆಯಂತೆ, ಎನ್ನುತ್ತಾ ನನ್ನನ್ನು ಹಲ್ಲಲ್ಲಿ, ಕಣ್ಣಲ್ಲಿ ತಿವಿದಳು ಮಗಳು.

ಈ ನಾಮಾಂತರಣದ ತಲೆನೋವನ್ನು ಇವಳಪ್ಪನ ತಲೆಗೇ ಕಟ್ಟುವುದು ಸೂಕ್ತವೆನಿಸಿ ''ನಿನ್ನಪ್ಪನ್ನ ಕರಿ'' ಎಂದು ಅಟ್ಟಿದೆ. ಎದ್ದು ಬರುವಾಗ ಆಸಾಮಿ ಬಾಯಲ್ಲಿ ಏನೋ ಮಣ ಮಣ ನಡೆಸಿದಂತಿತ್ತು. ದ್ರ,ಮ್ರ,ಚ್ರ,ಕ್ರ ಎಂದೇನೋ ಅಧಃ ಚಂದ್ರ ಪತಣ ಮಾಡುತ್ತಾ ''ಹಾ! ರಾಹು ಮಧ್ಯ ಬಂತು. ಶೇರು ಪೇಟೆ ಢಮಾರೆನ್ನದೆ ಇನ್ನೇನು'' ಎಂದು ನನ್ನನ್ನೇ ಕೇಳಿದರು.

ನನ್ನ ಪತಿರಾಯನೂ ನಾಮ ಪಂಡಿತರನ್ನು ಭೇಟಿಯಾಗಿ ಬಂದದ್ದು ಸ್ಪಷ್ಟವಾಯ್ತು. ಮನೆ ಮುಂದೆ 'ಸ್ವಯಂಭೂನಿಲಯ' ಎಂಬ ಹೊಸ ಬೋರ್ಡ್ ಬೇರೆ. ಇನ್ನು ಆ ನಾಮ ತಜ್ಞರನ್ನು ಕಾಣುವುದೊಂದೇ ನನಗುಳಿದ ದಾರಿ. ತಲೆ ಕೆಟ್ಟು ಹೋಗಿತ್ತು. ಸ್ಟಾರ್ ಹೋಟೆಲ್ಲಿಗೆ ಹೋದಾಗ ನನ್ನಂತೆ 'ನಿರ್ನಾಮ'ವಾದ ಕಳೆ ಹೊತ್ತ ಅನೇಕ ನಾಮ ಪೀಡಿತರು ಅಲ್ಲಿದ್ದರು. ಒಬ್ಬ ಸಾಹಿತಿಯೊಂದಿಗೆ ಮಾತುಕತೆಯಾಗುತ್ತಿತ್ತು.

''ತಾವು ಸಾಹಿತಿಗಳೋ? ಏನು ತಮ್ಮ ಸಮಸ್ಯೆ?''

''ಕಷ್ಟ ಕಡು ಕಷ್ಟ. ಹೆಸರಿಲ್ಲ ಕೀರ್ತಿಯಿಲ್ಲ ಪ್ರಶಸ್ತಿಯ ಮೂರನೆಯ ಪಟ್ಟಿಯಲ್ಲೂ ನನ್ನ ಹೆಸರಿಲ್ಲ. ಬದುಕು ಬರಡು ಸಾಹಿತ್ಯದಂತಾಗಿದೆ ಕಾರಣ ಹೇಳಿ ಸ್ವಾಮಿ.''

''ನಿಮ್ಮ ಹೆಸರಿನ ದೋಷ ಕಾಡುತ್ತಿದೆ. ಕೇತು ಕೆರಳಿದ್ದಾನೆ, ರಾಹು ಹೂಂಕರಿಸುತ್ತಿದ್ದಾನೆ. ನೀವು ಇಷ್ಟು ವರ್ಷ ಬದುಕಿದ್ದೇ ಹೆಚ್ಚು''

''ಅಯ್ಯೋ ಹಾಗೆನ್ನಬೇಡಿ ಸ್ವಾಮಿ.. ಜೀವನದಲ್ಲಿ ಒಂದಾದರೂ ಪತ್ತೇದಾರಿ ಕೃತಿ ಬರೆಯಬೇಕೆಂಬ ಆಸೆ ನೆರವೇರದೆ ಸಾಯಲಾರೆ ಪರಿಹಾರ ಹೇಳಿ ಸ್ವಾಮಿ.''

''ಉಂಟು.. ಕಮಲಾಕ್ಷ ಎಂಬ ನಿಮ್ಮ ಹೆಸರನ್ನು 'ಬಹು ಭ್ರಾಂತಿ ಪೀಡಿತ ಕವಿ ಕುಲಲಲಾಮ' (ಕೊರಮ) ಎಂದು ಬದಲಾಯಿಸಬೇಕು. ಆದರೆ ಅದಕ್ಕೆ ತಗಲುವ ಫೀಸು ಕೊಡುವ ತಾಕತ್ತಿದೆಯೇ ನಿಮಗೆ?''

''ಕೊಡುತ್ತೇನೆ ಸ್ವಾಮಿ, ಪತ್ರಿಕೆಯೊಂದು ಹತ್ತು ರೂಪಾಯಿ ಸಂಭಾವನೆ ನೀಡಿದೆ. ಅದನ್ನು ಇಲ್ಲಿಡುತ್ತೇನೆ. ಹೊಸ ಹೆಸರು ನೀಡಿ'' ಎನ್ನುತ್ತಾ ಚೀಟಿಯಲ್ಲಿ ಬರೆದ ತನ್ನ ನಾಮಧೇಯವನ್ನು ಕಣ್ಣಿಗೊತ್ತಿಕೊಳ್ಳುತ್ತಾ ನಿರ್ಗಮಿಸಿದ ಆ ಕೊರಮ.

ಮುಂದೆ ಜರುಗಿದ ನಾನು ದೀರ್ಘದಂಡ ನಮಸ್ಕಾರ ಹಾಕಿದೆ. ನಾಮತಜ್ಞರು ''ಏನು ಮಗಳೇ'' ಎಂದು ಕೇಳಿದಾಗ ದುಃಖ ಒತ್ತರಿಸಿ ಬಂತು. ಗದ್ಗದ ವಿವರಣೆ ನೀಡಿದೆ.

''ನಾನು ಮಾಡದ ತಪ್ಪಿಗೆ ನನಗೆ ಶಿಕ್ಷೆ ಆಗುತ್ತಿದೆ. ಮನೆಯಲ್ಲಿ ಹಿರಿಕಿರಿಯರ್ಯಾರೂ

> ಅವಶ್ಯಕತೆಯಿಲ್ಲದೆ
> ನಿಮ್ಮನ್ನು ನೀವು ಯಾರಿಗೂ
> ತೆರೆದುಕೊಳ್ಳಬೇಡಿ.
> ಏಕೆಂದರೆ
> ನಿಮ್ಮನ್ನ ಇಷ್ಟಪಡುವವರಿಗೆ
> ಅದರ ಅವಶ್ಯಕತೆಯಿಲ್ಲ.
> ಇಷ್ಟಪಡದವರಿಗೆ ನೀವು ಏನು
> ಹೇಳಿದರೂ ಅವರು
> ನಂಬುವುದಿಲ್ಲ

ಕ್ಯಾರೇ ಎನ್ನುತ್ತಿಲ್ಲ. ಸಂಬಳದ ಹಣ ಕೈಗೆ ಬರುವುದೊಂದೇ ಕಾಣುತ್ತಿದೆ. ಆಮೇಲೇನಾಗುತ್ತದೆ ಎಂದು ತಿಳಿಯುತ್ತಿಲ್ಲ. ಕೈಗಡ ತೆಗೆದುಕೊಂಡವರೆಲ್ಲಾ ಪರಿಚಯ ಇಲ್ಲದವರಂತೆ ಓಡಾಡುತ್ತಿದ್ದಾರೆ. ಕ್ಲಾಸಿನಲ್ಲಿ ಎಲ್ಲರ ಎಟೆಂಡೆನ್ಸ್ ಕರೆದು ಮುಗಿಸುವಾಗ ನೀರು ಕುಡಿಯಬೇಕೆನ್ನಿಸುತ್ತದೆ. ಎಲ್ಲಾ ವಿದ್ಯಾರ್ಥಿಗಳು ನೂರಕ್ಕೆ ನೂರು ಮಾರ್ಕು ಕೊಡಿ ಎಂದು ಬೆದರಿಸುತ್ತಿದ್ದಾರೆ. ನಗು ಮುಖಗಳೇ ಕಾಣದೆ ಕಂಗೆಟ್ಟಿದ್ದೇನೆ..'' ಅಳುವಿನಿಂದಾಗಿ ಮುಂದೆ ಹೇಳಬೇಕಾದುದನ್ನೆಲ್ಲಾ ಹೇಳಲಾಗಲಿಲ್ಲ.

''ಹೆಸರೇನು'' ಎಂದು ಬಂತು ಪ್ರಶ್ನೆ. ಹೇಳಿದೆ. ಕಣ್ಮುಚ್ಚಿ ಧ್ಯಾನಿಸಿದ ನಾಮತಜ್ಞರು 'ಶ್ವ' ಶ್ವೇ ಶ್ವಾನಧ್ಯಾನ ಅಸಡ್ಡಾಳ ಒತ್ತಕ್ಷರ. 'ಶ್ವರಿ'ಯಲ್ಲೇ ಅರಿ ನೆಲೆಸಿದ್ದಾನೆ. ಭೂ ಗಾತ್ರದ ಕಷ್ಟ (ಭು), ನೆ.. ನೇತಿ ಎಂದು ನಿಡುಸುಯ್ದರು.

ಜೀವನದಲ್ಲಿ ಕಷ್ಟಕ್ಕೆ ಅಂಜದವರುಂಟೇ? ''ಏನು ಪರಿಹಾರ'' ಸಧ್ಯಕ್ಕೆ ನೂರು ರೂಪಾಯಿ (ನಾಮಿನಲ್ ಚಾರ್ಜ್). ಹೊಸ ನಾಮಕರಣವಾಗಬೇಕು.

ರೆಕಾರ್ಡು ತಿದ್ದುವುದು ಕಷ್ಟ. ಪದೇ ಪದೇ ಹೆಸರು ಬದಲಾಯಿಸಲು ಕೋರ್ಟಿಗೆ ಹೋಗುವುದು ಕಷ್ಟ. ನಮ್ಮೂರ ಕೋರ್ಟ್ ಗುಡ್ಡದ ಮೇಲಿದೆ. ಹತ್ತುವುದೇ ಕಷ್ಟ. ರೂಢಿನಾಮ ಮಾತ್ರ ಬದಲಾಯಿಸಿದರೆ ಆದೀತೇ ಎಂದು ಪ್ರಶ್ನಿಸಿದೆ. ನಮ್ಮೂರಲ್ಲಿ ಒಬ್ಬ 'ತಿಪ್ಪೇಶಿ' ಎಂಬ ಹೆಸರನ್ನು ಅಧಿಕೃತವಾಗಿ 'ತಪಸ್ಕುಮಾರ್' ಎಂದು ಬದಲಾಯಿಸಿಕೊಳ್ಳುವಾಗ ಆದ ಗೋಜಲು ನೆನಪಿತ್ತು.

''ಪರವಾಗಿಲ್ಲ. ಕರೆಯುವ ಹೆಸರು ರೆಕಾರ್ಡ್ ತಿದ್ದದೇ ಬದಲಾಯಿಸಿಕೊಂಡರೂ ಅರ್ಧ ಕಷ್ಟ ಪರಿಹಾರವಾದಂತೇ'' ಎಂದರು ನಾಮ ಪಂಡಿತರು. ನನಗೋ ಹೊಸ ಹೆಸರಿನ ಕುತೂಹಲ. ಇಷ್ಟೇ ಕಳೆದುಕೊಂಡವಳಿಗೆ ನೂರು ರೂಪಾಯಿ ಹೆಚ್ಚಾದೀತೇ..? ಪದತಲದಲ್ಲಿಟ್ಟೆ. ಹೊಸ ನಾಮ ಪ್ರದಾನ ಮಾಡಿದರು.

''ಭವಸಾಗರ ಸಂಬಾಧಿತ ಭೂತಳೋದರಿ'' ಹೌಹಾರಿದೆ. 'ಭೂತ' ಎಂದಿದ್ದನ್ನು ಕಂಡು ಭಯವಾಯ್ತು. ಇನ್ನು ಮೇಲೆ ಇದು ನನ್ನ ಹೆಸರೇ ಎಂದು ತತ್ತರಿಸಿದೆ. ಆದರೆ ಕಡು ಕಷ್ಟಗಳನು ಜಯಿಸಲು ಇದು ಸುಲಭ ಮಾರ್ಗವಲ್ಲವೇ? ಒಲ್ಲೆ ಎನ್ನಲಾದೀತೇ? ಆಯ್ತು ಪ್ರಸಾದವೆಂದೇನು'' ಎನ್ನುತ್ತಾ ಮನೆಗೆ ಬಂದೆ.

ನನಗೆ ಒಳಿತಾಗಲೆಂಬ ಹೃದಯವುಳ್ಳ ನನ್ನ ಸ್ನೇಹಿತರು, ಹಿತೈಷಿಗಳು ಇನ್ನು ಮೇಲೆ ನನ್ನ ಹೆಸರಿನಲ್ಲಿರುವ 'ಭ'ಕಾರಗಳನ್ನು ನೆನಪಿನಲ್ಲಿಟ್ಟು ಕೊಂಡು ಹೊಸ ಹೆಸರಿನಲ್ಲೇ ಸಂಭೋದಿಸಿ ನನ್ನನ್ನು ಭವಸಾಗರ ಪೀಡೆಗಳಿಂದ ಭಯಮುಕ್ತಗೊಳಿಸಬೇಕೆಂದು ಈ ಮೂಲಕ ಬೇಡಿಕೊಳ್ಳುತ್ತೇನೆ.

# ಬುದ್ಧಿವಂತರಿವರು ರಣತೇಜಿಗಳ ಸರದಾರರು

● ಹೆಚ್.ಆರ್. ಹನುಮಂತರಾವ್

ತೇಜೋವಂತರು, ಈ ಐಟೀ ಪುರ ನಿವಾಸಿಗಳು ವಾಹನಗಳ ಓಡಿಸುವಾಗ
ಮಹಾ ಚತುರರು, ಅಪ್ರತಿಮ ವೀರರುಗಳು ಅರ್ಜೆಂಟಲಿ ಬೈಕನು ಫುಟ್ಪಾತನೇರಿಸಿ
ನುಗ್ಗುವ ದ್ವಿಚಕ್ರ ಷೂಟಿಂಗ್ ಸ್ಟಾರುಗಳು ಚತುಶ್ಚಕ್ರ ಸರದಾರರು, ನೋಎಂಟ್ರಿ
ಬೋರ್ಡನೂ ನೂಕಿ ಮುನ್ನುಗ್ಗುವವರು (1)

ಧೀರೋದ್ದಾತ್ತರಿವರುಗಳು, ನಾನೇ ಸರಿ ಎಂದು ಮೀಸೆ ತಿರುವ ಜಾಣರುಗಳು
ತವಕದಲಿರುವ ಆಂಬುಲೆನ್ಸ್ ಹಿಂದಿದ್ದರೂ ಎಡೆ ಕೊಡದೆ ವಾಹನ ನಡೆಸುವವರು
ರಸ್ತೆ ಸಿಗ್ನಲುಗಳಿಗೆ ಕ್ಯಾರೆ ಎನ್ನದ, ಲೇನ್ ಪ್ರಜ್ಞೆ ತೋರಬಯಸದ ಜಾದುಗಾರರು
ನಿಶ್ಶಬ್ದ ಜೋನಿನಲೂ ಕರ್ಕಶ ಹಾರನ್‌ನು ಒತ್ತುತ್ತಲೇ ಚಲಿಸುವ ಕಲಿಭೀಮರುಗಳು (2)

ಚಾಣಾಕ್ಷ ವೀರರಿವರುಗಳು ಡೊಂಕುಡೊಂಕಾಗಿ ಓಡುವ ತೇಜಿಗಳ ಮಹಾನ್ ಜಾಕಿಗಳು
ಎಲ್ಲೆಂದರಲ್ಲಿ ನಿಲ್ಲಿಸಿ ಇತರರಿಗೆ ಮುಜಗರವಾಗುವುದನೂ ಅರಿಯಲಾಗದ ಅಮಾಯಕರು
ವಾಹನ ಓಡಿಸುವ ಈ ಸರದಾರರಿಗೆ ಯಾರೂ ಅಡ್ಡ ಬರಕೂಡದೆಂಬ ತತ್ವ ಪ್ರತಿಪಾದಕರು
ಮತ್ತೊಬ್ಬರಿಗೆ ಜಖಂ ಮಾಡಿದರೂ ನಿಲ್ಲಿಸುವ ಔಚಿತ್ಯ ಕಾಣದಂಥ ಸಮಯ ನಿಷ್ಟುರರು (3)

ಆಟೋರಿಕ್ಷ ಜಾದುಗಳು ಜನರಿಗಾಗಿ ರಸ್ತೆಯಲಿ, ಎಲ್ಲೆಂದರಲ್ಲಿ ತಿರುಗಿಸುವ ಹೃದಯವಂತರು
ಬೀದಿ ಬದಿಯಲಿ ನಿಮಗಾಗಿ ಕಾದು ನಿಂತು, ಅವರಿಷ್ಟದ ಮೇರೆಗೆ ಕರೆದು ನಿಮ್ಮನೊಯ್ಯುವವರು
ಮೀಟರನು ತಿರುಗಿಸಿ ಬಾಡಿಗೆಯನು ಹೆಚ್ಚಿಸಿ ಜನರ ಹಣವನು ಪ್ರೀತಿಯಿಂದ ಒಯ್ಯುವವರು
ಜಗಳಕೆ ನಿಂತ ಪ್ರಯಾಣಿಕರಿಗೆ ಕೋಪವೆಂಬ ಇಂದ್ರಿಯವನು ತಣಿಸಲು ತೊಡೆ ತಟ್ಟಿ ನಿಲ್ಲುವವರು (4)

ಲಾರಿ ಟ್ರಕ್ಕು ಟಾಟಸುಮೊ ಟೆಂಪೊ ಟ್ರಾವೆಲರು, ಐರಾವತದಂಥ ಕೆಂಪು ಗಜಗಾಮಿನಿಗಳು
ಪುಷ್ಪಕ ರಾಜಹಂಸ ವೊಲ್ವೊ ಟಿಪ್ಪರು, ಸಿಮೆಂಟು ಮಿಕ್ಸರುಗಳೆಂಬ ಭಾರಿ ಭೂತಗಳು
ನಮ್ಮ ನಿಮ್ಮನೆಲ್ಲ ಕಾಡಿಸಿದರೇನು, ಮಂದಿಗೆಲ್ಲ ಕೊಡುವ ಸೇವೆಯೇನು ಇಂದ್ರನಿಗೂ ಸಲ್ಲ
ಹಲವೇ ಮಂದಿಯನು ಪ್ರತಿದಿನವೂ ಕೊಂದರೇನು ನಗರಕೆ ಅವು ಭೂಷಣವಲ್ಲದೆ ಮತ್ತೇನು? (5)

ಕಾಡುಮೇಡಿನಲು, ಬಿಬಿಎಂಪಿಯ ಹಳ್ಳ ಕೊಳ್ಳಗಳ ರಸ್ತೆಯಲು ಓಡಿಸಲು ಹಿಂಜರಿಯದ
ನಮ್ಮೀ ಅಭಿಮನ್ಯುರುಗಳು ರಸ್ತೆ ತೆರಿಗೆಯ ಕಟ್ಟಿ ಬಿಬಿಎಂಪಿ ಜೊತೆಗೆ ಕೈಗೂಡಿಸಿ,
ಅತಿವೇಗದಲಿ ಚಲಿಸಿ ಅಪಘಾತಕೆ ಈಡಾಗಲು ಅಂಜದ ವೀರರು ಕಣ್ಣಿದ್ದೂ ಕುರುಡರು,
ಪ್ರಾಣಕ್ಕೆ ಬೆಲೆ ಕೊಡದವರು, ಯಾರಿಗೂ ಸಗ್ಗದವರೆಂಬ ವಿಪರೀತ ಬುದ್ಧಿಯ ಅತಿಮಾನುಷರು (6)

# ಬದುಕಲು ಕಲಿಸುವ ಬದುಕೇ ಒಂದು ವಿಶ್ವವಿದ್ಯಾಲಯ

• ಬೇಲೂರು ರಾಮಮೂರ್ತಿ

ಒಬ್ಬ ವಿಶ್ವವಿದ್ಯಾನಿಲಯದಲ್ಲಿ ಚೆನ್ನಾಗಿ ಓದಿ ವಿದ್ಯಾವಂತನಾದವನು ಒಂದು ಪ್ರಖ್ಯಾತ ಕಂಪನಿಯಲ್ಲಿ ವ್ಯವಸ್ಥಾಪಕರ ಹುದ್ದೆಗೆ ಸಂದರ್ಶನಕ್ಕೆ ಹೋದ. ಮೊದಲನೆಯ ಸಂದರ್ಶನದಲ್ಲಿ ಅವನು ಪಾಸಾದ. ನಂತರ ನಿರ್ದೇಶಕರ ಬಳಿ ಸಂದರ್ಶನಕ್ಕೆ ಕರೆ ಬಂತು. ನಿರ್ದೇಶಕರು ಆ ಹುಡುಗನ ಅರ್ಹತಾ ಪತ್ರಗಳನ್ನೂ, ಶೈಕ್ಷಣಿಕ ಪ್ರಗತಿಯನ್ನೂ ಕೂಲಂಕುಷವಾಗಿ ನೋಡಿ ಅಚ್ಚರಿಪಟ್ಟರು. ಏಕೆಂದರೆ ಆ ಹುಡುಗ ಮಾಧ್ಯಮಿಕ ಶಾಲೆಯಿಂದ ಹಿಡಿದು ಅತ್ಯುನ್ನತ ಪರೀಕ್ಷೆಯವರೆವಿಗೂ ಒಂದು ವರ್ಷವೂ ಬಿಡದಂತೆ ಪ್ರತಿ ವರ್ಷವೂ ಚೆನ್ನಾಗಿ ನಂಬರು ತೆಗೆದುಕೊಂಡು ಪಾಸಾಗಿದ್ದ.

ನಿರ್ದೇಶಕರು ಪರವಾಗಿಲ್ಲ ಚೆನ್ನಾಗಿ ಓದಿ ವಿದ್ಯಾವಂತನಾಗಿದ್ದೀಯ. ನಿಮ್ಮ ತಂದೆ ನಿನಗೆ ಸ್ಕೂಲಿನ ಕಾಲೇಜಿನ ಫೀಸ್ ಕೊಟ್ಟು ನಿನ್ನನ್ನು ಓದಿಸಿದ್ದು ಸಾರ್ಥಕವಾಗಿದೆ ಅಂದರು. ಅದಕ್ಕೆ ಆ ಹುಡುಗ ಇಲ್ಲ ಸಾರ್, ನನ್ನ ತಂದೆ ನಾನು ಚಿಕ್ಕ ವಯಸ್ಸಿನಲ್ಲಿರುವಾಗಲೇ ತೀರಿಕೊಂಡರು. ನನ್ನ ತಾಯಿಯೇ ಕಷ್ಟ ಪಟ್ಟು ಸಂಪಾದಿಸಿ ನನ್ನನ್ನು ಓದಿಸಿರುವುದು ಎಂದ. ನಿರ್ದೇಶಕರು ಅಚ್ಚರಿಯಿಂದ ಹೌದಾ, ನಿನ್ನ ತಾಯಿ ಯಾವ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಅಂತ ಕೇಳಿದರು. ಅದಕ್ಕೆ ಆ ಹುಡುಗ ನನ್ನ ತಾಯಿ ಲಾಂಡ್ರಿಯವನ ಬಳಿ ಬಟ್ಟೆ ಒಗೆಯುವ ಕೆಲಸ ಮಾಡುತ್ತಿದ್ದಳು ಸರ್. ನಿರ್ದೇಶಕರು ಅಚ್ಚರಿಯಿಂದ ಎಲ್ಲಿ ನಿನ್ನ ಕೈ ತೋರಿಸು ಎಂದರು. ಹುಡುಗ ಕೈ ಒರೆಸಿಕೊಂಡು ತೋರಿಸಿದ. ಆ ಹುಡುಗನ ಕೈ ಬಹಳ ಮೃದುವಾಗಿತ್ತು. ಕಷ್ಟಪಟ್ಟು ಕೆಲಸ ಮಾಡಿದ ಯಾವ ಗುರುತುಗಳೂ ಇರಲಿಲ್ಲ.

ನಿರ್ದೇರ್ಶಕರು ಹುಡುಗನನ್ನೇ ನೋಡುತ್ತಾ ನೀನು ನಿನ್ನ ತಾಯಿ ಬಟ್ಟೆ ಒಗೆಯುವುದಕ್ಕೆ ಯಾವಾಗಲಾದರೂ ಸಹಾಯ ಮಾಡಿದ್ದುಂಟಾ ಅಂತ ಕೇಳಿದರು. ಅದಕ್ಕೆ ಹುಡುಗ ಇಲ್ಲ ಸರ್, ನನ್ನ ತಾಯಿ ನನ್ನನ್ನು ಆ ಕೆಲಸಗಳನ್ನು ಮಾಡೋಕೆ ಬಿಡುತ್ತಲೇ ಇರಲಿಲ್ಲ. ಯಾವಾಗಲೂ ನೀನು ಚೆನ್ನಾಗಿ ಓದಬೇಕು, ಮುಂದೆ ಬರಬೇಕು, ದೊಡ್ಡ ಹುದ್ದೆ ಅಲಂಕರಿಸಬೇಕು, ಚೆನ್ನಾಗಿ ಸಂಪಾದನೆ ಮಾಡಬೇಕು ಅನ್ನುತ್ತಿದ್ದಳು. ಇದರ ಜೊತೆಗೆ ನನ್ನ ತಾಯಿ ನನಗಿಂತ ವೇಗವಾಗಿ ಮತ್ತು ಸ್ವಚ್ಛವಾಗಿ ಬಟ್ಟೆಗಳನ್ನು ಒಗೆಯುತ್ತಾಳೆ ಅಂದ.

ನಿರ್ದೇಶಕರ ಕಣ್ಣಲ್ಲಿ ನೀರು ಬಂತು. ಆದರೂ ತೋರಿಸಿಕೊಳ್ಳದೇ, ಇವತ್ತು ಸಂದರ್ಶನ ಇಲ್ಲಿಗೆ ಮುಗಿಯಿತು. ನೀನು ಇವತ್ತು ಮನೆಗೆ ಹೋಗು. ನಂತರ ನಿನ್ನ ತಾಯಿಯ ಕೈಯನ್ನು ಚೆನ್ನಾಗಿ ತೊಳೆದು ಶುಭ್ರಗೊಳಿಸು ನಂತರ ನಾಳೆ ಬೆಳಗ್ಗೆ ಬಂದು ನನ್ನನ್ನು ನೋಡು ಅಂದರು.

ಹುಡುಗನಿಗೆ ಇದೇಕೆಂದು ಅರ್ಥವಾಗದಿದ್ದರೂ ಅವನ ಒಳಮನಸ್ಸಿನಲ್ಲಿ ಬಹುಶಃ ನನಗೆ ಇಲ್ಲಿ ಕೆಲಸ ಸಿಗೋ ಸಂಭವ ಹೆಚ್ಚು ಅನಿಸಿತು. ಮನೆಗೆ ಹೋದೊಡನೇ ತಾಯಿಯ ಎದುರು ಕೂತು ಅಮ್ಮಾ ಎಲ್ಲಿ ನಿನ್ನ ಕೈ ಕೊಡು, ಇವತ್ತು ನಾನು ನಿನ್ನ ಕೈಗಳನ್ನು ಸ್ವಚ್ಛಗೊಳಿಸಬೇಕು ಅಂದ. ತಾಯಿಗೆ ಮಗನ ಕೋರಿಕೆ ವಿಚಿತ್ರ ಎನಿಸಿತು. ಕುತೂಹಲದಿಂದ ಮಗನನ್ನು ನೋಡಿದಳು. ನಂತರ ಎರಡೂ ಕೈಗಳನ್ನು ಮಗನ ಮುಂದೆ ಚಾಚಿದಳು.

ತಾಯಿಯ ಕೈಗಳನ್ನು ಸ್ವಚ್ಛಗೊಳಿಸುತ್ತಾ ಹೋದಂತೆ ಹುಡುಗನಿಗೆ ಕಣ್ಣಲ್ಲಿ ನೀರು ಬಂತು. ಏಕೆಂದರೆ ತಾಯಿಯ ಎರಡೂ ಅಂಗೈಗಳು ಸುಕ್ಕುಗಟ್ಟಿದ್ದವು. ಹೆಚ್ಚಿನ ಕೆಲಸವಾದ್ದರಿಂದ ಅಲ್ಲಲ್ಲಿ ಗಂಟುಗಳೂ ಮೂಡಿದ್ದವು. ಒಂದೊಂದು ಕಡೆ ಸಣ್ಣ ಪುಟ್ಟ ಗಾಯಗಳೂ ಆಗಿದ್ದವು. ಮಗ ಕೈಯನ್ನು ತೊಳೆಯುತ್ತಿದ್ದಾಗ ಅವಳ ಕೈ ಸಣ್ಣಗೆ ನಡುಗುತ್ತಿತ್ತು. ಅದನ್ನು ಹುಡುಗನೂ ಗಮನಿಸಿದ.

ಆ ಹುಡುಗನಿಗೆ ಅವತ್ತೇ ಅರ್ಥವಾಗಿದ್ದು ಏನೆಂದರೆ ತಾಯಿಯ ಈ ಕೈಗಳೇ ತನ್ನನ್ನು ಇಷ್ಟು ವರ್ಷ ಓದಿಸಿದ್ದು. ಪ್ರತೀದಿನವೂ ರಾಶಿ ರಾಶಿ ಬಟ್ಟೆಗಳನ್ನು ಒಗೆದ ಈ ಕೈಗಳಿಂದಲೇ ನಾನು ಶಾಲೆಯ ಫೀಸ್ ಕೊಡಲು ಸಾಧ್ಯವಾದದ್ದು. ಈ ಗಾಯಗಳು ನಾನು ಇಷ್ಟು ವರ್ಷ ಓದಿದ್ದಕ್ಕೆ, ವಿಶ್ವವಿದ್ಯಾನಿಲಯದ ಓದಿನಲ್ಲಿ ಮುಂದೆ ಬಂದದ್ದಕ್ಕೆ ಮತ್ತು ನನ್ನ ಭವಿಷ್ಯಕ್ಕೆ ತಾಯಿ ಕೊಟ್ಟ ಅತೀ ಹೆಚ್ಚಿನ ಬೆಲೆ ಎನಿಸಿತು. ಆ ದಿನ ತಾಯಿಯ ಕೈಗಳನ್ನು ಸ್ವಚ್ಛಗೊಳಿಸಿದ ಮೇಲೆ ಉಳಿದಿದ್ದ ಬಟ್ಟೆಗಳನ್ನು ಹುಡುಗನೇ ಒಗೆದು ಹಾಕಿದ. ಇಷ್ಟೆಲ್ಲ ನಡೆಯುವಾಗಲೂ ತಾಯಿ ತನ್ನ ಮಗನನ್ನು ಅಚ್ಚರಿಯಿಂದಲೇ ನೋಡುತ್ತಿದ್ದಳು.

ಆ ದಿನ ರಾತ್ರಿ ಊಟವಾದ ಮೇಲೆ ತಾಯಿ ಮಗ ಇಬ್ಬರೂ ತಾವು ಬೆಳೆದು ಬಂದ ದಾರಿಯ ಬಗೆಗೆ ಬಹಳ ಹೊತ್ತು ಮಾತಾಡುತ್ತಲೇ ಇದ್ದರು.

ಮರುದಿನ ಬೆಳಗ್ಗೆ ಆ ಹುಡುಗ ಮತ್ತೆ ನಿರ್ದೇಶಕರ ಬಳಿ ಹೋದ. ಅವರು ಅವನನ್ನು ಕೂತುಕೊಳ್ಳಲು ಹೇಳಿ ಅವನ ಮುಖವನ್ನೇ ನೋಡುತ್ತಾ ಈಗ ಹೇಳು ನೆನ್ನೆ ನಿನ್ನ ಮನೆಯಲ್ಲಿ ನೀನು ಏನು ಮಾಡಿದೆ ಮತ್ತು ನೆನ್ನೆ ನೀನು ಕಲಿತ ಪಾಠವೇನು? ಅಂತ ಕೇಳಿದರು.

ನೆನ್ನೆ ನಾನು ಮನೆಗೆ ಹೋದ ಮೇಲೆ ನನ್ನ ತಾಯಿಯ ಎರಡೂ ಕೈಗಳನ್ನು ಸ್ವಚ್ಛಗೊಳಿಸಿದೆ ಮತ್ತು ಉಳಿದಿದ್ದ ಬಟ್ಟೆಗಳನ್ನು ನಾನೇ ಒಗೆದು ಹಾಕಿದೆ.

ನಿರ್ದೇಶಕರ ಕಣ್ಣುಗಳು ಅರಳಿದವು. ಅವರು ಹೌದಾ, ಹಾಗಾದರೆ ನಿನ್ನ ಭಾವನೆಗಳೇನು ಅಂತ ಹೇಳುವಿಯಾ? ಅಂತ ಕೇಳಿದರು.

ಯುವಕ ಹೇಳಿದ ಮೊದಲನೆಯದಾಗಿ ಹೊಗಳುವುದು ಎಂದರೆ ಏನೆಂದು ನನಗೆ ನೆನ್ನೆ ತಿಳಿಯಿತು. ನನ್ನ ತಾಯಿ ಇಲ್ಲದಿದ್ದರೆ ನಾನು ಇವತ್ತು ಇಷ್ಟು ಯಶಸ್ವಿಯಾಗುತ್ತಿರಲಿಲ್ಲ. ಎರಡನೆಯದಾಗಿ ಜೊತೆಯಲ್ಲಿ ಕೆಲಸ ಮಾಡುತ್ತಾ, ನನ್ನ ತಾಯಿಗೆ ಸಹಾಯ ಮಾಡುತ್ತಿರುವಾಗ ಏನಾದರೂ ಕೆಲಸ ಮಾಡುವುದು ಎಷ್ಟು ಕಷ್ಟ ಅಂತ ಅರಿವಾಯಿತು.

ಗಣ್ಯವ್ಯಕ್ತಿಗಳನ್ನ
ದೇವರೇ ಸೃಷ್ಟಿಸಿರುತ್ತಾನೆ
ಸಂತೋಷದ ಕ್ಷಣಗಳನ್ನು
ದೇವರೇ ಆರಿಸಿರುತ್ತಾನೆ
ಆದರೆ ನಿನ್ನಂತಹ
ಅತ್ಯುತ್ತಮ ಸ್ನೇಹಿತರು
ದೇವರ ಉಡುಗೊರೆ



ಮತ್ತು ಮೂರನೆಯದಾಗಿ ಕುಟುಂಬದಲ್ಲಿ ಸೌಹಾರ್ದಯುತ ಸಂಬಂಧಗಳು ಎಷ್ಟು ಮುಖ್ಯ ಮತ್ತು ಅವುಗಳ ಮೌಲ್ಯ ಏನು ಎನ್ನುವುದನ್ನು ಅರಿತುಕೊಂಡೆ.

ಆಗ ಆ ನಿರ್ದೇಶಕರು ಇದನ್ನೇ ನಾನು ನಿನ್ನಲ್ಲಿ ನಿರೀಕ್ಷೆ ಮಾಡುತ್ತಿದ್ದುದು. ನಾನು ಇಲ್ಲಿ ಕೆಲಸ ಕೊಡುವ ವ್ಯಕ್ತಿಗೆ ತನ್ನ ನೌಕರರ ಸಹಾಯವನ್ನು ಶ್ಲಾಘಿಸುವ ಗುಣವಿರಬೇಕು, ತನ್ನೊಂದಿಗೆ ಕೆಲಸ ಮಾಡುವ ನೌಕರರ ಶ್ರಮವನ್ನು ಅರ್ಥಮಾಡಿಕೊಂಡು ಹೊಗಳುವ ಮನಸ್ಸಿರಬೇಕು, ಜೊತೆಗೆ ಅವರ ಕಷ್ಟಗಳೇನು ಎನ್ನುವುದನ್ನು ಅರಿಯುವ ಮನಸ್ಸಿರಬೇಕು ಮತ್ತು ಅಂತಹ ವ್ಯಕ್ತಿ ಬರೀ ದುಡ್ಡಿಗೆ ತನ್ನ ಜೀವನದಲ್ಲಿ ಪ್ರಾಧಾನ್ಯತೆ ಕೊಡುವವನಾಗಿರಬಾರದು ಎಂಬ ಈ ಮೂರೂ ಗುಣಗಳು ನಿನ್ನಲ್ಲಿ ಇವೆ ಅಂತ ನನಗೆ ಅರಿವಾಗಿದೆ. ನಿನಗೆ ಈ ಕಂಪನಿಯಲ್ಲಿ ಕೆಲಸ ಸಿಕ್ಕಿದೆ ಎಂದರು.

ನಂತರ ಈ ಹುಡುಗ ತನಗೆ ಕೆಲಸ ಕೊಟ್ಟ ಕಂಪನಿಯಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಾ ಬಂದು ತನ್ನೊಂದಿಗೆ ಕೆಲಸ ಮಾಡುವ ಎಲ್ಲ ಸಹೋದ್ಯೋಗಿಗಳ ಗೌರವ, ಮೆಚ್ಚುಗೆ ಗಳಿಸಿಕೊಂಡ. ಪ್ರತಿಯೊಬ್ಬ ಕೆಲಸಗಾರನೂ ಒಂದು ಗುಂಪಿನಂತೆ ಕೆಲಸ ಮಾಡಿದ. ಇದರಿಂದಾಗಿ ಕಂಪನಿ ಹೆಚ್ಚಿನ ವ್ಯಾಪಾರ ವಹಿವಾಟು ನಡೆಸಿ ಚೆನ್ನಾಗಿ ಲಾಭ ಸಂಪಾದನೆ ಮಾಡಿತು.

ಯಾವುದೇ ಮಗುವಾಗಲೀ ಅದಕ್ಕೆ ಬೇಕಾದ್ದನ್ನು ಕೊಡಿಸುತ್ತಾ, ಅತಿಯಾಗಿ ಮುದ್ದಿಸುತ್ತಾ, ಅದು ಹೇಳಿದಂತೆ ಕೇಳುತ್ತಾ, ಅದರ ದಾರೀಲೇ ಹೋಗುತ್ತಾ ಇದ್ದರೆ, ಅದು ಬೆಳೆಯುತ್ತಾ ಬಂದ ಹಾಗೆ ಮಾನಸಿಕವಾಗಿ ಅರ್ಹತೆ ಬೆಳೆಸಿಕೊಂಡು ಎಲ್ಲಕ್ಕಿಂತ ಮೊದಲು ನಾನೇ ಎನ್ನುವ ಗರ್ವ ಬೆಳೆಸಿಕೊಳ್ಳುತ್ತದೆ. ಅದಕ್ಕೆ ತಂದೆ ತಾಯಿಯರ ಶ್ರಮ, ತ್ಯಾಗ ಇವ್ಯಾವುದೂ ಗೊತ್ತಾಗುವುದೇ ಇಲ್ಲ ಅಥವಾ ಅರ್ಥವಾಗುವುದೂ ಇಲ್ಲ. ಅಂಥಾ ಮಗು ಬೆಳೆದು ದೊಡ್ಡವನಾಗಿ ಯಾವುದೇ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ಮೇಲೆ ಎಲ್ಲರೂ ತಾನು ಹೇಳಿದಂತೆ ಕೇಳಬೇಕು ಎನ್ನುವ ಮನೋಭಾವ ಬೆಳೆಸಿಕೊಳ್ಳುತ್ತದೆ. ಇನ್ನು ಅವನು ವ್ಯವಸ್ಥಾಪಕ ಹುದ್ದೆಗೆ ಏರಿದ ಮೇಲೆ ಅವನಿಗೆ ಅವನ ಕೈ ಕೆಳಗಿನ ನೌಕರರ ಯಾವ ಸಮಸ್ಯೆಯೂ ಅರ್ಥವಾಗುವುದಿಲ್ಲ ಮತ್ತು ಯಾವುದೇ ತಪ್ಪಿಗೆ ಇತರರನ್ನು ಗುರಿ ಮಾಡುತ್ತಾನೆ. ಇಂಥಾ ವ್ಯಕ್ತಿಗಳಿಗೆ, ಅವರು ಬೌದ್ಧಿಕವಾಗಿ, ಶೈಕ್ಷಣಿಕವಾಗಿ ಮುಂದಿದ್ದರೂ ಮತ್ತು ಕೆಲವು ಕಾಲ ಅಂಥವರು ಯಶಸ್ವಿಯಾಗಿದ್ದರೂ ಅವರಿಗೆ ತಮ್ಮ ಯಶಸ್ಸಿನ ಅರಿವಾಗುವುದಿಲ್ಲ. ಏಕೆಂದರೆ ಅಂಥವರು ಯಾವಾಗಲೂ ಯಾವುದಾದರೂ ವಿಚಾರಕ್ಕೆ ಕೊರಗುತ್ತಲೇ ಇರುತ್ತಾರೆ,

ಹಠಮಾರಿಗಳಾಗುತ್ತಾರೆ, ಸಿಡುಕು ಸ್ವಭಾವದವರಾಗುತ್ತಾರೆ, ಈಗ ಯೋಚನೆ ಮಾಡೋಣ, ನಾವು ನಮ್ಮ ಮಕ್ಕಳಿಗೆ ಚಿಕ್ಕಂದಿನಿಂದ ವಿಪರೀತವಾಗಿ ಪ್ರೀತಿ ತೋರಿ, ಅವರ ಎಲ್ಲ ಕೋರಿಕೆಗಳನ್ನೂ ಈಡೇರಿರುತ್ತಾ, ಮಗುವಿಗೆ ಯಾವುದೇ ಕಷ್ಟ ಬರದೇ ಇರಲಿ, ಅವರು ನಾವು ಪಟ್ಟಂಥ ಕಷ್ಟ ಪಡದಿರಲಿ ಅಂತ ಅಂದುಕೊಂಡು ಮಕ್ಕಳಿಗೆ ಎಲ್ಲ ಸೌಲಭ್ಯಗಳನ್ನೂ ಕೊಡುತ್ತಾ ಬಂದರೆ ನಾವು ಮಕ್ಕಳನ್ನು ಚೆನ್ನಾಗಿ ಬೆಳೆಸಿದಂತಾಗುವುದಿಲ್ಲ, ಬದಲಿಗೆ ಅವರ ಬದುಕನ್ನು, ಅವರ ವ್ಯಕ್ತಿತ್ವವನ್ನು, ಅವರ ಭವಿಷ್ಯವನ್ನು ನಾವೇ ನಮ್ಮ ಕೈಯಾರ ಹಾಳು ಮಾಡಿದಂತಾಗುತ್ತದೆ.

ನಾವು ನಮ್ಮ ಮಕ್ಕಳಿಗೆ ಒಂದು ದೊಡ್ಡ ಮನೆಯನ್ನು ಕೊಡೋಣ, ಒಳ್ಳೆಯ ಆಹಾರವನ್ನು ಕೊಡೋಣ, ಅವರಿಗೆ ಆಸಕ್ತಿ ಇರುವ ಯಾವುದೇ ಸಾಂಸ್ಕತಿಕ ವಿದ್ಯೆಯನ್ನು ಕಲಿಯಲು ಬೆಂಬಲ ಸೂಚಿಸೋಣ, ಒಂದು ದೊಡ್ಡ ಟಿ.ವಿ. ಕೊಡಿಸೋಣ, ಆದರೆ ಯಾವುದೇ ಪ್ರಮುಖ ಕೆಲಸ ಆಗಬೇಕಾದಾಗ, ಮಕ್ಕಳಿಗೂ ಕಷ್ಟದ ಅರಿವಾಗುವಂತೆ ನೋಡಿಕೊಳ್ಳಿ. ಬದುಕಿನ ಬನಿಯನ್ನು ಹಂತಹಂತವಾಗಿ ಅರ್ಥಮಾಡಿಕೊಳ್ಳಲಿ, ಊಟವಾದ ಮೇಲೆ ಅವರ ತಟ್ಟೆಯನ್ನು ಅವರೇ ತೊಳೆಯಲಿ, ಮನೆಯ ಅಷ್ಟಿಷ್ಟು ಕೆಲಸಗಳನ್ನು ಮಾಡಲಿ, ಎಲ್ಲಕ್ಕಿಂತ ಹೆಚ್ಚಾಗಿ ಕೆಲಸಗಳನ್ನು ಗುರುತಿಸಿ ಆಯಾ ಕಾಲಕ್ಕೆ ಮಾಡುವ ಮನೋಭಾವ ಬೆಳೆಸಿಕೊಳ್ಳಲಿ, ನಿಮ್ಮ ಮನೆಯ ಮುಂದಿನ ತೋಟವನ್ನು ಅವರೇ ಚೊಕ್ಕಟಗೊಳಿಸಲಿ, ಅವಶ್ಯಕತೆ ಬಂದರೆ ಮನೆಯ ಎಲ್ಲ ಕೆಲಸಗಳನ್ನೂ ಅವರೇ ಮಾಡುವಂಥ ಸಾಮರ್ಥ್ಯ ಬೆಳೆಸಿಕೊಳ್ಳಲಿ. ನಿಮ್ಮ ಆರ್ಥಿಕ ಸುವ್ಯವಸ್ಥೆಯಲ್ಲಿ ನೀವು ಒಬ್ಬಳು ಮನೆಗೆಲಸದವಳನ್ನು ಇಟ್ಟುಕೊಳ್ಳಬಹುದು, ಆದರೆ ನಿಮ್ಮ ಮಕ್ಕಳನ್ನು ನೀವು ನಿಜವಾಗಿ ಪ್ರೀತಿಸುವವರಾದರೆ ಅವರನ್ನು ಎಲ್ಲ ಕೆಲಸಗಳಿಗೂ ತೊಡಗಿಸಬೇಕು. ನಿಮ್ಮ ಮಕ್ಕಳು ಯಾವ ರೀತಿಯ ಅರ್ಥೈಕ್ಯತೆಯನ್ನು ಬೆಳೆಸಿಕೊಳ್ಳಬೇಕು ಎಂದರೆ ನಮ್ಮ ತಂದೆ ತಾಯಿಯರು ಎಷ್ಟೇ ಶ್ರೀಮಂತರಾಗಿದ್ದರೂ ಅದು ಪ್ರಾರಂಭವಾಗಿದ್ದು ಬಡತನದಿಂದಲೇ, ಅಲ್ಪ ಸಂಪಾದನೆಯಿಂದಲೇ ಎನ್ನುವುದನ್ನು. ಎಲ್ಲಕ್ಕಿಂತ ಹೆಚ್ಚಾಗಿ ಇತರರು ಮಾಡುವ ಕೆಲಸವನ್ನು ಮೆಚ್ಚಿ ಮಾತಾಡುವ ಗುಣ, ಯಾವುದೇ ಕೆಲಸಕ್ಕೆ ತಗುಲುವ ಶ್ರಮದ ಪರಿಮಾಣ ಮತ್ತು ಎಲ್ಲರೊಳಗೊಂದಾಗಿ ಕೆಲಸ ಮಾಡುವ ಗುಣ, ಮತ್ತು ಯಾರ್‍ಯಾರಿಂದ ಏನೇನು ಕೆಲಸ ಮಾಡಿಸಬಹುದು ಎನ್ನುವ ಗುಣ ಇವುಗಳನ್ನು ಬೆಳೆಸಿಕೊಂಡರೆ ಅವರು ದೇಶಕ್ಕೆ ನಿಜವಾದ ಆಸ್ತಿಯಾಗುತ್ತಾರೆ.

ನಿನ್ನ ಸ್ನೇಹಿತನನ್ನು ಹೂವಿನಂತೆ ಪ್ರೀತಿಸಬೇಡ
ಏಕೆಂದರೆ ಹೂವು ಬೇಗ ಬಾಡುತ್ತದೆ
ಸ್ನೇಹಿತನನ್ನು ನದಿಯಂತೆ ಪ್ರೀತಿಸು
ಏಕೆಂದರೆ ನದಿ ನಿರಂತರ ಹರಿಯತ್ತಿರುತ್ತದೆ

# ಹೊಸ ಬಾಟಲ್  ಹೊಸ ವೈನು

• ಆನಂದ

ಚಿತ್ರಗಳು: ಚಂದ್ರನಾಥ ಆಚಾರ್ಯ

ಹಳೆಯ ಗಾದೆಗಳನ್ನು ಕೇಳಿ ಕೇಳಿ ನಿಮಗೆ ಬೇಜಾರಾಗಿರಬೇಕಲ್ಲವೆ?
ಹೊಸ ವೇಷದಲ್ಲಿ ಇಲ್ಲಿವೆ ನೋಡಿ ನಿಮ್ಮನ್ನು ರಂಜಿಸಲು.

ಓಟು ಹಾಕೋದಿಕ್ಕೆ ಮರೀಬೇಡ,
ಆಮೇಲೆ ನನ್ನ ನೆನಪಿಸಿಕೋಬೇಡ



ಠೇವಣಿಗೇ ದುಡ್ಡಿಲ್ಲ
ಖಾತೆ ಯಾವುದು ಕೊಡ್ತೀರಿ ಅಂದನಂತೆ

***

ಪಾಪಿ ಅಸೆಂಬ್ಲಿ ಹೊಕ್ಕರೂ
ಮಂತ್ರಿಗಿರಿ ಸಿಗಲಿಲ್ಲ

***

ಬರೀ ಕೈಲಿ ಮತ ಹಾಕಿದರೇನು ಬಂತು ಭಾಗ್ಯ?

***



ಖಾತೆ ಘನವಾದರೆ
ಲದ್ದೀನೂ ಬಲವಾಗುತ್ತದೆ



**ಮಂತ್ರಿಗಿರಿ ಇರೋ ತನಕ,**
**ಮಾಡಿಕೊಂಡ ಆಸ್ತಿ ಕೊನೇ ತನಕ**

***

ಮಂತ್ರೀನ ಮನೇಲಿ ಇಟ್ಟುಕೊಂಡು
ಶಾಸಕನಿಗಾಗಿ ಅತ್ತರು ಎಂದ ಹಾಗಾಯಿತು

***

**ಅತ್ತೂ ಕರೆದೂ ಮಂತ್ರಿಗಿರಿ ಗಿಟ್ಟಿಸಿಕೊಂಡರು**

***

ಸೋನಿಯಾಳನ್ನೇ ಅಮ್ಮ ಎನ್ನದವನು ಮೋಟಮ್ಮನನ್ನು ಅಮ್ಮ ಎನ್ನುವನೆ?

***

ಅಂತೂ ಇಂತೂ
ಗಣಿ ಮಕ್ಕಳಿಗೆ ವನವಾಸ

**ಸೋನಿಯಾಳಿಗೊಂದು ಕಾಲ**
**ಮೇನಕಳಿಗೊಂದು ಕಾಲ**



**ಸೋನಿಯಾ ಒಡೆದ ಮಡಕೆಗೆ ಬೆಲೆ ಇಲ್ಲ?**

***

ಕಾಂಗ್ರೆಸ್ ಶಾಸಕರು ಕಚ್ಚಾಡಿಕೊಂಡರೆ
ಜೆಡಿಎಸ್‌ದೇನು ಗೋಣಾಗಾಟ

***

ಒಲ್ಲದ ಮಂತ್ರೀಗೆ ಖಾತೇಲಿ ಕಲ್ಲು

***

ವಿಧಾನಸೌಧ ಹೋಗೂ ಅನ್ನುತ್ತೆ ಪಾರ್ಲಿಮೆಂಟ್ ಬಾ ಅನ್ನುತ್ತೆ

***

ಗೆಲ್ಲೋದು ನಮ್ಮ ಇಚ್ಛೆ
ಮಂತ್ರಿ ಆಗೋದು ಹೈ ಕಮಾಂಡ್ ಇಚ್ಛೆ

# ನಗುವೇ ಗೌಡರ ಹಳ್ಳಿಯಲ್ಲಿ

● ಚಿಂತಾಮಣಿ ಕೊಡ್ಲೆಕೆರೆ

ನಗುವಿನ ಹಳ್ಳಿಗೆ ಬಂದಿಳಿದಾಗ ಸಂಜೆ ನಾಲ್ಕು ಗಂಟೆ. ಪಟೇಲ ನಗುವೇ ಗೌಡರು ''ಬನ್ನಿ, ನಿಮಗಾಗೇ ಕಾಯುತ್ತಿದ್ದೆ'' ಎಂದು ಪ್ರೀತಿಯಿಂದ ಇಳಿಸಿಕೊಂಡರು. ಬಸ್ ನಿಲ್ದಾಣದ ಪಕ್ಕದಲ್ಲೇ ಸರಕಾರಿ ಶಾಲೆಯ ಆಟದ ಮೈದಾನ. ಮಕ್ಕಳು ಖುಷಿಯಾಗಿ ನಗುತ್ತಾ ಹಾರಿ ಹಾರಿ ಕುಣಿಯುತ್ತಿದ್ದರು. ಒಂದು ದೃಶ್ಯವಂತೂ ನನ್ನನ್ನು ಸಿಕ್ಕಾಪಟ್ಟೆ ಕಕ್ಕಾವಿಕ್ಕಿಯಾಗಿಸಿತು. ಪಶ್ಚಿಮದತ್ತ ಇಳಿಯುತ್ತಿದ್ದ ಸೂರ್ಯನೂ ಮಕ್ಕಳ ಹಾಗೇ ಕುಣಿಯುತ್ತಿದ್ದ. ಆಶ್ಚರ್ಯದಿಂದ ನಗುವೇ ಗೌಡರತ್ತ ನೋಡಿದೆ. ಅವರು ನಗುನಗುತ್ತಾ ನನ್ನೊಡನೆ ಸಾಗುತ್ತಿದ್ದರೇ ಹೊರತೂ ಸೂರ್ಯನ ಕುಣಿತವನ್ನು ಕಂಡ ಹಾಗೆ ತೋರಲಿಲ್ಲ. ಅಥವಾ ಇದು ನನ್ನ ಭ್ರಮೆಯೋ! ಕೇಳ ಹೋದರೆ ಗೌಡರು ಬಿದ್ದು ಬಿದ್ದು ನಕ್ಕಾರು, ಅವಮಾನವಾಗುತ್ತದೆ ಎಂದು ನನ್ನ ಪ್ರಶ್ನೆಯನ್ನು ಹತ್ತಿಕ್ಕಿಕೊಂಡೆ. ಯಾರಿಗೆ ಗೊತ್ತು? ಈ ನಗುವಿನಹಳ್ಳಿಯ ಭೌಗೋಳಿಕ ಪರಿಸರದಲ್ಲಿ ಇವೆಲ್ಲ ಸಹಜವಾಗಿರಬಹುದು ಅಂದುಕೊಂಡೆ. ಗೌಡರಂತೂ ರಸ್ತೆಯ ಮೇಲೆ ಸಿಕ್ಕವರಿಗೆಲ್ಲ ''ಸದಾನಂದ'' ''ಚಿದಾನಂದ'' ಎಂದು ಕೈಮುಗಿಯುತ್ತ ನಡಿಗೆಯ ವೇಗ ಹೆಚ್ಚಿಸಿದ್ದರು. ನನ್ನ ಕಷ್ಟ ನೋಡಲಾರದೆ ನನ್ನ ಕೈಲಿದ್ದ ಬ್ಯಾಗುಗಳನ್ನೂ ಅವರೇ ಹೊತ್ತು ನಡೆಯತೊಡಗಿದರು. ''ಸಚ್ಚಿದಾನಂದ'' ''ಸಚ್ಚಿದಾನಂದ'' ಎನ್ನುತ್ತ ಈಗ ಅವರು ಅಕ್ಷರಶಃ ಓಡತೊಡಗಿದರು. ನಾನೂ ಓಡತೊಡಗಿದೆ.

ಬೆಳಿಗ್ಗೆ ಒಂದು ಬಗೆಯ ಮಂಪರಿನಲ್ಲೇ ಬಸ್ ಹತ್ತಿದ್ದೆ. ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿನಲ್ಲಿ ಬಸ್ ಬೋರ್ಡ್ ನೋಡಿ ಕುಳಿತುಕೊಂಡಿದ್ದಷ್ಟೇ ನೆನಪಿದೆ. ಕಣ್ಣು ಬಿಟ್ಟಾಗ ಬಸ್ ಹಿಂದಕ್ಕೆ ಚಲಿಸುತ್ತಾ ಸುಮಾರು ಎರಡು-ಮೂರು ಕಿ.ಮೀ. ತಗ್ಗಿನಲ್ಲಿ ಇಳಿಯಿತು. ಅದೇ ಕಡೆಯ ನಿಲ್ದಾಣ. ನನ್ನನ್ನು ಇಳಿಸಿದ ಕೂಡಲೇ ಬಸ್ಸು ಶರ ವೇಗದಲ್ಲಿ ವಾಪಸು ಹೊರಟು ಹೋಯಿತು. ನಗುವೇ ಗೌಡರು ನನಗೆ ಪರಿಚಯವಾದುದು ಒಂದೆರಡು ತಿಂಗಳುಗಳ ಹಿಂದೆ. ಬ್ಯಾಡರಹಳ್ಳಿಯ ಕಬ್ಬಾಳಮ್ಮ ದೇವಾಲಯದ ಪಕ್ಕದಲ್ಲಿ ಅವರ ನೆಂಟರ ಮನೆ ಇದೆ. ಬ್ಯಾಡರಹಳ್ಳಿಯದೇ ಒಂದು ಭಾಗ ನಮ್ಮ ಟೆಲಿಕಾಂ ಲೇಔಟ್. ಅದೊಂದು ಸಂಜೆ ಅವರು ನಮ್ಮ ಬಡಾವಣೆಯ ಹಾದಿಯಿಂದ ಬ್ರಹ್ಮ ದೇವರ ಗುಡ್ಡದತ್ತ ನಡೆದು ಹೊರಟವರು ಎದುರಾದ ನನ್ನನ್ನು ಕಂಡು ''ಸಚ್ಚಿದಾನಂದ'' ಎಂದು ಕೈಮುಗಿದರು. ''ಅಲ್ಲ, ನಾನು ಚಿಂತಾಮಣಿ'' ಎಂದು ನಾನು ಪ್ರತಿ ನಮಸ್ಕಾರ ಮಾಡುತ್ತಲೇ ಹೇಳಿದೆ.

ಗೌಡರು ದೊಡ್ಡದಾಗಿ ನಕ್ಕರು. ''ನಮ್ಮ ಊರಿನಲ್ಲಿ ಯಾರಾದರೂ ಸಿಕ್ಕಾಗ ನಾವು ಸಚ್ಚಿದಾನಂದ ಎಂದು ಹೇಳಿಯೇ ಕೈಮುಗಿಯೋದು'' ಎಂದು ಗೌಡರು ವಿವರಿಸಿದರು. ಅವರ ನಗುವಿನಲ್ಲಿ ನಾನೂ ಪಾಲುಗೊಂಡೆ. ಗೌಡರು ಪೂರ್ವ ಭಾಷಿ ಅಂದರೆ,

ಯಾರಾದರೂ ಸಿಕ್ಕಾಗ ಅವರೇ ಮಾತನಾಡಲಿ ಎಂದು ಕಾಯುವವರಲ್ಲ. ತಾನೇ ಮುಂದಾಗಿ ಮಾತನಾಡಿಸುವುದು ಅವರ ಸ್ವಭಾವ ''ನಿಜ ಹೇಳಬೇಕೆಂದರೆ ನಮ್ಮೂರಿನಲ್ಲಿ ಎಲ್ಲರೂ ಹಾಗೇ'' ಎಂದರು. ನಾನೂ ವಾಕಿಂಗ್ ಹೊರಟವನೇ ''ನಿಮ್ಮ ಜೊತೆಗೇ ಒಂದಷ್ಟು ದೂರ ನಡೆಯುತ್ತೇನೆ'' ಎಂದು ಅವರ ಜೊತೆ ಗುಡ್ಡದತ್ತ ನಡೆಯತೊಡಗಿದೆ. ಮಾತು ಮಾತಿಗೆ ನಗು, ಅಟ್ಟಹಾಸದ ನಗು, ಗಾದೆ ಮಾತುಗಳಂತೂ ಲೀಲಾಜಾಲವಾಗಿ ಅವರ ಬಾಯಿಂದ ಹೊರ ಬೀಳುತ್ತಲೇ ಇದ್ದವು. ''ನೀವು ನಗರದ ಜನ ಬಿಡಿ, ಮೂತ್ರದಲ್ಲೂ ಮೀನು ಹಿಡಿದು ಬಿಡ್ತೀರಿ'' ಎಂದರು. ನನಗೆ ನಗು ತಡೆಯಲಾಗಲಿಲ್ಲ. ''ಆಹಾ! ಅದಕ್ಕೆಂತು ಗಾಳ ಹಾಕುವುದೋ'' ಎಂದೆ. ''ಅದನ್ನೂ ನಿಮ್ಮ ಕಂಪ್ಯೂಟರ್ನಾಗೇ ಮಾಡ್ಬಿಡ್ತೀರಿ'' ಎಂದರು. ಅವರೊಡನೆ ಮಾತಾಡುತ್ತಿದ್ದ ಸ್ವಲ್ಪ ಹೊತ್ತಿಗೇ ನಾನು ''ನಗುವೇ ಗೌಡ್ರೆ'' ಎಂದೆ. ಅವರು ಅಚ್ಚರಿಯಿಂದ ''ನನ್ನ ಹೆಸರು ನಿಮಗೆ ಗೊತ್ತಲ್ಲ!'' ಎಂದರು. ಹಾಗೆ ಅವರು ಹೇಳಿದ್ದೇ ನನಗೂ ಆಶ್ಚರ್ಯವಾಯಿತು. ಅವರನ್ನು ಹಾಗೇಕೆ ಕರೆದೆ ಎಂದು ವಿವರಿಸಲಾರೆ.

> ನನಗೆ ಪುರುಸೊತ್ತಿಲ್ಲ ಎಂದು ನೀವು ಹೇಳುತ್ತಿದ್ದರೆ ನಿಮಗೆ ಪುರುಸೊತ್ತಿರುವುದೇ ಇಲ್ಲ. ನನಗೆ ಸಮಯವಿಲ್ಲ ಎಂದು ನೀವು ಹೇಳುತ್ತಿದ್ದರೆ ನಿಮಗೆ ಸಮಯ ಇರುವುದೇ ಇಲ್ಲ. ಯಾವುದೇ ಕೆಲಸವನ್ನಾಗಲೀ ನಾಳೆ ಮಾಡುತ್ತೇನೆ ಎಂದು ನೀವು ಮುಂದೂಡುತ್ತಿದ್ದರೆ ಆ ನಾಳೆ ನಿಮಗೆ ಬರುವುದೇ ಇಲ್ಲ

ಅಂದು ವಾಪಸು ಬರುವಾಗ ತಮ್ಮೂರಿಗೆ ಬರಲೇಬೇಕೆಂದು ಒತ್ತಾಯಿಸಿ, ಮಾತು ತೆಗೆದುಕೊಂಡೇ ಅವರು ತಮ್ಮ ನೆಂಟರ ಮನೆಗೆ ಹೋಗಿದ್ದು. ''ಇದು ಎಲ್ಲರೂ ಬಲ್ಲ ಮೈಸೂರು ಸಮೀಪದ ನಗುವಿನ ಹಳ್ಳಿಯಲ್ಲ'' ಎಂದು ಮೊದಲೇ ಸೂಚನೆ ಕೊಟ್ಟಿದ್ದರು. ಹಾಗಾದರೆ ಎಲ್ಲಿದೆ, ಹೇಗೆ ಬರಬೇಕು ಎಂದಿದ್ದಕ್ಕೆ ''ಅದೆಲ್ಲಾ ಆ ಡ್ರೈವರ್ ನೋಡ್ಕೊಳ್ತಾನೆ, ನೀವು ಬೆಳಿಗ್ಗೆ ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿಂದ ಹೊರಡೋ ಏಳು ಗಂಟೆ ಬಸ್ಸಲ್ಲಿ ಬಂದು ಬಿಡಿ'' ಎಂದು ಹೇಳಿ ಸುಮ್ಮನಾಗಿ ಬಿಟ್ಟರು. ಹೋಗುವಾಗ ಹಾದಿಯ ಪರಿಚಯವಾಗುತ್ತದೆ ಎಂದು ನಾನೂ ಸುಮ್ಮನಾದೆ.

ಇದೀಗ ಗೌಡರು ಓಡ ತೊಡಗಿದ್ದಾರೆ! ಈ ತರಕಾರಿ ಅಂಗಡಿಯತ್ತ ತಿರುಗಿದವರು, ಆ ಓಣಿಯ ಸಂದಿಯಿಂದ ದೇವಸ್ಥಾನದ ತಿರುವಿನವರೆಗೂ ಓಡಿ, ಅಲ್ಲಿಂದ ಆ ಗುಡಿಸಲ ಪಕ್ಕದ ಹಾದಿಯಲ್ಲಿ ಓಡಿ, ಅದಾವುದೋ ಹಂತದಲ್ಲಿ ಕಾಣದಾದರು. ನಾನು ತೇಕುತ್ತಾ ಒಂದೆಡೆ ಕುಳಿತೆ. ಈ ಗೌಡರ ಸಹವಾಸ ಕಷ್ಟಕ್ಕೆ ಬಂತಲ್ಲ ಎಂದು ಪೇಚಾಡಿದೆ. ನನ್ನ ಕೈಚೀಲಗಳೂ ಅವರಲ್ಲೇ ಇದ್ದುದರಿಂದ ಮುಂದೇನು ಮಾಡಬೇಕೆಂದು ತಿಳಿಯಲಿಲ್ಲ.

''ಆನಂದ ಬ್ರಹ್ಮ'' ಎಂದು ಮುದ್ದಾಗಿ ಹೇಳುತ್ತಾ ಕೈ ಮುಗಿದವಳು ಹನ್ನೆರಡು ವರ್ಷದ ಹುಡುಗಿ ಸ್ಮಿತಾ. ಅವಳ ನಗುವಿಗೆ ಮಾರು ಹೋದೆ. ''ನಮ್ಮ ಮನೆಗೆ ಬನ್ನಿ ಮಾವ'' ಎಂದು ಒತ್ತಾಯಿಸತೊಡಗಿದಳು. ''ಇಲ್ಲ ಮರಿ, ನನ್ನ ಗೆಳೆಯರು ಇಲ್ಲೇ ಆಚೆ ಹೋಗಿದ್ದಾರೆ. ನಾನು

ಕಾಯಬೇಕಮ್ಮ'' ಎಂದೆ. ''ಪಟೇಲರು ನಿಮಗೆ ಇಷ್ಟು ಬೇಗ ಸಿಕ್ಕೊಲ್ಲ ಮಾವ, ನಮ್ಮ ಮನೆಗೆ ಹೋಗೋಣ'' ಎಂದಳು. ಎಲಾ ಇವಳ! ಸರಿ, ಇವಳ ಮನೆಯಲ್ಲೇ ಅವರಿಗಾಗಿ ಕಾದರಾಯಿತು ಎಂದು ಅವಳೊಡನೆ ಹೊರಟೆ.

ಸ್ಮಿತಾಳ ಅಪ್ಪ ನಗುವರಸರು, ಅಮ್ಮ ನಗುವಮ್ಮಣ್ಣಿ. ನಾನು ಆ ಮನೆಗೆ ಹೊಕ್ಕುತ್ತಿದ್ದಂತೆಯೇ ಆ ಮನೆಯ ಮೂಲೆ ಮೂಲೆಯಲ್ಲಿದ್ದ ಮನೆಯ ಜನ, ಕೆಲಸಗಾರರು, ನನ್ನನ್ನು ಸುತ್ತುವರಿದು ಚಪ್ಪಾಳೆ ತಟ್ಟಿ ನಗಲಾರಂಭಿಸಿದರು. ಅನಿವಾರ್ಯವಾಗಿ ನಾನೂ ಹೆ..ಹೆ..ಹೆ.. ಎಂದು ಪೆಚ್ಚು ಪೆಚ್ಚಾಗಿ ನಗತೊಡಗಿದೆ. ''ಇಲ್ಲ ಸಾರ್, ಇನ್ನೂ ಸರಿಯಾಗಿ ನಗಬೇಕು, ಅಪ್ಪಟ ನಗು, ಸ್ವಚ್ಛ ನಗು, ನಿರ್ಮಲ ನಗು...'' ಎಂದು ಒಬ್ಬೊಬ್ಬರೂ ಒತ್ತಾಯಿಸುತ್ತ ನಗುತ್ತಲೇ ಇದ್ದರು. ಕ್ರಮೇಣ ನಾನೂ ಅವರಂತೆ ನಗತೊಡಗಿದೆ. ಆಗ, 'ಕುಣಿಯಲೂ ಬನ್ನಿ' ಎಂದು ಕೈಹಿಡಿದು ಕರೆದರು. ''ಇಲ್ಲಿ ನನ್ನ ಕಡೆಯವರಾರೂ ನೋಡುವವರಿಲ್ಲ'' ಎಂದು ಕೊಂಚ ಅವರಂತೆಯೇ ಕುಣಿಯ ತೊಡಗಿದೆ. ನನ್ನ ದಣಿವೆಲ್ಲವೂ ಹಿಂಗಿ ತುಂಬ ಉಲ್ಲಸಿತನಾದೆ. ನಗುವರಸರು ಸುಖಾಸನವಲ್ಲಿ ಆಸೀನರಾಗಿ ''ನಗುವು ಸಹಜದ ಧರ್ಮ'' ಎಂದರು. ''ಹೌದು ಸರ್, ಡಿ.ವಿ.ಜಿ.ಯವರು ಎಷ್ಟು ಚೆನ್ನಾಗಿ ಹೇಳಿದ್ದಾರೆ, ನೋಡಿ'' ಎಂದೆ. ''ನಾವು ಅದನ್ನು ಅನುಭವದಿಂದಲೂ ಬಲ್ಲೆವು'' ಎನ್ನುತ್ತಾ ಅರಸರು ಪುಟ್ಟ ಅಂಗವಸ್ತ್ರದಿಂದ ಬೆವರೊರೆಸಿಕೊಂಡರು. ಅವರ ಹಿತ್ತಲ ಗಿಡಗಳೂ ತಲೆದೂಗುತ್ತಾ ನಗುತ್ತಿರುವಂತೆ ಕಂಡವು.

ನಗುವಮ್ಮಾಜಿಯವರು ಒಂದು ಬೆಳ್ಳಿಲೋಟದಲ್ಲಿ ಹಾಲು, ಬೆಳ್ಳಿ ಪ್ಲೇಟಿನಲ್ಲಿ ಬಾಳೆಹಣ್ಣು ಸೇಬು ಎಲ್ಲಾ ತಂದಿಟ್ಟು ''ನನ್ನ ಮುಂದೆ ನೀವೀಗ ತಿನ್ನಬೇಕು'' ಎನ್ನುತ್ತಾ ಎದುರಿಗೆ ಕುಳಿತೇ ಬಿಟ್ಟರು. ಅವರ ಆಹ್ಲಾದಕರ ನಗುವಿನಲ್ಲಿ ಕುಚೇಷ್ಟೆ, ವ್ಯಂಗ್ಯ, ವಿನೋದ ಇರಲಿಲ್ಲ. ''ಸಂತೋಷವಾಗಿ ನಗುನಗುತ್ತಾ ತಿನ್ನಿ. ಅಡುಗೆ ಸಿದ್ಧವಾಗುತ್ತಿದೆ. ಇನ್ನೂ ಎರಡು ಗಂಟೆಬೇಕು'' ಎಂದು ಅರಸರು ತಾವೂ ನನ್ನೊಡನೆ ಫಲಾಹಾರ ಸೇವಿಸತೊಡಗಿದರು. ''ಹೊಟ್ಟೆತುಂಬ ತಿನ್ನಿ, ನಗುತ್ತಾ ತಿನ್ನಿ, ಎಲ್ಲಾ ಒಳ್ಳೆಯದಾಗುತ್ತದೆ.'' ಹೀಗೆ ಏನೇನೋ ಹೇಳುತ್ತ ತಿನ್ನಲು ಪ್ರೋತ್ಸಾಹಿಸುತ್ತಲೇ ಇದ್ದರು. ಹಾಗೆ ಸಮಾಧಾನವಾಗಿ ತಿನ್ನದೆ ಎಷ್ಟು ಯುಗಗಳಾಗಿದ್ದವೋ! ಅವರೂರಿನಲ್ಲಿ ಎರಡು ದಿನ ಉಳಿಸಿಕೊಂಡರು.

ಅರಸರು ತಮ್ಮೂರಿನ ''ಕಿರು ನಗುವಿನ ತೊರೆ'' ತೋರಿಸಿದರು. ಅವರೂರಿನ ನಗುವಿನ ಬೆಟ್ಟದಲ್ಲಿ ಓಡಾಡುವುದೊಂದು ಅಪೂರ್ವ ಅನುಭವ. ಅಲ್ಲಿಯ ಮರಗಿಡಗಳ ಮರ್ಮರ ನಗುವಿನಂತಿದೆಯೋ ಅಥವಾ ನಗುವೇ ಮರ್ಮರದಂತಿದೆಯೋ! ಕೆಲವೇ ಕ್ಷಣಗಳಲ್ಲಿ ನೀವು ನಡೆಯುವುದಿಲ್ಲ. ಕುಣಿಯ ತೊಡಗುತ್ತೀರಿ. ಗಿಡ ಮರಗಳೂ ರೆಂಬೆ ರೆಂಬೆಗಳನ್ನು ಬಾಗಿಸಿ, ತೂಗಿ, ತುಯ್ದಾಡಿ ಕುಣಿಯುವಂತೆ ತೋರುತ್ತವೆ. ಅವುಗಳಿಂದಾಗಿಯೇ ನನಗೆ ಸೂರ್ಯ ಕುಣಿದಂತೆ ಭಾಸವಾಗಿದ್ದು – ಎಂದು ಕಡೆಯ ದಿನ ಅರ್ಥವಾಯಿತು. ''ಹ ಹಾ ಹಾ''

ಎಂದು ನಕ್ಕೆ. 'ಯಾಕೆ?' ಎಂಬಂತೆ ಅರಸರು ನನ್ನೆಡೆ ನೋಡಿದರು. ''ನಿಮ್ಮೊಡನೆ ಇದ್ದು ಈಗ ನನ್ನೊಳಗೆ ನಗು ಹುಚ್ಚುಹುಚ್ಚಾಗಿ ಉಕ್ಕಿ ಹರೀತಿದೆ'' ಎಂದೆ. ಮುದದಿಂದ ಅರಸರು 'ಆಹಾ' ಎಂದರು.

ನಗುವಿನ ಹಳ್ಳಿಯಲ್ಲಿ ದೇವರಿಗೆ ನಗುವೇ ಪೂಜೆ. ನಗುತ್ತಿರುವ ದೇವರ ಮೂರ್ತಿ ನಗುರಾಜ. ನಟರಾಜನ ಹೋಲಿಕೆ ಇದೆ. ದೇವಿ ಹಸನ್ಮುಖಿ. ಹೃದಯದಿಂದ ಅರಳಿದ ನಗುವನ್ನು ಭಕ್ತಿಪೂರ್ವಕವಾಗಿ ಭಗವಂತನಿಗೆ ಸಮರ್ಪಿಸುತ್ತಾರೆ. ಆ ನಗುವಿನಲ್ಲಿ ದೇವರ ಮುಂದಿನ ದೀಪ ಇನ್ನೆಷ್ಟು ತೇಜೋಮಯವಾಗಿ ಕಾಣುತ್ತದೆ. ಕೆಲವು ಹಾಸ್ಯ ಚಟಾಕಿ ಹೇಳಿ ದೇವರನ್ನು ನಗಿಸುವುದೂ ಉಂಟು!

ತುಂಬ ಅಚ್ಚರಿಯ ಒಂದು ದೃಶ್ಯ ನಗುವಿನ ಹಳ್ಳಿಯ ಕ್ಲಿನಿಕ್‌ಗಳದು. ಅಲ್ಲಿ ಹೋಗುವ ರೋಗಿಗಳೇ ಕಡಿಮೆ. ನನಗೇ ಕೊಂಚ ತಲೆನೋವೆನ್ನಿಸಿ ಅಲ್ಲಿಯ ಡಾಕ್ಟರನ್ನು ಕಂಡೆ. ಅವರು ನನ್ನನ್ನು ಸುದೀರ್ಘವಾಗಿ ಪರೀಕ್ಷಿಸಿ ''ನೀವು ಹೃದಯದಿಂದ ನಗುತ್ತಿಲ್ಲ, ತಲೆಯಿಂದ ನಗುತ್ತಿದ್ದೀರಿ. ತಲೆಯಿಂದ, ಮಿದುಳಿನಿಂದ ನಕ್ಕಾಗ ಇಂಥ ವಿಕಾರಗಳು ಕಾಣಿಸಿಕೊಳ್ಳುತ್ತವೆ. ಹೃತ್ಪೂರ್ವಕವಾಗಿ ನಗುವುದು ಹೃದಯಕ್ಕೂ ಒಳ್ಳೆಯದು, ಮಿದುಳಿಗೂ ಒಳ್ಳೆಯದು'' ಎಂದರು. ತುಂಬ ಚಿಂತೆಗೀಡಾದವರಿಗೆ ದಿನಾಲೂ ಮೂರು ಸಲ ತಲಾ ಅರ್ಧಗಂಟೆಯಷ್ಟು ಹೊತ್ತು ನಗಲು ಹೇಳುತ್ತಾರಂತೆ. ಸಾಮಾನ್ಯವಾಗಿ ಬಾಹ್ಯ ಔಷಧಗಳು ಬೇಕಾಗುವುದೇ ಇಲ್ಲ ಎಂದು ಡಾ. ಸ್ಮೈಲ್ ಮುಗುಳು ನಗುತ್ತಾ ಹೇಳಿದರು. ''ಆದರೆ ಕೃತಕವಾಗಿ ಮೂರು ಸಲ, ನಾಲ್ಕು ಸಲ ನಗುವುದು ಎಂದರೆ, ಅವೆಲ್ಲ ಪ್ರಯೋಜನವಾಗುತ್ತವೆಯೆ?'' ಎಂದು ಅನುಮಾನದಿಂದ ಕೇಳಿದೆ.'' ''ಅದು ಹಾಗಲ್ಲ, ಅರ್ಧಗಂಟೆ ನೀವು ಕೃತಕವಾಗಿ ನಗುತ್ತಿರಲು ಸಾಧ್ಯವೇ ಇಲ್ಲ, ಕೃತಕತೆ ಹೋಗಿ ಸಹಜತೆ ಮೂಡುತ್ತದೆ. ನಿಮ್ಮ ನಗು ಸಹಜಗೊಳ್ಳುತ್ತದೆ'' ಎಂದು ಅವರು ವಿವರಿಸಿದರು. ''ನಗುವು ಸಹಜದ ಧರ್ಮ'' ಎಂಬುದು ನನಗೀಗ ಹೆಚ್ಚು ಸ್ಪಷ್ಟವಾಯಿತು. ನಗು ವೈದ್ಯಶಾಸ್ತ್ರದ ಕುರಿತು ಹೆಚ್ಚು ಕುತೂಹಲವೂ ಉಂಟಾಯಿತು. ಡಾಕ್ಟರು ಹೇಳಿದಂತೆ ಹೃತ್ಪೂರ್ವಕವಾಗಿ ನಗತೊಡಗಿದ ಕೆಲವೇ ನಿಮಿಷಗಳಲ್ಲಿ ನನ್ನ ತಲೆನೋವು ಕಡಿಮೆಯಾಯಿತು.

ಊರಿನ ತುಂಬ ನಗುವಿನ ಹೆಸರಿನವರೇ. ನಗುದೇವಪ್ಪ, ನಗುಮೂರ್ತಿ, ಮುಗುಳುನಗುರಾವ್, ಮಂದಸ್ಮಿತಯ್ಯ, ಹಸಿತಾ, ಹಸನ್ಮುಖಿ, ನಗಬೇಕಮ್ಮ, ನಗುಮಂಜಿ, ನಗುಮಲ್ಲಿ.... ಹೀಗೆ ಅದಕ್ಕೊಂದು ಕಥೆ ಇರುವುದಾಗಿಯೂ, ಮುಂದಿನ ಸಲ ಹಳ್ಳಿಗೆ ಬಂದಾಗ ಅದನ್ನು ಹೇಳುವುದಾಗಿಯೂ ನಗುವರಸರು ತಿಳಿಸಿದರು. ''ಆಯಿತು'' ಎಂದೆ, ನಗುನಗುತ್ತಾ.

ಸಂಜೆ ನಾಲ್ಕಕ್ಕೆ ಬೆಂಗಳೂರಿಗೆ ಬಸ್ ಸಿದ್ಧವಾಗಿ ನಿಂತಿತ್ತು. ಎಷ್ಟು ಬೇಗ ಎರಡು ದಿನಗಳು ಕಳೆದು ಹೋದವು ಎಂದು ಅಚ್ಚರಿಗೊಂಡೆ. ''ಸದಾನಂದ'' ''ಚಿಂದಾನಂದ'' ಎಂದು

ಅಟ್ಟಹಾಸದ ನಗು ನಗುತ್ತಾ ಹಿಂದಿನಿಂದ ಬೆನ್ನನ್ನು ಜೋರಾಗಿ ಗುದ್ದಿದವರು ನಗುವೇಗೌಡರು. ''ಅರೆ! ಪಟೇಲರೆ, ಇಷ್ಟು ದಿನ ಎಲ್ಲಿ ಹೋಗಿ ಬಿಟ್ಟಿದ್ದಿರಿ!'' ಎಂದೆ. ''ಅದೆಲ್ಲಾ ಬಿಡಿ, ಪಟೇಲರಿಗೆ ಹದಿನೆಂಟು ಕೆಲಸಗಳು ಇರ್ತವೆ, ಎಲ್ಲ ಆನಂದಮಯವಾಗಿತ್ತೋ?'' ಎಂದರು. ''ಹೌದು, ಎಲ್ಲವೂ ಚೆನ್ನಾಗಿತ್ತು. ನನ್ನನ್ನೇ ನಾನು ಮರೆತು ಬಿಟ್ಟಿದ್ದೆ'' ಎಂದೆ. ''ಹಾಗೆ-ಹಾಗೆ-ಹಾಗೆ ಹೇಳಿ. ಇನ್ನೊಮ್ಮೆ ಬ್ಯಾಡರ ಹಳ್ಳೀಲಿ ಸಿಗ್ತೇನೆ'' ಎಂದರು. ಕಡೆಯಲ್ಲಿ ನಾನು ಏನನ್ನೋ ನೆನಪಿಸಿಕೊಂಡಂತೆ ''ನನ್ನ ಬ್ಯಾಗುಗಳು...'' ಎಂದೆ. ಪಟೇಲರು ದೊಡ್ಡದಾಗಿ ನಗುತ್ತಾ ''ಆ ಬ್ಯಾಗುಗಳನ್ನು ಬಿಸಾಕಿ ಬಿಟ್ಟು ಏನಿದ್ದವು ಅದರಲ್ಲಿ? ಒಂದಿಷ್ಟು ಸಿಟ್ಟು, ಒಂದಿಷ್ಟು ದುಃಖ, ಒಂದಷ್ಟು ದ್ವೇಷ, ಒಂದಷ್ಟು ಹಗಲುವೇಷ, ಬೂಟಾಟಿಕೆ, ನಯವಂಚಕತನ ಅಬ್ಬಬ್ಬಾ! ಅದೆಷ್ಟು ಹೊರೆ ಸ್ವಾಮಿ. ಎಲ್ಲಾ ಸುಟ್ಟು ಭಸ್ಮ ಮಾಡಿ ಬರಲು ಎರಡು ದಿನಗಳಾದವು. ಈಗ ನಿಮ್ಮದು ನೋ ಲಗೇಜ್, ಎಲ್ಲಾ ಸುಖ. ಹೋಗಿ ಬನ್ನಿ ಶಿವಾ'' ಎಂದು ಕೈ ಮುಗಿದರು.

ನಿಜಕ್ಕೂ ನೆಮ್ಮದಿಯಾಗಿತ್ತು.

''ಸಚ್ಚಿದಾನಂದ'' ಎಂದೆ.



# ಕೊರವಂಜಿ ಪದಬಂಧ – 5

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಮರದೊಳಗೇ ಕಾಣಿಸಿದ ದ್ವೇಷ (3)
3. ಇದು ಹೊಟ್ಟೆ ಕಣ್ರಿ! (3)
5. ಗಾತ್ರದ ಅತ್ತೆಯನ್ನು ನೋಡಿದಾಗ ಈ ಪ್ರಾಣಿ ನೆನಪಾಗುತ್ತಿದೆಯೇ (2)
6. ಹುರಿಗಾಳು ತರಹದ ತಿಂಡಿ (5)
8. ಒಲುಮೆಯಿಂದಲೇ ಮಾಡಿದ ಒತ್ತಾಯ (3)
9. ಮಾಲನ್ನು ತರುವಾಗ ಬಂದ ಕೂಲಿಯಾಳು (3)
12. ಊರಲ್ಲೆಲ್ಲಾ ಸುತ್ತಾಡಿ ತೋರುವ ವೈಭವದ ಪ್ರದರ್ಶನ (5)
13. ಲವನ ಅವಳಿ ಸಹೋದರ (2)
14. ಚುರುಕ್ಕೆನ್ನುವ ಪಚನಾಂಗ (3)
15. ನಗರದ ಬಳಿ ಕೇಳಿಸಿದ ಚರ್ಮವಾದ್ಯ (3)

*(ಉತ್ತರಕ್ಕೆ 88ನೇ ಪುಟ ನೋಡಿ)*

**ಮೇಲಿಂದ ಕೆಳಕ್ಕೆ**

1. ಸುಮ್ಮನೆ ನೋಡಿದಾಗ ಕಂಡ ಭವನ (2)
3. ಶಿರಾಡಿ ರಸ್ತೆಯ ಬಳಿ ಖರೀದಿಸಿದ ವಂದರಿಯೇ ಇದು? (3)
4. ರವೆಯನ್ನು ಆನೆ ಮೇಲೆ ಸಾಗಿಸುವುದು! (3)
5. ಅಕ್ಕಪಕ್ಕ ಎಂದು ಹೀಗನ್ನಿ (4)
6. ಕಮ್ಮಾರನ ಒಲೆಯಿದು (3)
7. ಈಗಲೋ, ಆಗಲೋ ಹೋಗುತ್ತಿರುವ ಪ್ರಾಣ (5)
9. ಮರದ ತುಂಡಿದು! (3)
10. ಲಕ್ಷದಷ್ಟು ಹಣವುಳ್ಳವ (4)
11. ಸಂಧಿಯಲ್ಲಿಟ್ಟಿರುವ ಭಾರೀ ಪೆಟ್ಟಿಗೆ (3)
12. ಸೃಷ್ಟಿಕರ್ತ, ಗಂಡಸರ ತಲೆಯಲ್ಲಿ ಇದನ್ನು ಇಡಲು ಮರೆತಿದ್ದಾನಂತೆ! (3)
13. ಕವಿ ಹೇಳಿರುವಂತೆ ಒಂದರ ಬಾಲ ಇನ್ನೊಂದು ಮೂಸುತ್ತ ಅಂಡಲೆಯುವ ನಾವು ನೀವು ಈ ಪ್ರಾಣಿಯಂತೆ (2)



**ಸ್ನ್ಯಾಪ್ ಪ್ರೆಸ್**

ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ್ ಕೇಜ್ರಿವಾಲ್ ಲಂಚ ಕೊಡುತ್ತಿದ್ದಾಗ ಇಂದು ರಾತ್ರಿ ದೆಹಲಿ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆಂದು ತಿಳಿದು ಬಂದಿದೆ. ವಿವರಗಳು ತಿಳಿದು ಬಂದಿಲ್ಲ ಆದರೆ ಅವರು ಸಿಕ್ಕಿಬಿದ್ದಿರುವುದು ನಾವು ಮುದ್ರಣ ಹೋಗುತ್ತಿರುವ ಸಮಯದಲ್ಲಿ ಖಚಿತವಾಗಿದೆ.

# ಕೂ...ಗು

**ಅತ್ಯಧಿಕ ಪ್ರಸಾರ ಬಯಸುವ ಏಕೈಕ ಪತ್ರಿಕೆ**

ಬೆಂಗಳೂರು ಏಪ್ರಿಲ್ 1

# ಪ್ರಧಾನಿ ಗಾದಿ: ಹಿಂದೆ ಸರಿದ ಮೋದಿ

**ಅಹಮದಾಬಾದ್:** ಉಕ್ಕಿನ ನಾಯಕ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಪ್ರಧಾನಿ ಹುದ್ದೆಯ ಸ್ಪರ್ಧೆಯಿಂದ ಹಿಂದಕ್ಕೆ ಸರಿಯಲು ನಿರ್ಧರಿಸಿದ್ದಾರೆಂದು ಬಿಜೆಪಿಯ ಉನ್ನತ ಮೂಲಗಳು ತಿಳಿಸಿವೆ.

ತಾವು ಪ್ರಧಾನಿಯಾದರೂ ಭ್ರಷ್ಟಾಚಾರವನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಅವರಿಗೆ ಮನವರಿಕೆಯಾಗಿದ್ದು ಜತೆಗೆ ಎನ್‌ಡಿಎಗೆ ಸ್ಪಷ್ಟ ಬಹುಮತ ಸಿಗಲಾರದೆಂಬ ಸಮೀಕ್ಷೆಗಳ ಭವಿಷ್ಯ, ಮಿತ್ರ ಪಕ್ಷಗಳನ್ನು ಸೆಳೆಯುವಲ್ಲಿನ ವೈಫಲ್ಯ, ಪ್ರಧಾನಿ ಆಸೆ ಕೈ ಬಿಡಬೇಕೆಂಬ ಜಾತ್ಯತೀತ ಬಣಗಳ ಒತ್ತಾಯ–ಇವೆಲ್ಲದರ ಪರಿಣಾಮ ಮೋದಿ ಕಣದಿಂದ ಹಿಂದೆ ಸರಿಯುವ ನಿರ್ಧಾರ ಕೈಗೊಂಡಿದ್ದಾರೆಂದು ತಿಳಿದು ಬಂದಿದೆ.

ಎಲ್.ಕೆ. ಅಡ್ವಾಣಿ, ರಾಜನಾಥ್ ಸಿಂಗ್ ಮುಂತಾದ ಮೊದಲ ಸಾಲಿನ ನಾಯಕರನ್ನು, ಅರುಣ್ ಜೇಟ್ಲಿ, ಸುಷ್ಮಾ ಸ್ವರಾಜ್ ಮುಂತಾದ ಎರಡನೆಯ ಸಾಲಿನ ನೇತಾರರನ್ನು ಹಿಂದಿಕ್ಕಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿ ಹೊರಹೊಮ್ಮಿದ ನರೇಂದ್ರ ಮೋದಿಯವರ ಈ ಹಠಾತ್ ನಿಲುವು ಬಿಜೆಪಿಯಲ್ಲಿ ಸುನಾಮಿ ಅಲೆಗಳನ್ನು ಎಬ್ಬಿಸಿದರೆ, ಕಾಂಗ್ರೆಸ್ ಮತ್ತು ತೃತೀಯ ರಂಗ ಪಾಳಯದಲ್ಲಿ ಹರ್ಷದ ಹೊನಲು ಹಬ್ಬಿಸಿದೆ.



ರಾಹುಲ್ ಗಾಂಧಿ ಈಗ ನಿರಾಳವಾಗಿದ್ದಾರೆಂದು ದಿಗ್ವಿಜಯ್ ಸಿಂಗ್ ಹೇಳಿದರೆ ಸೋನಿಯಾ ಗಾಂಧಿ ಪ್ರಿಯಾಂಕಳನ್ನು ತಬ್ಬಿ ಮುದ್ದಾಡಿ ತಮ್ಮ ಹರ್ಷವನ್ನು ತೋಡಿಕೊಂಡರೆಂದು ರಾಬರ್ಟ್ ವಾದ್ರಾ ಟ್ವೀಟ್ ಮಾಡಿದ್ದಾರೆ. ಇದು ಜಾತ್ಯಾತೀತ ಶಕ್ತಿಗಳಿಗೆ ಸಿಕ್ಕ ಪ್ರಚಂಡ ಜಯ ಎಂದು ಲಾಲೂ ಪ್ರಸಾದ್ ಬೀಗಿದ್ದಾರೆ.

## ಯು.ಆರ್. ಸಂತಸ :)

**"ಮೋದಿ ಗೆದ್ದ ಭಾರತದಲ್ಲಿ ಇರಲಾರೆ"** ಎಂದು ಘೋಷಿಸಿದ್ದ ಜ್ಞಾನಪೀಠದ ಅನಂತಮೂರ್ತಿ ಅವರು ಮೋದಿಗೆ ಅಭಿನಂದನೆ ಪತ್ರ ರವಾನಿಸಿದ್ದಾರೆ ಎಂದು ಆಪ್ತಮೂಲಗಳು ತಿಳಿಸಿವೆ.

## ಅಮ್ಮ ಸಮ್ಮಾನಂ

**ಉಡುಗೊರೆ ಕಾರ್ಖಾನೆಗೆ ಜಯಲಲಿತಾ ಅಡಿಗಲ್ಲು**

**ಚೆನ್ನೈ:** ಪ್ರಧಾನಿ ಗಾದಿಯ ಮೇಲೆ ಕಣ್ಣಿಟ್ಟಿರುವ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಸರ್ಕಾರಿ ವಲಯದ ನೂತನ ಕಾರ್ಖಾನೆ 'ಅಮ್ಮ ಸಮ್ಮಾನಂ'ಗೆ ಇಂದು ಶಂಕು ಸ್ಥಾಪನೆ ಮಾಡಿದರು.

'ಅಮ್ಮ ಸಮ್ಮಾನಂ ಎನ್ನದು ನಾನ್‌ಸ್ಟಾಪ್ ಕೊಂಡಾಟಂ. ಇಂದ ಫ್ಯಾಕ್ಟರಿಯಿಲ್ ಟಿ.ವಿ., ಮಿಕ್ಸಿ, ರೆಫ್ರಿಜರೇಟರ್, ಬೆಡ್, ಟೇಬಲ್, ಕಾಟ್, ವಾಷಿಂಗ್‌ಮೆಷಿನ್, ಫ್ಯಾನ್, ಕುಕ್ಕರ್, ಇಂಡಕ್ಷನ್ ಕುಕ್‌ಟಾಪ್ ಎಲ್ಲಾಮೇ ತಯ್ಯಾರ್ ಪಣ್ರಾರ್' ಎಂದಿರುವ ಜಯಲಲಿತಾ ತಮ್ಮ ಚುನಾವಣಾ ಪ್ರಣಾಳಿಕೆಯ ಉಚಿತ ಉಡುಗೊರೆಗಳನ್ನು ತಯಾರಿಸುವುದಕ್ಕಾಗಿಯೇ ದೇಶದಲ್ಲೇ



ಮೊತ್ತಮೊದಲ ಬಾರಿಗೆ ಸಾರ್ವಜನಿಕ ವಲಯದಲ್ಲಿ ಕಾರ್ಖಾನೆ ಸ್ಥಾಪಿಸಲು ಮುಂದಾಗಿದ್ದಾರೆ. ಉಚಿತವಾಗಿ ಹಂಚಲಾಗುವ ಈ ಉಡುಗೊರೆಗಳು ಹೊರರಾಜ್ಯಗಳನ್ನೂ ತಲುಪಿ, ಮುಂದೆ ಕಪ್ಪು ಸೀರೆ ಉಟ್ಟು, ಕೆಂಪುಕೋಟೆಯಲ್ಲಿ ತ್ರಿವರ್ಣ ಧ್ವಜ ಹಾರಿಸುವುದು ಶತಸ್ಸಿದ್ಧ ಎಂದು ಅವರು ಘೋಷಿಸಿದ್ದಾರೆ.

## ನಾನೇ ಮಲ್ಲಮ್ಮ: ಬಿಪಾಶ ಉವಾಚ

**ಕೋಲ್ಕತ್ತಾ:** 'ನಾನು ಹೇಮರೆಡ್ಡಿ ಮಲ್ಲಮ್ಮನ ಪಾತ್ರಕ್ಕೆ ರೆಡಿ' ಎಂದು ಹಾಟ್ ನಟಿ ಬಿಪಾಶ ಬಸು ಹೇಳಿಕೆ ನೀಡಿದ್ದಾರೆ.

ನಿರ್ದೇಶಕರು ಯಾರೆಂದು ಇನ್ನೂ ನಿಗದಿಯಾಗದ, 'ವಸಂತ್ ಕಂಬೈನ್ಸ್'ರ ನಿರ್ಮಾಣದ ನೂತನ ಚಿತ್ರದ ಹೇಮರೆಡ್ಡಿ ಮಲ್ಲಮ್ಮನ ಪಾತ್ರದಲ್ಲಿ 'ಬಿಚ್ಚೋಲೆ ಗೌರಮ್ಮನಾಗಿ ಕಾಣಿಸಿಕೊಳ್ಳಲು ನಾನು ತಯಾರ್' ಎಂದು ಬಿಪಾಶ ಹೇಳಿಕೆ ನೀಡಿದ್ದಾರೆ.

'ಸಂಗೊಳ್ಳಿ ರಾಯಣ್ಣ ಚಿತ್ರದಲ್ಲಿ ಜಯಪ್ರದ ಕಿತ್ತೂರ ಚೆನ್ನಮ್ಮ ಆಗಿ ಮಿಂಚಿದ್ದಾರೆ. ನಾನು ಹೇಮರೆಡ್ಡಿ ಮಲ್ಲಮ್ಮ ಆಗಿ ಸೈ ಎನ್ನಿಸುತ್ತೇನೆ. ಇದಕ್ಕಾಗಿ ತಾನು ಡಯಟ್‌ನಲ್ಲೂ ವ್ಯತ್ಯಾಸ ಮಾಡುತ್ತೇನೆ. ಆದರೆ ಪಡ್ಡೆ ಹೈಕಳಿಗಾಗಿ ಒಂದು ಐಟಂ ಸಾಂಗ್ ಇರಲೇಬೇಕು' ಎಂಬ ಷರತ್ತು ಮುಂದೊಡ್ಡಿದ್ದಾರೆ ಎಂದು ತಿಳಿದು ಬಂದಿದೆ.

## ಎಲ್ಲಾದರೂ ಇರಿ, ಎಂತಾದರೂ ಇರಿ. ಒಳಗೇ ಇರಿ –

**ಜೈಲಲ್ಲಿ ಇರಲು ಸಂಜಯ್‌ದತ್‌ಗೆ ಕೋರ್ಟ್ ಕಟ್ಟಳೆ**

ಮುಂಬೈ: ಆಗಾಗ ಪರೋಲ್‌ನಲ್ಲಿ ಹೊರಬಂದು ತಮ್ಮ ಮೂಲ ಶಿಕ್ಷೆಯನ್ನೇ ಮರೆತಂತೆ ಇರುವ ಬಾಲಿವುಡ್ ನಟ ಸಂಜಯ್‌ದತ್ ಕೆಲ ಕಾಲವಾದರೂ ಜೈಲಿನಲ್ಲೇ ಇರುವಂತೆ ಕೋರ್ಟ್ ತಾಕೀತು ಮಾಡಿದೆ.

'ನೀವು ಹೀಗೆ ಆಗಾಗ ಹೊರಗೆ ಬಂದು ಸುತ್ತಾಡುತ್ತಿದ್ದರೆ, ಅದು ಉಳಿದ ಕೈದಿಗಳಿಗೆ ಕೆಟ್ಟ ಸಂದೇಶ ನೀಡಿದಂತಾಗುತ್ತದೆ' ಎಂದಿರುವ ಕೋರ್ಟ್ ದತ್‌ಗೆ ಗಾಂಧಿಪಾಠ ಮಾಡುವುದಕ್ಕಾಗಿ ಜೈಲಿನಲ್ಲಿ ಅಧ್ಯಾಪಕರನ್ನು ನೇಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

'ನನ್ನ ಪತ್ನಿಯ ಆರೋಗ್ಯ ಸ್ಥಿತಿ ಹೇಗೇ ಇರಲಿ ನ್ಯಾಯಾಲಯದ ಆಜ್ಞೆಯನ್ನು ನಾನು ಮೀರುವುದಿಲ್ಲ' ಎಂದು ಅವರು ಕಣ್ಣೊರೆಸಿಕೊಳ್ಳುತ್ತಾ ಹೇಳಿದ್ದಾರೆ.

## ಪುಲಿಟ್ಜರ್ ಬಾಚಿದ ಚಂಪಾ

**ನ್ಯೂಯಾರ್ಕ್:** ಪ್ರಾಧ್ಯಾಪಕ–ಸಂಪಾದಕ–ಅಂಕಣಕಾರ ಚಂಪಾ ಅವರಿಗೆ ಈ ಬಾರಿಯ ವಿಶೇಷ ಅಂತರರಾಷ್ಟ್ರೀಯ ಪುಲಿಟ್ಜರ್ ಪ್ರಶಸ್ತಿಯನ್ನು ಘೋಷಿಸಲಾಗಿದೆ ಎಂದು ಕೊಲಂಬಿಯಾ ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ. 'ಇದು ಪಡಕ್ಕೊಂಡದ್ದೂ ಅಲ್ಲ, ಹೊಡಕ್ಕೊಂಡದ್ದೂ ಅಲ್ಲ. ಇದು ಹುಡುಕ್ಕೊಂಡು ಬಂದದ್ದು' ಎಂದು ತಮ್ಮ ಎಂದಿನ ತಿಳಿ ಹಾಸ್ಯ ಮಿಶ್ರಿತ ವ್ಯಂಗ್ಯದ ಶೈಲಿಯಲ್ಲಿ ಚಂಪಾ ಪ್ರತಿಕ್ರಿಯಿಸಿದ್ದಾರೆ.

## ಎಳನೀರು ಮಾಪಕ



**ಕಲ್ಲಿಕೋಟೆ:** ತೆಂಗಿನಕಾಯಿ ಒಳಗಿರುವ ನೀರಿನ ಪ್ರಮಾಣವನ್ನು ಹೊರಗಿನಿಂದಲೇ ಅಳೆಯುವ ಮಾಪಕವನ್ನು ಇಲ್ಲಿನ ತೆಂಗು ಸಂಶೋಧನಾ ಕೇಂದ್ರದ ವಿಜ್ಞಾನಿಯೊಬ್ಬರು ಕಂಡು ಹಿಡಿದಿದ್ದಾರೆ.

ಇದರಿಂದಾಗಿ ಹೆಚ್ಚು ನೀರಿದ್ದರೂ, ಕಡಿಮೆ ನೀರಿದ್ದರೂ ಒಂದೇ ದರ ನೀಡುವ ಸಮಸ್ಯೆ ತಪ್ಪಲಿದೆ. ಎಳನೀರಿನ ಗ್ರಾಹಕರು ಇನ್ನು ಮುಂದೆ ಕಾಯಿಯೊಳಗೆ ಇರುವ ನೀರಿನ ಪ್ರಮಾಣ ನೋಡಿ ದರ ನೀಡಿದರೆ ಸಾಕಾಗುತ್ತದೆ ಎಂದು ಕೇಂದ್ರದ ನಿರ್ದೇಶಕ ಡಾ. ಅಯ್ಯಪ್ಪನ್ ಕುಟ್ಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

Quick • Convenient • Safe



Use Any Bank Cards For Cash Withdrawal from Our ATMs

THE SHAMRAO VITHAL CO-OP. BANK LTD.

For Personalised Service

www.svcbank.com

**DGM's Office Bengaluru:**
1, Central Bank Road, Chamrajpet,
Bengaluru - 560 018

Call: 2667 6303

**11th Cross Malleshwaram branch:**
6th Main, 11th Cross,
Sri Vidya Mandir Education Society,
Bengaluru - 560 003
Call: 2331 6709


**ಅಪರಂಜಿಯ**

**30ರ ಸಂಭ್ರಮಕ್ಕೆ**

**ಶುಭಾಶಯಗಳು**



**ಅಭಿಮಾನಿ**

# ಬರಲ್‌ನ ಒರಲ್

● ಎನ್. ರಾಮನಾಥ್

ಎಲೆಕ್ಷನ್ ಬಂತು.

ಇನ್ನು ಯಾರ್‍ಯಾರ ಕೆಟ್ಟ ಮುಖ ನೋಡಬೇಕೋ, ಯಾರ್‍ಯಾರ ಹೊಲಸು ಮಾತು ಕೇಳಬೇಕೋ, ಏನ್ಕಥೆಯೋ...

ಈ ವೇಳೆಯಲ್ಲೇ ನಾನು ನಿಮ್ಮ ಜೊತೆ ಇರಬೇಕಾದ್ದು.

''ವೋಟು ಕೇಳಲು ಬಂದ ತಂಗಿ ಬಾರೆ, ಇವನಂಥ ಕೊಳಕನಲ್ಲ ಪೊರಕೆ ತಾರೆ'' ಎನ್ನುತ್ತಾ ಶರಣಪ್ಪ ಮೆಟ್ರಿಯವರು ರಾಜಕಾರಣಿಗಳ ಸ್ವಾಗತದ ರೀತಿಯನ್ನೇ ಹೇಳಿದ್ದಾರೆ. ಮಂತ್ರಿ ಬರಲು ಮನೆಗೆ, ಬರಲಿ ಬರಲು ಕೈಗೆ ಎನ್ನುವುದೇ ಸರಿಯಾದ ಮಂತ್ರವಂತೆ!

'ಛಿ! ಪೊರಕೆ' ಅಂತ ನಮ್ಮನ್ನು ಕೀಳಾಗಿ ಕಾಣಬೇಡಿ. ನಮ್ಮದು ಶ್ರೇಷ್ಠವಾದ ವಂಶ ಸ್ವಾಮಿ.

ಕಲ್ಪವೃಕ್ಷ ಅಂತ ಕರೀತೀರಲ್ಲ ನೀವು, ಅದರ ಪ್ರಾಡಕ್ಟೇ ನಾವೂನೂ. ಗರಿ ಒಣಗಿದಾಗ ಗರಿಯ ಎಸಳೆಸಳನ್ನೂ ತೆಗೆದುಕೊಂಡು, ಪಕ್ಕೆಗಳನ್ನು ಸವರಿ, ಉಳಿದ ಕಡ್ಡಿಗಳನ್ನು ಒಂದುಗೂಡಿಸಿ, ನಡುವಿಗೆ ಒಂದು ದಾರವನ್ನೋ, ಕಂಬಿಯನ್ನೋ ತೊಡಿಸಿಬಿಟ್ಟರೆ ನಾವು 'ತೆಂಗಿನ ಕಡ್ಡಿ ಪೊರಕೆ' ಆಗಿ ನಿಮ್ಮ ಸೇವೆಗೆ ಸದಾ ಸಿದ್ಧ.

ತೆಂಗು ಶ್ರೇಷ್ಠವಲ್ಲವೇ, ಆದ್ದರಿಂದ ನಾವೂ ಶ್ರೇಷ್ಠವೇ. ಶ್ರೇಷ್ಠ ವಂಶದವರನ್ನು ಮೂಲೆಗೆ ತಳ್ಳುವುದು ನಮ್ಮ ದೇಶದ ಪರಿಪಾಠವಾದ್ದರಿಂದ ನಾವು ಮೂಲೆಯಲ್ಲೋ, ಹೊರಗೋ ಇರುವುದು ಅನಿವಾರ್ಯವಾಗಿದೆ. ಅದೇ ಫಾರಿನ್ನಿನಲ್ಲಿದ್ದಿದ್ದರೆ? ಬ್ರೂಮ್ ಕ್ಲಾಸೆಟ್ ಅಂತ ನಮಗೇ ಒಂದು ಸೆಪರೇಟ್ ಜಾಗ ಕೊಡ್ತಿದ್ರು!

> ನಾವು ಬೆಳಗ್ಗೆ ಎದ್ದಾಗ ನಮಗೆ ಇರುವುದು ಎರಡೇ ಆಯ್ಕೆಗಳು. ಒಂದು, ಮತ್ತೆ ಹೊದ್ದು ಮಲಗಿ ಕನಸು ಕಾಣವುದು. ಇಲ್ಲ ಬೇಗನೆ ಎದ್ದು ಕಂಡ ಕನಸನ್ನು ಸಾಕಾರಗೊಳಿಸಲು ಪ್ರಯತ್ನ ಮಾಡುವುದು. ಆಯ್ಕೆ ನಿಮ್ಮದೇ

ಇರಲಿ ಬಿಡಿ. ಇಲ್ಲೂ ನಮಗೆ ಬೇಜಾರೇನಿಲ್ಲ, ಎಂತೆಂತಹ ಚೆಂದುಳ್ಳಿ ಚೆಲುವೆಯರು ನಮ್ಮನ್ನು ಮುಟ್ಟುತ್ತಾರೆ, ಬಳಸುತ್ತಾರೆ, ನಂತರ ನೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ನಮ್ಮ ಭಾಗ್ಯ ಎಷ್ಟೋ ಗಂಡಸರಿಗೆ ಸಿಗುವುದಿಲ್ಲ! ಮನೆಯಲ್ಲಿ ಕೊಂಚ ಕಸ ಬಿದ್ದರೆ ಸಾಕು, ನಾವು ಯಾವ ಮೂಲೆಯಲ್ಲಿದ್ದರೂ ಹುಡುಕಿಕೊಂಡು ಬರುತ್ತಾರೆ. ನಾವೇನಾದರೂ ಮಂಚದ ಕೆಳಗೋ, ಉಗ್ರಾಣದ ಸಾಮಾನುಗಳ ಮಧ್ಯೆಯೋ ಬಚ್ಚಿಟ್ಟುಕೊಂಡಿದ್ದರೆ 'ಅಯ್ಯೋ,

ಪೊರಕೆ ಕಾಣುತ್ತಿಲ್ಲವಲ್ಲಾ' ಅಂತ ಬಹಳವೇ ನೊಂದುಕೊಳ್ಳುತ್ತಾರೆ. ನಮ್ಮನ್ನು ಹುಡುಕುವಷ್ಟರ ಮಟ್ಟಿಗೆ ಅವರು ಅವರ ಗಂಡಂದಿರನ್ನೂ ಹುಡುಕುವುದಿಲ್ಲ ಗೊತ್ತಾ...!

ಪ್ರಪಂಚದಲ್ಲಿ ಸರ್ವವ್ಯಾಪಿಯಾಗಿ ಇರುವುದು ಮೂರೇ ದೇವರು, ಧೂಳು ಮತ್ತು ಪೊರಕೆ. ದೇವರನ್ನು ಕಂಡವರಿಲ್ಲ. ಆದರೆ ಸರ್ವಂ ಧೂಳುಮಯಂ ಜಗತ್ ಎಂಬುದಂತೂ ಸತ್ಯ. ಧೂಳು ಇದ್ದ ಜಾಗದಲ್ಲೆಲ್ಲ ನಾವು ಇರಲೇಬೇಕು! ಧೂಳು ಮನುಷ್ಯಗಣವನ್ನು ಕಾಡುವ ರಾಕ್ಷಸ ಗಣ, ಅದನ್ನು ತೊಡೆದುಹಾಕುವ ಪೊರಕೆ ದೇವಗಣ! ಅಲ್ಲಿಗೆ ನಾವು ದೇವತೆಗಳಿಗೂ ಸಂಬಂಧದವರು, ಹತ್ತಿರದವರು ಎಂದು ಸಾಬೀತಾಯಿತಲ್ಲ!

ನಮ್ಮ ಕೆಲಸವೆಲ್ಲಾ ಹೊರಗೇ. ದೊಡ್ಡ ದೊಡ್ಡ ಕಸಗಳನ್ನು ತೆಗೆಯುವುದೇ ನಮ್ಮ ಕೆಲಸ. ಗಟ್ಟಿ ಕಸ ಇದ್ದು, ಹೊರಕ್ಕೆ ಹಾಕುವುದು ಕಷ್ಟವಾದಾಗ ಮಾತ್ರ ನಮ್ಮ ಎಂಟ್ರಿ ಒಳಕ್ಕೆ. ಮಿಕ್ಕ ಸಮಯ ಹೊರಗೆ ಒಂದು ಮೂಲೆಯಲ್ಲಿ ನಮ್ಮ ಪಾಡಿಗೆ ನಾವು. ಮನುಷ್ಯರಲ್ಲೂ ಗಂಡು ಜಾತಿ ಹೀಗೇ ಇಲ್ಲವೇ! ಆದ್ದರಿಂದ ನಾವು ಗಂಡು ಪೊರಕೆ! ಇದರಲ್ಲಿ ಇನ್ನೂ ಒಂದು ಅಂಶವಿದೆ. ಬೀದಿಯಲ್ಲಿ ಹೆಣ್ಣನ್ನು ಕೆಣಕಿದರೆ ಪೈಲ್ವಾನರನ್ನು ಕರೆದುಕೊಂಡುಹೋಗಿ ಕೆಣಕಿದವರನ್ನು ಹೊಡೆಯಿಸುವ ಹೆಣ್ಣು ಮನೆಗೇ ಬಂದು ಕೆಣಕಿದವನಿಗೆ ನಮ್ಮ ಸಹಾಯದಿಂದಲೇ ಹೊಡೆಯುವುದು. ಹಾಗಾಗಿ ನಾವೂ ಒಂದು ವಿಧದಲ್ಲಿ ಪೈಲ್ವಾನರೇ ಕಡ್ಡಿ ಪೈಲ್ವಾನ್!

ಒಳಗೆ ಒನಪು, ಒಯ್ಯಾರದಿಂದ ಬಳುಕುತ್ತಾ ಮೂಲೆಮೂಲೆಗೂ ಸಾಗಿ, ಇರುವ ಕಸವೆಲ್ಲಾ ಹೆಕ್ಕಿ, ಮನೆ ಶುದ್ಧ ಮಾಡುವ ಹಂಚಿಕಡ್ಡಿ ಪೊರಕೆ ಹೆಣ್ಣು ಪೊರಕೆ. ಈ ಪೊರಕೆಗಳು ಗಿರಿಕನ್ಯೆಗಳು – ಬೆಟ್ಟದಲ್ಲಿ ಹುಟ್ಟುವಂತಹವು! ಹೆಣ್ಣು ಹೆಣ್ಣೇ ಅದು ನಾರಿಯಾದರೂ ಅಷ್ಟೆ ಪೊರಕೆಯಾದರೂ ಅಷ್ಟೆ ತನ್ನ ಪಾಡಿಗೆ ತಾನು ಮೂಲೆಯಲ್ಲಿರುವಾಗ ಬಂದು ಮೈ ಮುಟ್ಟಿದರೆ ಚುರುಕು ಮುಟ್ಟಿಸುವುದು ಹೆಣ್ಣಿನ ಲಕ್ಷಣ. ಕಸಿನ್ ಹಂಚಿಕಡ್ಡಿಯೂ ಹಾಗೇ ಮಾಡುತ್ತಾಳೆ – ಬಳಸಿದವರು ಎಲ್ಲೆಲ್ಲಿ ಕೂತರೂ ಅಲ್ಲಲ್ಲಿ ಒಂದಿಷ್ಟು ಊಬುಮುಳ್ಳಿನ ಚುರುಕು ಮುಟ್ಟಿಸುವುದರ ಮೂಲಕ ಅವರ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ.

ಹಂಚಿಪೊರಕೆಯದೂ ಈಗಿನ ವೃದ್ಧರದೂ ಒಂದೇ ಹಣೆಬರಹ! ಮೈಯಲ್ಲಿ ಕಸವಿದ್ದಷ್ಟು ದಿನ ಬಳಸಿ ನಂತರ ಹೊರಗೆ ಹಾಕುವುದು ಈಗಿನ ಪದ್ಧತಿ! ಅಂತ್ಯವೂ ಅಷ್ಟೆ; ಅವರಿಗೆ ಚಿತಾಗಾರ, ಇವಳಿಗೆ ಕಾಮಣ್ಣ ಕಟ್ಟಿಗೆ! ಬಡಪಾಯಿ ಹಂಚಿಪೊರಕೆ! ಹೆಂಗಸರು, ಮಕ್ಕಳು ಎಲ್ಲೋ ಹೋಗಿ, ಯಾರ ಕಣ್ಣಿಗೋ ಚೆನ್ನಾಗಿ ಕಾಣಿಸಿಕೊಂಡು, ದೃಷ್ಟಿಯಾಗಿ ಮನೆಗೆ ಬಂದರೆ – ಯಾರದೋ ತಪ್ಪಿಗೆ ಯಾವುದೋ ಬಸ್ಸಿಗೆ ಬೆಂಕಿ ಹಾಕುವಂತೆ – ಇವಳು ವಿನಾಕಾರಣ ತನ್ನ ದೇಹದ ಕೊಂಚ ಅಂಶವನ್ನು ಸುಡಿಸಿಕೊಳ್ಳಬೇಕು! ಮನುಜ ಚಂದ ಕಂಡರೆ ಹೊರಗೆ, ಬೆಂಕಿ ಕಾಣ್ಬುದು ಪೊರಕೆ!

ಕಾಲ ಬದಲಾದಂತೆ ಹೆಣ್ಣು ಬದಲಾಗುವುದು ಸಹಜ ಅಲ್ಲವೇ. ಹಂಚಿ ಪೊನ್ನಮ್ಮನೂ ಈಗ ಬದಲಾಗಿ ಸಾಫ್ಟ್ ಆಗಿದ್ದಾಳೆ. ಈಗ ಅವಳು 'ಬಾಂಬೆ ಪರ್ಕೆ' ಅಂತ ಹೆಸರು

ಪಡೆದಿದ್ದಾಳೆ. ಮುಂಚೆ ಐಟಂ ಸಾಂಗ್ ನಟಿಯಂತೆ ಕೊಂಚವೇ ಸೊಂಟಕ್ಕೆ ದಾರವೋ, ಕಂಬಿಯೋ ಸುತ್ತಿಕೊಂಡು ಇರುತ್ತಿದ್ದವಳು ಈಗ ಸ್ಕರ್ಟ್ ತರಹದ ದೊಡ್ಡ ಪ್ಲಾಸ್ಟಿಕ್ ಹೊದಿಕೆ ತೊಟ್ಟಿದ್ದಾಳೆ. ಬಾಂಬೆ ಪರ್ಕ್ ನಲ್ಲೋ ಸ್ಟೈಲೂ ಬೇರೇನೇ. ನಾವೆಲ್ಲ ತುಂಬಿಕೊಂಡ ಅಂಶ ಮೇಲೆ, ಸಣಕಲು ಅಂಶ ಕೆಳಗೆ ಮಾಡಿಕೊಂಡು ನಿಲ್ಲುತ್ತಿದ್ದೆವು; ಇವಳದು ಶೀರ್ಷಾಸನ; ಹಿಡಿಕೆ ಕೆಳಗೆ, ಗುಡಿಸುವ ಭಾಗ ಮೇಲೆ! ಈಗಿನ ಹೆಣ್ಣುಗಳ ಹಾಗೆ ಇವಳೂ ಸ್ವಲ್ಪ ವೀಕೇ. ಗಟ್ಟಿ ಕಸ ಗುಡಿಸಕ್ಕೆ ಹೋದ್ರೆ ದಳಗಳೆಲ್ಲಾ ಉದುರಿಹೋಗಿ, ಪಾಪ; ಷೇವಿಂಗ್ ಬ್ರಷ್ ಸೈಜ್‌ಗೆ ಬಂದ್ಬಿಡ್ತಾಳೆ!

ಗುಡಿಸಲೆ ಆಗಲಿ, ಅರಮನೆ ಆಗಲಿ, ಗುಡಿಸಕ್ಕೆ ನಾವಿಲ್ದೇ ಇದ್ರೆ ಇಡೀ ಸ್ಥಳ ಧೂಳೀಪಟವಾಗತ್ತೆ! ಮನೆಯ ಸ್ವಚ್ಛತೆಗಾಗಿ, ದುರುಳರ ವಿರುದ್ಧ ಅಸ್ತ್ರವಾಗುವ ನಾವು ಇನ್ನೂ ಕೆಲವು ಕೆಲಸಗಳಿಗೆ ಉಪಯೋಗಕ್ಕೆ ಬರುತ್ತೇವೆ. ಪ್ರಪಂಚ ಕೊನೆಯಾದರೂ ಉಳಿಯುವಂತಹ ತಾಕತ್ತಿರುವ ಜಿರಳೆ ಯಾವುದೇ ವಿಷಕ್ಕೂ ಪ್ರತಿರೋಧ ಶಕ್ತಿ ಬೆಳೆಸಿಕೊಂಡು ಸ್ವಲ್ಪ ದಿನಗಳಲ್ಲಿ ಆ ವಿಷವನ್ನೇ ಆಹಾರ ಮಾಡಿಕೊಂಡುಬಿಡುತ್ತೆ. ಆದರೆ ಪೊರಕೆ ಏಟು ಬಿದ್ದು ಜೀವ ಉಳಿಸಿಕೊಳ್ಳುವ ಜಿರಳೆ ಇನ್ನೂ ಹುಟ್ಟಿಲ್ಲ. ಆದ್ದರಿಂದ ಪೊರಕೆಯೇ ಜಗತ್ತಿನ ಅತ್ಯುತ್ತಮ ಪೆಸ್ಟಿಸೈಡ್. ಬಸವನಹುಳ, ಎರೆಹುಳಗಳನ್ನು ಸಾಯಿಸದೆ ಹಾಗೆಯೇ ಆಚೆ ಹಾಕುವುದಕ್ಕೆ ಪೊರಕೆಯೇ ಸೂಕ್ತವಾದ ಸ್ಟ್ರೆಚರ್! ಅಂದಿನ ಕಾಲದ ಮಾಟಗಾತಿಯರಿಗೆ ರಥ, ಕುದುರೆಗಾಡಿ, ಎತ್ತಿನಗಾಡಿಗಳಿಗಿಂತಲೂ ಪೊರಕೆಯೇ ಸೂಕ್ತ ವಾಹನ! ಹಾಗೆ ನೋಡಿದರೆ ಪೊರಕೆ ಪ್ರಪಂಚದ ಮೊಟ್ಟ ಮೊದಲ ವಿಮಾನ! ಈ ವಿಮಾನ ಏರಿಯೇ ವಾಯುಮಾರ್ಗದಲ್ಲಿ ಮಾಟಗಾತಿಯರು ಊರೂರಿಗೆ ಹೋಗುತ್ತಿದ್ದರು! ಪಾರ್ಕಿಂಗ್ ಸ್ಪೇಸೂ ಬಹಳ ಕಡಿಮೆ ಬೇಕಾದ್ದರಿಂದ ಇದೇ ಐಡಿಯಲ್ ವೆಹಿಕಲ್. ಪಾಪ! ಈಗಿನ ಜನಕ್ಕೆ ನಮ್ಮನ್ನು ಹೀಗೆ ಬಳಸಿಕೊಳ್ಳುವ ತಿಳುವಳಿಕೆ ಇಲ್ಲ!

ಮಾಡಿನ ಕಸವನ್ನು ಕೋಲುವಾಹನವನ್ನೇರಿ ನಾವು ಹೋಗಲಾಡಿಸುತ್ತೇವೆ. ಬೀದಿಯ ಕಸಕ್ಕೂ ನಾವೇ ಮೋಕ್ಷ ಕೊಡುವವರು. ಹಳ್ಳಿಯಿಂದ ದಿಲ್ಲಿಯವರೆಗೂ ನಾವಿಲ್ಲದೆ ನಡೆಯುವುದಿಲ್ಲ. ಕೇಜ್ರಿವಾಲನೂ ಜನರನ್ನು ತನ್ನತ್ತ ವಾಲಿಸಿಕೊಳ್ಳಲು ಪೊರಕೆಯನ್ನೇ ಹಿಡಿದ. ಆದರೆ ಬಹಳ ಬಲ ಬಿಟ್ಟು ಗುಡಿಸಿದ್ದರಿಂದ 49 ದಿನಕ್ಕೇ ಪೊರಕೆಯ ದಳಗಳು ಆತ್ಮಹತ್ಯೆ ಮಾಡಿಕೊಂಡು ಕೇಜ್ರಿವಾಲ ಕ್ರೇಜಿವಾಲ ಆದ. ಪೊರಕೆ ಬಳಸಲು ಶಕ್ತಿಯಲ್ಲ, ಯುಕ್ತಿ ಬೇಕು ಎಂದು ಅವನಿಗೆ ತಿಳಿಯಲಿಲ್ಲ ಬಿಡಿ.

ಇಷ್ಟೆಲ್ಲಾ ಅರ್ಹತೆ ಇರುವ ನಮ್ಮನ್ನು ಕಂಡಾಗ ಇನ್ನು ಮುಂದಾದರೂ ಮುಖ ಸಿಂಡರಿಸಿಕೊಳ್ಳುವುದನ್ನು ಬಿಡುತ್ತೀರಿ ಎಂದು ನಂಬಲೇ?

# ಕೊರವಂಜಿ ಕಾರ್ಟೂನ್



"ನಿಮ್ಮನ್ಯಾರ್ರೀ ಕೇಳ್ದವರು
ಅದನ್ನೆಲ್ಲಾ...."



ನಮಗೆ ಈಗ ಬೇಕಾದ್ದು
ಶಾಂತಿ – ಶಾಂತಿ – ಶಾಂತಿ

# ಕುರುಡನ ಮಾಡಯ್ಯತಂದೆ... ನನ್ನ ಯಜಮಾನರ

• ಜಿ.ಬಿ. ಕೋಟೆ ಅನಂತ್

ಮಧ್ಯಾಹ್ನದ ಊಟಸಾಗಿತ್ತು. ಊಟದ ಪಾಡಿಗೆ ಊಟ ಮಾತಿನ ಪಾಡಿಗೆ ಮಾತು, ಕೆಲವು ಹಿರಿಯರು ಹೇಳುತ್ತಾರೆ. ಊಟದ ಮಧ್ಯೆ ಮಾತನಾಡಬಾರದು ಅಂತ, ಆದರೆ ಗೊಜ್ಜು ಚೆನ್ನಾಗಿದೆ.. ಪಲ್ಯ ಚೆನ್ನಾಗಿದೆ... ಸಾರು.. ಆಹಾ.. ಅಂತ ಮಾತಾಡ್ತಾ ಊಟ ಮಾಡಿದರೆ ಇನ್ನೂ ಒಂದೆರಡು ತುತ್ತು ಹೆಚ್ಚಾಗಿ ಇಳಿಯುತ್ತೆ ಅಂತ ಅನ್ನೋದು ನನ್ನ ಅನುಭವ. ಅಯ್ಯೋ ಮಾತಾಡ್ತ ಮಾತಾಡ್ತ ಮಾಡಿದ್ದೆಲ್ಲಾ ಖಾಲಿನೇ ಮಾಡಿಬಿಟ್ವಿ ಅಂತ ಹೆಂಗಸರು ಹೇಳೋದು ಸಾಮಾನ್ಯ.

ಏನ್ರಿ ವಯಸ್ಸಾಗ್ತಾ ಇದ್ದಂಗೆ ಕಣ್ಣಿನ ದೃಷ್ಟಿ ಮಂದ ಆಗಿ ಕುರುಡೇ ಆಗುತ್ತಂತೆ ಹೌದಾ ಅಂದ್ಳು ನನ್ನಾಕೆ ಅಂಬುಜ. ಅದು ಸ್ವಾಭಾವಿಕ ವಯಸ್ಸಾದಂಗೆ ನಿಶಕ್ತಿ, ನರಗಳ ದೌರ್ಬಲ್ಯ, ದೃಷ್ಟಿ ಏನು ಕಿವಿನೂ ಮಂದ ಆಗುತ್ತೆ. ಈಗ ನೋಡು ನಮ್ಮ ಅಪ್ಪ ಅಮ್ಮ.. ಅಪ್ಪಂಗಂತು ಕಣ್ಣು ಆಪರೇಷನ್ ಮಾಡಿದರೂ ಪೂರ್ತಿ ಕಾಣಿಸ್ತಾ ಇರಲಿಲ್ಲ, ಅಮ್ಮಂಗೆ 2 ಸಾರ್ತಿ ಕಣ್ಣಿನ ಪೊರೆ ಆಪರೇಷನ್ ಮಾಡಿಸಿತ್ತು. ಇನ್ನೂ ನಿಮ್ಮನೆ ಕಡೆ ಎಲ್ಲಾ ಧೃತರಾಷ್ಟ್ರನ ವಂಶದವರು. ಬಾರ್ನ್ ವಿದ್ ಸಿಲ್ವರ್ ಸ್ಪೂನ್ ಅನ್ನೋ ಹಂಗೆ ಬಾರ್ನ್ ವಿದ್ ಸ್ಪೆಕ್ಟಾಕ್ಲ್ಸ್ ಅಂದೆ. ಹಣೆ ಬರಹ ಏನು ಮಾಡಕ್ಕಾಗತ್ತೆ. ಏನೋ ನಿನ್ನ ಅದೃಷ್ಟ ಇದುವರೆಗೂ ಅಂತದ್ದೇನೂ ಆಗಿಲ್ಲ, ಏನೇ ಆದ್ರೂ ಹೆಂಗಸರಿಗೆ ಮಾತ್ರ ದೃಷ್ಟಿ ಹೋಗಬಾರದು ರೀ ಅಂತ ಹೇಳಿ ನಿಟ್ಟುಸಿರುಬಿಟ್ಟಳು ನನ್ನಾಕೆ. ಇದೇನೇ ಎಲ್ಲಾದರಲ್ಲೂ ಸಮಾನತೆ ಅನ್ನೋಳು ಏಕಪಕ್ಷೀಯ ಆಗಿದೀಯ ಅಂದೆ ಈ ವಿಷಯದಲ್ಲಿ, ಇದು ನಿಮ್ಮಂತ ಗಂಡಸರಿಗೆ ತಿಳಿಯಲ್ಲ ಅಂತ ಏನೋ ಒಂದು ದಾಟೀಲಿ ಹೇಳ್ತಾ ಅಡಿಗೆ ಮನೆ ಕಡೆ ಹೊರಟಳು ಅಂಬುಜ. ಊಟದ ಶಾಸ್ತ್ರ ಮುಗಿದಿತ್ತು. ನಂಗಂತೂ ಈ ವಿಷಯ ಇವಳಿಗೆ ಹ್ಯಾಗೆ ಹೊಳೀತು ಅಂತ ಹೊಳೀಲೇ ಇಲ್ಲ, ರಿಟೈರ್ ಆದಾಗಿಂದ ಅಭ್ಯಾಸ ಆಗೀರೋ ಮಧ್ಯಾಹ್ನದ ಜೊಂಪು ಮುಗಿಸಿ ಎದ್ದು ಕಾಫಿ ಮುಗಿಸಿದ್ದೆ ಆಶ್ರಮಕ್ಕೆ ಹೋಗೋದು ಆರಕ್ಕೆ ಆದ್ದರಿಂದ ಕೊಂಚ ಪೇಪರ್‌ನ ಹೆಡ್‌ಲೈನ್ಸ್‌ನ ರಿವೈಸ್‌ನ ಮಾಡೋಣ ಅಂತ ಕಣ್ಣಾಡಿಸ್ತಾ ಇದ್ದೆ ವರಾಂಡದಲ್ಲಿ ಕೂತು.

ಹೊರಗೆ ಪಕ್ಕದ ಮನೆ ಸೀತಮ್ಮನೋರ ಜೊತೆ... ಮಧ್ಯಾಹ್ನ ಬಿಡುವಿನ ವೇಳೆ ಸದುಪಯೋಗ, ಗಂಭೀರವಾದ ಚರ್ಚೆ ನಡೀತಾ ಇತ್ತು, ನನ್ನಾಕೆ ಶುರುಮಾಡಿದ್ದಳು. ರೀ

ಸೀತಮ್ಮ ವಯಸ್ಸಾದಂಗೆ ಎಲ್ಲರಿಗೂ ದೃಷ್ಟಿ ಮಂದ ಆಗುತ್ತಾ? ಕಣ್ಣಕಾಣದೇನೂ ಹೋಗುತ್ತಾ? ಅಂದಳು ಇರಬಹುದುರೀ. ನಾವು ಯಾವಾಗಲೋ 6ನೇ ವಯಸ್ಸಲ್ಲಿ ಬರೀಕಣ್ಣಲ್ಲಿ ಗ್ರಹಣ ನೋಡೆದ್ರೆ 60ನೇ ವಯಸ್ಸಿಗೆ ಕುರುಡಾಗತ್ತಂತೆ. ಇನ್ನು ಅದೇನೋ ವಿಟಮಿನ್ನು ಕೊರತೆ, ಅದು ಇದು ನೂರೆಂಟು, ವಯಸ್ಸು ಆದ ಹಾಗೆ ಇವೆಲ್ಲಾ ಸ್ವಾಭಾವಿಕ ಅಲ್ಲವಾ ಅಂದ್ರು ಸೀತಮ್ಮ. ಏನೇ ಆದ್ರೂ ಹೆಂಗಸರಿಗೆ ಕಣ್ಣು ಹೋಗಬಾರದು ರೀ ಅಂತ ನನ್ನಾಕೆ ಘೋಷಣೆ. ಅಲ್ರಿ ವಯಸ್ಸಿಗೆ ಹೆಣ್ಣು ಗಂಡು ಎರಡೂ ಒಂದೇ ಅಲ್ಲವಾ ಅಂತ ಸಾವಿತ್ರಮ್ಮನ ವಿವರಣೆ. ಅಯ್ಯೋ ನಿಮಗೆ ತಿಳಿಯಲ್ಲ ಸಾವಿತ್ರಮ್ಮ ನೆನ್ನೆ ಒಂದು ಸಿನಿಮಾ ಬಂದಿತ್ತು ಟೀವಿಲಿ. ಒಬ್ಬ ಜಮೀನುದಾರ, ಕೇಳಬೇಕಾ ಭಾರಿ ಸಾಹುಕಾರ ವಯಸ್ಸು ಸುಮಾರು ನಮ್ಮ ಯಜಮಾನರಷ್ಟು. ಅವನ ಹೆಂಡತಿ ಪಾಪ ಏನೂ ತಿಳಿದೋಳು, ಅಮಾಯಕಳು. ಸಾಮಾನ್ಯ ಹೆಂಗಸು ನನ್ನ ಹಾಗೆ. ಕಣ್ಣಿನ ದೃಷ್ಟಿ ಇಲ್ಲ. ಆಪರೇಷನ್ ಆದರೆ ದೃಷ್ಟಿ ಬರುತ್ತೆ ಅಂತಾರೆ ಡಾಕ್ಟರು. ಆದರೆ ಅವಳ ಯಜಮಾನ ಅದೇ ಜಮೀನುದಾರ ಅಯ್ಯೋ ಬೇಡ ನಮ್ಮಮ್ಮ ಕಣ್ಣು ಆಪರೇಷನ್ ಆಗೋವಾಗಲೇ ನರಳಿ ನರಳಿ ಸತ್ತಿದ್ದು ಹಾಗೆ ಹೀಗೆ ಅಂತ ಹೇಳಿ ಸುಮ್ಮನಾಗಿಸ್ತಾನೆ. ಪಾಪ ಅವಳು ಕಣ್ಣು ಕಾಣದಿದ್ದರೂ. ಆಕಡೆ ಕೃಷ್ಣನ ಪೂಜೆ ಮಾಡ್ತಾ ಕ್ಷೀರಾಭಿಷೇಕ, ಅರ್ಚನೆ, ಆರತಿ, ನೈವೇದ್ಯ, ಉಪವಾಸ, ಒಪ್ಪತ್ತು ಅಂತ ಮಾಡ್ತಾ ಇದ್ರೆ ಇಲ್ಲಿ ಯಜಮಾನ ಮನೆ ಕೆಲಸದೋಳ ಜೊತೆ ಚಕ್ಕಂದ ಅವಳಿಗೆ ಹೊಸ ಸೀರೆ ಕೊಡಿಸೋದೇನು, ಒಡವೆ ಮಾಡಿಸಿ ಕೊಡೊದೇನು, ಖರ್ಚಿಗೆ ದುಡ್ಡು ಕೊಡೊದೇನು, ಅವನ ಮಗಳಿಗೆ ಮದುವೆ ಆಗಿದೆ, ಮಗ ಸೊಸೆ ಬೇರೆ ಊರಲ್ಲಿ ಇದಾರೆ. ಇಲ್ಲಿ ಇವನ ಕೃಷ್ಣಾವತಾರ. ನಂಗಂತು ಅಯ್ಯೋ ಅನ್ನಿಸ್ತು ಅತ್ತು ಅತ್ತು ಸೀರೆ ಸೆರಗೆಲ್ಲಾ ತೋಯ್ದೋಯ್ತು ಆಮೇಲೆ ಸೀರೆ ಬದಲಾಯಿಸಿದೆ ಅಂತಿಟ್ಕೊಳ್ಳಿ. ಇಂತದ್ದೆಲ್ಲಾ ಈ ಕಣ್ಣು ನೋಡೋಹಂಗೆ ಆಯ್ತಲ್ಲ ಅಂತ ದುಖಃ ಆಯ್ತು, ನೀವು ಏನೇ ಹೇಳಿ ಈ ಗಂಡಸರು, ಚಂಚಲ ಸ್ವಭಾವದವರು ಅಂತ ಓದಿದ್ದೆ. ಇದು ನೋಡಿದ ಮೇಲೆ ಅದು ದಿಟ ಅನ್ನಿಸ್ತು. ಹೆಂಡ್ತಿಗೆ, ನಿನ್ನ ನೋಡಿದ್ರೆ ಕರುಳು ಚುರ್ ಅನ್ನತ್ತೆ ಅಯ್ಯೋ ಅನ್ನೋದು, ಇಲ್ಲಿ ಅವಳ ಜೊತೆ. ಶಾಂತಂಪಾಪಂ. ಅಲ್ಲ ಹೀಗೆಲ್ಲಾ ಆದರೆ ಹೇಗೆ ದೇವರೇ ಅಂತ ನಂಗೆ ಚಿಂತೆ ಆಗ ರಾತ್ರಿ ನಿದ್ದೆ ಇಲ್ಲ ಅಂತ ಹೇಳಿ ಸೊರ ಸೊರ ಅಂತ ಮತ್ತೆ ಸೆರಗು ಮೂಗಿಗೆ ಹಿಡಿದಳು.

ರೀ ಅಂಬುಜಮ್ಮ ಅವಳು ಕೃಷ್ಣನ ಪೂಜೆ ಮಾಡೋ ಬದಲು ರಾಮನ ಪೂಜೆ ಮಾಡಬೇಕಾಗಿತ್ತು ಅಂದ್ರು ಸಾವಿತ್ರಮ್ಮ. ಕೃಷ್ಣನೂ ದೇವರೆ ಅಲ್ಲವೇ? ಅನ್ನೋ ಪ್ರಶ್ನೆ ಅಲ್ಲರೀ, ರಾಮ ಏಕಪತ್ನೀ ವ್ರತಸ್ಥ. ಅವನಿಗೆ ಇವೆಲ್ಲಾ ಹಿಡಿಸಲ್ಲ. ಆದರೆ ಕೃಷ್ಣನಿಗೆ ಲೆಕ್ಕವಿಲ್ಲದಷ್ಟು ಹೆಂಡ್ತೀರು. ಅದಕ್ಕೆ ಕೃಷ್ಣನಿಗಿಂತ ರಾಮವಾಸಿ ಅಂತ ಸಾವಿತ್ರಮ್ಮನ ವಿವರಣೆ. ಅಬ್ಬ ನಾನು ಕೂಡಲೇ ಹೊಸದಾಗಿ ಒಂದು ರಾಮದೇವರ ಫೋಟೋ ತಂದಿಟ್ಟು ನಿತ್ಯ ಪೂಜೆ ಮಾಡಬೇಕು ಅಂತ ಮಧ್ಯಾಹ್ನದ ಮೀಟಿಂಗು ಬರಕಾಸ್ತಾಯಿತು.

ಅಲ್ಲ ಅವನು ಭಾರಿ ಜಮೀನುದಾರ. ಸಿನಿಮಾ ಬೇರೆ ಕತೆ ಇರೋದೇ ಹಾಗೆ. ತೆರೆ ಮೇಲೆ ಬರೀ ನಟನೆ. ಹಾಗೆ ಮಾಡಕ್ಕೆ ಅವನಿಗೆ ಬೇಕಾದ ಹಾಗೆ ದುಡ್ಡು ಕೊಡ್ತಾರೆ. ಅಲ್ಲ ನನ್ನ ಹೆಂಡ್ತಿ ಯೋಚನೆಗೆ ಏನು ಹೇಳಲಿ? ನಾನು ಯಾವ ಸೀಮೆ ಜಮೀನುದಾರ. ಇರೋ 30 x 40 ಸೈಟದು ಇನ್ನೂ ಮುಗಿದಿಲ್ಲ. ಇನ್ನೂ ದಾರ ಅದೇನೋ ಇದೆ. ಕೈಗಡಿಯಾರ 6 ತೋರಿಸಿದಾಗ ಅಯ್ಯೋ ತಡ ಆಯ್ತು. ಅಂತ ಎದ್ದು ನಾನು ಆಶ್ರಮಕ್ಕೆ ಹೋಗಿಬರ್ತಿನೀಂತ ಹೇಳಿ ಹೊರಟೆ.

ಹೂಂ ಹೋಗಿದ್ದು ಬನ್ನಿ ಅಂತ ಧ್ವನಿ. ದೇವರ ಮನೆ ಇಂದ ಕೇಳಿಸ್ತು, ರಾಮದೇವರ ಪಟ ಇಡಕ್ಕೆ ಜಾಗ ಮಾಡ್ತಾ ಇರಬೇಕು. ಅಥವಾ ಕೃಷ್ಣನ ಫೋಟೋ ತೆಗೆದು ರಾಮನ ಫೋಟೋ ಇಟ್ಟರೂ ಆರ್ಶರ್ಯಪಡಬೇಕಾಗಿಲ್ಲ.



# ಕೊರವಂಜಿ ಕಾರ್ಟೂನ್

“ಅಯ್ಯೋ
ಟೋಕಿಯೋಲಿ
ಕೊಟ್ಟಿದ್ ಮೆಡ್ಲೆಲ್ಲ
14 ಕ್ಯಾರೆಟ್‌ಪ್ಪ.
ನಾವೇ
ಬುದ್ಧಿವಂತ್ರು ನಮ್ಗೆ
ಬರ್ಲಿಲ್ಲ.”





# ಫೋನೆಂಬ ಮಾಯಾಂಗನೆಗೆ ಮರುಳಾದಾಗ

• ವೈ.ಎನ್. ಗುಂಡೂರಾವ್

ಕಳೆದ ಶತಮಾನದ 60-70ರ ದಶಕದಲ್ಲಿ ಫೋನೆಂಬ ಸಾಧನವನ್ನು ಶ್ರೀಮಂತರುಗಳು ಸಂಪರ್ಕ ಸಾಧನವನ್ನಾಗಿ ಉಪಯೋಗಿಸುತ್ತಿದ್ದುದಲ್ಲದೆ, ಮನೆಯಲ್ಲಿ ಫೋನು ಇಟ್ಟುಕೊಳ್ಳುವುದು ಒಂದು ಪ್ರತಿಷ್ಠೆಯ ಸಂಕೇತವೂ ಆಗಿತ್ತು. ಹಳ್ಳಿಗಳಲ್ಲಿದ್ದ ಎಷ್ಟೋ ಜನರು ಫೋನನ್ನು ಸಿನಿಮಾಗಳಲ್ಲಿ ನೋಡಬೇಕಿತ್ತೇ ವಿನಃ ಯಾರ ಮನೆಯಲ್ಲಿಯೂ ಇರುತ್ತಿರಲಿಲ್ಲ.

ನಾನು ಯಳಂದೂರು ಮಿಡ್ಲ್ ಸ್ಕೂಲಲ್ಲಿ ಓದುತ್ತಿದ್ದಾಗ ಪಾಠ ಮಾಡುತ್ತಿದ್ದ ನಮ್ಮ ತಂದೆಗೆ ಬೆಂಗಳೂರಿನಿಂದ ಟ್ರಂಕ್ ಕಾಲ್ ಒಂದು ಬಂದಿದ್ದು, ಪೋಸ್ಟಾಫೀಸಿನಲ್ಲಿ ಕೆಲಸ ಮಾಡುತ್ತಿದ್ದ ರಾಜು ಎಂಬುವವನು ಟ್ರಂಕ್ ಕಾಲ್ ಬಂದಿದೆ ಬನ್ನಿ ಎಂದು ಕರೆದಾಗ ನಮ್ಮ ತಂದೆ ಎದ್ದೆನೋ ಬಿದ್ದೆನೋ ಎಂದು ಓಡಿದರು. ಆಗೆಲ್ಲ ಅಶುಭವಾರ್ತೆಗಳನ್ನು ತಿಳಿಸಲು ಫೋನ್ ಮಾಡುತ್ತಿದ್ದರು. ಸಂತೋಷದ ಸಮಾಚಾರವಾಗಿದ್ದರೆ ಕಾರ್ಡು ಬರೆದು ತಿಳಿಸುತ್ತಿದ್ದರು. ಟ್ರಂಕ್ ಕಾಲ್ ಎಂದರೆ ಏನೆಂದು ತಿಳಿಯದ ನಾನು ನಮ್ಮ ತಂದೆಯನ್ನೇಕೆ ರಾಜು ಕರೆದ, ಇವರೇಕೆ ಹೀಗೆ ಓಡಿದರು ಎಂದು ನಾನು ಕೂಡಾ ನಮ್ಮ ತಂದೆಯ ಹಿಂದೆ ಓಡಿದೆ. ಕುಡುಗೋಲಿನಾಕಾರದ ಕಪ್ಪಗಿನ ಬಾಗಿದ ದಪ್ಪ ಹಿಡಿಯಂತಿದ್ದುದರ ಎರಡು ತುದಿಯು ಕಿವಿ ಬಾಯಿಯ ಹತ್ತಿರ ಬರುವಂತೆ ಹಿಡಿದು ಅದೇನೋ ಮಾತಾಡತೊಡಗಿದರು. ಅತ್ತ ಕಡೆಯಿಂದ ಯಾರೋ ಮಾತನಾಡುತ್ತಿದ್ದುದು ಕ್ರಮೇಣ ಹತ್ತಿರ ನಿಂತಿದ್ದ ನನಗೂ ತಿಳಿಯುತ್ತಾ ಬಂದಾಗ ಅದು ಬೆಂಗಳೂರಿನಲ್ಲಿದ್ದ ನಮ್ಮ ತಾತನ (ತಾಯಿಯ ತಂದೆ) ಧ್ವನಿ ಎಂದು ತಿಳಿದಾಗ ಆಶ್ಚರ್ಯವಾಗಿತ್ತು. ಅರೆ, ತಾತನ ಧ್ವನಿಯನ್ನು ಕೈಲಿ ಹಿಡಿದಿದ್ದ ಈ ಕಪ್ಪನೆಯ ತುಂಡಿನಿಂದ ಕೇಳಿ ಬರುತ್ತಿದೆಯಲ್ಲಾ ಎನಿಸಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಹೌದು ನರಸಿಂಹ, ಬೇಡ ನರಸಿಂಹ ಎಂದು ಮಧ್ಯೆ ಮಧ್ಯೆ ಹೇಳುತ್ತಿದ್ದುದು ಕೇಳಿಸುತ್ತಿತ್ತೇ ವಿನಃ ಬೇರಾವ ಮಾತೂ ಕೇಳುತ್ತಿರಲಿಲ್ಲ. ಫೋನಿಟ್ಟ ನಂತರ ನಮ್ಮ ತಂದೆ ಹಿಂದೆ ತಿರುಗಿ ನೋಡಿ ನೀನ್ಯಾಕೆ ಬರೋಕೆ ಹೋದ್ಯೋ ಎಂದು ಮೃದುವಾಗಿ ಬೈದು ಕೈ ಹಿಡಿದುಕೊಂಡು ತರಗತಿಯ ಕಡೆ ಕರೆದೊಯ್ದರು.

ಹೈಸ್ಕೂಲು ಮುಗಿಸಿ ಕಾಲೇಜು ಸೇರಲು ಬೆಂಗಳೂರಿಗೆ ಬಂದ ನಂತರವೂ ನಮಗ್ಯಾರಿಗೂ ಫೋನಿನ ಅವಶ್ಯಕತೆಯೇ ಕಂಡು ಬಂದಿರಲಿಲ್ಲ.. ನಮಗಷ್ಟೇ ಅಲ್ಲ ನಮ್ಮಂತಹ ಮಧ್ಯಮ ವರ್ಗದ ಜನತೆಗೆ ಅದರ ಅನುಕೂಲಕ್ಕಿಂತ ಫೋನ್ ಛಾರ್ಜ್ ಬೇರೆ ಯಾರು ಕಟ್ತಾರೆ ಎಂದು ಫೋನ್ ಇಟ್ಟುಕೊಳ್ಳುವ ಹುಚ್ಚು ಸಾಹಸಕ್ಕೆ ಯಾರೂ ಕೈ ಹಾಕುತ್ತಿರಲಿಲ್ಲ. ಫೋನಿಟ್ಟುಕೊಂಡು ಸಾಧಿಸಬೇಕಾದ ವ್ಯವಹಾರವೂ ಇರುತ್ತಿರಲಿಲ್ಲ.

ಬೆಂಗಳೂರಿನಂತಹ ಮಹಾನಗರದಲ್ಲಿಯೇ ಅಂದು ಯಾರಿಗಾದರೂ ಏನಾದರೂ ಶುಭ ಅಥವಾ ಅಶುಭ ವಾರ್ತೆಯನ್ನು ತಿಳಿಸಲು ಸೈಕಲ್ ಎಂಬೋ ವಾಹನವೇ ಅತ್ಯಂತ ಕಡಿಮೆ ಖರ್ಚಿನಲ್ಲಿ ಒಬ್ಬರಿಂದೊಬ್ಬರಿಗೆ ವಿಷಯ ತಿಳಿಸಲು ಉಪಯೋಗಿಸುವ ಸಾಧನವಾಗಿದ್ದರಿಂದ ನಂಬಿಕೆಯ ವಾಹನವೂ ಆಗಿದ್ದು ಎಷ್ಟು ಹೊತ್ತಿನಲ್ಲಂದರೆ ಅಷ್ಟು ಹೊತ್ತಿನಲ್ಲಿ ಹೋಗಿ ವಿಷಯ ತಿಳಿಸಿ ಬರಬಹುದಾಗಿತ್ತು. ಬೆಂಗಳೂರಿನ ರಸ್ತೆಗಳಲ್ಲಿ ಇಂದಿನಂತೆ ವಾಹನ ದಟ್ಟಣೆಯಿರುತ್ತಿರಲಿಲ್ಲ. ಆರಾಮವಾಗಿ ಸೈಕಲ್ ಹ್ಯಾಂಡಲ್ ಹಿಡಿದುಕೊಳ್ಳದೇ ಎರಡೂ ಕೈಯನ್ನು ಬಿಟ್ಟು ನಿರಾಯಾಸವಾಗಿ ಹಾಡುತ್ತಾ ಸೈಕಲ್ ತುಳಿಯಬಹುದಾಗಿತ್ತು. ವಿಶಾಲವಾದ ರಸ್ತೆಗಳಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಓಡಾಡುತ್ತಿದ್ದು ಸೈಕಲ್‌ನಲ್ಲಿ ಒಬ್ಬರೇ ಹೊರಟಿದ್ದು ನೋಡಿದರೆ ಅಯ್ಯಾ, ಅಪ್ಪಾ, ಆ ಸರ್ಕಲ್ ತನಕ ಸ್ವಲ್ಪ ಬಿಟ್ಟುಬಿಡು ಎಂದು ಹಿಂಬದಿಯ ಕ್ಯಾರಿಯರ್ ಏರಿ ಕುಳಿತುಬಿಡುತ್ತಿದ್ದರು. ಆಗೆಲ್ಲಾ ಸೈಕಲ್‌ಗಳಲ್ಲಿ ಉಪಯೋಗವೂ ಕೂಡಾ ದುಬಾರಿಯದೇ ಆಗಿತ್ತು ಅನ್ನುವುದಕ್ಕಿಂತ ಗಟ್ಟಿಯಾಗಿ ಕಾಲಿರುವಾಗ ಸೈಕಲ್ ಬೇರೆ ಕೇಡು ಎಂದು ಮಲ್ಲೇಶ್ವರದಿಂದ ಚಾಮರಾಜಪೇಟೆ, ಚಾಮರಾಜಪೇಟೆಯಿಂದ ಬಸವನಗುಡಿಗೆ ನಡೆದೇ ಜನ ಸಂಚರಿಸುತ್ತಿದ್ದರು. ಬಸ್ಸುಗಳು ಗಂಟೆಗೊಂದು, ಎರಡು ಗಂಟೆಗೊಂದು ಬರುತ್ತಿದ್ದು ಅದನ್ನು ಕಾಯುವ ತಾಳ್ಮೆಯಿಲ್ಲದ ಜನ ನಡೆದೇ ಹೋಗುವುದು ಸಲೀಸೆನಿಸಿತ್ತು. 1962-63ರಲ್ಲಿ ನಾನು ಕಾಲೇಜಿಗೆ ಸೇರಿದಾಗ ಚಾಮರಾಜಪೇಟೆಯಿಂದ ಗ್ಯಾಸ್ (ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್) ಕಾಲೇಜಿಗೆ ಮಿಂಟೋ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಯ ಒಳದಾರಿಯಲ್ಲಿ ನುಸುಳಿ ಅವಿನ್ಯೂ ರಸ್ತೆಯ ಮುಖಾಂತರ ಕಾಲೇಜು ಸೇರುತ್ತಿದ್ದೆ. ಒಂದು ವರುಷ ಹೀಗೇ ನಡೆದೇ ಕಾಲೇಜಿಗೆ ಹೋಗಿ ಬಂದೆ. ನನ್ನಂತಹವನದೇನು ಮಹಾ ಬಿಡಿ, ಗೊರೂರು, ಡಿವಿಜಿ, ಇವರುಗಳನ್ನು ಕಾಣಲು ಮಲ್ಲೇಶ್ವರದಿಂದ ಬಸವನಗುಡಿಗೆ ನಡೆದೇ ಬರುತ್ತಿದ್ದರು.

ಎದೆಗಟ್ಟಿ, ಕಾಲುಗಟ್ಟಿ ಇರುವ ಜನರು ಎಲ್ಲಿಂದೆಲ್ಲಿಗೆ ಬೇಕಾದರೂ ನಡೆದೇ ತಲುಪುವ ದೃಢಕಾಯರಿಗೆ ಫೋನ್ ಏಕೆ ಬೇಕಿತ್ತು ಹೇಳಿ? ಬೆಂಗಳೂರಿನಲ್ಲಿದ್ದ ನನ್ನ ಸ್ನೇಹಿತನ ತಂದೆ ತೀರಿಕೊಂಡಾಗ ಅವನ ಸಂಬಂಧಿಯೊಬ್ಬನಿಗೆ ಸೈಕಲ್ ಕೊಟ್ಟು ಕಾಕೋಳ್‌ನಲ್ಲಿದ್ದ (40 ಕಿಲೋಮೀಟರು ದೂರ) ಸಂಬಂಧಿಗೆ ತಿಳಿಸಿ ಬರಲು ಹೇಳಿದಾಗ ಎರಡು ಸೈಕಲ್‌ಗಳಲ್ಲಿ ರಾತ್ರಿ 10 ಗಂಟೆಗೆ ಹೊರಟ ಇಬ್ಬರು ಸಂಬಂಧಿಸಿದವರಿಗೆ ವಿಷಯ ತಿಳಿಸಿ ಇನ್ನಿಬ್ಬರನ್ನು ಹಿಂದೆ ಕೂರಿಸಿಕೊಂಡು ಕರೆದುಕೊಂಡು ಬೆಳಗಿನ ಆರುಗಂಟೆಗೆ ಹಿಂದಿರುಗಿ ಬೆಂಗಳೂರು

> ನಿಮಗೆ ಅತೀವ ಸಂತಸವಾಗಿರುವಾಗ ಯಾವ ಭರವಸೆಯನ್ನೂ ಕೊಡಬೇಡಿ. ನಿಮಗೆ ಬೇಸರವಾಗಿರುವಾಗ ಯಾರ ಬಗೆಗೂ ಕೆಟ್ಟದಾಗಿ ಮಾತಾಡಬೇಡಿ. ಮತ್ತು ನಿಮಗೆ ಕೋಪ ಬಂದಿರುವಾಗ ಯಾವ ನಿರ್ಧಾರಗಳನ್ನೂ ತೆಗೆದುಕೊಳ್ಳಬೇಡಿ. ಎರಡು ಸಲ ಯೋಚಿಸಿ, ಒಳ್ಳೆಯ ನಿರ್ಧಾರವನ್ನೇ ತೆಗೆದುಕೊಳ್ಳಿ

ತಲುಪಿದ್ದರು. ಮುಂದಿನವ ಒಬ್ಬನೇ ಸೈಕಲ್ ತುಳಿದು ಸುಸ್ತಾಗದಿರಲೆಂದು ಹಿಂದೆ ಕುಳಿತವ ಕೂಡಾ ಪೆಡಲ್ ತುಳಿಯುತ್ತಾ ಸಾಥ್ ನೀಡುವುದು ಆಗೆಲ್ಲಾ ಸರ್ವೆ ಸಾಮಾನ್ಯವಾಗಿತ್ತು.

ಈಗ ಹೇಳಿ ಇಂತಹ ಜನಕ್ಕೆ ಫೋನಿನ ಅವಶ್ಯಕತೆಯಾದರೂ ಇತ್ತಾ? ಇಡೀ ರಾತ್ರಿ ಸೈಕಲ್ ತುಳಿದು ಬಂದಿದ್ದರೂ ಅವರಿಗೆ ಛೇ, ಫೋನಿದ್ದರೆ ವಿಷಯವನ್ನು ಅತಿ ಸುಲಭವಾಗಿ ತಿಳಿಸಿಬಿಡಬಹುದಿತ್ತು ಎನ್ನುವ ಕಿಂಚಿತ್ ಯೋಚನೆ ಕೂಡಾ ಅವರುಗಳ ಮನಸ್ಸಿನಲ್ಲಿ ಬರಲಿಲ್ಲವಲ್ಲ ಎಂದು ಈಗ ನೆನೆದರೆ ಆಶ್ಚರ್ಯವಾಗುತ್ತದೆ.

ಓದಿಗಾಗಿ ಬೆಂಗಳೂರಿಗೆ ಬಂದಾಗ ಈ ಹಿಂದೆ ನಮ್ಮ ತಾತ ಹಳ್ಳಿಯಲ್ಲಿದ್ದ ನಮ್ಮ ತಂದೆಗೆ ಟ್ರಂಕಾಲ್ ಮಾಡಿದ್ದು ಜ್ಞಾಪಕಕ್ಕೆ ಬಂದು ನಮ್ಮ ತಾತ ಮಾಡಿದಂತೆ ನಾನೂ ಹಳ್ಳಿಯಲ್ಲಿದ್ದ ನಮ್ಮ ತಂದೆಗೆ ಫೋನ್ ಕಾಲ್ ಮಾಡಿ ಆಶ್ಚರ್ಯತರಿಸಬೇಕು ಎಂದು ಎಷ್ಟೋ ಬಾರಿ ಮನಸ್ಸಿನ ಮೇಲೆ ಹಾದು ಬರುತ್ತಿದ್ದರೂ ಅಷ್ಟೊಂದು ಗಂಭೀರವಾಗಿ ಯೋಚಿಸಲೇ ಹೋಗಿರಲಿಲ್ಲ.

ನನ್ನ ಸ್ನೇಹಿತನೊಬ್ಬ ಆಕಸ್ಮಿಕವಾಗಿ ತೀರಿಕೊಂಡ. ಹೊಸ ಬಡಾವಣೆಯಾದ ಗಿರಿನಗರದ ಹದಿಮೂರನೆಯ ಕ್ರಾಸಿನಲ್ಲಿ 90ರ ದಶಕದಲ್ಲಿ ನಮ್ಮ ಮನೆಯೂ ಸೇರಿ ಇದ್ದುದು ಕೇವಲ ಆರೇಳು ಮನೆಗಳೇ. ತುಂಬಾ ಎಮರ್ಜೆನ್ಸಿ ಎನಿಸಿದರೆ ಮಾತ್ರ ತಿಳಿಸಲು ಕೆಲವರಿಗೆ ನಮ್ಮ ಮನೆಯ ಎದುರು ಸಾಲಿನ ಮನೆಯ ಫೋನ್ ನಂಬರ್ ತಿಳಿಸಿದ್ದೆ. ಒಮ್ಮೆ ಕರೆ ಬಂದಾಗ ಆ ಮನೆಯ ಕಾಲೇಜು ಹುಡುಗ ಫೋನ್ ತೆಗೆದುಕೊಂಡಾಗ ನನ್ನ ಸ್ನೇಹಿತನ ತಮ್ಮ ನನ್ನೊಡನೆ ಮಾತಾಡಲು ಅಪೇಕ್ಷಿಸಿದ. ಫೋನ್ ಸ್ವೀಕರಿಸಿದ ಈ ಹುಡುಗ ಅವರು ಮನೆಯ ಹೊರಗಡೆ ಕಂಡರೆ ಕರೆಯುತ್ತೇನೆಂದು ಹೇಳಿದವ ಕಡೆಗೆ ನನಗೆ ವಿಷಯವನ್ನೇ ತಿಳಿಸಲಿಲ್ಲ. ಸ್ನೇಹಿತ ತೀರಿಕೊಂಡ ವಿಷಯ ತಿಳಿದದ್ದು ನಾಲ್ಕೈದು ದಿನಗಳ ನಂತರವೇ. ಆ ಹುಡುಗ ಈ ರೀತಿ ಮಾಡಿದನಲ್ಲ ಎಂಬ ಹತಾಶೆಯೇ ಫೋನ್ ಬುಕ್ ಮಾಡಲು ಪ್ರೇರೇಪಿಸಿ ಬುಕ್ ಮಾಡಿದೆ. ಫೋನ್ ಎರಡು ವರ್ಷಗಳ ನಂತರ ಮನೆಗೆ ಬಂದುದು 1996ರಲ್ಲಿ.

ಈಗ ಪ್ಯಾಂಟಿನ ಕಿಸೆಯ ಎರಡು ಬದಿಯ ಜೇಬಿನಲ್ಲೂ ಎರಡು ಫೋನ್ ಇಟ್ಟುಕೊಂಡಿರುವ ನನ್ನ ಮಗನಿಗೆ 1996ರವರೆವಿಗೂ ಮನೆಯಲ್ಲಿ ಫೋನ್ ಇರಲಿಲ್ಲವೆಂದರೆ ಆಶ್ಚರ್ಯವೋ ಆಶ್ಚರ್ಯ.

ವಿದೇಶಗಳಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರು ಕೂಡಾ ಕಾರುಗಳಲ್ಲಿ ಬಂದು ರಸ್ತೆ ಗುಡಿಸಿ ಹೋಗುತ್ತಾರಂತೆ ಎಂದು ಬಹಳ ಆಶ್ಚರ್ಯವಾಗಿ ವಿವರಿಸುತ್ತಿದ್ದುದನ್ನು ನೀವು ಕೇಳಿರಬಹುದು. ಇಂದು ನಮ್ಮ ಮನೆಯ ಕೆಲಸ ಮಾಡುವ ರಂಗಮ್ಮನನ್ನು ಅವಳ ಗಂಡ ಕಾರಿನಲ್ಲಿ ಬಿಟ್ಟು ಹೋಗುತ್ತಾನೆ. (ಗಂಡ ಟ್ಯಾಕ್ಸಿ ಡ್ರೈವರ್). ಏನೇ ಆಗಲಿ ಬದಲಾವಣೆ ಎನ್ನುವುದು ಬಹಳ ವೇಗವಾಗಿ ನಗರಗಳನ್ನು ಆವರಿಸಿಕೊಳ್ಳುತ್ತಿರುವುದು ದಿಟ.

ಈಗ ಹಮಾಲಿ, ಬೀದಿ ಕಸ ಎತ್ತುವವ, ಗಾರೆ ಕೆಲಸದವ, ಎಲ್ಲರ ಕಿಸೆಗೂ ಸೆಲ್ ಫೋನ್ ಬಂದು ಕುಳಿತು ಬಹುದೂರದ ಪ್ರಪಂಚವನ್ನು ತೀರಾ ಹತ್ತಿರಕ್ಕೆ ಎಳೆದು ತಂದುಬಿಟ್ಟಿದೆ. ಸ್ಥಿರ

ದೂರವಾಣಿಯ ನಂತರ ಪೇಜರ್ ಬಂದು ವಿಷಯ ತಿಳಿಸಿದ ನಂತರ ಹತ್ತಿರದ ಫೋನ್ ಬೂತ್‌ಗೆ ಹೋಗಿ ಪೇಜರ್‌ಗೆ ಮೆಸೇಜ್ ಮಾಡಿದವರನ್ನು ಸಂಪರ್ಕಿಸಬೇಕಿತ್ತು. ನಂತರ ಬಂದ ಸೆಲ್ ಫೋನ್‌ಗಳಲ್ಲಿ ಕರೆಮಾಡಿದವ, ಸ್ವೀಕರಿಸುವವ ಇಬ್ಬರೂ ದರ ತೆರಬೇಕಿತ್ತು. 1990ರ ನಂತರದ ಉದಾರೀಕರಣದಿಂದ ಹಲವಾರು ಪ್ರೈವೇಟ್ ಕಂಪನಿಗಳು ಪೈಪೋಟಿಗೆ ಬಿದ್ದು ಉತ್ಪಾದಿಸಿದ ಸೆಲ್ ಫೋನ್‌ಗಳಿಂದ ಕ್ರಾಂತಿಯೇ ನಡೆದು ಹೋಗಿ ಪೈಸೆ ಲೆಕ್ಕದಲ್ಲಿ ಕರೆಗಿಷ್ಟು ಎಂದು ದರ ವಿಧಿಸಿ ಗ್ರಾಹಕರನ್ನು ತಮ್ಮತ್ತ ಸೆಳೆಯಲು ಮುಂದಾದವು.

ದರದ ವಿಷಯದಲ್ಲೂ ಒಂದು ಕಂಪನಿಗಿಂತ ಮತ್ತೊಂದು ಅತಿ ಕಡಿಮೆ ದರದಲ್ಲಿ ಸೇವೆ ಒದಗಿಸುತ್ತಿದ್ದವು. ಇದು ಉಪಯೋಗಕ್ಕಿಂತ ಕಾಡು ಹರಟೆಗೂ ದಾರಿ ಮಾಡಿಕೊಟ್ಟಿದೆ. ಇವತ್ತೇನು ಅಡುಗೆ ಎಂದು ವಿಚಾರಿಸುವ ಗೃಹಿಣಿ, ಸಾರ್ ನಾನೊಂದು ಹಾಸ್ಯ ಲೇಖನ ಬರೆದಿದ್ದೇನೆ ಓದಿಬಿಡ್ತೀನಿ ಕೇಳಿ ಎನ್ನುವ ಹಾಸ್ಯ ಸಾಹಿತಿ, ಅವತ್ತು ಕೇಳಿದ್ರಲ್ಲ ಜಿ.ಪಿ. ರಾಜರತ್ನಂ ಪದ್ಯಗಳು ಸಿಕ್ಕಿದೆ, ಓದ್ತೀನಿ ಕೇಳಿ ಎನ್ನುವ ಬರಹಗಾರ, ರಾಗ ಹಾಕಿದ್ದೇನೆ ಹಾಡಿಬಿಡ್ತೀನಿ ಎನ್ನುವ ಗಾಯಕ, ಹೀಗೆ ಎಲ್ಲರೂ ಸೆಲ್ ಫೋನಿನಲ್ಲೇ ತಮ್ಮ ಪ್ರತಿಭಾ ಪ್ರದರ್ಶನ ಮಾಡಲು ಉಪಯೋಗಿಸಿಕೊಳ್ಳಲು ತೊಡಗುವುದು ಹಾಗಿರಲಿ ಪ್ರೇಮಿಗಳಿಗೆ ಕಾಲದ ಪರಿವೆಯೇ ಇಲ್ಲದೆ ಪಿಸುಗುಡಲು ಮಹಾಸಾಧನವಾಗಿದೆ. ಇನ್ನು ವಯಸ್ಸಾದವರಿಗೆಂದು ಬೇಸರ ಕಳೆಯುವ ಸಾಧನ, ಪ್ರೇಮಿಗಳು ಮಾತಿನಿಂದ ಪರಸ್ಪರರು ರೋಮಾಂಚನಗೊಳಿಸಿಕೊಂಡರೆ, ವಯಸ್ಸಾದವರಿಗೆ ಬೋಳಿ ತುರುಬು ನೆನೆಸಿಕೊಂಡಂತೆ, ನಿವೃತ್ತಿಯ ನಂತರ ಹಿಂದಿನ ತಮ್ಮ ಕಛೇರಿ ಜೀವನದ ನೆನಪುಗಳನ್ನು ಜ್ಞಾಪಿಸಿಕೊಳ್ಳುತ್ತಾ ಅಯ್ಯೋ ಆ ಜಿ.ವಿ. ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ರಂಗಸ್ವಾಮಿ ಕಥೆ ಏನ್ ಹೇಳ್ತೀರಾ? ಕೇಳಿ ನಾನು ಹೇಳ್ತೀನಿ, ಮಹಾ ಘಟಿಂಗ, ಅವನ ಜಾತಕಾನೇ ನನ್ನ ಹತ್ತಿರ ಇದೆ ಎಂದು ಶುರುವಿಟ್ಟರೆ ಮುಗಿಯಿತು. ಇದೆಲ್ಲ ವಿರಾಮವಾಗಿ ಎದುರೆದುರಿಗೆ ಕುಳಿತು ಕೊಚ್ಚುವ ಹರಟೆಗಳನ್ನು ಫೋನಿನಲ್ಲಿ ಕೊಚ್ಚತೊಡಗಿದರೆ? ಪಾಪ ಅವರಿಗೆ ಹೊತ್ತು ಹೋಗಬೇಕಲ್ಲ. ಫೋನ್ ಕಂಪನಿಗಳು ಉದ್ಧಾರವಾಗುವುದಾದರೂ ಹೇಗೆ?

ಇದೀಗ ಬಂದಿರುವ ಫೋನ್‌ಗಳು ಎಷ್ಟೊಂದು ವೈವಿಧ್ಯಮಯವಾಗಿದೆ ಎಂದರೆ ನೀವು ಪ್ರವಾಸ ಮಾಡಿದ ಸ್ಥಳ ಚೆನ್ನಾಗಿದ್ದರೆ ತಕ್ಷಣ ನಿಮ್ಮ ಸ್ನೇಹಿತರೊಡನೆ ಹಂಚಿಕೊಳ್ಳುವ ಫೋಟೋ, ವಿಡಿಯೋ, ಹಾಡು ಚೆನ್ನಾಗಿದ್ದರೆ ತಕ್ಷಣ ಇತರರೊಡನೆ ಹಂಚಿಕೊಳ್ಳುವ ವಾಟ್ಸ್ ಅಪ್, ಒಬ್ಬ ವ್ಯಕ್ತಿ ಎಲ್ಲಿದ್ದಾನೆಂದು ಗುರುತಿಸುವುದು ಹಾಗಿರಲಿ ವಿಳಾಸ ತಲುಪುವ ಸುಲಭೋಪಾಯದ ಜಿಪಿಎಸ್, ಇಂಟರ್‌ನೆಟ್, ಈಮೈಲ್, ಟಿಕೆಟ್ ಬುಕ್ಕಿಂಗ್, ನ್ಯೂಸ್ ಪೇಪರ್, ಅಪ್ಲಿಕೇಷನ್, ವಾಯ್ಸ್ ಕಾಲ್, ಒಂದೇ, ಎರಡೇ? ನಿಮ್ಮ ಫೋನ್‌ನಲ್ಲಿ ಇಷ್ಟೆಲ್ಲಾ ಅವಕಾಶಗಳಿದ್ದರೆ ಕುಳಿತಲ್ಲಿಂದಲೇ ಬೇಕಾದ್ದನ್ನು ಪಡೆಯಬಹುದಾಗಿದೆ.

ಮುಂದೆಲ್ಲ ಕಳ್ಳರ ಕೊಲೆಗಾರರ ಓಟವನ್ನು ಕಂಡುಹಿಡಿಯುವ, ಪ್ರೇಮಿಗಳ ತಾಣಕ್ಕೆ ಲಗ್ಗೆಯಿಡುವ, ಅಕ್ರಮ ಸಂಬಂಧಗಳನ್ನು ಬಟಾ ಬಯಲುಗೊಳಿಸುವ ತಂತ್ರಾಂಶಗಳು

ಬರಬಹುದು. ಹೀಗೆಂದಾಕ್ಷಣ ಒಳ್ಳೆಯ ಉದ್ದೇಶಗಳಿಗೇ ಇದೆಲ್ಲ ಬಳಕೆಯಾಗುತ್ತದೆ ಎಂದಲ್ಲ, ದೇಶದ್ರೋಹಿ ಕೆಲಸಗಳಿಗೂ ಉಪಯೋಗಿಸಲ್ಪಡುತ್ತಿರುವುದು ವಿಷಾದದ ಸಂಗತಿ.

ಮಾದಕ ವಸ್ತುಗಳು, ನಕಲಿ ಪಾಸ್ ಪೋರ್ಟುಗಳು, ವಿಕೃತ ಕಾಮದ ವಿಡಿಯೋ ತುಣುಕುಗಳು ಎಲ್ಲವೂ ಭೂಗತ ಇಂಟರ್‌ನೆಟ್ (ಸೈಬರ್) ಲೋಕದ ಕೊಡುಗೆಗಳು. ನೀವೆಷ್ಟೇ ಚಾಣಾಕ್ಷರಾಗಿ ಒಂದೆಡೆಯಿಂದ ಮುಚ್ಚಲು (ಪ್ಲಗ್) ಹೋದರೆ ಮತ್ತೊಂದು ತಂತ್ರಾಂಶದಿಂದ ಭೂಗತ ವ್ಯವಹಾರಗಳು ಎಗ್ಗಿಲ್ಲದೇ ತೆರೆದುಕೊಳ್ಳುತ್ತವೆ. ಇದರ ಆಳ ಅಗಲ ತುದಿ – ಮೊದಲನ್ನು ಪತ್ತೆ ಮಾಡುವುದೇ ಸಮಸ್ಯೆಯಾಗಿದೆ.

ಬಿಡಿ, ಈಗ ಮಕ್ಕಳು ಸೆಲ್ ಫೋನ್ ಹಿಡಿದುಕೊಂಡೇ ಹುಟ್ಟುತ್ತಿದ್ದಾರೆನ್ನುವಷ್ಟರ ಮಟ್ಟಿಗೆ ಫೋನು ಮಕ್ಕಳ ಕೈಗೆ ಬಂದಿದೆ. ಟ್ಯಾಬ್ ಕೊಡು ಎಂದರೆ ಮಕ್ಕಳ ಆರೋಗ್ಯಕ್ಕೆ ಟ್ಯಾಬ್ಲೆಟ್ ಕೊಡುವುದಿಲ್ಲ, ಅವರ ಬುದ್ಧಿಗೆ ಕೊಡಬೇಕಾಗಿರುವುದು ಟ್ಯಾಬ್ಲೆಟ್. ನನ್ನ ಐದು ವರ್ಷದ ಮೊಮ್ಮಗ ಕೃಷ್ಣ ಟ್ಯಾಬ್ ಉಪಯೋಗಿಸುವ ರೀತಿ ನೋಡಿದರೆ ಅವನ ಮುಂದೆ ನಾನು ಅಜ್ಞ.

---

ನರ್ಸಿಂಗ್ ಹೋಂನಲ್ಲಿ ಒಬ್ಬಾಕೆಗೆ ಹೆರಿಗೆಯಾಯಿತು. ಗಂಡು ಮಗು, ತಾಯಿ ಮಗು ಇಬ್ಬರೂ ಆರೋಗ್ಯವಾಗಿದ್ದಾರೆ ಎನ್ನುವ ವರ್ತಮಾನ ಬಂದಾಗ ಗಂಡ ಮತ್ತು ಅವನ ನೆಂಟರು ಒಳಗೆ ನುಗ್ಗಿದರು. ಅವನಿಗೆ ತಂದೆಯಾದದ್ದು ತುಂಬಾ ಸಂತೋಷವಾಯಿತು. ಮೆತ್ತಗೆ ಮಗು ಕೈ ಮುಟ್ಟಿದ. ಅದು ಬೆರಳುಗಳಿಂದ ಅವನ ಬೆರಳು ಹಿಡಿದುಕೊಂಡಿತು. ಒಡನೇ ಅವನು ತನ್ನ ಮೊಬೈಲ್ ಮಗುವಿನ ಕೈಗೆ ಕೊಟ್ಟರೆ ಅದು ಮೊಬೈಲನ್ನು ಬಿಗಿಯಾಗಿ ಹಿಡಿದು ಕೊಂಡಿತು. ಎಲ್ಲರಿಗೂ ಅಚ್ಚರಿ. ಕೇವಲ ಕೆಲವೇ ನಿಮಿಷಗಳ ಹಿಂದೆ ಹುಟ್ಟಿದ ಮಗು ಹೀಗೆ ಮೊಬೈಲ್ ಹಿಡಿದುಕೊಳ್ಳುವುದೇ ಅಂತ ಎಲ್ಲರೂ ಅಚ್ಚರಿಯಿಂದ ನೋಡುತ್ತಿದ್ದಾಗ ನರ್ಸು ಮಗು ರೀಚ್ಡ್ ಸೇಫ್ಲಿ ಅಂತ ಮೇಲಿನ ಲೋಕಕ್ಕೆ ಮೆಸೇಜ್ ಕಳಿಸ್ತಿದೆ ಅಂತ ಹೇಳಿದಳು.

# ಕೊರವಂಜಿ ಕಾರ್ಟೂನ್



"ನೋಡಿದ್ರೇನ್ರೀ ಕೇಂದ್ರ ಸರ್ಕಾರಕ್ಕೆ ಈಗೀಗ ಬುದ್ಧಿ ಬರ್ತಾ ಇದೆ. ನಮ್ಮ ಸ್ಟೇಟಿನಲ್ಲಿ ನಡೀತಿರೋ ಕಚ್ಚಾಟ ನೋಡಿ ಹೆಂಗಸನ್ನ ಗೌರ್ನರ್ ಮಾಡ್ತಾರಂತೆ."



"ನನ್ನಪ್ಪ ಎಂಎಲ್ಎ. ಗಡಿದಾಟಿ ಫ್ರಾನ್ಸ್, ಇಂಗ್ಲೇಂಡ್, ಅಮೇರಿಕಾ ಅಲ್ಲಿಗೆಲ್ಲ ಪುಕ್ಕಟ್ಟೆ ಹೋಗ್ಬಂದ್ ಮೇಲೆ ಹೀಗೇ ಹೊಸಲು ದಾಟ್ತಾ ಇದಾರೆ!!"

# ಕಿಟ್ಟು - ಪುಟ್ಟು - ಸಿಟ್ಟು

**(ಹೀಗೊಂದು ಸಂಭಾಷಣೆ)**

**● ವೈ.ವಿ. ಗುಂಡೂರಾವ್**

ಪುಟ್ಟು ಏ ಕಿಟ್ಟು! ನಿನ್ನ ಹತ್ತಿರ ಒಂದು ಪ್ರಶ್ನೆ ಕೇಳಬೇಕಿತ್ತು.

ಕಿಟ್ಟು ಕೇವಲ ಪ್ರಶ್ನೆ ಕೇಳೋದೇ ಆಗಿಹೋಯಿತು ನಿನ್ನ ಜೀವನವೆಲ್ಲಾ. ಉತ್ತರಾನ ಸೀರಿಯಸ್ ಆಗಿ ತೊಗೊಳ್ಳೋದೇ ಇಲ್ಲ. ಯಾವ ಉತ್ತರಾನೂ ಸೀರಿಯಸ್ ಆಗಿ ತೊಗೊಂಡೇ ಇಲ್ಲ ನೀನು, ನಾನು ಇಷ್ಟೊಂದು ಉತ್ತರ ಹೇಳಿದೀನಲ್ಲಾ ಇದುವರೆಗೂ..

ಪುಟ್ಟು ನೀನು ಒಳ್ಳೆ ಉತ್ತರ ಕುಮಾರ ಅಂತಾನೇ ನಾನು ಪ್ರಶ್ನೆಗಳ ಬಾಣಗಳನ್ನ ನಿನ್ನ ಮೇಲೆ ಪ್ರಯೋಗಿಸೋದು.

ಕಿಟ್ಟು ಇರಲಿ. ಬಾಣಗಳನ್ನ ಎಸೆಯುವ ಜಾಣ! ಈಗ ಯಾವ ಹೊಸ ಬಾಣ ನನ್ನ ಮೇಲೆ ಪ್ರಯೋಗಿಸುವ ಪ್ರಯತ್ನದಲಿದ್ದೀಯಾ?

ಪುಟ್ಟು ಇದು... ಕಿಟ್ಟು! ಈ ಸಿಟ್ಟು... ಯಾರಿಗೆ ಜಾಸ್ತಿ?

ಕಿಟ್ಟು ಯಾರಿಗೆ ಅಂದರೆ? ನಮ್ಮಿಬ್ಬರಲ್ಲಿ ಯಾರಿಗೆ ಅಂತನಾ?

ಪುಟ್ಟು ಅಲ್ಲವ್ರೋ ಆತುರಕುಮಾರ! ಯಾರಿಗೆ ಅಂದರೆ ಗಂಡಸಿಗೋ ಅಥವಾ ಹೆಂಗಸಿಗೋ? ಯಾರಿಗೆ ಸಿಟ್ಟು ಹೆಚ್ಚು ಅಂತ.

ಕಿಟ್ಟು ಓ ಅದಾ ನಿನ್ನ ಇವತ್ತಿನ ಪ್ರಶ್ನೆ! ನೋಡು! ಸಾಮಾನ್ಯವಾಗಿ ಗಂಡಸಿಗೇ ಸಿಟ್ಟು ಜಾಸ್ತಿ...

ಪುಟ್ಟು ನನ್ನ ಹೆಂಡತಿನೂ ಹಾಗೇ ಹೇಳಿದಳು.

ಕಿಟ್ಟು ಎಲ್ಲ ಹೆಂಡತೀರೂ ಹಾಗೇ ಹೇಳೋದು. ನನ್ನ ಮಾತು ಪೂರ್ತಿ ಕೇಳಿಸ್ಕೊಳ್ಳಲ್ಲ ನೀನು ಯಾವಾಗಲೂ. ಈವಾಗಲೂ ಹಾಗೇ. ಆದರೆ ನನ್ನನ್ನ ಮಾತ್ರ ಆತುರ ಕುಮಾರ ಅಂತೀಯ.

ಪುಟ್ಟು ಓಹ್! ಸಾರಿ... ಸಾರಿ... ಸಾರಿ... ಮೂರು ಸಾರಿ, ಸಾರಿ.. ಮುಂದುವರೆಸಪ್ಪಾ.

ಕಿಟ್ಟು ವರಿಸ್ತೇನೆ, ಕೇಳು. ಸಾಮಾನ್ಯವಾಗಿ ಗಂಡಸಿಗೇ ಸಿಟ್ಟು ಜಾಸ್ತಿ. ಅದಕ್ಕೆ ಸಾಮಾನ್ಯವಾಗಿ ಹೆಂಗಸೇ ಕಾರಣ. ಹಾಗೇನೇ ಹೆಂಗಸಿಗೇ ಸಿಟ್ಟು ಜಾಸ್ತಿ. ಅದಕ್ಕೆ ಗಂಡಸೇ ಕಾರಣ... ಅದರಲ್ಲೂ ಮುಖ್ಯವಾಗಿ ಈ ಕವಿಗಳು ಮತ್ತು ಪ್ರೇಮಿಗಳು.

ಪುಟ್ಟು ಏ ಪಾಪ! ಈ ಕವಿಗಳು ಮತ್ತು ಪ್ರೇಮಿಗಳು ಅವರ ಪಾಡಿಗೆ ಅವರವರ ಕಲ್ಪನಾ ಲೋಕದಲ್ಲಿರ್ತಾರೆ. ಅವರು ಹೇಗೋ ಕಾರಣರಾಗ್ತಾರೆ? ಅವರೇ ಕಾರಣ ಅಂತ ನೀನು ರಾಜಕಾರಣ ಮಾಡಬೇಡ.

ಸಮಯ ಅನ್ನುವುದು ನದಿ ನೀರಿನಂತೆ. ನದಿ ನೀರು ಹರಿಯುತ್ತಲೇ ಇರುತ್ತದೆ, ಬದುಕಿನಂತೆ. ಒಂದೇ ನೀರನ್ನು ಎರಡು ಸಲ ಮುಟ್ಟೋದು ಅಸಾಧ್ಯವಾದ ಹಾಗೆ ಕಳೆದುಹೋದ ಬದುಕನ್ನು ಮತ್ತೆ ಕಾಣಲಾಗುವುದಿಲ್ಲ. ಅದಕ್ಕೆ ಜೀವನದ ಪ್ರತಿಯೊಂದು ಕ್ಷಣವನ್ನೂ ಆನಂದದಿಂದ ಅನುಭವಿಸಿ.

ಕಿಟ್ಟು ರಾಜ ಕಾರಣನೂ ಅಲ್ಲ, ರಾಣಿ ಕಾರಣನೂ ಅಲ್ಲ, ಕೇಳು, ರಾಜ ಮತ್ತು ರಾಣಿ ಇಬ್ಬರೂ ಕಾರಣ. ನೋಡು! ಸಾಮಾನ್ಯವಾಗಿ ಹೆಣ್ಣಿಗೆ ಸೌಂದರ್ಯಪ್ರಜ್ಞೆ ಜಾಸ್ತಿ. ಹುಡುಗ ಕನ್ನಡಿಗ ಆದರೆ ಹುಡುಗಿ 'ಕನ್ನಡಿ'ತಿ. ಯಾವಾಗಲೂ ಚೆನ್ನಾಗಿ ಕಾಣಿಸ್ಕೋಬೇಕು ಅಂತ ಆಸೆ ಇರುತ್ತೆ, ಅಲ್ಲವಾ? ಹೌದು ತಾನೆ? ಇರುತ್ತೆ ತಾನೇ?

ಪುಟ್ಟು ಹೌದು. ಹೌದು. ಇರುತ್ತೆ. ಇರುತ್ತೆ. ಮುಂದೆ ಹೇಳು.

ಕಿಟ್ಟು ಯಾವುದೇ ಸುಂದರ ಹುಡುಗೀನ ನೆನೆಸ್ಕೊಬೇಡ. ನನ್ನ ಮಾತು ಕೇಳು. ಈ ಕವಿಗಳು ಏನು ಮಾಡುತಾರೆ ಗೊತ್ತಾ? ... ''ಆಹಾ! ನೀನು ಕೋಪಿಸಿಕೊಂಡಾಗ ತುಂಬಾ ಚೆನ್ನಾಗಿ ಕಾಣಸ್ತೀಯಾ'' ಅಂತ ಪದ್ಯ ಬರೀತಾರೆ. ಇನ್ನು ಪ್ರೇಮಿಗಳೂ ಅದನ್ನೇ ಕಾಪಿ ಮಾಡಿ ಹಾಡ್ತಾರೆ. ಹಾಗಾಗಿ ಇವರು ಯಾವಾಗ್ಯಾವಾಗ್ಯಾವಾಗ ಆ ಮಾತುಗಳನ್ನು ಕೇಳುತಾರೋ, ಆವಾಗಾವಾಗಾವಾಗ ಸಿಟ್ಟು ಮಾಡಿಕೋತಾನೇ ಇರ್ತಾರೆ.

ಪುಟ್ಟು ಸರಿಯಪ್ಪ. ಹಾಗೆ ಗಂಡಸಿನ ಸಿಟ್ಟಿಗೆ ಹೆಂಗಸು ಕಾರಣ ಅಂತ ಹೇಳಿದೆಯಲ್ಲಾ? ಅದು ಹೇಗೆ ಅಂತ ಹೇಳಿಬಿಡು.

ಕಿಟ್ಟು ಹೇಳಿಬಿಡ್ತೇನೆ, ಕೇಳಿಬಿಡು... ನೋಡು! ಮೂಗಿರೋವರೆಗೂ..

ಪುಟ್ಟು ನೆಗಡಿ ತಪ್ಪಿದ್ದಲ್ಲ.

ಕಿಟ್ಟು ಅದಕ್ಕೇ ನಿನಗೆ ಆತುರ ಕುಮಾರ ಅನ್ನೋದು. ಅದು ಹಳೇ ಗಾದೆ. ಈಗ ಹೊಸ ಗಾದೆ. ಮೂಗಿರೋವರೆಗೂ ಮುಂಗೋಪ ತಪ್ಪಿದ್ದಲ್ಲ, ಅಂತಾನೆ ನನ್ನ ಒಬ್ಬ ಗೆಳೆಯ ಗೋಪಿ. ಅದಕ್ಕೆ ಅವನನ್ನ ಮುಂಗೋಪಿ ಅಂತೀವಿ ನಾವೆಲ್ಲಾ.

ಪುಟ್ಟು ಕೋಪಿಷ್ಟ ಅನ್ನಲ್ಲವಾ?

ಕಿಟ್ಟು ಅನ್ನಲ್ಲ. ಗೋಪಿಷ್ಟ ಅಂತೀವಿ.

ಪುಟ್ಟು ಅಲ್ಲಿಗೆ ಗಂಡು, ಹೆಣ್ಣು ಇಬ್ಬರಿಗೂ ಮೂಗಿರೋದರಿಂದ ಇಬ್ಬರಿಗೂ ಕೋಪ ಅಂದರೆ ಮುಂಗೋಪ ಇರುತ್ತೆ ಅಂತಾಯ್ತಲ್ಲ?

ಕಿಟ್ಟು ಅಷ್ಟು ಸುಲಭ ಅಲ್ಲ, ಪೂರ್ತಿ ಕೇಳು. ಗಂಡಸಿಗೆ ಮೂಗಿನ ತುದೀಲೇ ಕೋಪ ಇರುತ್ತೆ. ಹೆಂಗಸಿಗೆ ಕೋಪ ಮೂಗುಬೊಟ್ಟಿನ ತುದೀಲೇ ಇರುತ್ತೆ, ಅಂತಾರೆ ನಾ. ಕಸ್ತೂರಿ. ಈಗ ಹೇಳು, ಮೂಗು ಶಾಶ್ವತಾನೋ, ಮೂಗುಬೊಟ್ಟು ಶಾಶ್ವತಾನೋ?

ಪುಟ್ಟು ಇದೂ ಒಂದು ಪ್ರಶ್ನೆನಾ? ಮೂಗೇ ಶಾಶ್ವತ ಅಂತ ಮೂಗನಿಗೂ ಗೊತ್ತು. ಆದರೆ ಅವನಿಗೆ ಅದನ್ನ ಹೇಳಕ್ಕಾಗಲ್ಲ, ಅಷ್ಟೆ

ಕಿಟ್ಟು ಅದಕ್ಕೇ ನಾನು ಹೇಳಿದೆ, ಗಂಡಸಿನ ಸಿಟ್ಟಿಗೆ ಕಾರಣ ಹೆಣ್ಣಿನ ಮೂಗುಬೊಟ್ಟು. ಮರಿ ಬೇಡ ಮರೀ. ಇನ್ನೂ ಕೇಳು. ಮೂಗುಬೊಟ್ಟು ಸೌಂದರ್ಯದ ಸಂಕೇತ, ಚಿನ್ನದ ಸಂಕೇತ, ಒಡವೆಗಳ ಸಂಕೇತ, ಸಂಪತ್ತಿನ ಸಂಕೇತ, ಆಸ್ತಿಯ ಸಂಕೇತ. ಇನ್ ಶಾರ್ಟ್, ಆಸೆಗಳ ಸಂಕೇತ. ಹೆಂಗಸಿನ ಆಸೆಗಳನ್ನ ಈಡೇರಿಸೋಕೆ ಪ್ರಯತ್ನ ಪಡೋದೇ ಗಂಡಸಿನ ಜೀವನದ ಏಕೈಕ ಗುರಿ. ಆ ಆಸೆಗಳಲ್ಲಿ ಕೆಲವು ಈಡೇರಿದ ಹಾಗೆಲ್ಲಾ ಸ್ವಲ್ಪ ಸಮಯ ಸಿಟ್ಟಿಗೆ ರೆಸ್ಟ್.

ಪುಟ್ಟು ಮತ್ತೆ ಹೊಸ ಆಸೆ, ಹೊಸ ಬಯಕೆ. ಅದನ್ನ ಈಡೇರಿಸೋಕೆ ಹೊಸ ಪ್ರಯತ್ನ, ಹೊಸ ಪರಿಶ್ರಮ. ಅಲ್ಲವಾ?

ಕಿಟ್ಟು ಸರಿಯಾಗಿ ಪಲುಗಿದೆ ಮರಿ. ಆಸೆ ಈಡೇರಿದಾಗ ರೆಸ್ಟ್, ಈಡೇರದಿದ್ದಾಗ ಅನ್‌ರೆಸ್ಟ್, ಇದೇ ಸೈಕಲ್. ಈ ಸೈಕಲ್ ಸುತ್ತಾ ಸುತ್ತುತಾ ಇರುತ್ತೆ ಪುಟ್ಟು ಈ ಸಿಟ್ಟು. ಅಂಥಾಗೆ ಶಾಂತಿ ಅಂದರೇನು ಗೊತ್ತಾ ನಿನಗೆ?

ಪುಟ್ಟು ''ಶಾಂತಿ'' ಯಾರು ಅಂತ ಗೊತ್ತು.

ಕಿಟ್ಟು ಯಾರು ಅಲ್ಲ, ಶಾಂತಿ ಏನು ಅಂತ ಕೇಳೂ.

ಪುಟ್ಟು ಸರಿ. ಶಾಂತಿ ಏನು ಅಂತ ಹೇಳು.

ಕಿಟ್ಟು ಎರಡು ಯುದ್ಧಗಳ ನಡುವಿನ ವಿಶ್ರಾಂತಿಯೇ ಶಾಂತಿ ಅಂತಾರೆ. ಯಾರು?

ಪುಟ್ಟು ಅದೇ. ಶಾಂತಿ.

ಕಿಟ್ಟು ಅಲ್ಲ, ಯುದ್ಧ ಮತ್ತು ಶಾಂತಿ ಎರಡೂ ಅನುಭವಿಸಿದ ಯೋಧರು.

ಪುಟ್ಟು ನಿನ್ನ ವಾದ ಪೂರ್ತಿ ಒಪ್ಪಿಕೊಳ್ಳೋದಕ್ಕೆ ಆಗಲ್ಲ. ಗಂಡಸರಿಂದಾನೇ ಗಂಡಸರಿಗೆ ಸಿಟ್ಟು ಬರುವ, ಬರಿಸುವ ಪ್ರಸಂಗಗಳಿಲ್ಲವಾ? ಉದಾಹರಣೆಗೆ ಮೇಷ್ಟ್ರು - ವಿದ್ಯಾರ್ಥಿಗಳು, ಅಧಿಕಾರಿ - ನೌಕರರು, ಇಬ್ಬರು ಗೆಳೆಯರು, ಅಕ್ಕಪಕ್ಕದ ಮನೆಯವರು, ಇತರೆ ಸಾಮಾಜಿಕ ವ್ಯವಸ್ಥೆಯಲ್ಲಿನ ಅವ್ಯವಸ್ಥೆ ಇತ್ಯಾದಿ ಕೋಟಿ ಕೋಟಿ ಉದಾಹರಣೆಗಳನ್ನ ಕೊಡಬಹುದು.

ಕಿಟ್ಟು  ಹೌದು. ಇರಬಹುದು. ಸುಂನೆ ಅನುಕೂಲಕ್ಕಾಗಿ ಗಂಡು, ಹೆಣ್ಣು ಅಂತ ಪ್ರತ್ಯೇಕಿಸಿ ಹೇಳೋದೇ ಹೊರತು, ಸಿಟ್ಟು ಕಾಮನ್ ಜೆಂಡರ್. ಪುರುಷ, ಸ್ತ್ರೀ ಅನ್ನೋ ಭೇದ ಇಲ್ಲ ಅದಕ್ಕೆ. ಅದಕ್ಕೂ ಮುಂಚೆ ಒಂದು ಪ್ರಶ್ನೆ ಕೇಳತೀನಿ. ಅಸಲು ಸ್ತ್ರೀ ಅಂದರೆ ಏನು ಗೊತ್ತಾ ನಿನಗೆ?

ಪುಟ್ಟು  ಮೊದಲು ಶಾಂತಿ ಅಂದರೆ ಏನು ಅಂದೆ. ಈಗ ಸ್ತ್ರೀ ಅಂದರೇನು ಅಂತ ಕೇಳ್ತೀಯ. ಆಕ್ಚುವಲೀ, ನಾನು ಪ್ರಶ್ನೆ ಕೇಳೋಕೆ ಅಂತ ಬಂದರೆ ನನಗೇ ಪ್ರಶ್ನೆ ಕೇಳಾಕತ್ತಿದೀಯ. ಸರಿ, ಸ್ತ್ರೀ ಅಂದರೆ ಏನು ಅಂತ ನಿನ್ನ ಡೆಫಿನಿಷನ್ ಏನು ಅಂತ ನೀನೇ ಹೇಳಿಬಿಡಪ್ಪ.

ಕಿಟ್ಟು  ನನ್ನ ಡೆಫಿನಿಷನ್ ಅಲ್ಲ. ಹಿರಿಯರು ಹೇಳಿದ್ದು ''ವಸುದೇವ ಪುಮಾನೇಕ: ಸ್ತ್ರೀಮಯಮಿತರ ಜಗತ್.'' ಅಂದರೆ ಆ ದೇವರು ಒಬ್ಬನೇ ಪುರುಷ. ಜಗತ್ತಿನಲ್ಲಿರುವ ಮಿಕ್ಕವರೆಲ್ಲಾ ಸ್ತ್ರೀಯರು ಅಂತರ್ಥ. 'ಸ'ಕಾರ, 'ತ'ಕಾರ ಮತ್ತು 'ರ'ಕಾರ ಸೇರಿ ಸ್ತ್ರೀ ಆಗಿದ್ದು. 'ಸ' ಅಂದರೆ, ಸತ್ವಗುಣ, 'ತ' ಅಂದರೆ ತಮೋ ಗುಣ. 'ರ' ಅಂದರೆ ರಜೋಗುಣ. ಈ ಮೂರು ಗುಣಗಳು ಯಾರಲ್ಲಿ ಇರುತ್ತವೋ ಅವರೆಲ್ಲಾ ಸ್ತ್ರೀ. ಆ ಗುಣಗಳನ್ನ ಮೀರಿದವನು ಪುರುಷೋತ್ತಮ. ತಮೋ ಗುಣದವರು ಇನ್ ಆಕ್ಟಿವ್, ರಜೋ ಗುಣದವರು ಓವರ್ ಆಕ್ಟಿವ್, ಹೈಪರ್ ಆಕ್ಟಿವ್, ರೀಆಕ್ಟಿವ್ ಮತ್ತು ಸತ್ವ ಗುಣದವರು ಪ್ರೊ ಆಕ್ಟಿವ್. ಕಾಮ ಏಷ, ಕ್ರೋಧ ಏಷ, ರಜೋಗುಣ ಸಮುದ್ಭವ, ಅನ್ನುತ್ತೆ ಗೀತೆ. ಆಸೆ ಅನ್ನೋದು ಕಾಮ. ಅದು ಈಡೇರಿದಾಗ ಕಾಮ್. ಈಡೇರದಿದ್ದಾಗ ಸ್ಟಾರ್ಮ್. ಅದರಿಂದ ಹಾರ್ಮ್. ಗೊತ್ತಾಯಿತಾ? ಆದ್ದರಿಂದ ಪುಟ್ಟು! ಸತ್ವಗುಣವನ್ನು ಹೆಚ್ಚು ಮಾಡಿಕೊಳ್ಳೋದೆ ಸಿಟ್ಟು ಕಡಿಮೆ ಮಾಡಿಕೊಳ್ಳೋದರ ಗುಟ್ಟು.

ಪುಟ್ಟು  ಸರಿಯಪ್ಪ . ಈಗ ನನ್ನ ಕೊನೇ ಪ್ರಶ್ನೆ.

ಕಿಟ್ಟು  ಥಾಂಕ್ ಯೂ... ಥಾಂಕ್ ಯೂ.

ಪುಟ್ಟು  ಥಾಂಕ್ ಯೂ. ಯಾಕೆ?

ಕಿಟ್ಟು  ಅಂತೂ ನಿನ್ನ ಪ್ರಶ್ನೆಗಳ ಸುರಿಮಳೆ ನಿಂತಿತಲ್ಲಾ ಅಂತ. ಈಗ ನಾನೇ ನಿನ್ನನ್ನ ಒಂದು ಪ್ರಶ್ನೆ ಕೇಳಲಾ?

ಪುಟ್ಟು  ಏನದು?

ಕಿಟ್ಟು  ಕೊನೇ ಪ್ರಶ್ನೆ ಅಂದೆಯಲ್ಲಾ ಅದು ಯಾವ ಪ್ರಶ್ನೆ ಅನ್ನೋದೇ ನನ್ನ ಪ್ರಶ್ನೆ.

ಪುಟ್ಟು  ಅದೇ ಇದು. ಈ ಸಿಟ್ಟು ಬಿಡಬಹುದಾ? ಬಿಡಬಹುದಾದರೆ ಅದು ಹೇಗೆ? ಸತ್ವ ಗುಣನ ಜಾಸ್ತಿ ಮಾಡಿಕೊಳ್ಳೋದು ಹೇಗೆ?

ಕಿಟ್ಟು  ಅದು ಬಿಡಕ್ಕಾಗಲ್ಲ. ಮ್ಯಾನೇಜ್ ಮಾಡಬಹುದು ಅಷ್ಟೆ. ಬೀಪೀ, ಶುಗರ್, ಮಾನಸಿಕ ಒತ್ತಡ ಇವನ್ನೆಲ್ಲಾ ಬೇರು ಸಹಿತ ಬೇರೆ ಮಾಡಕ್ಕಾಗಲ್ಲ. ಸ್ವಲ್ಪ

ಕಂಟ್ರೋಲ್‌ನಲ್ಲಿಟ್ಟುಕೋಬೇಕು ಅಷ್ಟೆ ವಿ ಹ್ಯಾವ್ ಟು ಕೋಪ್ ವಿದ್ ಕೋಪ, ಏನಪ್ಪಾ!

ಪುಟ್ಟು ಅದೇ. ಹೇಗೆ ಕಂಟ್ರೋಲ್‌ನಲ್ಲಿಟ್ಟುಕೊಳ್ಳೋದು? ಹೇಗೆ ಮ್ಯಾನೇಜ್ ಮಾಡೋದು? ಹೇಗೆ ಕೋಪ ಮಾಡೋದು?

ಕಿಟ್ಟು ಏಯ್! ಕೊನೇ ಪ್ರಶ್ನೆ ಅಂದೆ. ಎಷ್ಟೊಂದು ಪ್ರಶ್ನೆಗಳನ್ನ ಉದುರಿಸಿ, ನನ್ನ ಕೋಪ ಹೆಚ್ಚು ಮಾಡುತಾ ಇದೀಯಾ.

ಪುಟ್ಟು ಇಲ್ಲ, ಇದು ಉಪ-ಪ್ರಶ್ನೆಗಳು.

ಕಿಟ್ಟು ಸರಿ. ಸುಮ್ಮನಿದ್ದು ಬಿಡು.

ಪುಟ್ಟು ಸರಿ. ಸುಮ್ಮನಿದ್ದು ಬಿಡುತೀನಿ.

ಕಿಟ್ಟು ಈಗಲ್ಲ, ಕೋಪ ಬಂದಾಗ. ಸಿಟ್ಟು ನಿಯಂತ್ರಣದ ಸಪ್ತಪದಿ ಹೇಳ್ತೀನಿ ಕೇಳು. ಸುಮ್ಮನಿದ್ದು ಬಿಡು. ಅದು ಮೊದಲನೇ ಹೆಜ್ಜೆ. ಸೈಲೆನ್ಸ್ ಈಸ್ ದ ಬೆಸ್ಟ್ ಮೆಡಿಸಿನ್. ಎರಡನೇ ಹೆಜ್ಜೆ, ನಮಗೆ ಕೋಪ ಬಂದಿರುವ ವಿಷಯ ಬೇರೆಯವರ ಹತ್ತಿರ ಹೇಳಿಬಿಡಬೇಕು. ನನಗೀಗ ಸಿಟ್ಟು ಬಂದಿದೆ. ದಯವಿಟ್ಟು ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ. ಯಾಕೆಂದರೆ ಕೋಪ ಬಂದಾಗ ನಾನು ಮನುಷ್ಯನೇ ಅಲ್ಲ ಅಂತ ಕೆಲವರು ಅನ್ನೋದು ನೀನು ಕೇಳಿರಬಹುದು. ಕೋಪ ಬರದಿದ್ದಾಗ ಮಾತ್ರ ಇವರು ಮನುಷ್ಯರಾ ಅನ್ನೋದು ಬೇರೆ ವಿಷಯ ಅನ್ನು. ಆದರೂ ನಾವು ಹಾಗೆ ಹೇಳಿಕೊಂಡಾಗ ನಾವು ಹುಷಾರಾಗ್ತೀವೋ ಇಲ್ಲವೋ ಬೇರೆಯವರು ಹುಷಾರಾಗಿರುತ್ತಾರೆ, ಇಲ್ಲ ನಮ್ಮಿಂದ ದೂರ ಹೋಗ್ತಾರೆ. ಆಗ ಕೋಪ ತನ್ನಿಂತಾನೇ ಕಡಿಮೆ ಆಗತ್ತೆ. ಮೂರನೇ ಹೆಜ್ಜೆ ಏನು ಗೊತ್ತಾ? ನಾಲ್ಕು ಹೆಜ್ಜೆ ಹೋಗಿ ಒಂದೆರಡು ಲೋಟ ತಣ್ಣೀರು ಕುಡೀಬೇಕು.

ಪುಟ್ಟು ತಣ್ಣೀರು ಕುಡಿದರೂ ಸಿಟ್ಟು ಕೆಳಗಿಳೀದೇ ಇದ್ದರೆ?

ಕಿಟ್ಟು ಆಗ ತಣ್ಣೀರು ತಲೆ ಮೇಲೆ ಸುರಕೋಬೇಕು. ಬೆಂಕಿನ ನೀರಿನಿಂದ ಆರಿಸೋದಿಲ್ಲವಾ? ಹಾಗೇ ಇದೂ. ಕೋಪನೂ ಬೆಂಕಿನೇ ಅಲ್ಲವಾ? ಇನ್ನು ನಾಲ್ಕನೇ ಹೆಜ್ಜೆನೇ ಹತ್ತು ಎಣಿಸೋದು. ಹತ್ತು ಎಣಿಸಿ ಕೋಪ ಕಡಿಮೆ ಮಾಡಿಕೊಂಡವರನ್ನ ನಾನು ಇದುವರೆಗೂ ಕಂಡಿಲ್ಲ, ಆದರೂ ಈ ಮೆಥಡ್ ಒಂದು ರೀತೀಲಿ ಕೆಲಸ ಮಾಡತ್ತೆ ಅನ್ನಿಸುತ್ತೆ. ಹೇಗೆ ಗೊತ್ತಾ? ನಮ್ಮ ನಾ. ಕಸ್ತೂರಿ ಹೇಳ್ತಾರೆ ಕೋಪ ಬಂದ ತಕ್ಷಣ ನಾವು ಇನ್ನೊಬ್ಬರನ್ನ ಬೈಯಬಾರದು, ಹತ್ತು ಎಣಿಸಬೇಕು. ಅಷ್ಟರೊಳಗೆ ಇನ್ನೂ ಒಳ್ಳೊಳ್ಳೆ ಬೈಗಳು ನೆನಪಾಗಬಹುದು ಅಂತ. ಇಪ್ಪತ್ತು ಎಣಿಸಿದರೆ ಇನ್ನೂ ಒಳ್ಳೊಳ್ಳೆ ಬೈಗಳು, ಮೂವತ್ತು, ನಲವತ್ತು.. ಹೀಗೆ ಎಣಿಸುತಾನೇ ಇರೋದು ಕೋಪ ಕಮ್ಮಿ ಆಗೋ ತನಕ.

ಪುಟ್ಟು ಈ ''ಸಿಟ್‌ಶಮನಕ್ರಿಯೆ'' ನಿರಂತರವಾಗಿ ನಡೀತಾನೇ ಇರಬೇಕಾ?

ಕಿಟ್ಟು  ಹೌದು. ಮಧ್ಯ ಮಾತಾಡಿ ನನಗೆ ಸಿಟ್ಟು ಬರಿಸಬೇಡ.... ಹಾಂ! ಏನು ಹೇಳ್ತಾ ಇದ್ದೇ? ಹೌದು. ನಿರಂತರವಾಗಿ ನಡೀತಾನೇ ಇರಬೇಕು. ಜೊತೆಗೆ ಉತ್ತಮ ಜೀವನ ಶೈಲಿ, ಸಾತ್ವಿಕ ಆಹಾರ, ಜಂಕ್ ಫುಡ್‌ನ ಲಿಂಕ್ ತಪ್ಪಿಸ್ಬೋಕು. ಅದು ಹೊಟ್ಟೆ ಒಳಗೆ ಹೋದಷ್ಟೂ ಸಿಟ್ಟು ಹೊರಗೆ ಬರತ್ತೆ. ಮುಂದಿನ ಹೆಜ್ಜೆ ಏನು ಗೊತ್ತಾ? ಪ್ರಾಣಾಯಾಮ. ಪ್ರಾಣಾಯಾಮ ಅಂದರೇನು ಹೇಳು?

ಪುಟ್ಟು  ನಾನೇನೂ ಹೇಳಲ್ಲ. ನೀನೇ ಹೇಳು. ಆಮೇಲೆ ಸಿಟ್ಟು ತರಿಸಿದೆ, ಸಿಟ್ಟು ಬರಿಸಿದೆ ಅಂತ ನನಗೇ ಬೈತೀಯ.

ಕಿಟ್ಟು  ಓಕೆ. ಇಲ್ಲಿ ಕೇಳು. ಪ್ರಾಣಾಯಾಮ ಅಂದರೆ ನಿಧಾ...ನವಾಗಿ ಉಸಿರು ತೊಗೊಳ್ಳೋದು, ನಂತರ ಉಸಿರು ಬಿಡದೇನೇ ಇರೋದು. ಗಾಬರಿ ಆಗಬೇಡ. ಸ್ವಲ್ಪ ಹೊತ್ತು ಅಷ್ಟೆ. ಮತ್ತೆ ಕೆಲವು ಸಾರಿ ಉಸಿರು ಬಿಡೋದು, ತೊಗೊಳ್ಳದೇನೇ ಇರೋದು. ಅದೂ ಸ್ವಲ್ಪ ಹೊತ್ತು. ಹೀಗೇ ಮಾಡ್ತಾ ಇದ್ದರೆ ಕ್ರಮೇಣ ಸಿಟ್ಟು ದೂರ ಹೋಗತ್ತೆ. ನಾವು ಯಾರ ಮೇಲೆ ಸಿಟ್ಟು ಮಾಡಿಕೊಳ್ಳುತ್ತಿದ್ದವೋ ಅವರು ಹತ್ತಿರ ಬರ್ತಾರೆ.

ಪುಟ್ಟು  ಆಯಿತಪ್ಪಾ! ನನ್ನ ಉಸಿರು ಹೋಗೋದಕ್ಕೆ ಮುಂಚೆ ಮುಂದಿನ ಹೆಜ್ಜೆ ಏನಾದರೂ ಇದ್ದರೆ ಹೇಳುವಂಥವನಾಗು.

ಕಿಟ್ಟು  ಹಾಗೇ ಆಗ್ತೀನಿ ಕೇಳುವಂಥವನಾಗು. ಧ್ಯಾನ. ಧ್ಯಾನ ಮಾಡೋದು.

ಪುಟ್ಟು  ಸುಮ್ಮನೆ ಮಾಡೋದು ಅಂದರೆ! ಹೇಗೆ ಮಾಡೋದು, ಏನು ಮಾಡೋದು ಅನ್ನೋದನ್ನೂ ಹೇಳಬೇಡವಾ?

ಕಿಟ್ಟು  ಮಧ್ಯೆ ಮೂಗು ತೂರಿಸಬೇಡ. ಸುಮ್ಮನೆ ಮೂಗಿನ ತುದಿ ನೋಡ್ತಾ ಕೂತಿರೋದು, ಏನೂ ಮಾಡದೆ. ಅದೇ ಧ್ಯಾನ. ಸಿಟ್ಟು ಮೂಗಿನ ತುದೀಲೇ ಇರೋದರಿಂದ ನೀನು ಅದನ್ನೇ ನೋಡ್ತಾ ಇದ್ದರೆ ಅದು ದೂರ ಓಡಿ ಹೋಗುತ್ತೆ. ಆಮೇಲೆ ಮತ್ತೆ ಅದನ್ನ ಕರೀಬೇಡ.

---

**ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ**

1. ಮತ್ಸರ 3. ಜಠರ 5. ಆನೆ 6. ಕುರುಕುತಿಂಡಿ 8. ಜುಲುಮೆ 9. ಹಮಾಲ 12. ಮೆರವಣಿಗೆ 13. ಕುಶ 14. ಕರುಳು 15. ನಗಾರಿ

**ಮೇಲಿಂದ ಕೆಳಕ್ಕೆ**

1. ಮನೆ 3. ಜರಡಿ 4. ರವಾನೆ 5. ಆಜುಬಾಜು 6. ಕುಲುಮೆ 7. ಕುಟುಕುಜೀವ 9. ಹಲಗೆ 10. ಲಕ್ಷಾಧೀಶ 11. ಸಂದೂಕ 12. ಮೆದುಳು 13. ಕುರಿ

# ಚುನಾವಣಾ ಆಮಿಷ

● ಎಂ.ಎಸ್. ನರಸಿಂಹಮೂರ್ತಿ

ಮನೆ ಬಾಗಿಲು ಸದ್ದಾಯಿತು. ವಿಶ್ವ ಬಾಗಿಲು ತೆಗೆದ. ಹೊರಗೆ ಒಂದು ಗುಂಪು ಜನ ನಿಂತಿದ್ದರು. ತಾನೇನು ತಪ್ಪು ಮಾಡಿದೆ ಎಂದು ವಿಶ್ವನಿಗೆ ಗಾಬರಿಯಾಯಿತು. ಎಲ್ಲರೂ ಸಾಮೂಹಿಕವಾಗಿ ಕೈ ಮುಗಿದರು. ರಪರಪನೆ ನಮಸ್ಕಾರಗಳು ಬಿದ್ದವು.

''ನಮಸ್ಕಾರ ಸಾರ್... ತಾವು ವಿಶ್ವನಾಥ್ ತಾನೇ?''

''ಹೌದು. ತಾವು ಯಾರೋ ಗೊತ್ತಾಗಲಿಲ್ಲ... ಚಂದಾ ವಸೂಲೀನಾ? ಪಾದಯಾತ್ರೇನಾ?''

''ಮತಯಾತ್ರೆ ಸಾರ್. ಬ್ಯಾಲೆಟ್ ಬಾಕ್ಸ್ ಜಾತ್ರೆ'' ಎಂದ ಗುಂಪು ಮತ್ತೊಮ್ಮೆ ಸಾಮೂಹಿಕವಾಗಿ ನಮಸ್ಕಾರ ಮಾಡಿದರು. ಅವರ ನಡುವೆ ಲೀಡರ್ ಒಬ್ಬ ನಿಂತಿದ್ದ. ಕೊಬ್ಬಿದ ಗೂಳಿಯಂತೆ ಕಾಣುತ್ತಿದ್ದ.

''ನಾನು ಮಹಾಬಲ. ಜನಪ್ರಿಯ ಅಭ್ಯರ್ಥಿ... ಚುನಾವಣೆಗೆ ನಿಂತಿದ್ದೀನಿ. ನಿಮ್ಮ ಅಮೂಲ್ಯವಾದ ಮತವನ್ನು ನಿಮ್ಮ ಅಮೃತಹಸ್ತದಿಂದ ನನಗೆ ಒತ್ತಬೇಕು ಸಾರ್.''

''ಒತ್ತಿಸಾರ್, ಒತ್ತಿ'' ಎಂದು ಒಕ್ಕೊರಲಿನಿಂದ ಎಲ್ಲರೂ ಹೇಳಿದರು.

ಬಂದಿದ್ದ ಅಭ್ಯರ್ಥಿಯನ್ನು ವಿಶ್ವ ಗಮನಿಸಿದ. ಎಲ್ಲೋ ನೋಡಿದ ಮುಖ. ಯಾವ ಬಸ್‌ಸ್ಟ್ಯಾಂಡೋ, ಯಾವ ರೈಲ್ವೇ ಸ್ಟೇಷನ್ನೋ ತಿಳಿಯಲಿಲ್ಲ.

''ನಿಮ್ಮನ್ನ ಎಲ್ಲೋ ನೋಡಿದ್ದೀನಲ್ಲ?'' ಎಂದು ವಿಶ್ವ ಹೇಳಿದಾಗ ಮಹಾಬಲ ಖುಷಿಯಾದ.

''ನಿಮ್ಮದು ತಲೆಯಲ್ಲ ಸಾರ್, ನೆನಪಿನ ಬಲೆ. ಸ್ಮರಣ ಶಕ್ತಿ ತುಂಬಾನೇ ಇದೆ... ನಾನು ಕಳೆದ ಸಲಾನೂ ಓಟು ಕೇಳೋಕೆ ಬಂದಿದ್ದೆ... ನೀವು ನನಗೇ ಓಟು ಕೊಟ್ಟಿದ್ರಿ... ನನ್ನ ಗೆಲ್ಲಿಸಿದ್ದೇ ನೀವು..''

ವಿಶ್ವನಿಗೆ ಆನಂದವಾಯಿತು.

''ಐದು ವರ್ಷಕ್ಕೊಂದು ಸಲ ಬರ್ತೀರಲ್ಲಾ... ಹೀಗಾಗಿ ನೆನಪು ಇಟ್ಟುಕೊಳ್ಳೋದು ಬಹಳ ಕಷ್ಟ.. ಮೊನ್ನೆ ನಿಮ್ಮ ಪೋಸ್ಟರ್‌ಗೆ ಯಾರೋ ಸಗಣಿ ಹೊಡೆದಿದ್ರು, ಆ ನೆನಪು ಬಂತು'' ಎಂದು ವಿಶ್ವ ನಕ್ಕ. ಯಾರಿಗೋ ಸಗಣಿ ಹೊಡೆದಿದ್ದರು ಎಂಬಂತೆ ಮಹಾಬಲನೂ ನಕ್ಕ.

ಹಿಂಬಾಲಕರು ಮನೆ ಬಾಗಿಲಲ್ಲಿ ಉಳಿದರು. ಮಹಾಬಲ ಮತ್ತು ಆತನ ಸೆಕ್ರೆಟರಿ ಒಳಗಡೆ ಬಂದು ವಿಶ್ವನ ಮನೆಯಲ್ಲಿ ಓಟು ಕೇಳಲು ಕುಳಿತುಕೊಂಡರು.

''ನಿಮಗೇನಾದರೂ ತೊಂದರೆ ಇದ್ದರೆ ದಯವಿಟ್ಟು ಹೇಳಿ... ಎಲ್ಲಾ ಸರಿ ಮಾಡಿಕೊಡ್ತೀನಿ...'' ಸೆಕ್ರೆಟರಿ ಪೀಠಿಕೆ ಹಾಕಿದರು.

ವಿಶ್ವ ತೊಂದರೆಗಳ ಪಟ್ಟಿ ತೆಗೆದ.

''ನಮ್ಮ ಮನೆಯ ಮುಂದೆ ರಸ್ತೆ ದೀಪ ಇಲ್ಲ.. ರಸ್ತೇನೂ ನೆಟ್ಟಗಿಲ್ಲ, ರಾತ್ರಿ ಹೊತ್ತು ಮಹಿಳೆಯರು, ಮುದುಕರು ಓಡಾಡೋದು ಕಷ್ಟ ಆಗುತ್ತೆ... ರಸ್ತೆಗೆ ಟಾರ್ ಹಾಕಿಸಿಲ್ಲ.. ನಾಯಿಗಳ ಕಾಟ ಜಾಸ್ತಿ... ಟೂ ವ್ಹೀಲರ್‌ನಲ್ಲಿ ಬರುವ ಕಳ್ಳರು ಚೈನುಗಳು ಕಿತ್ತುಕೊಂಡು ಹೋಗ್ತಾ ಇದ್ದಾರೆ... ಲೈನು ಹೊಡೆಯೋ ಬೀದಿಕಾಮಣ್ಣರು ಜಾಸ್ತಿ ಆಗ್ತಿದ್ದಾರೆ.''

ಮಹಾಬಲನ ಸೆಕ್ರೆಟರಿ ಅದನ್ನೆಲ್ಲಾ ಗುರುತು ಮಾಡಿಕೊಂಡ.

''ಏನೂ ಯೋಚನೆ ಮಾಡಬೇಡಿ. ದೀಪ ಹಾಕಿಸ್ತೀವಿ, ನಾಯೀನ ಹಿಡೀತೀವಿ, ಕಳ್ಳರಿಗೆ ಬುದ್ಧಿ ಹೇಳ್ತೀವಿ, ಬೀದಿ ಕಾಮಣ್ಣರಿಗೆ ಬೇರೆ ದಾರಿ ತೋರಿಸ್ತೀವಿ.''

''ರಸ್ತೆಗೆ ಡಾಂಬರು ಹಾಕಿಸೋದು?''

''ಟೆಂಡರ್ ಕೂಗೋದು ತಡವಾಗುತ್ತೆ. ಅಲ್ಲೀವರೆಗೆ ಎಲ್ಲರಿಗೂ ಒಂದು ಜೊತೆ ಚಪ್ಪಲಿ ಕೊಡ್ತೀವಿ. ನಾನು ಗೆದ್ದು ಬಂದ ಒಂದೇ ತಿಂಗಳಿನಲ್ಲಿ ಎಲ್ಲ ಬೇಡಿಕೆಗಳನ್ನ ನೆರವೇರಿಸಿಕೊಡ್ತೀನಿ...''

''ಕಳೆದ ಸಲ ನೀವು ಬಂದಾಗ ಇವೇ ಬೇಡಿಕೆಗಳು ಇಟ್ಟಿದ್ದೆ. ಒಂದೂ ನೆರವೇರಲಿಲ್ಲ.''

ಸೆಕ್ರೆಟರಿ ಉತ್ಸಾಹದಿಂದ ಪುಸ್ತಕ ತೆಗೆದ.

''ಕಳೆದ ಸಲ ನೀವು ಹೇಳಿದ್ದ ಎಲ್ಲ ದೂರುಗಳೂ ದಾಖಲಾಗಿವೆ... ನಮ್ಮ ಸಾಹೇಬರಿಗೆ ನೋಡೋಕೆ ಪುರುಸೊತ್ತು ಆಗಲಿಲ್ಲ..''

ಹಳೆಯ ಪುಸ್ತಕದ ಪುಟಗಳನ್ನು ತಿರುಗಿಸಿದ. ''ಸಿಕ್ತು ಸಾರ್ ಸೇಮು ಇದೇ ಆರ್ಡರ್ರೇ.. ಅದೇ ನಾಯಿ... ಅದೇ ಬೀದಿ ದೀಪ.. ಅದೇ ಗಲಾಟೆ.. ಅದೇ ಕಳ್ಳರ ಕಾಟ.. ಅದೇ ಬೀದಿ ಕಾಮಣ್ಣ.....''

ವಿಶ್ವನಿಗೆ ಸಿಟ್ಟಾಯಿತು.

''ಅಲ್ಲಾ... ಐದು ವರ್ಷಗಳ ಹಿಂದೆ ನಾನು ಹೇಳಿದ್ದೆ.. ಓಟು ತಗೊಂಡ್ರಿ ಹೋದ್ರಿ... ಏನೂ ಕಿಸೀಲಿಲ್ಲ.. ಮತ್ತೆ ಓಟು ಕೇಳೋಕೆ ಬಂದಿದ್ದೀರಲ್ಲಾ? ನಿಮಗೇನು ಮರ್ಯಾದೆ ಬೇಡವಾ?''

ಮಹಾಬಲ ವಿಚಲಿತನಾಗಲಿಲ್ಲ..

''ರಾಜಕಾರಣಿಗಳಿಗೆ ಅದು ಇರೊಲ್ಲ.. ಬೇಕಾಗೂ ಇಲ್ಲ..'' ಎಂದು ಗಹಗಹಿಸಿದ. ನೀವು ಕಿಂಗ್ ಮೇಕರ್‌ಗಳು. ನೀವು ಬೈಯಿರಿ, ಕೊಯ್ಯಿರಿ ಇದರಲ್ಲಿ ನಮ್ಮದೇನೂ ತಪ್ಪಿಲ್ಲ.. ಅಲ್ಲ ಸಾರ್, ನಾವು ನಾಯೀನ ಕಚ್ಚಬೇಡ. ಬೊಗಳ ಬೇಡ ಅಂದ್ರೆ ಅವು ಕೇಳುತ್ವಾ?

ಮೊದಲು ಹೈಸ್ಕೂಲು ಮುಗಿಸಿ ಕಾಲೇಜು ಸೇರಲು ಒದ್ದಾಟ. ನಂತರ ಕಾಲೇಜು ಮುಗಿಸಿ ಕೆಲಸಕ್ಕೆ ಸೇರಲು ಒದ್ದಾಟ. ನಂತರ ಮದುವೆ, ಮಕ್ಕಳಿಗಾಗಿ ಒದ್ದಾಟ. ಮಕ್ಕಳು ಬೆಳೆದು ದೊಡ್ಡೋರಾಗಲಿ ಎಂತ ಒದ್ದಾಟ. ಈಗ ನಿವೃತ್ತನಾಗುತ್ತಿದ್ದೇನಲ್ಲ ಅಂತ ಒದ್ದಾಟ. ಹೀಗೆ ಬದುಕೆಲ್ಲ ಒದ್ದಾಟದಲ್ಲೇ ಮುಳುಗಿಹೋಯಿತು. ಬದುಕುವುದನ್ನೇ ಕಲಿಯಲಿಲ್ಲ, ಬದುಕಿನ ಸುಖವನ್ನೇ ಅನುಭವಿಸಲಿಲ್ಲ. ಹೀಗೆ ಹೇಳುವವರು ನೀವಾಗದಿರಿ ಅದಕ್ಕೇ, ನಿಮ್ಮ ಸಧ್ಯದ ಜೀವನವನ್ನು ಪ್ರೀತಿಯಿಂದ ಅನುಭವಿಸಿ.

''ನಮ್ಮ ಪಕ್ಷದ ನಾಯಿಗಳ ಜೊತೆ ಬೇರೆ ಪಕ್ಷದ್ದೂ ಸೇರಿ ಇರುತ್ತೆ'' ಎಂದ ಸೆಕ್ರೆಟರಿ.

''ಇನ್ನು ಬೀದಿ ದೀಪ... ಅದು ಕಾರ್ಪೊರೇಷನ್ ಲಿಮಿಟ್ಸ್‌ಗೆ ಬರುತ್ತೆ... ಟ್ಯೂಬ್‌ಲೈಟ್‌ಗಳು ತಂದು ಹಾಕಿ ಅಂದ್ರೆ ತಗೊಂಡು ಬರ್ತಾರೆ. ಕಾರ್ಪೊರೇಟರ್‌ಗಳ ಮನೆ ಮುಂದೆ ಹಾಕ್ಕೋತಾರೆ... ಲೈಟ್ ಕಂಬದ ಸೆಲೆಕ್ಷನ್ ನಮ್ಮ ಕೈಲಿ ಇದೆಯಾ? ಇನ್ನು ಕಳ್ಳಕಾಕರು. ಪೊಲೀಸ್ ಡಿಪಾರ್ಟ್‌ಮೆಂಟೇ ನಿಷ್ಕ್ರಿಯವಾಗಿರೋವಾಗ ನಾನೊಬ್ಬ ಲೀಡರ್ ಏನು ಮಾಡೋಕಾಗುತ್ತೆ...?''

ವಿಶ್ವನಿಗೆ ಸಿಟ್ಟಾಯಿತು.

''ಹಾಗಿದ್ರೆ ನಿಮಗೆ ಓಟು ಕೊಟ್ಟು ನೀವೇ ನಮ್ಮ ನಾಯಕರು ಅಂತ ಸೆಲೆಕ್ಟ್ ಮಾಡಿ ಕಳಿಸೋದು ಯಾಕೆ?''

''ಹಳೆಯ ಕತೆ ಮರೆತು ಬಿಡಿ. ಈಸಲ ಕೊಟ್ಟು ನೋಡಿ... ಹಗಲು, ರಾತ್ರಿ ನಿಮ್ಮ ಮನೆಯ ಹತ್ರ ಇಬ್ಬರು ಪೊಲೀಸರ್ನ ಹಾಕ್ತೀನಿ... ನಿಮ್ಮ ಮನೆಯಿಂದ ಯಾರೇ ಈಚೆ ಆಚೆ ಬಂದ್ರೂ ಫುಲ್ ಸೆಕ್ಯೂರಿಟಿ ಕೊಡ್ತೀನಿ. ಒಂದು ನಾಯಿ ನಿಮ್ಮ ಹತ್ರ ಬರಬಾರದು.. ಒಬ್ಬ ಕಳ್ಳ ಬರಬಾರದು.. ಹೇಗೆ ಸಾರ್?''

ಆಶ್ವಾಸನೆ ಹರಿದು ಬಂದ ರೀತಿಗೆ ವಿಶ್ವ ಖುಷಿಯಾದ.

''ಹೌದು. ಈಗ ಓಟು ಕೊಟ್ಟವರಿಗೆ ಕೆಲವು ಕಡೆ ಏನೋ ಆಮಿಷಗಳು ಕೊಡ್ತಾ ಇದ್ದಾರಲ್ಲಾ? ನೀವು ಇದರ ಬಗ್ಗೆ ಯೋಚನೆ ಮಾಡಿಲ್ಲವೇನು?''

''ಯೋಚನೆ ಮಾಡದೆ ಏನು? ಪಕ್ಕದ ರಾಜ್ಯದಲ್ಲಿ ಕಳೆದ ಸಲ ಓಟು ಹಾಕಿದವರಿಗೆಲ್ಲಾ ಲ್ಯಾಪ್‌ಟಾಪ್ ಕೊಟ್ರು... ಈಸಲ ಗ್ರೈಂಡರ್, ಹಸು, ಎಮ್ಮೆ, ಕುರಿ ಕೊಡ್ತಾ ಇದ್ದಾರೆ... ನಾವೂ ಇದನ್ನೇ ಮಾಡಬೇಕು ಅಂತಿದ್ದೀವಿ...''

ವಿಶ್ವನಿಗೆ ಕಸಿವಿಸಿಯಾಯಿತು...

''ನಾನು ಇರೋದು ಫಸ್ಟ್‌ಫ್ಲೋರ್‌ನಲ್ಲಿ.... ನೀವು ಹಸು, ಎಮ್ಮೆ, ಕುರಿ ಕೊಟ್ರೆ ಕಟ್ಟೋದು ಕಷ್ಟ ಆಗುತ್ತೆ... ನನಗೆ ಹಾಲು ಕರೆಯೋಕೆ ಬರೊಲ್ಲ...'' ಎಂದಾಗ ಮಹಾಬಲ ನಕ್ಕ.

''ನೀವು ಬಹಳ ಜೋಕ್ ಮಾಡ್ತೀರ ಸಾರ್... ಹಸು, ಎಮ್ಮೆಗಳ್ನ ನಾವು ಕೊಡೋದಿಲ್ಲ.. ನಾವು ಗ್ರೈಂಡರ್ ಕೊಡ್ತೀವಿ, ಮಿಕ್ಸಿ ಕೊಡ್ತೀವಿ... ಸ್ವಿಚ್ ಹಾಕಿದರೆ ಅದೇ ರುಬ್ಬಿಕೊಳ್ಳುತ್ತೆ...''

ವಿಶಾಲು ಬಂದು ಗಂಡನ ಪಕ್ಕ ನಿಂತಳು.

‘‘ಟಿಲ್ಟಿಂಗ್ ವೆಟ್ ಗ್ರೈಂಡರ್ ಕೊಡಿ... ಅದು ಒಳ್ಳೇದು. ಯಾಕೇಂದ್ರೆ ರುಬ್ಬಿದ ಮೇಲೆ ಸುಮ್ಮನೆ ಬಗ್ಗಿಸಿದ್ರೆ ಸಾಕು ಹಿಟ್ಟು ಪಾತ್ರೆಗೆ ಸುರ್ಕೊಳ್ಳುತ್ತೆ... ಅದೇ ದೋಸೆ ಮಾಡಿಕೊಳ್ಳುತ್ತೆ...’’

ಮಹಾಬಲ ಪಾಯಿಂಟ್ ಟಿಕ್ ಮಾಡಿಕೊಂಡ.

‘‘ನೋಡು ಇವರ ಮನೆಗೆ ಒಂದು ಟಿಲ್ಟಿಂಗ್ ವೆಟ್ ಗ್ರೈಂಡರ್ರು.. ಒಂದು ಮಿಕ್ಸಿ...’’

ವಿಶಾಲು ಹೇಳುತ್ತಾ ಹೋದಳು.

‘‘ಒಂದು ರೇಷ್ಮೆಸೀರೆ...’’

‘‘ಬನಾರಸ್ಸಾ, ಕಾಂಜೀವರಂ ಆ?’’

‘‘ಮೈಸೂರು ಸಿಲ್ಕು’’ ಎಂದಳು ವಿಶಾಲು.

‘‘ಕರ್ನಾಟಕ ರಾಜ್ಯದ ಬಗ್ಗೆ ನಿಮಗೆ ಒಳ್ಳೆ ಅಭಿಮಾನ ಇದೆ ಮೇಡಂ’’ ಎಂದು ಹೇಳಿ ಅದನ್ನೂ ಅವನು ಟಿಕ್ ಮಾಡಿಕೊಂಡ.

ವಿಶ್ವನಿಗೆ ಅನುಮಾನ ಬಂತು.

‘‘ಸಾರ್, ಕಳೆದ ಸಲ ಕೆಲವು ಹಳ್ಳಿಗಳಲ್ಲಿ ಚುನಾವಣೆ ಹಿಂದಿನ ದಿನ ಹಂಚಿದ್ದ ನೋಟುಗಳೆಲ್ಲಾ ಖೋಟಾ ಅಂತ ಗಲಾಟೆ ಆಯ್ತು? ಲೋಡುಗಟ್ಟಲೆ ಸೀರೆಗಳು ಸೀಜಾಗಿತ್ತು? ನಮ್ಮಾಕೆಗೆ ನೀವು ಸೀರೆ ಕೊಟ್ಟಿರ್ತೀರ.. ಉಟ್ಟು ರಸ್ತೆಗೆ ಇಳಿದಾಗ ಯಾರಾದರೂ ಬಂದು ರಸ್ತೇಲೇ ಸೀಜ್ ಮಾಡಿ ಸೀರೆ ಕಿತ್ತುಕೊಂಡು ಹೋದ್ರೆ ಗತಿಯೇನು?’’

ಮಹಾಬಲ ಗಹಗಹಿಸಿ ನಕ್ಕ.

‘‘ಸಾರ್. ನಲವತ್ತೈದು ಸಾವಿರ ಕೋಟಿ ಕಲ್ಲಿದ್ದಲು ಹಗರಣದ ಬಗ್ಗೇನೇ ಯಾರೂ ಮಾತಾಡ್ತಾ ಇಲ್ಲ... ಒಂದು ವಿಷಯ ಚೆನ್ನಾಗಿ ತಿಳ್ಕೊಳ್ಳಿ... ರಾಜಕಾರಣಿಗಳ್ನ ನಂಬಿದ್ರೆ ನಿಮಗೆ ಯಾವತ್ತೂ ತೊಂದ್ರೆ ಆಗೊಲ್ಲ..’’

‘‘ಆದರೆ ನಿಮಗೆ ತೊಂದ್ರೆ ಆಗುತ್ತಲ್ಲಾ ಸಾರ್?’’ ಎಂದ ವಿಶ್ವ.

ಮಹಾಬಲ ಅತ್ಯಂತ ವಿಶ್ವಾಸದಿಂದ ಹೇಳಿದ.

‘‘ನಮಗೂ ಯಾವತ್ತೂ ತೊಂದ್ರೆ ಆಗೊಲ್ಲ ಸಾರ್... ಕೋಟಿ ಕೋಟಿ ರೂಪಾಯಿಯ ಹಗರಣಗಳು ಆಯ್ತಲ್ಲಾ? ಮುನ್ನೂರು ರೂಪಾಯಿ ಹಳೇ ಸೈಕಲ್ ಕದ್ದವನಿಗೆ ನಾವು ಒಂದುವರ್ಷ ಎರಡು ವರ್ಷ ಶಿಕ್ಷೆ ಕೊಡ್ತೀವಿ... ಅದೇ ಮೂವತ್ತು ಸಾವಿರ ಕೋಟಿ ರೂಪಾಯಿ ಕದ್ದವನಿಗೆ ನಾವೇನೂ ಮಾಡೋದಿಲ್ಲ, ಸನ್ಮಾನ ಮಾಡ್ತೀವಿ... ಉತ್ತರ ಭಾರತದ ಶಾಸಕನ ವಿರುದ್ಧ ಒಂದು ಕೊಲೆ ಕೇಸು 29 ವರ್ಷಗಳಿಂದ ನಡೀತಿದೆ. ಕೇಸ್ ನಡೆಸ್ತಿದ್ದ ಅನೇಕ ಜಡ್ಜುಗಳು ಸತ್ತು ಹೋಗಿದ್ದಾರೆ.’’

ವಿಶ್ವನಿಗೆ ಖುಷಿಯಾಯಿತು.

‘‘ನೀವು ನನ್ನ ಕಣ್ಣು ತೆರೆಸಿದ್ರಿ... ಇದುವರೆಗೂ ಎಷ್ಟೋ ರಾಜಕಾರಣಿಗಳು ಭ್ರಷ್ಟಾಚಾರ ಮಾಡಿ ಸಿಕ್ಕಿಬಿದ್ರು... ಒಬ್ಬನಿಗಾದರೂ ಜೀವಾವಧಿ ಶಿಕ್ಷೆ ಆಗಲೀ, ಘಾಶಿಶಿಕ್ಷೆ ಆಗಲಿ ಆಗೇ

ಇಲ್ಲ... ಒಂಭೈನೂರು ಕೋಟಿ ರೂಪಾಯಿ ಮೇವು ಹಗರಣದವರ್ನೇ ಏರ್‌ಕಂಡೀಷನ್ಡ್ ರೂಮಲ್ಲಿ ಇಟ್ಟು ಮನೆಗೆ ಕಳಿಸಿದ ಮೇಲೆ. ಪ್ರಜೆಗಳು ಧೈರ್ಯವಾಗಿರಬಹುದು...''

''ಅದಕ್ಕೇ ಹೇಳಿದ್ದು.. ಧೈರ್ಯವಾಗಿ ಓಟು ಹಾಕಿ...''

ವಿಶ್ವ ಯೋಚನೆ ಮಾಡಿದ.

''ಆದರೆ ನಿಂತವರೆಲ್ಲಾ ಅಯೋಗ್ಯರು ಅಂತ ನಮಗೆ ಅನ್ನಿಸಿದಾಗ 'ನೋಟಾ' ಅಂತ ಒಂದು ಬಟನ್ ಇದೆ. ಅದನ್ನ ಒತ್ತಬೇಕು ಅಂತ ನಾವು ಅನ್ಕೊಂಡಿದ್ದೀವಿ...''

''ಏನು? ನೋಟಾ ಬಟನ್ ಒತ್ತಾ ಇದ್ದೀರಾ?''

ಮಹಾಬಲನಿಗೆ ಗಾಬರಿಯಾಯಿತು.

''ಹೌದು ಸಾರ್. ಬಂದವರೆಲ್ಲಾ ನಮಗೆ ಇಲ್ಲದ ಆಮಿಷಗಳು ತೋರಿಸ್ತಾ ಇದ್ದಾರೆ ಯಾವ ನನ್ನ ಮಗನೂ ಸರಿಯಿಲ್ಲ.. ಆದ್ದರಿಂದ ನಾವು ನೋಟಾ ಬಟನ್ ಒತ್ತೀವಿ... ನಮ್ಮ ಏರಿಯಾಗೆ ಭ್ರಷ್ಟ ರಾಜಕಾರಣಿ ಬೇಡವೇ ಬೇಡ... ಇದು ನಮ್ಮೆಲ್ಲರ ನಿಲುವು...''

''ಬರೀ 20 ಪರ್ಸೆಂಟ್ ಓಟು ಬಂದ್ರೆ ನಾವು ಗೆದ್ದು ಬಿಡ್ತೀವಿ. ನಿಮ್ಮಂಥ 80 ಪರ್ಸೆಂಟ್ ಜನ ತಿರುಗಿ ಬಿದ್ರೂ ನಮ್ಮನ್ನ ಅಲ್ಲಾಡಿಸೋಕೆ ಆಗೊಲ್ಲ'' ಎಂದು ಸಿಟ್ಟಾದ ಮಹಾಬಲ ಅಲ್ಲಿಂದ ಜಾಗ ಖಾಲಿ ಮಾಡಿದ.




ಬುದ್ಧೀ...ನಂಗೂ ಈ ಹೊರೆ ಹೊತ್ತೂ ಹೊತ್ತೂ
ಸಾಕಾಗೋಯ್ತು...ನಾನೂ ಒಂದ್ 'ಪೋಸ್'
ಕೊಡ್ಲಾ ಪೇಪರ್‍ನ್ಯಾಗೆ...?
ಮೋದಿಗೆ ಮೇಘನಾ ನಗ್ನ ಪ್ರಚಾರ


2005ಕ್ಕೂ ಹಿಂದಿನ ನೋಟುಗಳ ರದ್ದು
-ಸುದ್ದಿ
ಇವ್ರ ಗೋಡೌನ್‌ನಲ್ಲಿರೋ
'ಬ್ಲ್ಯಾಕ್‌ಮನಿ ಸ್ಟಾಕ್' ಎಲ್ಲ ಹೊರಗೆ ಬರೋದು ಗ್ಯಾರೆಂಟಿ...

# ನಮ್ಮಜ್ಜಿಯರು

● ಎಸ್. ರಾಮಮೂರ್ತಿ

ನಮ್ಮ ಪಿತಾಮಹಿ, ಅಂದರೆ ನಮ್ಮಜ್ಜಿ, ಅಂದರೆ, ನಮ್ಮಪ್ಪನಪ್ಪನ ಹೆಂಡತಿ ಮತ್ತು ಅವರ ವಾರಗಿತ್ತಿ, ಅಂದರೆ, ನಮ್ಮ ದೊಡ್ಡಜ್ಜಿ, ಅಂದರೆ, ನಮ್ಮಪ್ಪನಪ್ಪನ ಅಣ್ಣನ ಹೆಂಡತಿ, ಅದೆಷ್ಟು ಅನ್ಯೋನ್ಯವಾಗಿದ್ದಾರೆಂದರೆ, ಒಡಹುಟ್ಟಿದ ಅಕ್ಕ ತಂಗಿಯರೂ ಹಾಗಿರಲ್ಲ. ಆಡುಮಾತಿನಲ್ಲಿ ಹೇಳಬೇಕೂಂತಂದರೆ, 'ಅವರು ಎಷ್ಟು ಅನ್ಯೋನ್ಯವಾಗಿದ್ದಾರೆಂದರೆ ಅಷ್ಟು ಅನ್ಯೋನ್ಯವಾಗಿದ್ದಾರೆ!' (ಇಲ್ಲಿ 'ಎಷ್ಟ'ರಲ್ಲಿನ ಎ ಮತ್ತು 'ಅಷ್ಟ'ರಲ್ಲಿನ ಅ ಅಕ್ಷರಗಳು ಸ್ವರಗಳೇ ಆದರೂ ಅವುಗಳನ್ನು ಒತ್ತಿ ಹೇಳಬೇಕು). ಸಾಮಾನ್ಯವಾಗಿ ವಾರಗಿತ್ತಿಯರು ಅಂದರೆ ವಾರ್ ಮಾಡೋರು ಅನ್ನೋದೊಂದು ಪ್ರತೀತಿ. ಅನೇಕ ವೇಳೆ ನಿಜ ಅಂತ್ಲೂ ಅನ್ನಿ. ಆದರೆ ಇಲ್ಲಿ ಹಾಗಲ್ಲ. ಇಬ್ಬರೂ ಮಾತಿಗಿಳಿದರಂತೂ ಪ್ರಪಂಚದ ವಿಷಯಗಳನ್ನೆಲ್ಲಾ ಮಾತನಾಡ್ತಾರೆ ಪ್ರಪಂಚವನ್ನೇ ಮರೆತು. ಅದು ಕಾಲಾತೀತ, ಸ್ಥಳಾತೀತ, ವಿಷಯಾತೀತ!

ನಮ್ಮಜ್ಜಿ ಹೆಸರು ಅಡುಗೆ ಅನಸೂಯಮ್ಮ. ಆ ಹೆಸರು ಯಾಕೆ ಬಂತೂಂತ ಹೇಳಬೇಕಾಗಿಲ್ಲ. ಎರಡು ನಿಮಿಷದಲ್ಲಿ ಮ್ಯಾಗಿ ಮಾಡೋದನ್ನ ಟೀವೀಲಿ ತೋರಿಸ್ತಾರೆ. ಆದರೆ ನಮ್ಮಜ್ಜಿ ಅದೇ ಎರಡು ನಿಮಿಷದಲ್ಲಿ ಮ್ಯಾಜಿಕ್ಕೇ ಮಾಡಿಬಿಡ್ತಾರೆ. ಲೊಟಕೆ ಹೊಡೀತಾ ತಿಂತಾ ಇದ್ದರೆ ಇನ್ನಷ್ಟು ಬೇಕು ಮತ್ತಷ್ಟು ಬೇಕು ಅನ್ನೋ ತರಹ ಇರತ್ತೆ ಅವರ ಕೈಪಾಕ. ಅವರ ತರಹ ಅಡುಗೆ ಮಾಡೋಕೆ ಈ ಪ್ರಪಂಚದಲ್ಲಿ ಯಾರಿಗೂ ಬರಲ್ಲ ಅಂತ ನನ್ನ ಬಲವಾದ ನಂಬಿಕೆ. ನಮ್ಮ ದೊಡ್ಡಜ್ಜಿ ಹೆಸರು ಸೋಲ್ಜರ್ ಸುಶೀಲಮ್ಮ. ಲೆದರ್ ಷೂಸುಗಳನ್ನ ಹಾಕಿಕೊಳ್ಳದೇ ಇದ್ದರೂನೂವೇ ಅವರು ನಡೆಯುವಾಗ ಟಕ್ ಟಕ್ ಶಬ್ದ ಹೊರಡತ್ತೆ. ನೀವೇ ಲೆಕ್ಕ ಹಾಕ್ಕೊಳ್ಳಿ ಆ ಹೆಸರು ಯಾಕೆ ಬಂತೂಂತ. ಅವರು ಎದುರಿಗೆ ಬಂದರೆ ಆರ್ಮಿಲಿರೋ ಸೈನಿಕಾನೂ ಹಿಮ್ಮೆಟ್ಟಬೇಕು. ಅಂತಹ ನೇರ ನಡೆ, ದಿಟ್ಟ ನಡೆ. ಎಪ್ಪತ್ತನೇ ವಯಸ್ಸಿನಲ್ಲಿ ಶಬರಿಮಲೆ ಬೆಟ್ಟವನ್ನೇ ಹತ್ತಿ ಬಂದರಂದರೆ ನೀವೇ ಲೆಕ್ಕ ಹಾಕ್ಕೊಳ್ಳಿ. ಸರಿಯಾದ ಸಮಯದಲ್ಲಿ ಅವರಿಗೆ ಅವಕಾಶ ಸಿಕ್ಕಿದ್ದಿದ್ದರೆ ಬಚೇಂದ್ರಿ ಪಾಲಳಿಗೂ ಮುಂಚೆ ಹಿಮಾಲಯ ಹತ್ತಿ ಬರ್ತಿದ್ದರೇನೋ.

ನಮ್ಮ ತಾತ ಮತ್ತು ದೊಡ್ಡ ತಾತ, ಅವರುಗಳ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲಾ ಸೇರಿದರೆ ಸಧ್ಯಕ್ಕೆ ಇಪ್ಪತ್ತೊಂಬತ್ತು ಜನ. ಈ ದೊಡ್ಡ ಕುಟುಂಬದ ಇಪ್ಪತ್ತೇಳು ಜನಗಳಿಗೂ ಇವರುಗಳೇ ಚೀಫ್ ಕಮ್ಯಾಂಡರ್‌ಗಳು!

ಇತ್ತೀಚೆಗೆ ನಮ್ಮಜ್ಜಿಗೆ ತಲೆ ಸುತ್ತು ಬಂದು ಚೆಕಪ್‌ಗೆ ಅಂತ ಒಂದು ದಿನದ ಮಟ್ಟಿಗೆ ನರ್ಸಿಂಗ್ ಹೋಂಗೆ ಸೇರಿದ್ದರು. ಸೇರಿದ ಮಾರನೇ ದಿನವೇ ಡಿಸ್ಚಾರ್ಜು. ಬೆಳಿಗ್ಗೇನೇ ನನಗೆ ಫೋನು. 'ರಾಮೂ, ಸಾಯಂಕಾಲ ಐದು ಗಂಟೇಗೆ ನಿನ್ನ ಸ್ವಿಫ್ಟ್ ತೊಗೊಂಡು ಇಲ್ಲಿಗೆ ಬಂದುಬಿಡು. ನಿನ್ನ ಮಕ್ಕಳನ್ನ ನೋಡಿ ತುಂಬಾ ದಿನ ಆಯ್ತು. ಎರಡು ದಿನ ನಿಮ್ಮನೇಲೇ

ಇರ್ತೀವಿ. ನಾವು ಬರೋಷ್ಟು ಹೊತ್ತಿಗೆ ನೀರು ಕಾಯಿಸಿಟ್ಟಿರೋಕೆ ಹೇಳು ನಿನ್ನ ಹೆಂಡ್ತೀಗೆ. ಬಂದ ತಕ್ಷಣ ಸ್ನಾನ ಮಾಡಬೇಕು. ಒಕೇ?' ಆರ್ಡರ್ ಬರ್ತಿದ್ದ ಹಾಗೇ 'ಡನ್' ಅಂದೆ. 'ಗುಡ್ ಬಾಯ್' ಅಂತ ಮೊಬೈಲ್ ಡಿಸ್ಕನೆಕ್ಟ್ ಮಾಡಿದರು.

ಸಾಯಂಕಾಲ ಹೋದೆ. ವಾರ್ಡಿನಲ್ಲಿ ಎಲ್ಲವನ್ನೂ ಪ್ಯಾಕ್ ಮಾಡಿಟ್ಟು ನನಗಾಗಿ ಇಬ್ಬರೂ (ಇನ್ನೊಬ್ಬರು – ಬೈ ಡಿಫಾಲ್ಟ್ – ಸೋಲ್ಜರ್ ಸುಶೀಲಮ್ಮ) ಕಾಯುತ್ತಾ ಕೂತಿದ್ದರು. ಡಾಕ್ಟರು ಏನು ಹೇಳಿರ್ತಾರೋ ಏನೋ ಅಂತ ಹೆದರಿದ್ದೆ. ಆದರೆ, ಅಜ್ಜಿ ಎಂದಿನಂತೆ ಜಿಂಕೆ ಮರಿಯಂತೆ, ಲವಲವಿಕೆಯಿಂದಿದ್ದುದನ್ನ ನೋಡಿ ಖುಷಿಯಾಯಿತು. ಸಾಮಾನುಗಳನ್ನೆಲ್ಲಾ ತಗೊಂಡು ಕಾರಲ್ಲಿಟ್ಟೆ. ಇಬ್ಬರೂ ಹಿಂದೆ ಕೂತರು. ನಾನು ಡ್ರೈವರ್ ಪಕ್ಕ. ಕಾರ್ ಸ್ಟಾರ್ಟ್ ಮಾಡ್ತಿದ್ದ ಹಾಗೇನೇ ನರ್ಸಿಂಗ್ ಹೋಂನ ನರ್ಸಮ್ಮ ಕಾರಿನ ಮುಂದೆ ಬಂದು ಕೈ ಅಡ್ಡ ಹಿಡಿದರು. ಅವರ ಪಕ್ಕದಲ್ಲಿ ಇನ್ನೊಬ್ಬ ಅಜ್ಜಿ. 'ಏನು ಸಿಸ್ಟರ್?' ಅಂದೆ. ಆಕೆ ಸಂಕೋಚದಿಂದ 'ಏನಿಲ್ಲಾ, ನೀವು ವಿದ್ಯಾರಣ್ಯಪುರಕ್ಕಲ್ವೇ ಹೋಗ್ತಿರೋದು? ಈಕೆ ಮತ್ತೀಕೆರೆಗೆ ಹೋಗಬೇಕಾಗಿತ್ತು. ಅವರ ಮಗ ಬಂದು ಕರಕೊಂಡು ಹೋಗಬೇಕಾಗಿತ್ತು. ಏನೋ ಸ್ವಲ್ಪ ತೊಂದರೆ ಆಗಿ ಒಂದು ಗಂಟೆ ತಡವಾಗಿ ಬರ್ತೀನಿ ಅಂತ ಫೋನ್ ಮಾಡಿದ್ದರು. ಒಂದು ಗಂಟೆ ಈ ಅಜ್ಜಿ ಇಲ್ಲಿ ಕೂತು ಏನು ಮಾಡ್ತಾರೆ ಪಾಪಾ? ಈ ಜೆಪಿ ನಗರದಿಂದ ಬಸ್ ಹಿಡಿದು ಹೋಗೋದು ಅಂದರೆ ಅದು ಸಾಧ್ಯವಿಲ್ಲದ ಕೆಲಸ. ಜಾಗ ಇದ್ದರೇ...' ಅಂತ ಕಾರಿನೊಳಗೆಲ್ಲಾ ಕಣ್ಣಾಡಿಸುತ್ತಾ ಹೇಳಿದರು. ಹಿಂದೆ ತಿರುಗಿ ದೊಡ್ಡಜ್ಜಿ ಕಡೆ ನೋಡಿದೆ. ದೊಡ್ಡಜ್ಜಿ ಬಾಗಿಲು ತೆಗೆದು 'ಬನ್ನಿ ಬನ್ನಿ' ಅಂತ ಆಹ್ವಾನಿಸಿದರು. ಆ ಅಜ್ಜಿ ಕಾರೊಳಗೆ ಬಂದು ಕೂತಿತು. ಪರಸ್ಪರ ಪರಿಚಯ ಆಯಿತು. ಆ ಅಜ್ಜೀನೂ ಸ್ವಲ್ಪ ನಮ್ಮಜ್ಜಿಯರ ತರಹವೇ ಚಾಲೂಕಜ್ಜಿ ಅನ್ನಿಸಿತು. ಕಾರ್ ಚಾಲೂ ಆಯಿತು.

'ಏನಂದರಜ್ಜಿ ಡಾಕ್ಟರು?' ಅಂತ ಅಜ್ಜೀನ ಕೇಳಿದೆ. 'ಅಯ್ಯೋ, ಅವರೇನಂತಾರೆ ಕಣೋ. ಕಿಡ್ನಿ, ಹಾರ್ಟು, ಲಿವರ್ರು, ಬ್ರೈನು ಎಲ್ಲಾ ಟೆಸ್ಟ್ ಮಾಡಿ, ಕಡೇಗೆ ಏನೂ ಇಲ್ಲ ಅಂತಂದರು' ಅಂದರು. ದೊಡ್ಡಜ್ಜಿ, 'ಹೋಗಲಿ ಬಿಡು ಏನೂ ಇಲ್ಲಾಂತದ್ರಲ್ಲ ಸಧ್ಯ!' ಅಂತ ನಿಟ್ಟುಸಿರು ಬಿಟ್ಟರು. 'ಕ್ರೀಚ್' ಅಂತ ಶಬ್ದ ಮಾಡ್ತಾ ಕಾರು ನಿಂತಿತು. ಡ್ರೈವರ್ ಸಡನ್ನಾಗಿ ಹಿಂದೆ ತಿರುಗಿ ನಮ್ಮಜ್ಜೀನ ನೋಡಿದ. 'ಏನಾಯ್ತೋ?' ಅಂತ ಗಾಬರಿಯಿಂದ ಕೂಗಿದರು ನಮ್ಮಜ್ಜಿ. ಬೆಚ್ಚಿಬಿದ್ದ ಅವನು, 'ಏನೂ ಇಲ್ಲ ಅಜ್ಜಿ, ನಾಯಿ ಅಡ್ಡ ಬಂತು' ಅಂದ. 'ಏನೋ ಅದೂ, ಅಜ್ಜಿ ಗಿಜ್ಜಿ ಅಂತೀಯಾ ನಿಮ್ಮಜ್ಜೀ. ಆಂಟೀ ಅನ್ನೂ' ಅಂದರು. 'ಆಯ್ತು ಆಂಟೀ' ಅನ್ನುತ್ತಾ ಮುಸಿಮುಸಿ ನಗುತ್ತಾ ಸ್ಟೇರಿಂಗ್ ವೀಲ್ ತಿರುಗಿಸಿದ.

ಆಡಿಯೋ ಆನ್ ಆಯಿತು. ನಮ್ಮಜ್ಜಿ 'ಸುಶೀ, ಕಾವೇರಮ್ಮನಿಗೆ ಏನಾಯ್ತೇ? ಮೊನ್ನೆ ಕಾರಲ್ಲಿ ಅವರ ಮನೆ ಮುಂದೆ ಹೋಗ್ತಾ ನೋಡ್ದೆ, ಕುಂಟ್ತಾ ಇದ್ದಳು. ನಿಲ್ಲಿಸಿ ಮಾತಾಡೋಣ ಅಂದರೆ, ಅರ್ಜೆಂಟಾಗಿ ಹೋಗಬೇಕಾಗಿತ್ತು ನಿಲ್ಸೋಕಾಗ್ಲಿಲ್ಲ.'

'ಅಯ್ಯೋ, ಅವಳ ಕಾಲಲ್ಲಿ ಆಣಿ ಎದ್ದಿತ್ತು.'

'ಅದೇನು ದೊಡ್ಡ ವಿಷಯಾನಾ ಕಾರ್ನ್ ಹಾಕ್ಕೊಂಡಿದ್ದಿದ್ದರೆ ಹೋಗಿರೋದು.'

'ಕಾರ್ನ್ ಹಾಕ್ಕೊಂಡ್ರೂ ಇಲ್ಲ, ಗೀರ್ನ್ ಹಾಕ್ಕೊಂಡ್ರೂ ಇಲ್ಲ. ಅದನ್ಹಾಕ್ಕೊಂಡ ಮೇಲೆ ಅದು ಇನ್ನೂ ದೊಡ್ಡದಾಯಿತು.'

'ಆಮೇಲೆ?'

'ಅಯ್ಯೋ ಅದೊಂಥರ ವಿಚಿತ್ರವಾದ ಕಾಯಿಲೆ. ಮೊದಲು ಸಣ್ಣದಾಗಿ ಶುರುವಾಗತ್ತೆ. ನೋಡೋಕೆ ಪಿನ್ ತರಹ ಇರತ್ತೆ, ಬೆಳೀತಾ ಬೆಳೀತಾ ಚಿಕ್ಕ ಮೊಳೆ ತರಹ ಆಗತ್ತೆ. ವಾಸಿ ಆಗದೇ ಇದ್ದರೆ...'

'ಆ ಮೊಳೆ ರಿವೆಟ್ ಥರ ಆಗಿಬಿಡತ್ತೆ. ಅವಾಗ ಓಡಾಡೋದೇ ಕಷ್ಟ ಆಗಿಬಿಡತ್ತೆ' ಅಂತ ನಾನು ಮಧ್ಯದಲ್ಲಿ ಬಾಯಿ ಹಾಕಿದೆ. ಹಾಗೇನೇ ಹಿಂದೆ ತಿರುಗಿ ನೋಡಿದೆ. ಹೊಸ ಅಜ್ಜಿ ನಮ್ಮ ಮಾತುಗಳನ್ನು ಬಿಟ್ಟ ಬಾಯಿ ಬಿಟ್ಟ ಕಣ್ಣುಗಳಿಂದ ಕೇಳಿಸಿಕೊಳ್ಳುತ್ತಿತ್ತು. ಆ ಬೆರಗನ್ನ ನಮ್ಮಜ್ಜಿ ಕಣ್ಣಲ್ಲೇ ನನಗೆ ತೋರಿಸಿತು. ನಾನು ಅದನ್ನ ಗಮನಿಸಿದ್ದೆ. ಇಬ್ಬರೂ ಕಣ್ಣಲ್ಲೇ ಮಾತಾಡಿಕೊಂಡೆವು. ಅಜ್ಜಿ 'ಯು ಆರ್ ರೈಟ್' ಅಂತನ್ನೋದಷ್ಟೇ ಅಲ್ಲದೇ ಇನ್ನೂ ಮುಂದುವರಿಸ್ತಾ 'ಈಗಂತೂ ಇನ್ನೂ ಯಾವಯಾವುದೋ ಥರದ ಆಣಿಗಳು ಹುಟ್ಟಿಕೊಳ್ತಾ ಇವೆ ಕಣೋ ರಾಮೂ. ನಮ್ಮ ಮನೆ ಹಿಂದಿನ ರೋಡಲ್ಲಿರೋ ಭಾಗೀರತಮ್ಮನೋರಿಗೆ, ಹೀಗೇ ಕಾಲಲ್ಲಿ ಒಂದು ಸಣ್ಣ ಗುಳ್ಳೆ ತರ ಹುಟ್ಟಿಕೋತು. ಅದು ಮೊಳೇನೂ ಆಗಲಿಲ್ಲ, ರಿವೆಟ್ಟೂ ಆಗಲಿಲ್ಲ.'

'ಮತ್ತೇ? ಏನಾಯ್ತು?'

'ನೀನು ನಂಬ್ತೀಯೋ ಇಲ್ಲವೋ ಅದು ಮೊದಲು ಸೂಜಿ ತರಹ ಮೊಳೆತು ಮೊಳೆ ಹಾಗೇ ಬೆಳೀತೂ. ಬರ್ತಾ ಬರ್ತಾ ಅದರ ಮೇಲೆ ಗೆರೆಗಳು ಮೂಡಿ ಸ್ಕ್ರೂನೇ ಆಗಿಬಿಡ್ತು. ಡಾಕ್ಟರುಗಳು, ಆರ್ಥೋಗಳು, ನ್ಯೂರೋಗಳು ಬಂದದ್ದೇ ಬಂದದ್ದು, ನೋಡಿದ್ದೇ ನೋಡಿದ್ದು. ಒಂದು ದೊಡ್ಡ ಸುದ್ದಿ ಆಗಿಬಿಟ್ಟರು ಆ ಭಾಗೀರತಮ್ಮ. ಟಿವಿ ಚಾನೆಲ್‌ಗಳಲ್ಲೆಲ್ಲಾ ಇವರ ಕಾಲು, ಸ್ಕ್ರೂಗಳೇ. ಇಂಡಿಯಾದಲ್ಲೇ ವರ್ಲ್ಡ್ ಫೇಮಸ್ ಆಗಿಬಿಟ್ಟರು. ಅವಳ ಮೊಮ್ಮಗ ಗಿನ್ನಿಸ್ ರೆಕಾರ್ಡ್‌ಗೂ ಟ್ರೈ ಮಾಡ್ತಿದ್ದಾನೆ.'

'ಗಿನ್ನಿಸ್ ವಿಷಯ ಇರಲೀ, ಸ್ಕ್ರೂ ವಿಷಯಕ್ಕೆ ಬಾಜ್ಜೀ. ಅದು ವಾಸಿ ಆಯ್ತಾ? ಏನು ಮಾಡಿದರು? ಹೇಗೆ ವಾಸಿ ಆಯ್ತು?' ಕುತೂಹಲ ತೋರಿಸಿ ಕೇಳಿದೆ. ಹೊಸ ಅಜ್ಜಿ

**ಸೂಕ್ತ ಹೆಸರು**

ನಾನು ನನ್ನ ಹೆಂಡತಿಗೊಂದು
ಬೋಟ್ ತಂದು ಕೊಟ್ಟೆ
ಆದರೆ ಅಕೆಗೇನು
ಖುಷಿಯಾಗಲಿಲ್ಲ.
ಆವಳನ್ನು ಖುಷಿ ಪಡಿಸಲು
ಅದಕ್ಕೆ ಒಂದು ಹೆಸರಿಡು
ಎಂದೆ 'ಮಾರಾಟಕ್ಕಿದೆ'
ಎಂದು ಬರೆದಳು. ಛೆ!

ಉತ್ತರಕ್ಕಾಗಿ ಕಾಯ್ತಾ ನಮ್ಮಜ್ಜಿ ಮುಖಾನೇ ನೋಡ್ತಿತ್ತು.

'ಅದೊಂದು ದೊಡ್ಡ ಕಥೆ ಕಣೋ. ಯಾರುಯಾರಿಗೋ ತೋರಿಸಿದರು. ಏನೇನೋ ಮಾಡಿದರು. ವಾಸಿ ಆಗಲೇ ಇಲ್ಲ. ದಿನದಿನಕ್ಕೆ ಬೆಳೀತಾ ಹೋಯ್ತು. ಕಂಡಕಂಡ ದೇವರಿಗೆಲ್ಲ ಹರಸಿಕೊಂಡಳು. ಉಹುಂ. ಜಪ್ಪಯ್ಯ ಅನ್ನಲಿಲ್ಲ. ಕಡೇಗೆ ನಾನೊಂದು ಸಜೆಷನ್ ಕೊಟ್ಟೆ 'ಒಂದು ಸ್ಕ್ಯಾನರ್ ತಗೊಂಡು ಹಿಂದುಹಿಂದಕ್ಕೆ ತಿರುಗಿಸಿದರೆ ಸಲೀಸಾಗಿ ವಾಪಸ್ ಬಂದುಬಿಡತ್ತೆ' ಅಂತ. ನನ್ನ ಐಡಿಯಾ ಕ್ಲಿಕ್ ಆಯ್ತು ಕಣೋ. ಪಾಪ, ಭಾಗೀರತಮ್ಮ ಅಂತೂ ಆನಂದಬಾಷ್ಪ ಸುರಿಸಿಬಿಟ್ಟಳು ಖುಷಿಯಿಂದ.'

ಹಿಂದೆ ತಿರುಗಿದೆ. ಹೊಸ ಅಜ್ಜಿ 'ಇದೆಲ್ಲಾ ನಿಜವಾಗಿಯೂ ನಿಜಾನಾ?' ಅನ್ನೋ ತರಹ ನಮ್ಮಿಬ್ಬರನ್ನೂ ಟಾಗಲ್ ಮಾಡ್ತಾ ನೋಡ್ತಾನೇ ಇತ್ತು. ನಾವಿಬ್ಬರೂ ಮೆಲ್ಲಗೆ ನಮ್ಮ ಅಂಗೈಗಳನ್ನು ಮಿಲಾಯಿಸಿ ಹೈ-ಫೈ ಮಾಡಿದೆವು. ನಾವು ಹೈ-ಫೈ ಮಾಡಿದ್ದನ್ನ ಹೊಸ ಅಜ್ಜಿ ನೋಡಿಬಿಡ್ತು. ನಾವು ಏನೂ ಆಗದವರಂತೆ ಸುಮ್ಮನೆ ಕೂತುಕೊಂಡುಬಿಟ್ವು.

ಒಂದು ಸ್ಮಾಲ್ ಬ್ರೇಕು. ಮೌನ.

ಈ ಸಲ ಹೊಸ ಅಜ್ಜಿ ಶುರು ಹಚ್ಚಿಕೊಂಡಿತು. 'ಅಬ್ಬ! ಏನೇನು ಥರಾ ಮಾಡ್ತಾರಪ್ಪ! ಇನ್ನೊಂದು ಹತ್ತು ವರ್ಷದಲ್ಲಿ ಮನುಷ್ಯನ ಎಲ್ಲಾ ಪಾರ್ಟುಗಳನ್ನೂ ಬಿಚ್ಚಿ ಸೂಟ್‌ಕೇಸ್‌ನಲ್ಲಿಟ್ಟು ಕೈಯಲ್ಲಿ ಎತ್ತಿಕೊಂಡುಹೋಗಿಬಿಡಬಹುದೋ ಏನೋ!' ಅಂತ ತನಗಾದ ಆಶ್ಚರ್ಯಾನ ತೋಡಿಕೊಂಡಿತು. ನಮ್ಮಜ್ಜಿ 'ಅವೆಲ್ಲ ಆದರೂ ಆಶ್ಚರ್ಯ ಏನಿಲ್ಲಮ್ಮ' ಅಂತ ದನಿಗೂಡಿಸಿದರು.

'ನೋಡಿ ನಮ್ಮ ಏರಿಯಾದಲ್ಲಿ ಆದ ಒಂದು ಪವಾಡಾನ ಹೇಳ್ತೀನಿ ಕೇಳಿ. ಮಂಡಿ ನೋವಂತೂ ಈಗ ಎಲ್ಲರಿಗೂ ಐವತ್ತಾದಮೇಲೆ ಮಾಮೂಲಿ ಆಗಿಹೋಗಿಬಿಟ್ಟಿದೆ. ಅಲ್ವಾ?'

'ಅಯ್ಯೋ ಅದು ಯಾಕೆ ಹೇಳ್ತೀರಿ ಅಜ್ಜಿ, ಮಠದಲ್ಲಿ ಊಟಕ್ಕೆ ಕೂರೋಕಾಗಲ್ಲ, ಪೂಜೆ ಗೀಜೆ ಮಾಡಬೇಕಾದರೆ ಚೇರ್ ಮೇಲೇ ಕೂತುಕೋಬೇಕು. ಕರ್ಮ ಕರ್ಮ.'

'ನಾನೂ ಸುಮಾರು ಕೇಸ್‌ಗಳನ್ನ ನೋಡಿದೆ ಇವರೇ. ಅದರಲ್ಲೂ ಹೆಂಗಸರಿಗೇ ಈ ಮಂಡಿ ನೋವು ಹೆಚ್ಚಾಗಿ ಅಮರಿಕೊಳ್ಳೋದು. ಇದಕ್ಕೆ ಏನಾದರೂ ಮಾಡಬೇಕಲ್ಲ ಅನ್ನಿಸಿತು.'

'ಏನಾದರೂ ಮಾಡಿದಿರಾ ಅಜ್ಜೀ?' ಕೇಳಿದೆ.

'ನೀನೇನಾದರೂ ತಿಳಕೊಳ್ಳಪ್ಪ, ನಾನು ಏನಾದರೂ ಮನಸ್ಸಿನಲ್ಲಿ ಅಂದುಕೊಂಡರೆ ಮಾಡದೇ ಬಿಡೋಳೇ ಅಲ್ಲ.'

'ಹೌದಾ! ಏನು ಮಾಡಿದಿರಿ ಅಜ್ಜಿ?'

'ನಮ್ಮ ಹಿಂದಿನ ರಸ್ತೇಲಿರೋ ಕಪಿಲಮ್ಮನೋರನ್ನ ನನ್ನ ಪ್ರಯೋಗಕ್ಕೆ ಆರಿಸಿಕೊಂಡೆ. ಅವರು ಅವರ ಹೆಸರಿಗೆ ತಕ್ಕ ಹಾಗೆ ಹಸುವೇ. ಹತ್ತು ವರ್ಷದಿಂದ ಮೂಕವೇದನೆ

ಅನುಭವಿಸ್ತಾ ಇದ್ದರು ಪಾಪ. ಅವರ ಮಗ ಜೇನುಬಾವೀಲಿದ್ದ. ಒಂದೆರಡು ತಿಂಗಳಿದ್ದು ಎತ್ತಿನ ತುಕುಡಕ್ಕೆ ಸೇರಿಕೊಂಡ...'

ಅವರ ಮಾತನ್ನು ಅಷ್ಟಕ್ಕೇ ತಡೆದು 'ಅಜ್ಜಿ, ಅಜ್ಜಿ, ಅದೇನಜ್ಜಿ ಜೇನುಬಾವಿ, ಎತ್ತಿನ ತುಕುಡ ಅಂದರೇ...'

'ಅದೇನಪ್ಪ ಹನಿವೆಲ್ಲು, ಆಕ್ಸಿನ್ ಚೂರೂ. ನನಗೆ ಇಂಗ್ಲಿಷ್ ಹೆಸರುಗಳು ತಕ್ಷಣ ನೆನಪಿಗೆ ಬರೋಲ್ಲ. ಅದಕ್ಕೇ ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡಿಕೊಂಡುಬಿಡ್ತೀನಿ.'

'ನೀವು ಗ್ರೇಟ್ ಅಜ್ಜಿ. ಸರಿ, ಆಮೇಲೇನಾಯ್ತು?'

'ಮಗ ಒಂದು ಕಡೆ ನಿಲ್ಲೋಲ್ವಲ್ಲಾ ಅನ್ನೋ ಚಿಂತೆ ಒಂದು ಕಡೆ. ಈ ಮಂಡಿ ನೋವು ಇನ್ನೊಂದು ಕಡೆ. ಎರಡೂ ಸೇರಿ ಅವರ ಮಂಡೆ ಬಿಸಿಯಾಯ್ತು. ಯಾರುಯಾರಿಗೋ ತೋರಿಸಿದರು. ಎಲ್ಲಾ ಪತಿಗಳ ಔಷಧಿಗಳನ್ನೂ ತಗೊಂಡರು. ಯಾರಿಗೂ ಯಾವ ಔಷಧಕ್ಕೂ ಅವರ ಮಂಡಿ ಬಗ್ಗಲಿಲ್ಲ.'

'ಆಮೇಲೆ?'

'ನಾನು ಅದಕ್ಕೆ ಒಂದು ಉಪಾಯ ಮಾಡಿದೆ. ನನ್ನ ಒಬ್ಬ ಮೊಮ್ಮಗ ಎಂಬಿಬಿಎಸ್ ಡಾಕ್ಟ್ರು. ಇನ್ನೊಬ್ಬ ಮೊಮ್ಮಗ ಮೆಕ್ಯಾನಿಕಲ್ ಎಂಜಿನಿಯರ್ರು. ಇಬ್ಬರನ್ನು ಕರೆದು ಅವರಿಗೆ ಹೇಳಿದೆ: 'ನೋಡ್ರೋ, ಒಂದು ಸಣ್ಣ ಕೆಲಸ ಹೇಳ್ತೀನಿ. ನೀವಿಬ್ಬರೂ ಸೇರಿಕೊಂಡು ಮಾಡಬೇಕು. ಅದು ಹೇಗೆ ಮಾಡ್ತೀರೋ ನನಗೊತ್ತಿಲ್ಲ. ಒಂದು ಸ್ಟೀಲ್ ನಿಪ್ಪಲ್ಲನ್ನ ಮಂಡಿ ಒಳಗೆ ಫಿಕ್ಸ್ ಮಾಡಬೇಕು. ಅದಕ್ಕೊಂದು ಮುಚ್ಚಳ ಇರಬೇಕು. ಅದು ಏರ್ ಟೈಟೂ ಆಗಿರಬೇಕು. ದಟ್ಸಾಲ್.' ಇಬ್ಬರೂ ಮುಖ ಮುಖ ನೋಡಿಕೊಂಡರು. ಒಂದೆರಡು ತಿಂಗಳು ಕಷ್ಟಪಟ್ಟು ಆ ಇಬ್ಬರೂ ಸೇರಿ ಕಪಿಲಮ್ಮನ ಕಾಲಿಗೆ ಒಂದು ನಿಪ್ಪಲ್ಲನ್ನು ಜೋಡಿಸಿಯೇಬಿಟ್ಟರು. ಪ್ರತಿ ದಿನ ಮಲಗೋ ಮುಂಚೆ ಅವರ ನೋವನ್ನು ನೋಡಿಕೊಂಡು, ಒಂದೋ, ಎರಡೋ, ಮೂರೋ ತೊಟ್ಟು ಎಣ್ಣೆ ಬಿಡೋದು.'

'ಎಣ್ಣೆ ಬಿಡೋದು ಅಂದರೆ?' ನಾನು ಕೇಳಿದೆ.

'ಅದೊಂದು ಸ್ಪೆಷಲ್ ಎಣ್ಣೆ, ಹರಳೆಣ್ಣೆ, ಕಳ್ಳೆಕಾಯೆಣ್ಣೆ, ಎಳ್ಳೆಣ್ಣೆ, ಹೊಂಗೆ ಎಣ್ಣೆ ಇತ್ಯಾದಿ ಬೇರೆ ಬೇರೆ ಎಣ್ಣೆಗಳು. ಅದರ ಜೊತೆಗೆ ಯಾಲಕ್ಕಿ, ಲವಂಗ, ಇನ್ನೂ ಏನೇನೋ, ಒಟ್ಟು ಹದಿನೆಂಟು ಸಾಮಗ್ರಿಗಳನ್ನು ಹಾಕಿ ಕುದಿಸಿ ಆರಿಸಿದ ಎಣ್ಣೆ. ಮಂಡಿ ನೋವಿಗೆ ಅದು ರಾಮಬಾಣ. ನಿಪ್ಪಲ್ಲು ಸರಿಯಾಗಿ ಕೂತುಕೊಂಡ ಮೇಲೆ ಮೊದಲ ದಿನ ರಾತ್ರಿ ಮಲಗುವ ಮುಂಚೆ ನಾನೇ ಎರಡು ತೊಟ್ಟು ಎಣ್ಣೆ ಬಿಟ್ಟೆ. ನೀವು ನಂಬ್ತೀರೋ ಇಲ್ಲವೋ, ಬೆಳಿಗ್ಗೆ ಎದ್ದು ನೋಡಿದರೆ ಕಪಿಲಮ್ಮ ಟಕ ಟಕ ಅಂತ ವಾಕಿಂಗ್ ಹೋಗ್ತಿದ್ದಾರೆ. ನನ್ನನ್ನ ನೋಡಿದ ಕೂಡಲೇ ರಸ್ತೆ ಅನ್ನೋದನ್ನೂ ಮರೆತು ಅಲ್ಲೇ, ಚಕ್ಕಳಬಕ್ಕಳ ಹಾಕಿ ಕೂತುಬಿಟ್ಟರು. ನನ್ನ ಮೊಮ್ಮಕ್ಕಳನ್ನು ಕರೆದು ತೋರಿಸಿದೆ. ಅವರಿಬ್ಬರೂ ಮೂಗಿನ ಮೇಲೆ ಬೆರಳಿಟ್ಟುಕೊಂಡುಬಿಟ್ಟರೂಂತೀನಿ!'

ಸ್ವಲ್ಪ ಹೊತ್ತಿಗೆ ಮುಂಚೆ, ನಾವು ಮಾತಾಡ್ತಿದ್ದಾಗ, ಹೊಸ ಅಜ್ಜಿ ನಮ್ಮನ್ನ ನೋಡ್ತಾ ಇದ್ದ ಹಾಗೆ, ನಾವು ಹೊಸ ಅಜ್ಜೀನ ನೋಡ್ತಾ ಇದ್ದೆವು. ಕಿಟಕಿಯಲ್ಲಿ ನೋಡಿದ ಹೊಸ ಅಜ್ಜಿ 'ಮತ್ತಿಕೆರೆ ಬಂದುಬಿಡ್ತು. ಇಲ್ಲೇ ಇಳಕೋತೀನಪ್ಪ' ಅಂದರು.

ಕಾರು ನಿಂತಿತು. 'ಎಲ್ಲರಿಗೂ ಥ್ಯಾಂಕ್ಸ್' ಅಂತನ್ನುತ್ತಾ ಹೊಸ ಅಜ್ಜಿ ಇಳಿದರು.

ನಮ್ಮಜ್ಜಿ ಅಂಗೈ ಮೇಲೆತ್ತಿದರು. ಹೊಸ ಅಜ್ಜೀನೂ ಅಂಗೈ ಮೇಲೆತ್ತಿದರು. ಇಬ್ಬರೂ ಕೈಗಳನ್ನು ಹೊಡೆದುಕೊಂಡು ಹೈ-ಫೈ ಮಾಡಿದರು. ಹೊಸ ಅಜ್ಜಿ ಕಣ್ಣು ಮಿಟುಕಿಸುತ್ತಾ ರಾಗವಾಗಿ 'ಬಾಯ್' ಅಂತು.

---

## ಕಂಟಕ

ಅವಳು ಮತ್ತು ಅವನು ತುಂಬಾ ದಿವಸಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು
ಏನಾದರಾಗಲಿ ಅಂತ ಮದುವೆ ಆಗೇ ಬಿಡೋಣ ಅಂತ ತೀರ್ಮಾನಿಸಿದರು
ಆದರೆ ಅವರಿಬ್ಬರ ಮದುವೆ ನಡೆಯೋದು ಸಾಧ್ಯವಾಗಲೇ ಇಲ್ಲ – ಏಕೆಂದರೆ
ಅವಳ ಗಂಡನೂ, ಅವನ ಹೆಂಡತಿಯೂ ಡೈವೋರ್ಸ್ ಕೊಡಲು ಒಪ್ಪಲಿಲ್ಲ

*****

## ಕನಸು

ಅವನು ಪೋಲೀಸ್ ನೌಕರನಾದರೂ ಅಷ್ಟೊಂದು ಸಮರ್ಥನಲ್ಲ
ಒಂದು ದಿನ ಇವತ್ತು ಕಳ್ಳನನ್ನು ಹಿಡಿದೇಬಿಡ್ತೀನಿ ಅಂತ ಕಳ್ಳನ ಹಿಂದೆ ಓಡಿದ
ಆದರೆ ಕಳ್ಳನನ್ನು ಹಿಡಿಯೋದು ಅವನಿಂದ ಸಾಧ್ಯವಾಗಲೇ ಇಲ್ಲ – ಏಕೆಂದರೆ
ಅವನ ಹೆಂಡತಿ ಅವನನ್ನು ಬಲವಂತವಾಗಿ ಹಾಸಿಗೆಯಿಂದ ಎಬ್ಬಿಸುತ್ತಿದ್ದಳು

*****

ಹತ್ತು ವರ್ಷ ದಾಂಪತ್ಯದ ಆ ದಂಪತಿಗಳಿಗೆ ಮಗು ಎಂದರೆ ತುಂಬಾ ಇಷ್ಟ
ತಮ್ಮ ಎಲ್ಲ ಸಂಪಾದನೆಯನ್ನೂ ಆ ಮಗುವಿಗಾಗಿ ಖರ್ಚು ಮಾಡುತ್ತಿದ್ದರು
ಆದರೂ ಅವರ ಮನದಲ್ಲಿ ಏನೋ ಒಂದು ಕೊರಗು ಇತ್ತು – ಏನೆಂದರೆ
ನಮಗೆ ನಮ್ಮದೇ ಆದ ಒಂದು ಮಗು ಪಡೆಯೋ ಅದೃಷ್ಟ ಇಲ್ಲವಲ್ಲ ಅಂತ

*****

# ಫುಲ್ ಟೈಂ ಮಾಸ್ತರರ ಪಾರ್ಟ್ ಟೈಂ ಪೌರೋಹಿತ್ಯ

• ಎಚ್.ಪಿ. ಕೃಷ್ಣಸ್ವಾಮಿ

ಅದೊಂದು ನದಿ ತೀರದ ಪಟ್ಟಣ. ಜನಸಂಖ್ಯೆ ಸುಮಾರು 50,000. ಬಸ್ ರೈಲಿನ ಸಂಪರ್ಕ, ಸುಸಜ್ಜಿತವಾದ ಆಸ್ಪತ್ರೆ, ಅಲೋಪತಿ ವೈದ್ಯರ ಜತೆಗೆ ಆಯುರ್ವೇದ ಯುನಾನಿ ಪಂಡಿತರೂ ಚಿಕಿತ್ಸೆ ನೀಡುತ್ತಿದ್ದರು. ಆದರೂ ಸಾವು ಸಂಭವಿಸುತ್ತಲೇ ಇತ್ತು ಆಗಾಗ್ಗೆ. ಅದರೊಟ್ಟಿಗೆ ಒಂದು ಕೊರತೆ ಊರಿನವರನ್ನು ಕಾಡುತ್ತಿತ್ತು. ಅದೇನೆಂದರೆ ಸತ್ತವರನ್ನು ಸ್ವರ್ಗಕ್ಕೆ ಸೇರಿಸಲು ಅಪರಕರ್ಮ ಪ್ರಯೋಗಿಗಳ ಕೊರತೆ. ಅಷ್ಟು ದೊಡ್ಡ ಊರಿಗೆ ಇದ್ದವರು ಒಬ್ಬರೇ ಪುರೋಹಿತರು. ಅದೂ ಅವರು ಇದ್ದದು ಸಮೀಪದ ಹಳ್ಳಿಯಲ್ಲಿ. ಅವರದ್ದೋ ಟು ಇನ್ ವೃತ್ತಿ. ಫುಲ್ ಟೈಂ ಸರ್ಕಾರಿ ಮಾಸ್ತರರು. ಪಾರ್ಟ್ ಟೈಂ ಪೌರೋಹಿತ್ಯ. ಮಾಸ್ತರರು ಎಂದರೆ ಇಡೀ ಶಾಲೆಗೆ ಅವರೊಬ್ಬರೇ ಮಾಸ್ತರು. ಏಕೆಂದರೆ ಅದೊಂದು ಏಕೋಪಾಧ್ಯಾಯ ಶಾಲೆ. ಮಾಸ್ತರರು ಬಂದರೆ ಅಥವಾ ಶಾಲೆಯಲ್ಲಿ ಇದ್ದರೆ ಕ್ಲಾಸ್ ಇಲ್ಲದಿದ್ದರೆ ಶಾಲೆಗೆ ಅಘೋಷಿತ ರಜೆ.

**ಸಾವಿನ ಮನೆಯಿಂದ ಕರೆಗೆ ಕಾಯುತ್ತಲೇ ಪಾಠ ಮಾಡುತ್ತಿದ್ದ ಮೇಷ್ಟ್ರ ಕತೆ**

ಸಾವು ಯಾವಾಗ ಬೇಕಾದರೂ ಸಂಭವಿಸಬಹುದಾದ್ದರಿಂದ. ಹಾಗಾಗಿ ತಮಗೆ ಯಾವಾಗ ಬೇಕಾದರೂ ಅಪರಕರ್ಮಕ್ಕೆ ಬುಲಾವು ಬರಬಹುದೆಂದು ಅರಿತಿದ್ದ ಈ ಏಕೈಕ ಪುರೋಹಿತರು ಶಾಲೆಗೆ ಹೋಗುವಾಗಲೇ ಅಪರಕರ್ಮಕ್ಕೆ ಸಿದ್ಧತೆ ಮಾಡಿಕೊಂಡು ಹೋಗುತ್ತಿದ್ದರು. ಆದುದರಿಂದ ಅವರ ಜತೆಯಲ್ಲಿ ಒಂದು ಪಂಚೆ, ಒಂದು ಟವಲ್, ಕೈ ಚೀಲದಲ್ಲಿ ಕರಿ ಎಳ್ಳು ದರ್ಬೆ ಯಾವಾಗಲೂ ಇದ್ದಿದ್ದೆ. ಬಿ ರೆಡಿ ಎಂಬ ಬಾಯ್ ಸ್ಕೌಟ್ ಧ್ಯೇಯದಂತೆ ಅವರು ಯಾವಾಗಲೂ ರೆಡಿ ಇದ್ದು ಸಾವಿನ ಮನೆಯಿಂದ ಕರೆಗೆ ಕಾಯುತ್ತಲೇ ಪಾಠ ಮಾಡುತ್ತಿದ್ದರು.

ತರಗತಿ ನಡೆಯುತ್ತಿದ್ದಂತೆ ಅಂತಹ ಬುಲಾವ್ ಬಂದರೆ ತಕ್ಷಣ ಇವರು ಸಿದ್ಧರಾಗುತ್ತಿದ್ದರು. ಮಕ್ಕಳಿಗೆ ಸಂಜೆಯವರೆಗೂ ಬರೆಯುವ ಮತ್ತು ಗಣಿತದ ಸಮಸ್ಯೆಗಳನ್ನು ಕೊಟ್ಟು ಒಬ್ಬ ಬಲಿತ ಹುಡುಗನ ಸುಪರ್ದಿಗೆ ತರಗತಿಯನ್ನು ಒಪ್ಪಿಸಿ, ಯಾರೂ ಹೊರಗೆ ಹೋಗಬಾರದು ಎಂದು ಕಟ್ಟಪ್ಪಣೆ ಮಾಡಿ ಸೈಕಲ್ ಏರಿ ಸೂತಕದ ಮನೆಗೆ ಧಾವಿಸುತ್ತಿದ್ದರು. ಇದು ಮಾಮೂಲಾಗಿ ಹೋಗಿತ್ತು.

ಇತ್ತ ಗುರುಗಳು ಕಣ್ಮರೆಯಾಗುತ್ತಿದ್ದಂತೆ ಶಾಲಾ ಮಕ್ಕಳು ಹೋ ಎಂದು ಕಿರುಚುತ್ತಾ ತರಗತಿಯಿಂದ ಹೊರಗೆ ಓಡಿ ಆಟದಲ್ಲಿ ತೊಡಗುತ್ತಿದ್ದರು. ಅವರಿಗೆ ಖುಷಿಯೋ ಖುಷಿ. ಕೆಲವರು ಮರ ಏರಿದರೆ ಕೆಲವರು ಈಜಲು ಕೆರೆಯತ್ತ ಧಾವಿಸುತ್ತಿದ್ದರು. ಮತ್ತೆ ಕೆಲವರು ಸುತ್ತಮುತ್ತಲಿನ ತೋಟಗಳಿಗೆ ಲಗ್ಗೆ ಇಟ್ಟು ಹಣ್ಣುಗಳನ್ನು ಧ್ವಂಸ ಮಾಡುತ್ತಿದ್ದರು. ದುಡ್ಡುಳ್ಳ ಮಕ್ಕಳು ಹಳ್ಳಿಯ ಅಂಗಡಿಗೆ ಭೇಟಿ ನೀಡಿ ಬಿಸ್ಕತ್ ಚಾಕಲೇಟ್ ಕೊಂಡು ಮೆಲ್ಲುತ್ತಾ ಮನದಲ್ಲೇ ಮಾಸ್ತರರನ್ನು ವಂದಿಸುತ್ತಿದ್ದರು. ಹೆಣ್ಣು ಮಕ್ಕಳು ಕುಂಟೆ ಬಿಲ್ಲೆ ಮುಂತಾದ ಆಟಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಆದರೆ ಎಲ್ಲರೂ 5 ಗಂಟೆಯ ಹೊತ್ತಿಗೆ ಮನೆ ಸೇರುತ್ತಿದ್ದರು.

ಇದು ಸಾಂಗೋಪಸಾಂಗವಾಗಿ ನಡೆಯುತ್ತಿತ್ತು – ಅತ್ತ ಅಪರಕರ್ಮ ಇತ್ತ ಆಟೋಟ ಚೇಷ್ಟೆ. ಆದರೆ ಒಮ್ಮೆ ಹುಡುಗರ ದಾಂಧಲೆ ಹೆಚ್ಚಾದಾಗ ಕೆಲವರು ಊರಿನ ಪಂಚಾಯ್ತಿಗೆ ದೂರು ಕೊಟ್ಟರು. ಪಂಚಾಯ್ತಿ ಸದಸ್ಯರು ಈ ದೂರನ್ನು ಗಂಭೀರವಾಗಿ ಸ್ವೀಕರಿಸಿ ಮಾಸ್ತರರನ್ನು ವಿಚಾರಣೆಗೆ ಕರೆಸಿದರು. ಹುಡುಗರ ದಾಂಧಲೆಯನ್ನು ಅವರಿಗೆ ವಿವರಿಸಿ ಹೇಳಲಾಯಿತು. ಕೆಲವು ಸದಸ್ಯರು 'ಅಯ್ನೋರೆ, ಇದು ನಿಲ್ಲದಿದ್ದರೆ ನಿಮ್ಮ ವಿರುದ್ಧ ದೂರು ನೀಡಿ ಇಲ್ಲಿಂದ ಎತ್ತಂಗಡಿಸಿ ಮಾಡಬೇಕಾಗಿ ಬರುತ್ತದೆ' ಎಂಬ ಎಚ್ಚರಿಕೆಯನ್ನು ರವಾನಿಸಿದರು. ಆದರೆ ಮಾಸ್ತರರ ಪರ ವಾದ ಮಾಡುವ ಕೆಲವು ಪಂಚಾಯತ್ ಸದಸ್ಯರೂ ಇದ್ದರು. ಅವರ ಮಕ್ಕಳು ಅದೇ ಶಾಲೆಗೆ ಹೋಗುತ್ತಿದ್ದರು. ಅವರು ಈ ಮಾಸ್ತರ್ ಪರ ವಕಾಲತ್ ಮಾಡಿ ಅವರು ನುರಿತ ಮೇಷ್ಟ್ರು, ಚೆನ್ನಾಗಿ ಪಾಠ ಮಾಡುತ್ತಾರೆ ಆದ್ದರಿಂದ ಅವರ ವರ್ಗಕ್ಕೆ ಪ್ರಯತ್ನ ಪಡುವುದು ಬೇಡ ಎಂದು ವಾದಿಸಿದರು. ಪಂಚಾಯತ್ ಅಧ್ಯಕ್ಷರಿಗೆ ಸಮಸ್ಯೆ ಆಯಿತು. ಪರಿಹಾರ ಗೋಚರಿಸದೆ ಸಮಸ್ಯೆ ಬಗೆಹರಿಸುವಂತೆ ಮಾಸ್ತರರನ್ನೇ ಕೋರಿದರು!

**ಅಷ್ಟೆ**

ಓದುಗನೊಬ್ಬನ ಮನದಾಳದ ನುಡಿ:

"ನನಗೆ ದೊಡ್ಡ ಕತೆಗಳನ್ನು ಕೇಳುವುದಕ್ಕೆ ಇಷ್ಟ. ಆದರೆ ಅದನ್ನು ಯಾರಾದರೂ ಸಣ್ಣದಾಗಿ ಕುತೂಹಲಕಾರಿಯಾಗಿರುವಂತೆ ಹೇಳಬೇಕು ಅಷ್ಟೆ."

ಅವರು ನೀಡಿದ ಪರಿಹಾರ ಸೂತ್ರ ಹೀಗಿತ್ತು. ಹಳ್ಳಿಯಲ್ಲಿ ಕೆಲವು ವಿದ್ಯಾವಂತರಿದ್ದು ಅವರಲ್ಲಿ ಒಬ್ಬ ಸಕಲಕಲಾವಲ್ಲಭನಾಗಿದ್ದ. ಅವನನ್ನು ತಾವಿಲ್ಲದ ವೇಳೆಯಲ್ಲಿ ಮಾಸ್ತರ್ ಕೆಲಸ ಮಾಡಲು ನೇಮಿಸುವುದು, ಅವನಿಗೆ ನಿರ್ದಿಷ್ಟ ಸಂಬಳವನ್ನು ನೀಡುವುದು. ಆ ಯುವಕ ಹಾಡು ಹೇಳುತ್ತಿದ್ದ ನಾಟಕ ಕಲೆಯನ್ನೂ ಬಲ್ಲವನಾಗಿದ್ದ. ಆದುದರಿಂದ ಅವನು ಮಾಸ್ತರ್ ಇಲ್ಲದ ವೇಳೆಯಲ್ಲಿ ತರಗತಿ ನಡೆಸುವಾಗ ಸಿನಿಮಾ, ರಂಗಗೀತೆಗಳನ್ನು ಹೇಳುವುದರ ಜತೆಗೆ ಮಕ್ಕಳಿಗೂ ಅವುಗಳನ್ನು ಕಲಿಸುತ್ತಿದ್ದ. ಈ ಮನೋರಂಜನೆಯಿಂದ

ಮಕ್ಕಳು ಆನಂದ ಪಟ್ಟು ಸಂಜೆ 5ರವರೆಗೂ ಶಾಲೆಯಲ್ಲೇ ಇರತೊಡಗಿದರು. ಮಕ್ಕಳು ಬೀದಿಗೆ ಬಾರದಿದ್ದನ್ನು ನೋಡಿ ನೋಡಿ ಊರಿನವರು ನಿರಾಳರಾದರು. ಮಾಸ್ತರರ ಅಪರ ಕರ್ಮ ಚಟುವಟಿಕೆಗಳು ಅಡೆತಡೆಯಿಲ್ಲದೆ ಸಾಗುತ್ತಿದ್ದವು.

ಹೀಗೆ ಎಲ್ಲರೂ ನೆಮ್ಮದಿಯಿಂದ ಇದ್ದಾಗ ಒಂದು ದಿನ ಒಂದು ಗಂಡಾಂತರ ಬಂದೊದಗಿತು. ಆ ಗಂಡಾಂತರ ಬಂದದ್ದು ಒಬ್ಬ ನೊ ನಾನ್‌ಸೆನ್ಸ್ ಅಧಿಕಾರಿ ಆ ತಾಲೂಕಿನ ಶಿಕ್ಷಣಾಧಿಕಾರಿಯಾಗಿ ನೇಮಕ ಗೊಂಡಾಗ. ಶಾಲೆಗಳ ತನಿಖೆ ಮಾಡದೆ ಮನೆಯಲ್ಲೋ ಕಚೇರಿಯಲ್ಲೋ ಕುಳಿತು ಎಲ್ಲ ಸರಿ ಇದೆ ಎಂದು ಮೇಲಕ್ಕೆ ವರದಿ ಕಳಿಸುವ ಜಾಯಮಾನದವರಲ್ಲ ಅವರು. ದ್ವಿಚಕ್ರ ವಾಹನ ಏರಿ ಪ್ರತಿ ಹಳ್ಳಿಯ ಶಾಲೆಯನ್ನು ಖುದ್ದಾಗಿ ಸಂದರ್ಶಿಸಿ, ಶಾಲೆಯ ಚಟುವಟಿಕೆಗಳನ್ನು ಪರಾಮರ್ಶಿಸಿ ತಪ್ಪಿತಸ್ಥ ಮಾಸ್ತರರಿಗೆ ಶಿಕ್ಷೆ ಕೊಡುವಂತಹ ಖಡಕ್ ಅಧಿಕಾರಿ ಅವರಾಗಿದ್ದರು.

ಈ ಅಧಿಕಾರಿ ಒಮ್ಮೆ ಈ ಅಪರಕರ್ಮ ಖ್ಯಾತಿಯ ಮಾಸ್ತರರ ಶಾಲೆಗೆ ದಿಢೀರ್ ಎಂದು ಭೇಟಿ ನೀಡುವುದೆ? ಅದೂ ಆ ಮಾಸ್ತರ್ ಯಾರದ್ದೋ ತಿಥಿ ಮಾಡಿಸಲು ಆನ್ ಡ್ಯೂಟಿ ಹೋಗಿರುವ ಸಮಯದಲ್ಲಿ! ಆಗ ನಮ್ಮ ಮಾಸ್ತರರ ಸ್ಟೆಪ್ನಿ ತರಗತಿ ನಡೆಸುತ್ತಿದ್ದಾನೆ, ಅದೂ ಹೇಗೆ? ರಾಜ್‌ಕುಮಾರ್ ಸ್ಟೈಲಿನಲ್ಲಿ ಬಭ್ರುವಾಹನ ಸಂವಾದವನ್ನು ಹಾಡಿಸುತ್ತಿದ್ದಾನೆ. ಅಧಿ ಕಾರಿಗಳ ಬಳಿ ಇದ್ದ ಕಡತದ ಪ್ರಕಾರ ಈ ಮಾಸ್ತರ್ ವಯಸ್ಸು 50 ದಾಟಿರಬೇಕು. ಆದರೆ ಇವನೋ ಯುವಕ. ಅಧಿಕಾರಿಗಳು ಆ ದೃಶ್ಯ ನೋಡಿ ಕೆಂಡಾಮಂಡಲವಾದರು. ಅವನನ್ನು ತರಾಟೆಗೆ ತೆಗೆದುಕೊಂಡಾಗ ಗುಟ್ಟು ರಟ್ಟಾಯಿತು. ಅವನನ್ನು ಹೊರಹಾಕಿದ ಅಧಿಕಾರಿಗಳು ತಾವೇ ಸಂಜೆ 5ರವರೆಗೂ ಪಾಠ ಮಾಡಿ ಶಾಲೆಗೆ ಬೀಗ ಹಾಕಿಸಿ ಊರಿಗೆ ವಾಪಸಾದರು.

ಮಾರನೇ ದಿನವೇ ಈ ಮಾಸ್ತರರಿಗೆ ಬುಲಾವ್ ಬಂದಿತು. 'ಏನ್ರೀ ಸರ್ಕಾರ ನಿಮಗೆ ಸಂಬಳ ಕೊಡುವುದು ಮಕ್ಕಳಿಗೆ ಪಾಠ ಹೇಳಲಿಕ್ಕೊ ಅಥವಾ ಅಪರಕರ್ಮ ಮಾಡಿಸುವುದಕ್ಕೊ. ಕೂಡಲೆ ಅವರೆಡರಲ್ಲಿ ಒಂದನ್ನು ಚುನಾಯಿಸಿ' ಎಂದು ಗತ್ತಿನಲ್ಲೇ ಕೇಳಿದರು. ಮಾಸ್ತರರು ಕೆಲವು ನಿಮಿಷ ಯೋಚನೆ ಮಾಡಿ ಸರ್ಕಾರಿ ಕೆಲಸವನ್ನು ಮಾಡುವುದಾಗಿಯೂ ಅಪರಕರ್ಮ ಕೆಲಸ ನಿರ್ವಹಿಸುವುದಿಲ್ಲ ಎಂದು ಹೇಳಿ ಹೊರಬಂದರು.

ಈ ನಿರ್ಧಾರ ಊರಿನಲ್ಲಿ ಹರಡಿದಾಗ ಎಲ್ಲರನ್ನೂ ಚಿಂತೆಗೆ ದೂಡಿತು. ಯಾರಾದರೂ ಸತ್ತರೆ ಏನು ಗತಿ? ಅಪರಕರ್ಮ ಮಾಡಿಸುವವರಾರು? ಸತ್ತವರಿಗೆ ಮುಕ್ತಿ ಕಾಣಿಸುವುದು ಹೇಗೆ? ಪುರಸಭಾಧ್ಯಕ್ಷರ ನೇತೃತ್ವದಲ್ಲಿ ಒಂದು ನಿಯೋಗ ಈ ಖಡಕ್ ವಿದ್ಯಾಧಿಕಾರಿಗಳನ್ನು ಭೇಟಿ ಮಾಡಿ ವಿಷಯ ವಿವರಿಸಿ ಮಾಸ್ತರರಿಗೆ ಸ್ವಲ್ಪ ರಿಯಾಯತಿ ಕೊಡಬೇಕೆಂದು ವಿನಂತಿ ಮಾಡಿತು. ಆದರೆ ಕಾನೂನು ನಿಷ್ಠರಾದ ಅವರು ಈ ಬೇಡಿಕೆಯನ್ನು ಸುತರಾಂ ಸಾಧ್ಯವಿಲ್ಲ ಎಂದು ತಳ್ಳಿ ಹಾಕಿದರು.

ಸ್ವಲ್ಪ ದಿನಗಳ ನಂತರ ಕಾಯಿಲೆಯಿಂದ ನರಳುತ್ತಿದ್ದ ವಿದ್ಯಾಧಿಕಾರಿಗಳ ತಾಯಿಯೇ ಮರಣ ಹೊಂದಿದರು. ಈಕೆಯ ಅಪರಕರ್ಮ ಮಾಡಿಸುವರಾರು? ಅಧಿಕಾರಿಗಳು ಈ ವಿಷಯದಲ್ಲೂ ಖಡಕ್ ಆಗಿದ್ದರಿಂದ ಅವರಿಗೊಬ್ಬ ಪುರೋಹಿತರ ಅಗತ್ಯ ಬೇಕಿತ್ತು. ವಿಧಿ ಇಲ್ಲದೆ ಇದೇ ಮಾಸ್ತರರಿಗೆ ಹೇಳಿ ಕಳಿಸಿದರು. ಆದರೆ ಮಾಸ್ತರರು ಬರಲೊಪ್ಪಲಿಲ್ಲ. ವಿದ್ಯಾರ್ಥಿಗಳಿಗೆ ಟೆಸ್ಟ್ ನಡೆಸುತ್ತಿರುವುದಾಗಿಯೂ ಅದನ್ನು ಬಿಟ್ಟು ಬರಲು ಸಾಧ್ಯವಾಗದು, ಆದರೆ ಶಾಲೆ ಬಿಟ್ಟ ಮೇಲೆ ಬರುವುದಾಗಿ ಉತ್ತರ ನೀಡಿದರು.

ಇತ್ತ ಮನೆಯಲ್ಲಿ ತಾಯಿಯ ಶವ ಇಟ್ಟುಕೊಂಡು ಪುರೋಹಿತರಿಗಾಗಿ ಕಾಯುತ್ತಿದ್ದಾಗ ಊಟವಿಲ್ಲದೆ ಮಕ್ಕಳು ಗೋಳಾಡತೊಡಗಿದಾಗ ಅಧಿಕಾರಿಗಳು ಅಸಹಾಯಕರಾದರು. ತಮ್ಮ ಗಮ್ಮತ್ತನ್ನು ನುಂಗಿ ವಾಹನವೇರಿ ಮಾಸ್ತರರನ್ನು ಕರೆತರಲು ತಾವೇ ಹೊರಟರು. ದಯವಿಟ್ಟು ಬಂದು ಅಪರಕರ್ಮ ನಡೆಸಿಕೊಡಿ ಎಂದು ಪ್ರಾರ್ಥಿಸಿ ಅವರಿಗೆ 15 ದಿನಗಳ ರಜೆ ಮಂಜೂರು ಮಾಡಿದರು. ಶಾಲೆಗೆ ಹಂಗಾಮಿ ಉಪಾಧ್ಯಾಯರನ್ನು ನೇಮಿಸಿದರು.

ಈಗ ಆ ಅಧಿಕಾರಿಗಳಿಗೆ ಆ ಅಪರಕರ್ಮ ಮಾಸ್ತರರ ಅಗತ್ಯ ಊರಿಗೆ ಎಷ್ಟು ಇದೆ ಎಂದು ಮನವರಿಕೆಯಾಯಿತು. ಆದರೆ ಅವರ ಕಾನೂನು ಬದ್ಧತೆ ಆ ಪರಿಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಲು ಅಡ್ಡಿ ಬಂದಿತು. ಈಗವರು ಒಂದು ಧರ್ಮ ಸಂಕಟದಲ್ಲಿ ಸಿಕ್ಕಿ ಬಿದ್ದಿದ್ದರು. ಆದರಿಂದ ಹೊರಬರಲು ತಾವೇ ಬೇರೆ ಊರಿಗೆ ವರ್ಗ ಮಾಡಿಸಿಕೊಂಡು ಅದರಿಂದ ಪಾರಾದರು.

ಈಗ ಅಪರಕರ್ಮ ಮಾಸ್ತರರಿಗೆ ಯಾವ ಅಡ್ಡಿಯೂ ಇರಲಿಲ್ಲ, ಸತ್ತವರನ್ನು ಸ್ವರ್ಗಕ್ಕೆ ಸೇರಿಸುವ ಕಾರ್ಯ ನಿರಂತರವಾಗಿ ನಡೆಯತೊಡಗಿತು. ಸರ್ಕಾರಿ ಕೆಲಸದಲ್ಲಿ ದೇವರ ಕೆಲಸವೂ ಸಾಗಿತು.

---

ನಾನು ಮಾತಾಡ್ತಿರ್ತೀನಿ ನೀನು
ಕೇಳಿಸ್ಕೊಳ್ತಿರ್ತೀಯ
ಅದು ಒಳ್ಳೆಯ ಸ್ನೇಹ
ನೀನು ಮಾತಾಡ್ತಿರ್ತೀಯ ನಾನು
ಕೇಳಿಸ್ಕೊಳ್ತಿರ್ತೀನಿ
ಅದು ಉತ್ತಮ ಸ್ನೇಹ
ನಾನು ಏನೂ ಮಾತಾಡುವುದೇ ಇಲ್ಲ
ಆದರೆ ನೀನು ಅರ್ಥ ಮಾಡ್ಕೊತೀಯ
ಅದು ಅತ್ಯುತ್ತಮ ಸ್ನೇಹ

# ರೋಗವೂ ಔಷಧವೂ..

● ಅನಿತಾ ನರೇಶ್ ಮಂಚಿ

ಆತ್ಮೀಯ ಗೆಳತಿ ಮನೆಗೆ ಬಾರೆಂದು ಸಾವಿರದ ಒಂದನೇ ಬಾರಿ ಕರೆದು ಈ ಸಲವೂ ತಪ್ಪಿಸಿಕೊಂಡರೆ ಈ ಜನ್ಮದಲ್ಲಿ ನಿನ್ನೊಡನೆ ಮಾತನಾಡುವುದಿಲ್ಲ ಎಂದು ಧಮ್ಕಿ ಹಾಕಿದ್ದಳು. ದಿನಕ್ಕೆ ಸುಮಾರು ಫೋನಿನ ಹಣ ಮತ್ತು ಸಮಯ ಉಳಿತಾಯವಾಗುವ ಅವಳ ಈ ಆಫರ್ ಏನೋ ಇಷ್ಟವಾದರೂ ಆ ಸವಾಲನ್ನು ಒಪ್ಪಿಕೊಳ್ಳಲು ಧೈರ್ಯ ಬಂದಿರಲಿಲ್ಲ. ಈ ಆದಿತ್ಯವಾರ ನಿಶ್ಚಿತವಾಗಿ ನಿನ್ನ ಮನೆಗೆ ದಾಳಿ ಇಡುತ್ತೇನೆ ಎಂದು ಮೊದಲೇ ಹೆದರಿಸಿದ್ದೆ. ನನ್ನ ಕಿವಿ ತೂತಾಗುವಂತ ಖುಷಿಯಿಂದಲೋ ಹೆದರಿಕೆಯಿಂದಲೋ ಹ್ಹೋ ಎಂದು ಅಬ್ಬರಿಸಿ ಬೊಬ್ಬಿರಿದು ನನ್ನ ಕಿವಿಗಳು ಕೆಪ್ಪಾಗುವಂತೆ ಮಾಡಿದ್ದಳು. ಪುಣ್ಯಕೋಟಿ ವಂಶಸ್ಥಳಾದ ನಾನು ಕೊಟ್ಟ ಮಾತಿಗೆ ತಪ್ಪಲಾರೆನು ಎಂದು ಬೆಳಿಗ್ಗೆಯೇ ಅವಳ ಮನೆ ದಾರಿ ಹಿಡಿದಿದ್ದೆ. ಗಂಡ ಆಫೀಸ್ ಟೂರ್, ಮಗ ಶಾಲೆಯ ಟೂರ್ ಎಂದು ಊರ ಹೊರಗೆ ಹೋಗಿದ್ದ ಕಾರಣ ಬೆಳಗಿನ ತಿಂಡಿ ಮಾಡುವ ಕೆಲಸ ಉಳಿಸುವ ಚಿಂತನೆಯೂ ಇದರ ಹಿಂದೆ ಇತ್ತೆನ್ನಿ.

> **ಮಗಳಿಗೆ ಕಾಯಿಲೆಗೆ ಮದ್ದು ಕೊಡಿಸದೇ ಅದರ ಬೆಲೆಯ ಬಗ್ಗೆ ತಲೆ ಬಿಸಿ ಮಾಡುವ ಇವಳ್ಯಾವ ತಾಯಿ ಎಂದು ಸಿಟ್ಟು ಬಂತು.**

ಆಟೋದಲ್ಲಿ ಹೋಗುತ್ತಿರುವಾಗಲೇ ನನ್ನ ಬರುವಿಗಾಗಿ ಕಾತರಿಸಿ ಕಾದಿರುವ ಅವಳ ಚಿತ್ರ ಒಳ ಮನಸ್ಸಿನಲ್ಲಿ ಮೂಡುತ್ತಿತ್ತು. ರಸ್ತೆಯ ಏರು ತಗ್ಗು ಹೊಂಡ ಗುಂಡಿಗಳಲ್ಲಿ ಏದುಸಿರು ಬಿಡುತ್ತಾ ಸಾಗುತ್ತಿದ್ದ ಆಟೋ ನನ್ನ ವೇಗಕ್ಕೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಕೋಪ ಉಕ್ಕಿ ಬರುತ್ತಿತ್ತು. ಸ್ವಲ್ಪ ಬೇಗ ಹೋಗಪ್ಪಾ ಅಂದರೆ ಅವನು ನನ್ನೆಡೆಗೆ ಕೆಂಪಗಿನ ಕಣ್ಣು ಹೊರಳಿಸಿ, ಈ ರಸ್ತೆಯಲ್ಲಿ ನಿಮ್ಮ ತೂಕವನ್ನೂ ಹೊತ್ತು ಆಟೋ ಹೋಗುತ್ತಿರುವುದೇ ಹೆಚ್ಚು ಎಂಬುದನ್ನು ಸೂಚ್ಯವಾಗಿ ತಿಳಿಸಿದ. ಅವಳ ಮನೆಯ ಎದುರು ಆಟೋ ನಿಲ್ಲಿಸಿ, ಅದರಿಂದಿಳಿದು, ಮೀಟರ್ ಸರಿ ಇಲ್ಲವೆಂದು ಅರ್ಧ ತಾಸು ವಾದಿಸಿ, ಬೆವರಿಳಿಸಿಕೊಂಡು ಕೊನೆಗೆ ಅವನು ಹೇಳಿದ ರೇಟನ್ನೇ ಕೊಟ್ಟು ಮನೆಯ ಕಡೆ ತಿರುಗಿದರೂ ಬಾಗಿಲಿನ್ನೂ ಮುಚ್ಚಿಯೇ ಇತ್ತು. ಪಾಪ ನನಗಾಗಿ ತಿಂಡಿಯ ತಯಾರಿಯಲ್ಲಿ ಒಳಮನೆಯಲ್ಲಿರುವಾಗ ಬಾಗಿಲು ತೆಗೆದಿಡಲು ಸಾಧ್ಯವೇ ಎಂದು ನಾನೇ ಸಮಾಧಾನ ಮಾಡಿಕೊಂಡು ಕಾಲ್ ಬೆಲ್ ಒತ್ತಿದೆ. ಉಹೂಂ.. ಒಳಗಿನಿಂದ ಯಾವುದೇ ಸದ್ದು ಕೇಳಿಸುತ್ತಿಲ್ಲ.

ಮತ್ತೆ ನನ್ನ ವಾಚಿನಲ್ಲಿ ಇವತ್ತಿನ ವಾರ ಮತ್ತು ದಿನಾಂಕ ನೋಡಿಕೊಂಡೆ. ಸರಿಯಾಗಿಯೇ ಇತ್ತು. ಹಾಗಿದ್ದ ಮೇಲೆ ನಾನು ಹೊರಟ ಹೊತ್ತು ವೇಳೆಯೇ ಸರಿ ಇಲ್ಲವೇನೋ? ಆತುರದಲ್ಲಿ

ಹೊರಟ ಕಾರಣ ಟಿವಿಯಲ್ಲಿ ಜ್ಯೋತಿಷಿಗಳು ನನ್ನ ದಿನ ಭವಿಷ್ಯದ ಬಗ್ಗೆ ಏನು ಹೇಳಿದ್ದಾರೆಂದು ತಿಳಿದುಕೊಂಡಿರಲಿಲ್ಲ. ಆದರೂ ಇದು ಆತ್ಮೀಯ ಗೆಳತಿಯ ಮನೆಯೇ ತಾನೇ ಹಾಗೇನು ಆಗಲು ಸಾಧ್ಯವಿಲ್ಲ ಎಂದು ಸಣ್ಣದಾಗಿ ಕಿರುಗುಡುವ ಕರೆಗಂಟೆಯನ್ನು ಒತ್ತುವ ಕೆಲಸ ನಿಲ್ಲಿಸಿ ಡಬ ಡಬ ಎಂದು ಬಾಗಿಲು ಬಡಿದೆ. ಇನ್ನು ತೆಗೆಯದಿದ್ದರೆ ಬಾಗಿಲು ಮುರಿದು ಬೀಳಬಹುದೆಂಬ ಭಯದಲ್ಲಿ ಬಾಗಿಲು ತೆರೆಯಿತು. ಎದುರಿಗೆ ಸಾಕ್ಷಾತ್ ನನ್ನ ಆತ್ಮೀಯ ಗೆಳತಿ. ನನ್ನನ್ನು ನೋಡಿ ಕುಣಿದಾಡಬೇಕಿದ್ದವಳು ಮೋರೆ ತಿರುಗಿಸಿ ಸೋಫಾದ ಕಡೆಗೆ ಕೈ ತೋರಿಸಿ ಮೌನವಾಗಿ ಅಡುಗೆ ಮನೆಗೆ ನಡೆದಳು. ಇವತ್ತಿನ್ನೂ ಇಡೀ ದಿನ ಇಲ್ಲಿಯೇ ಕಾಲ ಕಳೆಯಲಿರುವ ಕಾರಣ ಮಾತುಗಳು ಕಡಿಮೆ ಬಿದ್ದರೆ ಎಂದು ಈಗ ಮೌನ ವ್ರತ ಮಾಡುತ್ತಿದ್ದಾಳೇನೋ ಎಂದುಕೊಂಡೆ. ಬಾತ್ ರೂಮಿನಿಂದ ಗಡ್ಡ ಕೆರೆಯುತ್ತಾ ಹೊರ ಬಂದ ಅವಳ ಪತಿರಾಯ ನನ್ನನ್ನು ನೋಡಿ ನಕ್ಕಂತೆ ಮಾಡಿ ಮತ್ತೆ ಬಾತ್ ರೂಮಿನೊಳಗೆ ಲೀನವಾದ. ನಾನು ಕುಳಿತ ಸೋಫಾದ ಇನ್ನೊಂದು ಪಕ್ಕದಲ್ಲಿ ಕುಳಿತು ಟಿ.ವಿ. ವೀಕ್ಷಣೆಯಲ್ಲಿ ತೊಡಗಿದ್ದ ಅವಳ ಮಗಳು ಎಮ್ ಟಿ.ವಿ. ಚ್ಯಾನಲ್ ನಿಂದ ಶಂಕರ್ ಚ್ಯಾನಲ್‌ಗೆ ಬದಲಾಯಿಸಿ ಹಾಯ್ ಎಂದು ಒಂದು ನುಡಿಮುತ್ತನ್ನು ಹಾರಿಬಿಟ್ಟು ರಿಮೋಟ್ ಎಸೆದು ಒಳ ನಡೆದಳು.

ಅಷ್ಟರಲ್ಲಿ ಗೆಳತಿ ಡೈನಿಂಗ್ ಟೇಬಲ್ಲಿಗೆ ತಂದು ಕುಕ್ಕಿದ ತಟ್ಟೆಯಲ್ಲಿ ಉಪ್ಪಿಟ್ಟು ಎಂಬ ಅರ್ಧ ದ್ರವ ಅರ್ಧ ಘನ ಆಹಾರ ಕುಕ್ಕರುಬಡಿದಿದ್ದರೆ ಕಾಫೀ ಎಂಬುದು ಕಲಗಚ್ಚಿನಂತಾಗಿತ್ತು. ಎಲ್ಲವೂ ಸರಿಯಾಗಿಲ್ಲ ಎಲ್ಲೋ ಏನೋ ಆಗಿದೆ. ಇದಕ್ಕೆ ನಾನು ಬಂದ ಸಮಯ ಸನ್ನಿವೇಶಗಳು ಕಾರಣವಲ್ಲ. ಇಲ್ಲಿಯೇ ಏನೋ ನಡೆದಿದೆ ಎಂಬುದು ಸ್ಪಷ್ಟವಾಯಿತು. ಅದನ್ನು ಕೇಳಬೇಕಾದರೆ ನಾನು ಅವಳು ಇಬ್ಬರೆ ಇರುವ ಏಕಾಂತ ಬೇಕು. ಅದಕ್ಕಾಗಿ ಅವಳ ಕಾಂತ ಬೈಕ್ ಸ್ಟಾರ್ಟ್ ಮಾಡಿ ಹೊರ ಹೋಗುವವರೆಗೆ ಬಾಯಿಗೆ ಬೀಗ ಹಾಕಿ ಕುಳಿತೆ. ಅವನು ಹೋದ ಸ್ವಲ್ಪ ಹೊತ್ತಿನಲ್ಲಿ ಅವಳ ಮಗಳು ಷಟಲ್ ರ್‍ಯಾಕೆಟ್ ಹಿಡಿದು ಬಾಯ್ ಆಂಟೀ ಎಂದು ಸೈಕಲ್ಲೇರಿ ಹೋದಳು.

ಈಗ ನನ್ನ ಗೆಳತಿ ಮಹಾಭಾರತ ಯುದ್ಧದಲ್ಲಿ ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡ ದುರ್ಯೋಧನನ ಮುಖಭಾವ ಹೊತ್ತು ನನ್ನ ಪಕ್ಕ ಕುಳಿತಳು. ನಾನು ಅಶ್ವತ್ಥಾಮನ ಭಂಗಿಯಲ್ಲಿ ಅವಳ ಕೊನೆಯಾಸೆ ಕೇಳಲು ಸಿದ್ಧಳಾಗಿದ್ದೆ. 'ಛೇ.. ಏನು ಕಾಲ ಬಂದುಬಿಟ್ಟಿದೆ ಈಗ.. ರುಪಾಯಿಗೆ ಬೆಲೆಯೇ ಇಲ್ಲ ನೋಡು' ಎಂದಳು. ಅಲ್ಲ.. ನಮ್ಮ ದೇಶದ ಘನತೆವೆತ್ತ ಮಂತ್ರಿ ಮಾಗಧರು ತಲೆ ಕೆಡಿಸಿಕೊಳ್ಳದೇ ಆರಾಮವಾಗಿ ತಿರುಗುತ್ತಿರುವಾಗ ಇವಳಿಗ್ಯಾಕೆ ಈ ಚಿಂತೆ. ಬಡವಾ ನೀ ಮಡುಗಿದ ಹಾಗಿರು ಎಂದು ಈರುಳ್ಳಿ ಬೆಲೆ ಕೇಜಿಗೆ ಏರಿದರೆ ತಲೆ ಬಿಸಿ ಮಾಡದೇ ಮೊದಲು ಕೊಟ್ಟಷ್ಟೇ ಹಣಕ್ಕೆ ಅರ್ಧ ಕೇಜಿ ತಂದು, ಇನ್ನೂ ಏರಿದರೆ ಈರುಳ್ಳಿ ಲೆಸ್ ಉಪ್ಪಿಟ್ಟು ಮಾಡುತ್ತಾ ಚೊಕ್ಕವಾಗಿ ಸಂಸಾರ ಮಾಡುವುದು ಬಿಟ್ಟು ರುಪಾಯಿಗೆ ಬೆಲೆ ಇಲ್ಲವೆಂದು ವ್ಯಥಿಸುತ್ತಾ ಕುಳಿತುಕೊಳ್ಳುವುದು ನಮ್ಮ ಭಾರತೀಯ ನಾರಿಗೆ ಶೋಭೆ ತರುವ ವಿಷಯವೇ? ಅದನ್ನೇ ಅವಳಿಗೂ ಹೇಳಿದೆ. ಅದಕ್ಕವಳು ನಿನಗೆ ನನ್ನ ಚಿಂತೆ ಅರ್ಥವಾಗೋದಿಲ್ಲ ಬಿಡು ಎಂದಳು. ಅಯ್ಯೋ ಗೆಳತಿ ನೀನು ಹೀಗೆ ಹೇಳಿದರೆ ರುಪಾಯಿಗೆ

**ತಮ್ಮ**
**ಅಧಿಕಾರವಧಿಯಲ್ಲಿ**
**ಮನಮೋಹನ್ ಸಿಂಗ್**
**ಪಾಲಿಸಿದ ಗಾಂಧೀ ಸೂತ್ರ**
ಕೆಟ್ಟದ್ದನ್ನು ಕೇಳಬೇಡ,
ಕೆಟ್ಟದ್ದನ್ನು ನೋಡಬೇಡ,
ಕೆಟ್ಟದ್ದನ್ನು ಹೇಳಬೇಡ



ಬಿಡು ನನ್ನ ನಿನ್ನ ಆತ್ಮೀಯತೆಗೆ ಬೆಲೆ ಇದೆಯೇನೇ? ಎಂದು ಎಮೋಷನಲ್ ಆಗಿ ಕೆಣಕಿದೆ.

ಆದಕ್ಕವಳು ಎಲ್ಲಿಂದ ಶುರು ಮಾಡಲಿ ಎನ್ನುವಂತೆ ನನ್ನ ಮುಖ ನೋಡಿದಳು. ಹೇಗೂ ಈಗ ತಿಂದ ಉಪ್ಪಿಟ್ಟು ಕರಗಲು ಹೇಗಿದ್ದರೂ ಇನ್ನು ಮೂರು ತಾಸಿನ ಹೊತ್ತು ಬೇಕಿತ್ತು. ಅಲ್ಲಿಯವರೆಗೆ ಯಾವುದೇ ಸಮಸ್ಯೆಗಳನ್ನು ಕೇಳುವುದಕ್ಕೆ ನನಗೇನೂ ಅಭ್ಯಂತರವಿರಲಿಲ್ಲ. ಶುರುವಿನಿಂದಲೇ ಹೇಳುವಂತವಳಾಗು ಎಂದು ಕಿವಿ ತೆರೆದು ಕುಳಿತೆ.

''ನಾಡಿದ್ದು ಹಬ್ಬ ತಾನೇ.... ಹಬ್ಬಕ್ಕೆಂದು ಈ ಸಲ ಕಾಂಜೀವರಂ ಸೀರೆ ಕೇವಲ ಏಳೂವರೆ ಸಾವಿರದ್ದು ತಗೊಳ್ತೀನಿ ಅಂತ ಇವರ ಕಿಸೆಗೆ ಕತ್ತರಿ ಹಾಕುವುದರ ಬದಲು ನೇರವಾಗಿ ಬಾಂಬ್ ಎಸೆದಿದ್ದೆ. ಇವರೂ ಬಡ ಪೆಟ್ಟಿಗೆ ಒಪ್ಪದಿದ್ದರೂ ನನ್ನ ಉಪವಾಸ ಸತ್ಯಾಗ್ರಹ ಅಂದರೆ ಅಡುಗೆ ಮಾಡದೆ ಅವರನ್ನು ಉಪವಾಸಕ್ಕೀಡು ಮಾಡೋ ಸತ್ಯಾಗ್ರಹ, ಅಸಹಕಾರ ಚಳುವಳಿಗೆ ಹೆದರಿ ಕೊನೆಗೆ ಏಳೂವರೆ ಸಾವಿರವನ್ನು ಮೂರೂವರೆ ಸಾವಿರಕ್ಕಿಳಿಸಿ ಒಪ್ಪಿಕೊಂಡಿದ್ದರು. ನಿಜ ಹೇಳಬೇಕೆಂದರೆ ನಾನು ಅಂಗಡಿಯಲ್ಲಿ ನೋಡಿ ಬಂದ ಸೀರೆಯ ಬೆಲೆ ಬರೀ ಎರಡೂವರೆ ಸಾವಿರ ಮಾತ್ರ'' ಎಂದಳು.

ಅರ್ರೇ ಇದೊಳ್ಳೆ ಪ್ಲಾನ್ ಅಲ್ವಾ.. ಎಂದು ತಲೆದೂಗಿ ಮಾತನ್ನು ಮುಂದುವರಿಸುವಂತೆ ಕುಮ್ಮಕ್ಕು ನೀಡಿದೆ. ''ಎಲ್ಲಾ ಅಂದುಕೊಂಡಂತೆ ಆಗಿದ್ದರೆ ನಾವಿಬ್ಬರೂ ಈಗ ಕಾಂಜೀವರಂ ಶೋರೂಮಿನಲ್ಲಿ ಅವರು ಕೊಡುವ ತಂಪು ಪಾನೀಯ ಹೀರುತ್ತಾ ಸೀರೆ ಸೆಲೆಕ್ಟ್ ಮಾಡ್ತಾ ಇರಬೇಕಿತ್ತು. ಆದರೆ ವಿಧಿಯಾಟ ನೋಡು ನಾನಿನ್ನು ನಮ್ಮನೆ ಸೋಫಾದಲ್ಲಿ ಮುದುರಿದ ಸೀರೆ ಕೆದರಿದ ತಲೆಯಲ್ಲಿ ಕುಳಿತಿದ್ದೇನೆ'' ಎಂದು ಮುಳು ಮುಳು ಅತ್ತಳು. ಈಗ ನಿಜಕ್ಕೂ ನನಗೂ ಅವಳ ಪರಿಸ್ಥಿತಿಯ ಬಗ್ಗೆ ಖೇದವೆನಿಸಿತು. ಆದರೆ ಗಂಡ ಒಪ್ಪಿದ ಮೇಲೇನಾಯ್ತು ಆ ಹಣ ಎಲ್ಲಿಗೆ ಹೋಯ್ತು ಎನ್ನುವುದು ಗೊತ್ತಾಗಲಿಲ್ಲ. ಅವಳು ಅಳು ನಿಲ್ಲಿಸುವವರೆಗೆ ನಾನು ಮುಂದಿನ ಸಮಾಧಾನಿಸುವ ಮಾತುಗಳನ್ನು ಕಲೆ ಹಾಕುತ್ತಾ ಕುಳಿತೆ.

ಸೋರುತ್ತಿರುವ ಮೂಗನ್ನು ಸೊರಬರ ಮಾಡುತ್ತಾ ಮತ್ತೆ ಬಾಯ್ತೆರೆದಳು. ಅವಳಿನ್ನು ಪುನಃ ಮಾತು ಅಂತ ಕೊಂಕಣ ಸುತ್ತಿ ಮೈಲಾರಕ್ಕೆ ಬರುವುದು ಬೇಡ ಎಂದು ''ನಾನೇ ಅಲ್ವೇ.. ಮೂರೂವರೆ ಸಾವಿರ ಕೊಡ್ತೀನಿ ಅಂದ್ರೂ ನೀನ್ಯಾಕೆ ಜಯಲಲಿತ ಕಾವೇರಿ ನೀರಿಗೆ ಅಳುವ ಹಾಗೆ ಮತ್ತೆ ಅಳ್ತಾ ಇದ್ದೀಯಾ?'' ಎಂದೆ.

ಅಳದೇ ಇನ್ನೇನೆ ಮಾಡಲಿ ನಮ್ಮ ಹಣೇಬರಹಕ್ಕೆ ಎಂದಳು. ಸಮಸ್ಯೆ ಸೀರೆಯದ್ದಲ್ಲ ಗಂಭೀರವಿರಬೇಕೆಂದುಕೊಂಡು ಅವಳ ಮಾತಿಗೆ ಕಾದೆ.

''ಹುಂ.. ಏನೇ ಮಾಡ್ಲಿ.. ಸೀರೆಗೆ ಅಂತ ಇವರು ಹಣ ಕೊಡಲು ಒಪ್ಪಿಕೊಂಡು ಆಗಿತ್ತು. ನಾನು ನಮ್ಮ ಮಧ್ಯಮ ವರ್ಗದ ಈಸ್ಟ್‌ಮನ್ ಕಲರ್‌ನ ಕನಸಿನಲ್ಲೂ ಬಣ್ಣ ಬಣ್ಣದ ಸೀರೆಯನ್ನುಟ್ಟು ನಲಿದಿದ್ದೂ ಆಗಿತ್ತು. ಆವಾಗ್ಲೇ ನನ್ನ ಮಗಳಿಗೆ ಈ ರೋಗ ಬಡಿದಿದ್ದು'' ಎಂದಳು.

ಅಯ್ಯೋ.. ಈಗಷ್ಟೇ ಸೈಕಲ್ ಏರಿ ಹೋದ ಕೆಂಪನೆಯ ಟೊಮೆಟೋ ಹಣ್ಣಿನಂತಿರುವ ಕಾಲೇಜು ಕಲಿಯುವ ಹುಡುಗಿಗೆ ಏನಾಯ್ತಪ್ಪಾ ಅಂತ ಗಾಬರಿ ಆಯ್ತು. ''ಏನಾಯ್ತೇ...?'' ಅಂದೆ.

''ಏನು ಹೇಳಲಿ ಹೇಳು.. ಅವಳಿಗೆ ಟ್ಯಾಬ್ಲೆಟ್ ಬೇಕಂತೆ. ಅದಕ್ಕೆ ತುಂಬಾ ಹಣ ಆಗುತ್ತೆ ಅದಕ್ಕೆ ನಾನು ಬೇಡವೇ ಬೇಡ ಅಂದಿದ್ದಕ್ಕೆ ನನ್ನ ಮೇಲೆ ಕೋಪ.. ಮನೆಯಲ್ಲಿ ಮಾತೇ ಇಲ್ಲ.. ಇವ್ರು ಬೇರೆ ಅಪ್ಪಿಗೆ ಬೇಕಾದ ಹಾಗೇ ಮಾಡೋಣ.. ಆಮೇಲೇನಾದ್ರು ಹೆಚ್ಚು ಕಡಿಮೆ ಆದ್ರೆ..'' ಅಂತ ರಾಗ ಎಳೀತಾರೆ.. ಎಂದವಳೇ 'ಅಯ್ಯೋ.. ನಿಲ್ಲು..' ಎಂದು ಮೂಗನ್ನು ಅರಳಿಸುತ್ತಾ ಏನೋ ನೆನಪಾದವಳಂತೆ ಅಡುಗೆ ಮನೆಯ ಕಡೆಗೆ ಓಡಿದಳು.

ಅಕಟಕಟಾ.. ಎಂತಹ ಕಾಲ ಬಂದಿತು ಇದನ್ನು ಕಲಿ ಮಹಾತ್ಮೆ ಅನ್ನದೆ ಬೇರೇನಾದರೂ ಅನ್ನಬಹುದೇ? ಸುಭಾಷಿತಗಳಲ್ಲಿ 'ಕೆಟ್ಟ ಮಕ್ಕಳನ್ನಾದರೂ ನೋಡಿಯೇವು ಕೆಟ್ಟ ತಾಯಿಯನ್ನಲ್ಲ' ಎಂದು ಮಾತೃತ್ವದ ಹಿರಿಮೆ ಗರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಮಕ್ಕಳಿಗೋಸ್ಕರ ಎಂತಹ ತ್ಯಾಗಕ್ಕಾದರೂ ಸಿದ್ಧರಾಗುವ ಪರಂಪರೆ ನಮ್ಮದು. ಎಂತೆಂತಹ ತಾಯಿಯರನ್ನು ಕಂಡ ಭರತ ಖಂಡವಿದು ಎಂದರೆ ಹೆತ್ತ ಮಗನೇ ತಲೆ ಕಡಿದುರುಳಿಸಿದರೂ ಮತ್ತೆ ಜೀವ ಬಂದಾಗ ಮಗನೇ ಎಂದು ಅಪ್ಪಿದ ತಾಯಿ ರೇಣುಕೆ.. ಛೇ.. ನನ್ನ ಆತ್ಮೀಯ ಗೆಳತಿ ಮಗಳ ರೋಗಕ್ಕೆ ಮದ್ದು ಕೊಡಿಸುವ ಬದಲು ಉಟ್ಟು ಹರಿಯುವ ಸೀರೆಯ ಬಗ್ಗೆ ಚಿಂತಿಸುತ್ತಾಳೆ ಎಂದರೆ ನಂಬಲೇ ಕಷ್ಟವಾಯಿತು.

'ಹಾಲಿಟ್ಟಿದ್ದೆ ಒಲೆಯ ಮೇಲೆ.. ಮಾತಿನಲ್ಲಿ ಮರೆತೇ ಹೋಗಿತ್ತು.. ಇನ್ನೇನು ಉಕ್ಕಿ ಬೀಳುತ್ತಾ ಇತ್ತು.. ನೆನಪಾಗಿ ಓಡಿದ ಕಾರಣ ಬಚಾವ್' ಎಂದಳು.

''ಏನೇ ನೀನು ಮಗಳಿಗೆ ರೋಗ ಅಂತೀಯಾ.. ಟ್ಯಾಬ್ಲೆಟ್ ಕೊಡಿಸ್ಬೇಕು ಅಂತೀಯಾ.. ಬಿರು ಬಿಸಿಲಲ್ಲಿ ಆ ಕೂಸು ಆಟವಾಡ್ಲಿಕ್ಕೆ ಹೋದರೆ ಸುಮ್ಮನೆ ಕಳ್ಸಿದ್ದೀಯಾ? ನಿಂಗೇನಾದ್ರು ಬುದ್ಧಿ ಗಿದ್ದಿ ಇದ್ಯೇನೇ'' ಎಂದೆ.

''ಇವ್ರು ಅದನ್ನೇ ಹೇಳ್ತಾರೆ ನೋಡು.. ಈ ಸಲ ನಿಂಗೆ ಸೀರೆ ಬೇಡ.. ಸ್ವಲ್ಪ ಹಣ ಸೇರ್ಸಿ ಅಪ್ಪಿಗೆ ಟ್ಯಾಬ್ಲೆಟ್ ಕೊಡಿಸೋಣ ಅಂತ.. ಆದ್ರೆ ನಂಗೆ ಸ್ವಲ್ಪಾನೂ ಮನಸಿಲ್ಲ.. ಹಾಗಂತ ಹೇಳಿದ್ದಕ್ಕೆ ಅಪ್ಪ ಮಗಳಿಬ್ಬರೂ ನಿಂಗೆ ನಿನ್ನ ಸ್ವಾರ್ಥನೇ ಮುಖ್ಯ.. ಮಕ್ಕಳ ಮನಸ್ಸು ಅರ್ಥ ಆಗೋಲ್ಲ ಹಾಗೇ ಹೀಗೇ ಅಂತೆಲ್ಲ ಮಾತಾಡ್ತಾರೆ..''

''ಹುಂ.. ಅವ್ರು ಸರಿಯಾಗಿಯೇ ಹೇಳಿದ್ದಾರೆ.. ಅರ್ರೇ.. ನಿಂಗೇನಾಗಿದೆಯೇ? ಹೀಗೆ ಯಾವ ತಾಯಿಯಾದ್ರೂ ಮಾತಾಡ್ತಾಳೇನೇ.. ಮೊದ್ಲು ಅಪ್ಪಿಗೆ ಟ್ಯಾಬ್ಲೆಟ್ ಕೊಡ್ಸು. ಆಮೇಲೆ ಮಾತು'' ಎಂದೆ.

‘‘ಹೇಗೇ ಕೊಡ್ಸೋದು? ಅದೊಂದಕ್ಕೆ ಹದಿನೇಳೂವರೆ ಸಾವಿರ ಆಗುತ್ತೆ’’ ಎಂದಳು.

ನನಗೀಗ ಕಾಯಿಲೆಯ ತೀವ್ರತೆಯ ಬಿಸಿಯೂ ತಟ್ಟಿತು. ಕೆಲವೊಂದು ಹೆಸರು ಹೇಳಲೇ ಇಷ್ಟವಾಗದ ಕಾಯಿಲೆಗಳ ಔಷಧಿಗಳು ವಿಪರೀತ ಬೆಲೆ ಹೊಂದಿರುತ್ತವೆ. ಏನೇ ಆದರೂ ಮಗಳಿಗೆ ಕಾಯಿಲೆಗೆ ಮದ್ದು ಕೊಡಿಸದೇ ಅದರ ಬೆಲೆಯ ಬಗ್ಗೆ ತಲೆ ಬಿಸಿ ಮಾಡುವ ಇವಳ್ಯಾವ ತಾಯಿ ಎಂದು ಸಿಟ್ಟು ಬಂತು.

ಗೆಳತಿ ಈಗ ಮೌನವಾಗಿ ಕುಳಿತಳು. ದೀರ್ಘ ಆಲೋಚನೆ ಮಾಡುವಂತಿತ್ತು ಅವಳ ಮನಸ್ಸು. ಅಷ್ಟರಲ್ಲಿ ಅವಳ ಮಗಳು ಸೈಕಲ್ ಇಳಿದು ಬೆವರೊರೆಸಿಕೊಳ್ಳುತ್ತಾ ಒಳಬಂದಳು. ಅಮ್ಮನ ಕಡೆಗೂ ನೋಡದೆ ಅವಳ ರೂಮಿನ ಕಡೆಗೆ ಹೆಜ್ಜೆ ಹಾಕಿದಳು. ನನ್ನ ಗೆಳತಿ ಅವಳನ್ನು ನೋಡುತ್ತಾ.. ‘ರಮ್ಯಾ.. ನಿಂಗೆ ಟ್ಯಾಬ್ಲೆಟ್ ಬೇಕೂಂತ ಇದ್ದೀಯಲ್ಲ.. ಕೊಡ್ಸೋಣ’ ಎಂದಳು. ರಮ್ಯಾ ನನ್ನ ಮುಖ ನೋಡಿ ಅಚ್ಚರಿಯಿಂದ ‘ಹೌದಾ ಆಂಟೀ.. ಅಮ್ಮ ಸತ್ಯ ಹೇಳ್ತಿದ್ದಾಳಾ? ತಮಾಷೆ ಮಾಡ್ತಿಲ್ಲ ತಾನೇ..’ ಎಂದು ನಮ್ಮ ಹತ್ತಿರ ಬಂದು ಕುಳಿತಳು. ‘ಇಲ್ಲ ಎಲ್ಲಾ ನನ್ನ ಕರ್ಮ.. ನನ್ನ ಹಣೇಲಿ ಒಳ್ಳೆ ಸೀರೆ ಉಡುವ ಭಾಗ್ಯ ಬರೀಲಿಲ್ಲ ಅಷ್ಟೇ..’ ಎಂದು ಎದ್ದು ಅಡುಗೆ ಮನೆಗೆ ಕಾಲು ಹಾಕಿದಳು. ನನ್ನ ಸ್ನೇಹಿತೆ ಒಳ ಹೋಗುವುದನ್ನೇ ಕಾಯುತ್ತಿದ್ದ ಅವಳ ಮಗಳು ‘ಥ್ಯಾಂಕ್ಯೂ ಆಂಟೀ.. ಯಾರು ಹೇಳಿದ್ರೂ ಕೇಳ್ತಾ ಇರ್ಲಿಲ್ಲ ಅಮ್ಮ.. ನೀವೇನೋ ಮೋಡಿ ಮಾಡಿದ್ರಿ.. ಅಂದ ಹಾಗೇ ಯಾವ ಕಂಪೆನಿ ಒಳ್ಳೇದು ಆಂಟೀ... ನನ್ನ ಹತ್ರ ಮೊದ್ಲು ಇದ್ದಿದ್ದು ಸ್ಯಾಮ್‌ಸಂಗ್.. ಅದು ತೆಗೊಂಡು ನಾಲ್ಕು ತಿಂಗಳಾಯ್ತು.. ಈಗ ಅದು ಹಳೇ ಮಾಡೆಲ್ ಆಗೋಯ್ತು.. ನನ್ನ ಫ್ರೆಂಡ್ ಹತ್ರ ಆಪೆಲ್ ಇದೆ ಗೊತ್ತಾ ಅದು ಚೆನ್ನಾಗಿದೆ ಅಂತ ಹೇಳ್ತಾ ಇದ್ಲು.. ಇರಿ ನಾನೇ ಫೋನ್ ಮಾಡಿ ಕೇಳ್ತೀನಿ’ ಎಂದು ಕುಣಿಯುತ್ತಾ ಒಳಗೆ ಹೋದರೆ ನಾನು ಕಂಡು ಕೇಳರಿಯದ ಈ ಹೊಸ ರೋಗ ಬಾಧೆಯಿಂದ ತಲೆ ಬಿಸಿ ಏರಿಸಿಕೊಳ್ಳುತ್ತಾ ನನ್ನಿಂದಾಗಿ ಸುಖಾಸುಮ್ಮನೆ ಹಬ್ಬದ ಸೀರೆ ಕಳೆದುಕೊಂಡ ಗೆಳತಿಯನ್ನು ಸಮಾಧಾನಪಡಿಸಲು ಅಡುಗೆ ಮನೆಗೆ ನುಗ್ಗಿದೆ.

---

## ಗಣಿತ

**ಪ್ರಶ್ನೆ :** ನನ್ನ ಬಳಿ 16 ಜಿಲೇಬಿ, 8 ಜಾಂಗೀರ್, 4 ಲಾಡು ಮತ್ತು 6 ಜಾಮೂನು ಇದ್ದು ಅದರಲ್ಲಿ ನಾನು ಅರ್ಧದಷ್ಟು ತಿಂದರೆ ನನ್ನ ಬಳಿ ಏನಿರುತ್ತದೆ.

**ಉತ್ತರ :** ಡಯಾಬಿಟಿಸ್

# ಭಿಕ್ಷಾಪಾತ್ರೆ ಪ್ರಸಂಗ

• ಶ್ರೀನಾಥ್ ಭಲ್ಲೆ

ರಾತ್ರಿ ಒಂಬತ್ತೂವರೆ. ಸಾಮಾಜಿಕ, ಪೌರಾಣಿಕ, ಹಾಸ್ಯ ಇತ್ಯಾದಿ ಮೆಗಾ ಧಾರಾವಾಹಿಗಳು ಮುಗಿದು ಕ್ರೈಮ್ ಸರಣಿಯ ಸೀರಿಯಲ್ಲುಗಳು ಮೂಡೋ ಹೊತ್ತು. ಹೊರಗೆ ಗಾಡಾಂಧಕಾರ. ಹಲ್ ಬಿಟ್ಟ ಹೊರತು, ಮುಖದ ಬೌಂಡರಿ ಅರಿವಾಗುವುದಿಲ್ಲ. ಮೊನ್ನೆ ಗಣೇಶನ ವಿಸರ್ಜನೆಯ ಶುಭ ಸಂದರ್ಭದಲ್ಲಿ ಸಂತೋಷ ಹೆಚ್ಚಾಗಿ ಯಾರೋ ಬೀದಿ ದೀಪದ ಬಲ್ಬನ್ನು ಕಲ್ಲೊಗೆದು ಧರೆಗೆ ಇಳಿಸಿದ್ದರಿಂದ ಹೊರಗೆ ಅಷ್ಟೊಂದು ಕತ್ತಲು.

ಅವನು ಕಪ್ಪು ಬಣ್ಣದ ಜ್ಯಾಕೆಟ್ ತೊಟ್ಟು, ತಲೆಗೆ ಮಂಕಿಕ್ಯಾಪ್ ಏರಿಸಿ, ಶೂಲೇಸ್ ಬಿಗಿದು ಕಾಂಪೌಂಡ್ ಮೂಲೆಯಲ್ಲಿದ್ದ ವಸ್ತುವನ್ನು ಕೈಗೆತ್ತಿಕೊಂಡ. ಮೆಲ್ಲಗೆ ಗೇಟು ತೆರೆದು ಹೊರಗೆ ಅಡಿಯಿಟ್ಟ. ಕಾರ್ಗತ್ತಲಲ್ಲಿ ಅಣತಿ ದೂರದಲ್ಲೇ ನಿಂತು ನೋಡಿದರೂ ಇವನ ಇರುವು ಯಾರಿಗೂ ತಿಳಿಯುತ್ತಿರಲಿಲ್ಲ. ನಾಲ್ಕು ಬೀದಿ ಸೇರೋ ಮಧ್ಯೆ ರಸ್ತೆಯಲ್ಲಿ ನಿಂತು ಎದುರಿಗೊಮ್ಮೆ, ಹಿಂದೊಮ್ಮೆ, ಎಡಕ್ಕೊಮ್ಮೆ, ಬಲಕ್ಕೊಮ್ಮೆ ಕಿರುಗಣ್ಣಿನಲ್ಲಿ ನೋಡಿದ. ಬೇಕಿದ್ದವರು ಕಾಣಲಿಲ್ಲ ಎಂದು ಒಮ್ಮೆ ಘರ್ಜಿಸಿದ. ಈ ಕೂಗಿಗೇ ಕಾದಿದ್ದವರಂತೆ ಐದು ಮಂದಿ ಪೆಂಗಗಳು ಈತನ ಸುತ್ತಲೂ ನಿಂತರು. ಅವನೇ ಸುಬ್ಬ ಬಾಂಡ್.

**ಹಗಲಾಗಲಿ, ಇರುಳಾಗಲಿ, ಮಳೆಯಾಗಲಿ, ಚಳಿಯಾಗಲಿ ಎಲ್ಲರ ಕೈಲೂ ಉಗಿಸಿಕೊಳ್ಳೋದೇ ಸುಬ್ಬನ ಹಣೆಬರಹ**

'ಬಾಸ್, ಶಲ್ ವೀ ಅಟ್ಯಾಕ್' ಎಂಬುದು ಮುಂದಿನ ಮಾತು ಅಂತ ನೀವು ಅಂದುಕೊಂಡಿದ್ದರೆ ಅದಕ್ಕೆ ನಾನು ಜವಾಬ್ದಾರನಲ್ಲ! ಅಲ್ಲಿ ತೇಲಿ ಬಂದ ಮಾತುಗಳು ಹೀಗಿತ್ತು: 'ಅಯ್ಯೋ ಅನಿಷ್ಟವೇ, ನೀನಾ? ನಿನಗೇನು ಬಂತೋ ಧಾಡಿ? ನೀನು ಅಮ್ಮಾ-ತಾಯಿ ಅಂತ ಕೂಗಿದ್ದು ನೋಡಿ ನಿಜಕ್ಕೂ ಭಿಕ್ಷದವರೇ ಬಂದರೂ ಅಂದುಕೊಂಡು ಓಡೋಡಿ ಬಂದೆ. ಓಡಿ ಬಂದ ರಭಸಕ್ಕೆ ಕಾಲು ಬೇರೇ ಉಳುಕಿತು ಥತ್!' ಅಂದರೊಬ್ಬರು ಹಿರಿಯಾಕೆ.

'ನೀನೇನು ಭಿಕ್ಷುಕರನ್ನ ಕರೆಯೋಕ್ಕೆ ಬಂದ್ಯೋ? ಇಲ್ಲಾ ಭಿಕ್ಷೆ ತೊಗೊಳ್ಳೋಕ್ಕೆ ಬಂದ್ಯೋ? ನಿನ್ನಿಂದ ಇಷ್ಟು ಹೊತ್ತಿನ ಸೀರಿಯಲ್ಲು ತಪ್ಪಿಹೋಯ್ತು.'

'ಈ ಎಲ್ಲಾ ಪಾತ್ರೇಲಿ ಏನೇನು ಇದೆಯೋ ಅದನ್ನ ನೀನೇ ಭಿಕ್ಷುಕರಿಗೆ ಹಾಕಿ, ಪಾತ್ರೆ ತೊಳೆದು ನಿಮ್ಮ ಮನೇಲಿ ಇಟ್ಕೊಂಡಿರು. ಬೆಳಗ್ಗೆ ತೊಗೊಳ್ತೀವಿ' ಅಂದರು ಇನ್ನೊಬ್ಬರು. ಇದ್ದುದರಲ್ಲಿ ಕಿರಿಯಾಕೆ ಮಾತ್ರ 'ತೊಗೊಳ್ಳಿ ಸುಬ್ಬ' ಅಂತ ಮರ್ಯಾದೆ ಕೊಟ್ಟಿದ್ದು.

ದಂಗಾಗಿ ನಿಂತು ಯಾರಿಗೆ ಏನು ಹೇಳಬೇಕು ಅಂತ ಕನ್ಫ್ಯೂಸ್ ಆದ ಸುಬ್ಬ ಆ ಕಿರಿಯಾಕೆಗೆ ಹೇಳಿದ 'ಆಂಟಿ, ನಿಮ್ಮದು ಚಿಕ್ಕ ಪಾತ್ರೆ. ಅದರಲ್ಲಿರೋದನ್ನು ನನ್ ಪಾತ್ರೆಗೆ ಹಾಕಿ,

ನಿಮ್ ಪಾತ್ರೆ ನೀವು ತೊಗೊಂಡ್ ಹೋಗಿ' ಅಂದ. ಆ ಮಾತು ಕೇಳಿ ಸಿಡಿದ ಆಕೆ 'ನಾನು ಆಂಟೀನಾ? ಹೈಸ್ಕೂಲಿನಲ್ಲಿ ಇಬ್ಬರೂ ಕ್ಲಾಸ್‌ಮೇಟ್ ಆಗಿದ್ವಿ. ಆಗಲೇ ಮರೆತು ಹೋಯ್ತಾ?'

ಅದಕ್ಕೆ ಸುಬ್ಬ 'ಅಯ್ಯೋ, ಅದು ಹಾಗಲ್ಲ. ನೀವು ಓದಿನಲ್ಲಿ ಮುಂದೆ ಹೋಗಿ ಬಿಟ್ರಲ್ಲ ಅದಕ್ಕೇ ನೀವು ದೊಡ್ಡವರು ಅಂತ ಹಾಗೆ ಹೇಳ್ದೆ ಅಷ್ಟೇ!' ಆಕೆಗೆ ಇನ್ನೂ ರೇಗಿತು ''ನೀನು ಒಂದೇ ಕ್ಲಾಸಿನಲ್ಲಿ ನಾಲ್ಕು ವರ್ಷ ಇದ್ದ ಮಾತ್ರಕ್ಕೆ ನಿನ್ ವಯಸ್ಸೂ ಅಲ್ಲೇ ಕಾಯ್ತಿರುತ್ತಾ? ಇನ್ನೊಂದ್ ಹತ್ತು ವರ್ಷ ಅದೇ ಕ್ಲಾಸಿನಲ್ಲಿ ಮಣ್ ಹೊತ್ತಿದ್ರೆ, ನನ್ ಮಗಳೂ ನಿನ್ ಕ್ಲಾಸ್‌ಮೇಟ್ ಆಗಿರ್ತಿದ್ಲು'' ಎಂದು ಖಾರವಾಗಿ ನುಡಿದು, ತನ್ನ ಪಾತ್ರೆಯ ಉಪ್ಪು-ಖಾರವಿಲ್ಲದ ಉಪ್ಪಿಟ್ಟನ್ನ ಅವನ ಪಾತ್ರೆಗೆ ಸುರಿದು ಹೊರಟಳಾಕೆ.

ಹಗಲಾಗಲಿ, ಇರುಳಾಗಲಿ, ಮಳೆಯಾಗಲಿ, ಚಳಿಯಾಗಲಿ ಹೆಣ್ಣು-ಗಂಡು, ಹಿರಿಯರು-ಕಿರಿಯರು ಎಂಬ ಭೇದ-ಭಾವವಿಲ್ಲದೆ ಎಲ್ಲರ ಕೈಲೂ ಉಗಿಸಿಕೊಳ್ಳೋದೇ ಸುಬ್ಬನ ಹಣೆಬರಹ.

ತನ್ನ ಪಾತ್ರೆಯನ್ನೂ ಸೇರಿಸಿ ಪಂಚಪಾತ್ರೆಯನ್ನು ಹಿಡಿದು ನಿಂತಿದ್ದ ಸುಬ್ಬ ಈಗ ಇಡೀ ರಸ್ತೆಗೆ ಏಕಾಂಗಿ ವೀರ. ಈ ಬಾರಿ 'ಅಮ್ಮಾ, ತಾಯಿ' ಎಂದು ಭಿಕ್ಷುಕರನ್ನು ಕರೆದ ಅವನ ಸ್ಟೈಲಿಗೆ ಓಗೊಟ್ಟಿದ್ದ ಲೊಳ್ ಲೊಳ್ ಎನ್ನುತ್ತ ಓಡಿ ಬಂದ ನಾಲ್ಕಾರು ಶ್ವಾನಗಳು. ಹಿಂದೊಮ್ಮೆ ಪಂಚೆಯುಟ್ಟು, ಬನೀನುಧಾರಿಯಾಗಿ, ಬರಿಗಾಲಿನಲ್ಲಿ, ರಾತ್ರಿಯಲ್ಲಿ ಪಾತ್ರೆ ಹಿಡಿದು ಬಂದವನನ್ನು ನಾಯಿಗಳು ಅಟ್ಟಿಸಿಕೊಂಡು ಬಂದಿದ್ದವು. ಅವುಗಳಿಂದ ತಪ್ಪಿಸಿಕೊಂಡು ಓಡಿ ಬರುವಾಗ ಪಾದಕ್ಕೆ ಕಲ್ಲು-ಮುಳ್ಳು ಚುಚ್ಚಿದ್ದೇ ಅಲ್ಲದೆ, ಪಂಚೆಯೂ ಕಾಲಿಗೆ ತೊಡರಿ ಬಿದ್ದು ಮೈ ಕೈ ತರಿಚಿಸಿಕೊಂಡಿದ್ದ. ಪುಣ್ಯಕ್ಕೆ ನಾಯಿ ಇವನನ್ನು ಕಚ್ಚಿ ಅವು ಹುಷಾರು ತಪ್ಪಲಿಲ್ಲ. ಅಂದು ಹಾಗಾಗಿದ್ದರಿಂದ ಈಗ ಕರೀ ಕೋಟು, ಶೂ, ಕ್ಯಾಪು ಎಂಬೆಲ್ಲ ಅಲಂಕಾರವಿಲ್ಲ.

ಅಲ್ಲೇ ಇದ್ದ ಒಂದು ಸಣ್ಣ ಕಲ್ಲುಹಾಸಿನ ಮೇಲೆ ಪಾತ್ರೆಗಳಲ್ಲಿದ್ದುದ್ದೆಲ್ಲವನ್ನೂ ಬರಿದು ಮಾಡಿ ಐದೂ ಪಾತ್ರೆ ಪೇರಿಸಿಕೊಂಡು ಮನೆ ಒಳಗೆ ಅಡಿಯಿಡಲಿದ್ದ ಸುಬ್ಬನನ್ನು ತಡೆದಿದ್ದು ಅಜ್ಜಿಯ ಬರುವಿಕೆ. ಅವನ ಕೈಲಿದ್ದ ಪಾತ್ರೆಗಳನ್ನು ಕಂಡ ಸುಬ್ಬನ ಅಜ್ಜಿ ತಲೆ ತಿರುಗಿ ಬೀಳೋದೊಂದು ಬಾಕಿ. 'ಅಲ್ವೋ ಹು.ಮು.ದೇ! ಭಿಕ್ಷೆ ಹಾಕಿ ಬಾರೋ ಅಂದರೆ ಭಿಕ್ಷೆಯವರ ಪಾತ್ರೆನೂ ತೊಗೊಂಡ್ ಬಂದಿದ್ದೀಯಲ್ಲೋ. ಒಳಗೆ ಬರಬೇಡ. ಅಲ್ಲೇ ಇರು ಮೊದಲಿಗೆ...' ಅಜ್ಜಿ ಕೂಗಾಡ್ತಾನೇ ಇದ್ದು, ಸುಬ್ಬನಿಗೆ ಮಾತನಾಡಲೇ ಅವಕಾಶ ನೀಡಲಿಲ್ಲ. ಕೊನೆಗೆ ಸುಬ್ಬನ ಅಮ್ಮನ ಮಧ್ಯಪ್ರವೇಶದಿಂದ ಅಜ್ಜಿಗೆ ವಿಷಯ ಅರಿವಾದರೂ, ಮನಸ್ಸಿಗೆ ಸಮಾಧಾನ ಆಗಲಿಲ್ಲ. ಸುಬ್ಬನ ಕೈಲಿ ಪಾತ್ರೆಗಳನ್ನು ತೆಗೆದುಕೊಂಡು ಅವನಮ್ಮ ಒಳಗೆ ಹೋದರೆ, ಸುಬ್ಬ ಕೈತೊಳೆದು ಬಂದು ಸೋಫಾ ಅಲಂಕರಿಸಿದ.

ಯಾರೋ ಸೀರಿಯಲ್ಲು ಮಿಸ್ ಆಯ್ತು ಅಂತ ಅಲವತ್ತುಕೊಂಡಿದ್ದು ನೆನಪಿಗೆ ಬಂದು ತಾನು ಟಿ.ವಿ. ಹಚ್ಚಿದ. ಐದೇ ನಿಮಿಷಕ್ಕೆ ಸುಬ್ಬನ ಅಜ್ಜಿ 'ಅದೇನು ಬರೀ ಕೊಲೆ, ಸುಲಿಗೆ,

ರಕ್ತಪಾತ. ಎಂಥಾ ಧಾರಾವಾಹಿ ನೋಡ್ತಿದ್ದೀಯೋ. ದರಿದ್ರ ಮೊದಲು ಬೇರೆ ಹಾಕು.' ಸುಬ್ಬ ನುಡಿದ 'ಇದು ಸೀರಿಯಲ್ ಅಲ್ಲ ಅಜ್ಜೀ ನ್ಯೂಸು' ಅಂತ. ಅದಕ್ಕೆ ಅಜ್ಜಿ 'ಹಾಡು ಹಸೆ ಎಲ್ಲ ಯಾವುದೂ ಬರೋಲ್ವೋ?' ಸುಬ್ಬ ಒಂದಿಷ್ಟೂ ಯೋಚನೆ ಮಾಡದೆ, ಸೀರಿಯಸ್ಸಾಗೇ ನುಡಿದ 'ಮಿಡ್-ನೈಟ್ ಮಸಾಲ ರಾತ್ರಿ ಹನ್ನೆರಡಕ್ಕೆ ಅಜ್ಜಿ' ಅಂತ. 'ಅನಿಷ್ಟ, ಅನಿಷ್ಟ' ಅಂತ ಒಳಗೆ ಹೋದರು ಅಜ್ಜಿ.

> **ಒಂದೇ ಒಂದು**
>
> ನನ್ನ ಒಂದೇ ಒಂದು ಪ್ರಶ್ನೆಗೆ
> ಉತ್ತರ ಕೊಡ್ತೀಯ?
>
> ಖಂಡಿತ
>
> ನನ್ನ ಈಗಲೂ
> ಪ್ರೀತಿಸ್ತೀಯ?
>
> ಎರಡು ಪ್ರಶ್ನೆ ಆಯಿತು.

ಮರುದಿನ ಅವರವರ ಪಾತ್ರೆ ತಲುಪಿಸಲು ಹೊರಟ ಸುಬ್ಬ, ಎಲ್ಲರಿಗೂ ಪಾತ್ರೆಯನ್ನು ತಲುಪಿಸಿ ವಾಪಸ್ ಬರುವಾಗ ಕಲ್ಲುಹಾಸಿನ ಕಡೆ ದೃಷ್ಟಿ ಹರಿಸಿದ. ಮಿಕ್ಕೆಲ್ಲ ಆಹಾರ ಪದಾರ್ಥವನ್ನು ಕಚ್ಚಾಡಿಕೊಂಡು ತಿಂದು ತೇಗಿದ್ದ ಶ್ವಾನಗಳು ಒಂದು ಪದಾರ್ಥವನ್ನು ಮೂಸಿಯೂ ನೋಡದೆ ಹಾಗೇ ಬಿಟ್ಟಿದ್ದವು. ಸುಬ್ಬ ಮನೆಗೋಡಿ ಬಂದು ಕೈಗೆ ಸಿಕ್ಕ ಪಾತ್ರೆ ತೆಗೆದುಕೊಂಡು ಮತ್ತೆ ಕಲ್ಲುಹಾಸಿನ ಬಳಿ ಹೋದ. ಅಲ್ಲಿದ್ದ ಪದಾರ್ಥವನ್ನು ಪಾತ್ರೆಗೆ ಬಳಿದುಕೊಂಡು ಕಿರಿಯಾಕೆಯ ಮನೆಗೆ ಹೋಗಿ, ಬಾಗಿಲು ತೆರೆದಿದ್ದೂ ಜನ ಅಲ್ಲೇ ಓಡಾಡುತ್ತಿದ್ದರೂ, ಕಾಲಿಂಗ್ ಬೆಲ್ ಒತ್ತಿದ.

ತಲೆಗೆ ಸ್ನಾನ ಮಾಡಿ, ಶುಭ್ರವಸ್ತ್ರಳಾಗಿ ಬಾಗಿಲ ಬಳಿ ಬಂದ ಆ ಕ್ಲಾಸ್‌ಮೇಟ್ ಕೈಗೆ ಪಾತ್ರೆ ಇಟ್ಟು ನುಡಿದ 'ಯಾಕೋ ಗೊತ್ತಿಲ್ಲ, ನಾಯಿಗಳು ನಿಮ್ಮ ಉಪ್ಪಿಟ್ಟು ತಿಂದೇ ಇರಲಿಲ್ಲ, ಅದಕ್ಕೆ ವಾಪಸ್ ತಂದೆ.'

ಬಾಯಿಂದ ಮಾತೇ ಹೊರಡದೆ ಮೂಕಾಗಿ ಗರಬಡಿದವಳಂತೆ ನಿಂತು ಸುಬ್ಬನನ್ನೇ ನೋಡುತ್ತಿದ್ದಳು.... 'ಪಾಪಿ ಸುಬ್ಬಾ!' ಅಂತ ಆಕೆ ಚೀರಿದ್ದು, ಸುಬ್ಬನು ಓಡಿ ಮನೆ ತಲುಪಿದ್ದರೂ ಅಲೆ ಅಲೆಯಾಗಿ ಕೇಳಿಸುತ್ತಿತ್ತು.

---

| | | |
|---|---|---|
| ನಟಿ | : | ಏನ್ಸಾರ್, ನೀವು ಕೊಟ್ಟ ಸಂಭಾವನೆ ಚೆಕ್ಕು ಬೌನ್ಸ್ ಆಯ್ತು |
| ನಿರ್ಮಾಪಕ | : | ಏನ್ ಮಾಡೋದು ಮೇಡಂ, ನೀವು ನಟಿಸಿದ ಚಿತ್ರವೂ ಬಾಕ್ಸ್ ಆಫೀಸಲ್ಲಿ ಬೌನ್ಸ್ ಆಯ್ತಲ್ಲ |

# ಹೀಗೊಂದು ವರ ಪರೀಕ್ಷೆ!!

• ಸಹನಾ ಪ್ರಸಾದ್

ಸಿ.ಸಿ.ಡಿ., 4ನೇ ಬ್ಲಾಕ್, ಜಯನಗರ, 6 ಪಿ.ಎಮ್. ಈ ಎಸೆಮೆಸ್ ಬಂದ ತಕ್ಷಣವೇ ಆಪ್ತ ಗೆಳೆಯನಿಗೆ ಫೋನ್ ಹಚ್ಚಿದೆ. ಎಲ್ಲ ಓಕೆ, ಈ ಸಿ.ಸಿ.ಡಿ. ಎಂದರೆ ಏನು? ಅಲ್ಲಿಂದ ಜೋರಾಗಿ ಬೈದ ಛೇ, 25 ವರುಷವಾದರೂ ಸಿ.ಸಿ.ಡಿ. ಗೊತ್ತಿಲ್ವಾ? ಅದು ಕೆಫೆ ಕಾಫೀ ಡೇ. ಬೇಗ ರೆಡಿಯಾಗಿ ಹೋಗು, ಸರಿಯಾಗಿ ಈಗಿನ ಕಾಲಕ್ಕೆ ತಕ್ಕಂತೆ ಡ್ರೆಸ್ ಮಾಡಿಕೊ.

ಅಯ್ಯೋ, ಇದರಲ್ಲಿ ನನ್ನದೇನೂ ತಪ್ಪಿಲ್ಲ. ಎಷ್ಟು ಹುಡುಗಿಯರು ನನ್ನನ್ನು ನೋಡಲು ಬಂದರು. ಅವರೆಲ್ಲಾ ಬಂದಿದ್ದು ನನ್ನ ಮನೆಗೆ. ಅವರು ಬರುವ ಮುಂಚೆ ಮನೆಯೆಲ್ಲಾ ಕ್ಲೀನ್ ಮಾಡಿ ಸಾಕಾಗಿ ಹೋಗಿದೆ ನನಗೆ. ಅವರಿಗೆ, ಅವರ ಅಪ್ಪ ಅಮ್ಮಂದಿರಿಗೆ ವೆಜ್ ಸ್ಯಾಂಡ್ ವಿಚ್, ಮಸಾಲ ಕಾರ್ನ್, ಓಟ್ಸ್ ಸೂಪ್ ಮಾಡಿ ನನ್ನಮ್ಮ ಸುಸ್ತಾಗಿದ್ದಾರೆ. ಬ್ರೂ ಕಪ್ಪು ಟೀನೋ ಎಷ್ಟು ಪ್ಯಾಕೆಟ್ ಖರ್ಚಾಗಿದ್ಯೋ ದೇವರೇ ಬಲ್ಲ. ಅವರಪ್ಪ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿ ನನ್ನಪ್ಪ ಫುಲ್ ಔಟ್ ಆಗಿದ್ದಾರೆ. ಈ ದಿನ ಬ್ಲಡ್ ಗ್ರೂಪ್ ಮ್ಯಾಚ್ ಆದ ಮೇಲೆ ಫೋನ್ ಮಾಡಿದ ಹುಡುಗಿ ನನ್ನನ್ನು ಸಿ.ಸಿ.ಡಿ.ಗೆ ಬರಹೇಳಿದ್ದಾಳೆ. ಒಳ್ಳೆಯದೇ ಆಯಿತು. ಮನೆ ಕ್ಲೀನ್ ಮಾಡುವುದು, ಪರದೆ ಬದಲಾಯಿಸುವುದು ಎಲ್ಲಾ ತಪ್ಪಿತು.

**ಇಂತಹ ಪರೀಕ್ಷೆಯೂ ಮುಂದೊಂದು ದಿನ ಸಾಧ್ಯ!**

ಟೈಟ್ ಆಗಿರುವ ಜೀನ್ಸ್ ಅದಕ್ಕಿಂತ ಟೈಟ್ ಆಗಿರುವ ಟೀ ಶರ್ಟ್ ತೊಟ್ಟು ತಯಾರಾದೆ. ಇನ್ನೂ 4.30. ಅಲ್ಲೇ ಮಾಲೆ ಹಿಡಿದು ಕಾಯತೊಡಗಿದೆ. ಜತೆ ಜತೆಯಾಗಿ ಬಂದ ಯುವ ಜೋಡಿಗಳು, ಅಂಕಲ್ ಆಂಟಿಗಳು, ಗೆಳೆಯ ಗೆಳತಿಯರು, ಅವರುಗಳು ತೊಟ್ಟ ವೇಷಭೂಷಣ, ಕೈಯಲ್ಲಿ ಹಿಡಿದ ಸೆಲ್ ಫೋನುಗಳು, ಚೆಂದದ ವೈಟರ್‌ಗಳು ಇವೆಲ್ಲಾ ನೋಡುತ್ತಾ ಸಮಯ ಸರಿದುದೇ ಗೊತ್ತಾಗಲಿಲ್ಲ. ಸುಮಾರು 6.15ಕ್ಕೆ ಸರಿಯಾಗಿ ಹಲೋ ಎಂಬ ಧ್ವನಿ ಕೇಳಿ ಕತ್ತೆತ್ತಿದೆ. ನಾನು ತೊಟ್ಟಿರುವಂತೆಯೇ ಬಟ್ಟೆ ತೊಟ್ಟು, ಒಳ್ಳೆ ಮೇಕಪ್ ಮಾಡಿಕೊಂಡು ಮುಗುಳ್ನಗುತ್ತಾ ನಿಂತ ತರುಣಿಯನ್ನು ಕಂಡು ಬಾಯ್ ಬಿಟ್ಟೆ. ಅವಳ ಜೀನ್ಸ್ ಎರಡೂ ಮೊಣಕಾಲ ಬಳಿ ಹರಿದಿತ್ತು. ಟೀ ಶರ್ಟ್ ಹೊಕ್ಕುಳ ಬಳಿ ವೃತ್ತಾಕಾರದಲ್ಲಿ ಕಟ್ ಆಗಿತ್ತು. ನಮ್ಮಜ್ಜಿ ಈ ರೀತಿಯ ಬಟ್ಟೆ ಧರಿಸಿದರೆ ಸಿಕ್ಕಾಪಟ್ಟೆ ಬಯ್ಯುತ್ತಿದ್ದರು. ಥೂ ಹರಕಲು ಬಟ್ಟೆ ಹಾಕೋಬೇಡ, ದಾರಿದ್ರ ಮೆಟ್ಟಿಕೊಳ್ಳತ್ತೆ. ಅವಳ ತಲೆ ಕೂದಲು ಬಿರಿ ಹೊಯ್ದು ಮುಖದ ಮೇಲೆಲ್ಲಾ ಹರಡಿತ್ತು. ಚೆನ್ನಾಗಿ ಎಣ್ಣೆ ಹಾಕಿ ಬಾಚಿಕೊ, ಒಳ್ಳೆ ಹುಚ್ಚಿ ತರಹ ತಲೆ ಕೆದರಿಕೊಂಡಿರಬೇಡ ಎಂದು ಮನೆ ಹೆಣ್ಣು ಮಕ್ಕಳಿಗೆ ಹೇಳುತ್ತಿದ್ದ ನಮ್ಮಜ್ಜಿ ನೆನಪಿಗೆ ಬಂದರು.

ಛೇ, ಯಾಕೋ ಅಜ್ಜಿಯ ನೆನಪು ಕಾಡುತ್ತಿದೆ. ಒಮ್ಮೆ ಊರ ಕಡೆಗೆ ಹೋಗಿಬರಬೇಕು ಎಂದುಕೊಳ್ಳುತ್ತಾ ಅವಳೆಡೆಗೆ ನೋಡಿದೆ.

ಮೇಲಿಂದ ಕೆಳಗಿನವರೆಗೂ ನನ್ನನ್ನೇ ಪರೀಕ್ಷಾತ್ಮಕ ದೃಷ್ಟಿಯಿಂದ ನೋಡಿ ಅವಳು ಇಂಟರ್ವ್ಯೂ ಶುರು ಮಾಡಿದಳು.

ಅವಳು : ನಿಮ್ಮ ಹೆಸರು ಮನೀಷ್ ಅಲ್ವೇ, ಅದು ಒರಿಜಿನಲ್ ಹೆಸರಾ ಇಲ್ಲ ಬದಲಾಯಿಸಿಕೊಂಡು ಇಟ್ಟಿದ್ದಾ?

ನಾನು : ಅಜ್ಜಿ ತಾತ ಇಟ್ಟ ಹೆಸರು ಮಹಾದೇಶ ಅಂತ. ಮಾರ್ಡನ್ ಆಗಿರಲಿ ಎಂದು ನಮ್ಮಮ್ಮ ಬದಲಾಯಿಸಿದರು.

ಅವಳು : ಗುಡ್, ಗುಡ್. ಏನು ಕೆಲಸ ಮಾಡ್ತಿದ್ದೀರಿ?

ನಾನು : ಸೆಕ್ಯೂರಿಟಿ ಆಫೀಸರ್ ಮ್ಯಾಡಮ್.

ಅವಳು : ಅಂದರೆ ವಾಚ್‌ಮಾನ್?

ನಾನು : ಇಲ್ಲ ಮ್ಯಾಡಮ್, ಜೂಲಿಯೆಟ್ ಕಾಲೇಜಿನಲ್ಲಿ ನಾನು ಸೆಕ್ಯೂರಿಟಿ ಡಿಪಾರ್ಟ್ಮೆಂಟ್‌ನಲ್ಲಿದ್ದೀನಿ. ಹೆಣ್ಣು ಮಕ್ಕಳು ಮಾತಾಡುತ್ತಾ, ಫೋನ್ ಮಾಡುತ್ತಾ, ಹಾಳೂ ಮೂಳೂ ತಿನ್ನುತ್ತಾ ಸಾಮಾನುಗಳನ್ನು ಕಳೆದುಕೊಳ್ಳುತ್ತಲೇ ಇರುತ್ತಾರೆ. ಅವರ ದೂರುಗಳನ್ನೆಲ್ಲಾ ದಾಖಲಿಸಿ ಅವರನ್ನು ಸಮಾಧಾನ ಮಾಡಿ ಕಳಿಸುವ ಕೆಲಸ ನನ್ನದು. ಹಾ, ಕೆಲಮೊಮ್ಮೆ ವಾಚ್‌ಮಾನ್ ಬಾರದಿದ್ದರೆ ಕಾವಲೂ ಕಾಯ್ದಿರುವೆ.

ಅವಳು : ಹೆಣ್ಣು ಮಕ್ಕಳ ಕಾಲೇಜಲ್ಲವೇ. ಅಂದರೆ ಯಾವಾಗಲೂ ಕಣ್ಣಿಗೆ ಹಬ್ಬ

(ಈಗ ನಾನು ಗೊಂದಲಕ್ಕೆ ಬಿದ್ದೆ– ಹೂ ಅಂದರೆ ಸಿಟ್ಟು ಮಾಡಿಕೊಳ್ಳಬಹುದು. ಇಲ್ಲ ಅಂದರೆ ಏನಪ್ಪಾ ಇವನೆಂತಹ ಗಂಡಸು ಅಂದುಕೊಳ್ಳಬಹುದು. ಏನೂ ಹೇಳದೇ ಪೆಚ್ಚು ನಗು ನಕ್ಕೆ).

ಅವಳು : ರಾಹು ಕೇತು ಎಲ್ಲಿವೆ?

(ಗೆಳೆಯನಿಂದ ತರಬೇತಿ ಪಡೆದ ನನಗೆ ರಾಹು ಕೇತು ಎಂದರೆ ಗಂಡಿನ ತಂದೆ ತಾಯಿ ಎಂದು ಗೊತ್ತಿತ್ತು).

ನಾನು : ನನ್ನ ಜೊತೆಯಲ್ಲೇ, ಅಂದರೆ ನಾನು ಅವರ ಜೊತೆಯಲ್ಲೇ ಇದ್ದೇನೆ. ಬೇರೆ ಮನೆ ಮಾಡಿದರೆ ನೂರೆಂಟು ಖರ್ಚು, ಅದಕ್ಕೆ.

ಅವಳು : ಅವರ ಸ್ವಭಾವ ಹೇಗೆ?

ನಾನು : ಅಯ್ಯೋ, ಅಮ್ಮ ತುಂಬಾ ಒಳ್ಳೆಯವರು. ನನ್ನಪ್ಪ ಸಾಧು ಪ್ರಾಣಿ, ಅಮ್ಮ ಹಾಕಿದ ಗೆರೆಯನ್ನು ಮೀರೊಲ್ಲ, ನನ್ನದೂ ಅದೇ ವಂಶವಾಹಿನಿ.

ಅಷ್ಟರಲ್ಲಿಯೇ ಅವಳ ಫೋನ್ ರಿಂಗ್ ಆಯಿತು. ಮೇಲು ಧ್ವನಿಯಲ್ಲಿ ಮಾತನಾಡಲು ಶುರು ಮಾಡಿದಳು. ಸೂಕ್ಷ್ಮವಾಗಿ ಅವಳನ್ನೇ ಗಮನಿಸಿದೆ. ತುಟಿಗೆ ಬಳಿದ ರಂಗಿನ ಹಿಂದೆ ತುಟಿ ಕಪ್ಪಗಿದ್ದು ಕಾಣಿಸಿತು. ಯಾರನ್ನೋ ಸಮಾಧಾನಿಸುವಂತೆ, ಸ್ವಲ್ಪ ರೇಗುವಂತೆ ಮಾತನಾಡಲು ಶುರು ಮಾಡಿದಳು. ಬ್ಯಾಗಿನಿಂದ ಸಿಗರೇಟು ಹೊರಬಂತು. ಅಯ್ಯೋ, ನನಗೆ ಹಚ್ಚಲು ಬರುವುದಿಲ್ಲವಲ್ಲ. ಸೂಜಿಗೆ ದಾರ ಪೋಣಿಸುವುದು, ಒಳ್ಳೆ ಸಿನಿಮಾ ಹಾಡು ಹೇಳುವುದು ಎಲ್ಲಾ ಕಲಿಸಿದ್ದಾಳೆ ನನ್ನಮ್ಮ. ಆದರೆ, ಈ ಸಿಗರೇಟಿನ ಅಭ್ಯಾಸ ನಮ್ಮ ಮನೇಲಿ ಯಾರಿಗೂ ಇಲ್ಲ. ಪೇಚಾಡುತ್ತಾ ಇರುವಾಗ ವೈಟರ್ ಬಂದು ಹಚ್ಚಿದ. ಸಾರಿ, ಬ್ಯುಸಿನೆಸ್ ಕಾಲ್. ಕೆಲವೊಮ್ಮೆ ಕ್ಲೈಂಟ್ಸ್ ತುಂಬಾ ಡಿಮಾಂಡ್ ಮಾಡುತ್ತಾರೆ, ತುಂಬಾ ಟೆನ್‌ಷನ್ ಆಗಿಬಿಡುತ್ತೆ ಹೊಗೆ ಉಗುಳಿದಳು.

ನಾನು ಪರವಾಗಿಲ್ಲ ಮ್ಯಾಡಮ್. ನಿಮ್ಮದು ಏನು ಬ್ಯುಸಿನೆಸ್ಸು?

ಅವಳು : ನಾನು ಬ್ಯೂಟಿ ಕನ್ಸಲ್ಟೆಂಟ್, ಅಂದರೆ ಸೌಂದರ್ಯದ ಬಗ್ಗೆ ಸಲಹೆ ಕೊಡೋದು. ಯಾವ ಮೇಕಪ್ ಬಳಸಿದರೆ ಚೆಂದ, ಯಾವ ಹೇರ್ ಸ್ಟೈಲ್ ಯಾರಿಗೆ ಸೂಟ್ ಆಗುತ್ತೆ, ಯಾವ ಕಲರ್ ಬಟ್ಟೆ ಹೇಗೆ ಹೊಲಿಸಿದರೆ ಯಂಗ್ ಆಗಿ ಕಾಣಲು ಸಾಧ್ಯ ಹೀಗೆ ಹತ್ತು ಹಲವಾರು.

ನಾನು : ಸಕತ್ ಕಷ್ಟ, ಅದರಲ್ಲೂ ಹೆಂಗಸರು ಈ ವಿಷಯದಲ್ಲಿ ಎಂದಿಗೂ ತೃಪ್ತಿ ಪಡುವುದೇ ಇಲ್ಲ, ನಿಮ್ಮದು ಬಹಳ ಕಷ್ಟದ ಕೆಲಸ.

ಅವಳು : ''ನಾನು ಗಂಡಸರ ಬ್ಯೂಟಿ ಕನ್ಸಲ್ಟೆಂಟ್! ಅವರ ಜತೆ ವ್ಯವಹರಿಸುವುದು ಹೆಂಗಸರಿಗಿಂತ ಕಷ್ಟ'' ಈಗ ನಾನು ತೆಪ್ಪಗಾದೆ. ಮತ್ತೆ ಅವಳೇ ಶುರು ಮಾಡಿದಳು. ''ನಿಮ್ಮದೆಷ್ಟು ಅಕೌಂಟುಗಳಿವೆ?''

ಸರಿಯಾದ ಪಾಠ ಹೇಳಿದ ಗೆಳೆಯನಿಗೆ ಮನಸ್ಸಿನಲ್ಲೇ ವಂದಿಸುತ್ತಾ ನುಡಿದೆ ''ಎರಡು, ಒಂದು ಬ್ಯಾಂಕ್ ಅಕೌಂಟು, ಇನ್ನೊಂದು ಫೇಸ್ ಬುಕ್.'' ತಕ್ಷಣ ಮುಗುಳ್ನಕ್ಕಳು. ''ಎಷ್ಟಿದೆ?''

ನಾನು ಸುಮಾರು 50 ಇರಬಹುದು.

ಅವಳು : ಅಷ್ಟೇನಾ?

ನಾನು : ಇನ್ನೊಂದಷ್ಟು ಎಫ್ಡೀ ಇಟ್ಟಿರುವೆ.

ಅವಳು : ಅಲ್ಲಾರೀ, ಎಷ್ಟು ಫ್ರೆಂಡ್ಸ್ ಇದ್ದಾರೆ ಎಂದು ಕೇಳಿದೆ.

ಮತ್ತೆ ಪೆಚ್ಚಾಗುವ ಸರದಿ ನನ್ನದು. ಈ ಮುಖಪುಟದ ಬಗ್ಗೆ, ಅದರಲ್ಲಿರುವ ಫೀಚರ್ಸ್ ಬಗ್ಗೆ ಸುಮಾರು ಚರ್ಚೆಯಾಯಿತು. ಅಲ್ಲಿಂದ ಹೊರಟಾಗ ಅವಳೇ ಬಿಲ್ ಕಟ್ಟಿದಳು, ಲೆಟ್ಸ್ ಬಿ ಫ್ರೆಂಡ್ಸ್ ಎಂದು ಬೀಳ್ಕೊಟ್ಟು, ಅವಳಿಂದ ಉತ್ತರಕ್ಕೆ ಕಾಯುತ್ತಾ ಇದ್ದೀನಿ.

# ಆಚೆ ಮನೆ ಸುಬ್ಬಮ್ಮನ ಅಮೆರಿಕನ್ ಸೊಸೆ!

• ಶ್ರೀವತ್ಸ ಜೋಶಿ

*ಆಚೆ ಮನೆ ಸುಬ್ಬಮ್ಮಂಗೆ ಇವತ್ತು ಏಕಾದ್ಸಿ ಉಪ್ವಾಸ ।*
*ಎಲ್ಲೋ ಸ್ವಲ್ಪ ತಿಂತಾರಷ್ಟೆ ಉಪ್ಪಿಟ್ಟು ಅವ್ಲಕ್ಕಿ ಪಾಯ್ಸ ॥ ಪ ॥*
*ಮೂರೋ ನಾಲ್ಕೋ ಬಾಳೆಹಣ್ಣು ಸ್ವಲ್ಪ ಚಕ್ಲಿಕೋಡ್‌ಬಳೆ ।*
*ಗಂಟೆಗೆರಡು ಸೀಬೇಹಣ್ಣು ಆಗಾಗ ಒಂದೊಂದ್ ಕಿತ್ತಳೆ ॥ 1 ॥*
*ಮಧ್ಯಾಹ್ನೆಲ್ಲಾ ರವೇ ಉಂಡೆ ಹುರ್ಳೀಕಾಳಿನ ಉಸ್ಲಿ ।*
*ಒಂದೊಂದ್ಸಲ ಬಿಸೀಸಂಡಿಗೆ ಒಂದೋ ಎರಡೋ ಇಡ್ಲಿ ॥ 2 ॥*
*ರಾತ್ರಿ ಪಾಪ ಉಪ್ಪಿಟ್ಟೇನೇ ಒಂದ್ಲೋಟದ ತುಂಬಾ ಹಾಲು ।*
*ಪಕ್ಕದಮನೆ ರಾಮೇಗೌಡರ ಸೀಮೇಹಸು ಹಾಲು ॥ 3 ॥*

ಈ ಸುಬ್ಬಮ್ಮಳೇನೋ ವರ್ಲ್ಡ್‌ಫೇಮಸ್ ಆದಳು. ಆದರೆ ಅವಳ ಚರಿತೆಯನ್ನು ಬರೆದ ಚರಿತ್ರಕಾರರ ಹೆಸರು, ಪರಿಚಯ ಅನೇಕರಿಗೆ ಗೊತ್ತಿಲ್ಲ. ಆ ವ್ಯಕ್ತಿ ಬೇರಾರೂ ಅಲ್ಲ, ಬೆಂಗಳೂರಿನಲ್ಲಿರುವ ಸಿ.ಆರ್. ಸತ್ಯ. ಸುಮಾರು ಐವತ್ತು ವರ್ಷಗಳಿಗೂ ಹಿಂದೆ, ವಿದ್ಯಾರ್ಥಿಯಾಗಿದ್ದಾಗ, ಯಾವುದೋ ಗುಂಗಿನಲ್ಲಿ ಒಂದು ವ್ಯಂಗ್ಯ ಕವನವನ್ನು ಗೀಚಿ ''ಕೊರವಂಜಿ'' ಹಾಸ್ಯ ಪತ್ರಿಕೆಗೆ ಕಳಿಸುವ ಧೈರ್ಯ ಮಾಡಿದರು. ಕೊರವಂಜಿಯ ರಾ.ಶಿ. ಅದನ್ನು ಪ್ರಕಟಿಸಿದರು. ಅಷ್ಟೇ ಅಲ್ಲ, ಎರಡು ರೂಪಾಯಿಗಳ ಗೌರವಧನವನ್ನೂ ಸಿ.ಆರ್. ಸತ್ಯರಿಗೆ ಕಳಿಸಿದರು. ಏತನ್ಮಧ್ಯೆ ಕಳೆದ ವರ್ಷ ನಾನು ಸುಬ್ಬಮ್ಮನ ಏಕಾದ್ಸಿ ಉಪ್ವಾಸ ಪದ್ಯಕ್ಕೊಂದು ಅಣಕುವಾಡು ರಚಿಸಿ 'ಸೊಸನ್ನಳ ಫೇಸ್‌ಬುಕ್ ಉಪವಾಸ' ಎಂದು ಫೇಸ್‌ಬುಕ್ ಗೋಡೆ ಮೇಲೆಯೇ ಪ್ರಕಟಿಸಿದ್ದೆ.

*ಈಚೇ ಮನೆಯ ಸೂಸನ್ನಳಿಗೆ ಫೇಸ್‌ಬುಕ್ಕಿನಾ ಉಪವಾಸ ।*
*ಎಲ್ಲೋ ಸ್ವಲ್ಪ ಕ್ಲಿಕ್‌ತಾಳಷ್ಟೇ ಅವರಿವರ್ ಹಾಕಿದ ಸ್ಟೇಟಸ ॥ ಪ ॥*
*ಬೆಳಿಗ್ಗೆಯೊಮ್ಮೆ ಲಾಗಿನ್ ಆದ್ರೆ ಹೊಡೆಯುವಳ್ನಾಲ್ಕು ಲೈಕು ।*
*ಒಂದೆರಡ್ ಪೋಸ್ಟಿಗೆ ಕಾಮೆಂಟು ಜಡಿದು ಕೀಬೋರ್ಡ್‌ಲ್ಲೇ ಸ್ಟ್ರೈಕು ॥ 1 ॥*
*ಮಧ್ಯಾಹ್ನವಾದರೆ ಊಟದ ಜೊತೆಗೆ ಫೋಟೊಗಳನು ಶೇರು ।*
*ಬೇಕೋಬೇಡ್ವೋ ಇದ್ದವ್ರನ್ನೆಲ್ಲಾ ಟ್ಯಾಗಿಸದಿದ್ರೇ ಬೋರು ॥ 2 ॥*

*ಸಂಜೀಮುಂದ ಹರಟುವ ಮನಸಿಗೆ ಮತ್ತದೇ ಫೇಸ್ಬುಕ್ ನೆನಪು ।*

*ಗೋಡೆಗೆ ಒರಗಿ ಬಾಯ್ಬಿಟ್ಟೆಂದರೆ ಲೊಲ್ ಲೊಲ್ ಸ್ಟೈಲೀ ಒನಪು ॥ 3 ॥*

*ಸ್ಮಾರ್ಟ್‌ಫೋನಲ್ಲೂ ಟ್ಯಾಬ್ಲೆಟ್ಟಲ್ಲೂ ಫೇಸ್ಬುಕ್ ನೋಡುವ ಹುಚ್ಚು ।*

*ಡಿಜಿಟಲ್ ಯುಗದ ಸೂಸನ್ ಕಥೆಯು ಸುಬ್ಬಮ್ಮನ್ಗಿಂತ್ಲೂ ಹೆಚ್ಚು ॥ 4 ॥*

ಇದನ್ನು ನಾನು ಸಿ.ಆರ್. ಸತ್ಯ ಅವರಿಗೆ ಇಮೇಲ್‌ನಲ್ಲಿ ಕಳಿಸಿದ್ದೆ. ಅದಕ್ಕೆ ಅವರು ಹೀಗೆ ಉತ್ತರಿಸಿದ್ದರು.

ಡಿಯರ್ ಜೋಶಿ

ಸುಬ್ಬಮ್ಮನ ಮೇಲಿರುವ ನನ್ನ ಎಲ್ಲಾ ಹಕ್ಕುಗಳನ್ನು ಉಲ್ಲಂಘಿಸಿ. ನೀವು ಸೂಸನ್‌ಳನ್ನು ಹುಟ್ಟಿ ಹಾಕಿದ್ದರೂ ನನಗೆ ಖುಷಿಯಾಗಿದ್ದು ಆ ಸಂತಸದಲ್ಲಿ ನಿಮ್ಮ ಮೇಲೆ ಯಾವುದೇ ಕಾನೂನಿನ ಕ್ರಮ ಕೈಗೊಳ್ಳದಿರಲು ನಿರ್ಧರಿಸಿದ್ದೇನೆ. ಬೆಂಗಳೂರಿನ ಸುಬ್ಬಮ್ಮಳಿಗೆ ಈಗ ವಾಷಿಂಗ್ಟನ್‌ನಲ್ಲಿ ಸೊಸೆ ಇದ್ದಾಳೆ! ಎಲ್ಲಾ ಕನ್ನಡಿಗರ ಮನಗಳಲ್ಲಿ ಸೂಸನ್ ಚಿರಕಾಲ ಬಾಳಲಿ.

---

ಅವರಿಬ್ಬರದೂ ಭಿಕ್ಷೆ ಬೇಡುವ ದಂಧೆ, ಅದರಿಂದಲೇ ಉದರ ಪೋಷಣೆ
ಕಾಲಿಲ್ಲದವನು ದಾರಿ ತೋರುತ್ತಿದ್ದರೆ ಕಣ್ಣಿಲ್ಲದವನು ಗಾಡಿ ನೂಕುತ್ತಿದ್ದ
ಕಣ್ಣಿಲ್ಲದವನು ಒಂದು ದಿನ ನನಗೆ ಗಾಡಿ ತಳ್ಳಿ ಸುಸ್ತೋ ಸುಸ್ತು ಅಂದರೆ
ಕಾಲಿಲ್ಲದವನು ಈಗ ನೀನು ಕೂತ್ಕೊ ನಾನು ಸ್ವಲ್ಪ ದೂರ ತಳ್ತೀನಿ ಅಂದ

*****

ಅವತ್ತು ಗಂಡ ಹೆಂಡತಿಯ ಜಗಳ ಅತಿರೇಕಕ್ಕೆ ಹೋಗಿ ಬಿಟ್ಟಿತ್ತು
ದುಡ್ಡಿನ ವಿಚಾರಕ್ಕಾಗಿ ಅವರಿಬ್ಬರೂ ಜೋರು ಜೋರಾಗಿ ಕಿತ್ತಾಡುತ್ತಿದ್ದರು
ಕೊನೆಗೂ ಗಂಡನೇ ಸೋತು ಜಗಳ ನಿಲ್ಲಿಸೋಣ ಅಂದ – ಏಕೆಂದರೆ
ಹತ್ತು ಲಕ್ಷ ಲಾಟರಿಯ ಫಲಿತಾಂಶ ಬರಲು ಇನ್ನೂ ಒಂದು ತಿಂಗಳಿತ್ತು

*****

ಯಜಮಾನರು ನೆಂಟರ ಮನೆ ಸಮಾರಂಭಕ್ಕೆ ಆತುರಾತುರವಾಗಿ ಬಂದರು
ನನಗೆ ಮರೆವು ಅಂತಿದ್ರಲ್ಲ ನೋಡಿ ಟೈಮ್‌ಗೆ ಸರಿಯಾಗಿ ಬಂದಿದೀನಿ ಅಂದರು
ನೆಂಟರ ಮನೆಯವರು ಯಜಮಾನರ ಮುಖ ನೋಡಿ ನಕ್ಕರು – ಏಕೆಂದರೆ
ಆ ಮನೆಯಲ್ಲಿ ಸಮಾರಂಭ ಹಿಂದಿನ ದಿನವೇ ಮುಗಿದು ಹೋಗಿತ್ತು

*****

# ಬಿಲೀವ್ ಇಟ್ ಆರ್ ನಾಟ್ ಎಂಬ ಕಥೆ

• ಬಿ.ವಿ. ಭಾರತಿ

ನನ್ನ ಮಗ ಥೇಟ್ ನನ್ನಂತೆಯೇ... ಅವನ ಮೂಗಿನ ನೇರಕ್ಕೆ ನಡೆದು ಮೈಮೇಲೆ ತೊಂದರೆ ಎಳೆದು ಹಾಕಿಕೊಳ್ಳುವಂಥವನು. ತೊಂದರೆ ಶುರುವಾಗುತ್ತಿದೆ ಅನ್ನುವ ಸುಳಿವು ಸಿಕ್ಕಿದಾಗಲಾದರೂ ಎಚ್ಚೆತ್ತುಕೊಳ್ಳುತ್ತಾನಾ ಅಂದರೆ ಅದೂ ಇಲ್ಲ. ಸಣ್ಣ ಗಾಯವೊಂದು ಗ್ಯಾಂಗ್ರೀನ್ ಮಟ್ಟ ತಲುಪುವಷ್ಟು ಕೊಳೆಯುವವರೆಗೂ ಸುಮ್ಮನಿದ್ದು ಬಿಡುತ್ತಾನೆ. ಆ ನಂತರ ಕಾಲು ಕಟ್ ಮಾಡಬೇಕು ಅನ್ನುವ ಸ್ಥಿತಿ ಬಂದಾಗ ಎದ್ದು ಬಿದ್ದು ನನ್ನ ಹತ್ತಿರ ಓಡಿ ಬರುತ್ತಾನೆ. ನಾನು ಅವನನ್ನು ಬಯ್ಯುವುದಿಲ್ಲ... ಯಾಕೆಂದರೆ, ಅವನು ಥೇಟ್ ನನ್ನಂತೆಯೇ ಅಂತ ಮೊದಲಿಗೇ ಹೇಳಿಬಿಟ್ಟಿದ್ದೇನಲ್ಲ! ನಾನಾದರೂ ಸ್ಕೂಲಿನಲ್ಲಿರುವಾಗ ಕಡಿಮೆ ಗಲಾಟೆ ಮಾಡಿದವಳಲ್ಲ. ಹತ್ತನೆಯ ತರಗತಿಯ ರಿಸಲ್ಟ್ ಬಂದ ದಿನ ನಮ್ಮ ಗಣಿತದ ಮೇಷ್ಟ್ರು 'ಸಧ್ಯ ಪಾಸಾಗಿ ನೀನು ಹೊರಡುವ ದಿನ ಬಂತು' ಅಂತ ಹಿಗ್ಗಿದ್ದರು. ಅಂದರೆ ನನ್ನ ಬಾಲಪ್ರತಿಭೆ ಇನ್ನೆಷ್ಟಿರಬೇಕು ಊಹೆ ಮಾಡಿ. ಹಾಗಾಗಿ ಅಮ್ಮನ ಮಗನಾದ ನನ್ನ ಕುಲಪುತ್ರ ಮಾಡುವ ಯಾವ ಗಲಾಟೆಯೂ ನನಗೆ ಎಂದೂ ಅಸಹಜ ಅನ್ನಿಸುತ್ತಲೇ ಇರಲಿಲ್ಲ. ಅವನು ತೊಂದರೆಗೆ ಸಿಕ್ಕಿ ಕೊಂಡಾಗಲೆಲ್ಲಾ ನನ್ನ ಹತ್ತಿರ ಓಡಿ ಬರುವುದು ಮತ್ತು ನಾನು, ಅವನು ಪಿಸುಗುಟ್ಟಿಕೊಳ್ಳುತ್ತಾ ಒಳಗೊಳಗೇ ಆ ತೊಂದರೆಯನ್ನು ನಿವಾರಿಸಿಕೊಳ್ಳುವ ದಾರಿ ಹುಡುಕುವುದು ಮಾಮೂಲು.

> **ನಾನು ನನ್ನ ಮಗನನ್ನು ಬಯ್ಯುವಂತಿಲ್ಲ... ಯಾಕೆಂದರೆ ಅವನು ಥೇಟ್ ನನ್ನಂತೆಯೇ!**

ನಾವಿಬ್ಬರೂ ಪಿಸುಗುಟ್ಟಿಕೊಳ್ಳುವುದು ಯಾಕೆ ಅಂತ ನೀವು ಕೇಳುತ್ತೀರ ಅನ್ನುವುದು ನನಗೆ ಗೊತ್ತು... ಉತ್ತರ ತುಂಬಾ ಸಿಂಪಲ್, ನನ್ನ ಗಂಡನಿಗೆ ನನ್ನ ಮಗನ ಬದುಕಿನಲ್ಲಾದ ತೊಂದರೆಯ ಸುಳಿವು ಕೊಡಬಾರದು ಅನ್ನುವ ಕಾರಣಕ್ಕೆ ಈ ರೀತಿ ನಾವು ಪಿಸುಗುಟ್ಟಿಕೊಳ್ಳುತ್ತೇವೆ. ನಾನು ಹೀಗೆ ಹೇಳಿದ ಕೂಡಲೇ ನಿಮ್ಮ ಕಣ್ಣೆದುರು ಕೆಂಗಣ್ಣಿನ, ದೊಡ್ಡ ಮೀಸೆಯ, ಸಿಡುಕು ಮೋರೆಯ ಗಂಡಸೊಬ್ಬನ ಚಿತ್ರ ಮೂಡಿರುತ್ತದೆ ಅಲ್ಲವಾ? ಆತ ತುಂಬಾ ಸ್ಟ್ರಿಕ್ಟ್ ಇರುವುದರಿಂದ ಮಗನನ್ನು ಶಿಕ್ಷೆಗೆ ಗುರಿಪಡಿಸುತ್ತಾನೆ ಅನ್ನುವ ಹೆದರಿಕೆಯಿಂದ ನಾನು ಮತ್ತು ನನ್ನ ಮಗ, ನನ್ನ ಗಂಡನನ್ನು ದೂರವಿಡುತ್ತೇವೆ ಅನ್ನುವುದೂ ನಿಮ್ಮ ಮುಂದಿನ

> ರಾಮು:
> ನಾನು ಮದುವೆಯಾದ ಮೇಲೆ ಒಂದು ದಿನವೂ ನನ್ನ ಹೆಂಡ್ತಿಯೊಂದಿಗೆ ಜಗಳವಾಡದೇ ಸಂಸಾರ ಮಾಡೋಣ ಅಂದ್ಕೊಂಡಿದೀನಿ ಇದು ಸಾಧ್ಯನಾ
>
> ಸುಬ್ಬು:
> ಯಾಕೆ ಸಾಧ್ಯವಿಲ್ಲ, ಮಾತು ಬರದಿರುವ ಹುಡುಗಿ ಮದುವೆಯಾಗಿಬಿಡು ಇಡೀ ಜೀವನ ಜಗಳವಾಡದೇ ಸಂಸಾರ ಮಾಡಬಹುದು

ಊಹೆಯಾಗಿರುತ್ತದೆ. ಅಸಲು ವಿಷಯ ಅದಲ್ಲ ಸ್ವಾಮಿ, ಒಂದೆರಡು ಘಟನೆಯ ಬಗ್ಗೆ ಹೇಳುತ್ತೇನೆ ತಾಳಿ, ಆಗ ನಿಮಗೆ ಅರ್ಥವಾದೀತು...

ಆಗ ನನ್ನ ಮಗ ಮೂರನೆಯ ಕ್ಲಾಸ್ ಪಾಸ್ ಆಗಿದ್ದ. ತಕ್ಕಮಟ್ಟಿಗೆ ಬುದ್ಧಿವಂತನಿದ್ದ. ಆದರೆ ಆ ಸೆಂಟ್ರಲ್ ಸಿಲಬಸ್ ಅನ್ನುವ ಶನಿ ನಮ್ಮ ಬದುಕಿನ ರಸ ಘಳಿಗೆಗಳನ್ನೆಲ್ಲಾ ನಾಶ ಮಾಡಲು ಶುರುಮಾಡಿತ್ತು. ಯಾವ ಯಾವುದೋ ರಾಜ್ಯಗಳ ಮೂಲ ನಿವಾಸಿಗಳ ಆಚಾರ-ವಿಚಾರ-ಉಡುಗೆ-ಊಟಗಳ ಬಗ್ಗೆಯೇ ಚಾಪ್ಟರ್ ಗಟ್ಟಲೆ ವಿವರಣೆ ಇರುವ ಸಮಾಜಶಾಸ್ತ್ರ, ನಾನು ಡಿಕ್ಷನರಿ ಹಿಡಿದು ಅರ್ಥ ಹುಡುಕುವ ಸ್ಥಿತಿ ತಲುಪಿಸುತ್ತಿದ್ದ ಇಂಗ್ಲೀಷ್, ಕಬ್ಬಿಣದ ಕಡಲೆಯಂಥ ವಿಜ್ಞಾನ ಎಲ್ಲದರ ಜೊತೆ ಏಗಿ ಸುಸ್ತಾಗಿದ್ದ ಮಗನ ಕಷ್ಟ ನೋಡಲಾರದೇ (ಹಾಗೂ ನನ್ನ ಕಷ್ಟ ನೋಡಲಾರದೆ ಕೂಡಾ!), ನಾಲ್ಕನೇ ಕ್ಲಾಸಿಗೆ ಅವನನ್ನು ಸ್ಟೇಟ್ ಸಿಲಬಸ್‌ನ ಸ್ಕೂಲಿಗೆ ಹೊತ್ತು ಹಾಕಲು ತೀರ್ಮಾನಿಸಿದ್ದೆ. ಸ್ಕೂಲ್ ಸೇರಿದ ನಂತರ ಮಧ್ಯದಲ್ಲಿ ಶಾಲೆ ಬದಲಿಸುವ ಕೆಲಸ ಯಾವತ್ತಾದರೂ ಮಾಡಿದ್ದರೆ ನಿಮಗೆ ಈ ಕಷ್ಟ ಕೂಡಲೇ ಗೊತ್ತಾಗಿ ಬಿಡುತ್ತದೆ. ಎಷ್ಟೊಂದು ಸ್ಕೂಲುಗಳ ಮೆಟ್ಟಿಲು ಹತ್ತಿ ಇಳಿದಿದ್ದು! ಅರ್ಧದಷ್ಟು ಸ್ಕೂಲುಗಳಲ್ಲಿ ಸೆಂಟ್ರಲ್ ಸಿಲಬಸ್ಸೇ ಇದ್ದ ಕಾರಣ ನಾವೇ ಅದನ್ನು ಬಿಟ್ಟಿದ್ದಾಯ್ತು. ಇನ್ನು ಕೆಲವು ಸ್ಕೂಲುಗಳಲ್ಲಿ ಅವರ ಏರಿಯಾದಲ್ಲಿರುವವರಿಗೆ ಮಾತ್ರ ಸೀಟ್ ಅಂದರು. ಮತ್ತೆ ಕೆಲವು ಸ್ಕೂಲುಗಳು ಬರೀ ಹೆಣ್ಣು ಮಕ್ಕಳಿಗೆ ಮಾತ್ರ ಮೀಸಲಾಗಿತ್ತು. ಇವೆಲ್ಲವನ್ನೂ ಬಿಟ್ಟು, ಉಳಿದ ಬೆರಳೆಣಿಕೆಯಷ್ಟು ಸ್ಕೂಲುಗಳು ಮಾತ್ರ ಉಳಿದವು.

ಅವುಗಳಲ್ಲಿ ಒಂದು ಶಾಲೆಯ ಹೆಡ್ ಮೇಷ್ಟ್ರು ಭಾರೀ ಸ್ಕೋಪ್ ತೆಗೆದುಕೊಳ್ಳುವ ಹಾಗೆ ಮಾತಾಡುತ್ತಿದ್ದರು. ನಾಳೆ ಬನ್ನಿ, ಮುಂದಿನ ವಾರ ಬನ್ನಿ, ಅಯ್ಯೋ ಸೀಟ್ ಖಾಲಿ ಇರೋ ಹಾಗೆ ಕಾಣ್ತಿಲ್ಲ, ನೀವು ಒಂದು ಕೆಲ್ಸ ಮಾಡಿ ನಿಮ್ಮ ಮಗನ್ನ ನಮ್ಮ ಸೆಂಟ್ರಲ್ ಸಿಲಬಸ್ ಶಾಲೆಗೆ ಸೇರಿಸಿ... ಹೀಗೇ ನಾನಾ ಕಾರಣಗಳನ್ನು ಹೇಳುತ್ತಾ ಹೋದರು. ನಾವೂ ಕಾರ್ಯವಾಸಿ ಕತ್ತೆ ಕಾಲು ಕಟ್ಟಬೇಕಿತ್ತಲ್ಲ, ಹಾಗಾಗಿ ಅವರನ್ನು ಅದ್ಭುತ ನಿರೀಕ್ಷೆಯಲ್ಲಿ ಭೇಟಿ ಆಗಿ, ಆ ನಂತರ ಜೋಲು ಮೋರೆ ಹಾಕಿ ವಾಪಸ್ ಬರುತ್ತಿದ್ದೆವು. ಇನ್ನೊಂದು ಶಾಲೆಯಲ್ಲಿ ಸೀಟ್ ಕೊಟ್ಟರು. ಆದರೆ ಈ ಸ್ಕೋಪ್ ಹೆಡ್ ಮಾಸ್ಟ್ರಿದ್ದ ಶಾಲೆ ನಮಗೆ ಹತ್ತಿರವಿದ್ದುದರಿಂದ, ಆ ಶಾಲೆಯಲ್ಲೇ ಹೇಗಾದರೂ ಮಾಡಿ ಸೀಟು ಪಡೆಯಬೇಕೆನ್ನುವುದು ನಮ್ಮ ಆಸೆ. ಆದರೆ ಸೀಟು ಸಿಕ್ಕ ಶಾಲೆಯಲ್ಲಿ ಅವತ್ತು ಅಡ್ಮಿಷನ್‌ಗೆ ಕೊನೆಯ ದಿನ. ಕೈಲಿದ್ದ ಸೀಟಿನ ಸ್ಕೂಲಿಗೆ ಅವನನ್ನು ದಬ್ಬಬೇಕಾ, ಇಲ್ಲವಾದರೆ ಈ ಸ್ಕೂಲಿಗೆ ಕಾಯಬೇಕಾ? ಇಲ್ಲಿ ಸಿಗದೇ ಹೋದರೆ? ಅಂತೆಲ್ಲ

ನಾನಾ ಯೋಚನೆಗಳು. ಹಾಗಾಗಿ ಈ ಸ್ಕೂಲಿನ ಹೆಡ್ ಮೇಷ್ಟ್ರನ್ನ ಭೇಟಿಯಾಗಿ, ಬೇಡಿಕೊಂಡು ಸೀಟು ಸಿಗುತ್ತದಾ, ಇಲ್ಲವಾ ಅನ್ನುವುದನ್ನು ತಿಳಿದುಕೊಳ್ಳಲೇ ಬೇಕಿತ್ತು. ನಾವು ಮೂವರೂ ಶಾಲೆಗೆ ಹೋದೆವು.

ಘಂಟೆಗಟ್ಟಲೆ ಕಾಯಿಸಿದ ನಂತರ ಹೆಡ್ ಮೇಷ್ಟ್ರು ದರ್ಶನ ಭಾಗ್ಯ ಕರುಣಿಸಿದರು. ನಾನು 'ಸರ್ ದಯವಿಟ್ಟು ನನ್ನ ಮಗನಿಗೆ ಸೀಟ್ ಸಿಗುತ್ತದಾ ಇಲ್ಲವಾ ಹೇಳಿ. ನನಗಂತೂ ನಿಮ್ಮ ಶಾಲೆಗೇ ಮಗನನ್ನು ಸೇರಿಸಬೇಕು ಅನ್ನುವ ಆಸೆ. ಹಾಗಾಗಿ ನೀವು ಏನಾದರೊಂದು ತೀರ್ಮಾನ ಕೊಟ್ಟರೆ...' ಅಂತ ರಾಗವೆಳೆಯುತ್ತಿರುವಾಗಲೇ ನನ್ನ ಗಂಡ ಕತ್ತೆ ಒದ್ದಂತೆ 'ಸಾರ್ ನೋಡಿ, ನನ್ನ ಮಗನಿಗೆ ಬೇರೆ ಸ್ಕೂಲಲ್ಲಿ ಸೀಟ್ ಸಿಕ್ಕಿದೆ. ಈಗೇನು ಅವನನ್ನು ಅಲ್ಲಿ ಅಡ್ಮಿಷನ್ ಮಾಡಿಸಲೋ ಅಥವಾ ನಿಮ್ಮ ಸ್ಕೂಲಲ್ಲಿ ಸೀಟ್ ಕೊಡ್ತೀರೋ' ಅಂದು ಬಿಟ್ಟ. ಮೊದಲೇ ಹೆಡ್ ಮೇಷ್ಟ್ರು... ಸಿಟ್ಟು ನೆತ್ತಿಗೇರಿ 'ಅಲ್ಲಿಗೇ ಸೇರಿಸಿಕೊಳ್ಳಿ ಹೋಗ್ರೀ' ಅಂತ ಮೂತಿಗೆ ಹೊಡೆದ ಹಾಗೆ ಉತ್ತರಿಸಿದರು. ಈ ಅರ್ಜುನ-ಬಭ್ರುವಾಹನರು ಆರು ತಿಳಿಯರು ನಿನ್ನ ಭುಜಬಲದ... ಅಂತ ಹಾಡಾಡಿಕೊಂಡು ಯುದ್ಧವಾಡಿ, ನನ್ನನ್ನು ಮತ್ತು ನನ್ನ ಮಗನನ್ನು ಕುಕ್ಕಿ ಒಗೆದು, ಜಾಲಿಸಿ, ಹಿಂಡಿ, ಹರವಿದ್ದರು! ಆಮೇಲೆ ಕೈ ಕಾಲಿಗೆ ಬಿದ್ದು ಸೀಟು ದೊರಕಿಸಿಕೊಂಡ ನಂತರ ಯಾವಾಗ ನನ್ನ ಮಗನ ಪಾಲಿಗೆ ವರವಾಗುತ್ತಾನೋ, ಶಾಪವಾಗುತ್ತಾನೋ ಅಂತ ಗೊತ್ತಿಲ್ಲದೇ ನಾನು ಗಂಡನನ್ನು ಬಿಟ್ಟು ಮಗನ ಜೊತೆ ಒಂದು ರಹಸ್ಯ ವಿಶ್ವ ನಿರ್ಮಿಸಿಕೊಂಡೆ.

ಹೋಮ್ ವರ್ಕ್ ಮಾಡಲು ಬೇಸರವಾದಾಗ ತಿಂಗಳುಗಟ್ಟಳೆ 'ಹೋಮ್ ವರ್ಕ್ ಕೊಟ್ಟಿಲ್ಲ' ಅಂತ ನೀಟಾಗಿ ಸುಳ್ಳು ಹೇಳಿ ಕೊನೆಗೊಂದು ದಿನ ಟೀಚರ್ ಬರ ಹೇಳಿದಾಗ, ಕೋಳಿ ಕಾಲು ಅಕ್ಷರ ನೋಡಿ ರೋಸಿ ಹೋಗಿ ವಾರ್ನ್ ಮಾಡಲು ಕರೆಸಿದಾಗ, ಮಾರ್ಕ್ಸ್ ನೆಲ ಕಚ್ಚಿದ್ದಾಗಲೆಲ್ಲಾ ನಾನೊಬ್ಬಳೇ ಮಗನ ಜೊತೆ ಶಾಲೆಗೆ ಹೋಗಿ ಟೀಚರ್‌ಗಳಿಗೆ ಸಲಾಮು ಹಾಕಿ, ಎದುರಾದ ತೊಂದರೆಗಳನ್ನು ನಿವಾರಿಸಿಕೊಳ್ಳುವುದನ್ನು ಕಲಿತೆ. ಸುಮಾರು ವರ್ಷ ಹೀಗೇ ಕಳೆದಿತ್ತು. ನನ್ನ ಮಗ ಕಾಲೇಜಿಗೆ ಕಾಲಿಟ್ಟಿದ್ದ ಈಗ. ಆ ಭಂಡ ಬುದ್ಧಿಯೂ ವಯಸ್ಸಿಗೆ ತಕ್ಕ ಹಾಗೆ ಬೆಳೆಯುತ್ತಾ ಹೋಗಿತ್ತು! ಸ್ಕೂಲಿನಲ್ಲಿರುವಾಗ 'ಥೂ ಈ ಸೋಷಿಯಲ್ ಸೈನ್ಸ್, ಕನ್ನಡ ಎರಡೂ ಬೋರ್ ನನಗೆ. ಕಾಲೇಜಿಗೆ ಹೋದ್ಮೇಲೆ ನನಗಿಷ್ಟದ ಸಬ್ಜೆಕ್ಟ್ ಮಾತ್ರ ಇರತ್ತೆ. ಆಗ ನೋಡು ಹೇಗೆ ಓದ್ತೀನಿ ಅಂತ' ಎಂದು ಆಶ್ವಾಸನೆ ನೀಡಿದ್ದ ಮಗರಾಯ 'ಥೂ ಫಿಸಿಕ್ಸ್, ಕಂಪ್ಯೂಟರ್ ಸೈನ್ಸ್, ಗಣಿತ ಮಾತ್ರ ಇಷ್ಟವಾಗತ್ತೆ. ಈ ಕೆಮಿಸ್ಟ್ರಿ ಮತ್ತೆ ಸಂಸ್ಕೃತ ಸಖತ್ ಬೋರಿಂಗ್' ಅನ್ನಲು ಶುರು ಮಾಡಿದ್ದ.

ಕಾಲೇಜಿಗೆ ಹೋಗುತ್ತಿದ್ದಾನೆ ಅಂತ ನಾನೂ ಆರಾಮವಾಗಿದ್ದೆ. ಅವನು ಕೆಮಿಸ್ಟ್ರಿ ಬೋರ್ ಅನ್ನುತ್ತ ಲ್ಯಾಬ್‌ಗೆ ಹೋಗದೇ ಅರ್ಧ ವರ್ಷ ಕಳೆದು ಬಿಟ್ಟಿದ್ದ. ಅಟೆಂಡೆನ್ಸ್ ಶಾರ್ಟೇಜ್! ಮತ್ತೆ ಅಪ್ಪ-ಅಮ್ಮನನ್ನು ಕರೆ ತರಲು ನೋಟೀಸ್ ಕೊಟ್ಟು ಕಳಿಸಿದರು. ನನ್ನ ಗಂಡನಿಗೂ ಇಷ್ಟು ಹೊತ್ತಿಗೆ ಸ್ವಲ್ಪ ವಯಸ್ಸಾಗಿತ್ತಲ್ಲ, ಬುದ್ಧಿ ಬಂದಿರಬಹುದು ಅಂತ ಎಣಿಸಿ ಅವನನ್ನೂ ಕರೆದುಕೊಂಡು ಹೋದೆ. ಕೆಮಿಸ್ಟ್ರಿ ಟೀಚರಮ್ಮನ ಎದುರು ನಿಲ್ಲುತ್ತಲೇ ಸಹಸ್ರ ನಾಮಾರ್ಚನೆ ಶುರುಮಾಡಿದರು. ನಾನು ಸುಮ್ಮನೆ ನಿಂತಿದ್ದೆ ಅವರ ಮಾತಿಗೆಲ್ಲಾ ಒಪ್ಪಿಗೆಯಿರುವವಳ ಹಾಗೆ ಒಪ್ಪಿಗೆ ನೀಡುತ್ತಾ. ಅಷ್ಟರಲ್ಲಿ ಪತಿದೇವರು ಬಾಯಿ ತೆರೆದ 'ನೀವು ಇಷ್ಟು ಕೊನೆಯವರೆಗೂ

ಯಾಕೆ ಸುಮ್ಮನಿದ್ರಿ? ಅಂತ! ಅವರೇನೋ ಪಾಪ ಮಗನನ್ನು ಬಯ್ದು ಬುದ್ಧಿ ಹೇಳುತ್ತಾರೆ ಅಂತ ನಮ್ಮನ್ನು ಕರೆಸಿದರೆ, ಇವನು ಆ ಟೀಚರಮ್ಮನಿಗೇ ಪ್ರಶ್ನೆ ಹಾಕಲು ಶುರು ಮಾಡುತ್ತಾನೆ ಅಂತ ನಾನೂ ಎಣಿಸಿರಲಿಲ್ಲ, ಆಯಮ್ಮ ಉರಿದು ಬೀಳುತ್ತಾ ಆ ಜಾಗದಿಂದ ಹೊರಟೇ ಹೋದರು. ನಾನು ಅಯ್ಯೋ! ಮಗನ ಭವಿಷ್ಯವೇ ನನ್ನಿಂದ ದೂರ ಓಡುತ್ತಿದೆ ಅನ್ನುವ ಹಾಗೆ ಹೊರಲಾರದ ದೇಹ ಹೊತ್ತು, ಅವರ ಹಿಂದೆ ಓಡಿದೆ. ನನ್ನ ಮಗ ಮತ್ತು ನಾನು ಅಲ್ಲಿಂದ ಮುಂದೆ ಅವರಿಗೆ ಪಾದಕ್ಕೆ ಬಿದ್ದು ಎಕ್ಸ್ಟ್ರಾ ಕ್ಲಾಸ್ ತೆಗೆದುಕೊಂಡು ನನ್ನ ಮಗನಿಗೊಂದು ದಾರಿ ಮಾಡಿ ಅಂತ ಬೇಡಿಕೊಳ್ಳುವ ಹೊತ್ತಿಗೆ ಕುರಿ, ಕೋಣ ಬಿದ್ದು ಹೋಗಿತ್ತು.

ಆದಾದ ನಂತರ ನನ್ನ ಮಗ ಇಂಜಿನಿಯರಿಂಗ್‌ಗೆ ಕಾಲಿಟ್ಟ. ಇನ್ನಾದರೂ ಕ್ಲಾಸಿಗೆ ಸರಿಯಾಗಿ ಹೋಗು, ನನ್ನನ್ನು ಕಾಲೇಜಿಗೆ ಬರುವ ಹಾಗೇ ಮಾಡಬೇಡ ಅಂತ ದೈನೇಸಿಯಂತೆ ಬೇಡಿದೆ. ಅವನೂ ಶಿಸ್ತಾಗಿ ತಲೆ ಆಡಿಸಿದ. ಆದರೆ ಕರ್ಮ ನೋಡಿ, ಈ ಸಲ ವಿಧಿಯೇ ಅವನ ವಿರುದ್ಧ ನಿಂತಿತ್ತು. ಇನ್ನೂ ಕಾಲೇಜು ಶುರುವಾಗುವಾಗಲೇ ಟೈಫಾಯಿಡ್ ಮತ್ತು ಜಾಂಡೀಸ್ ಎರಡೂ ಅಂಟಿಕೊಂಡು ಸುಮಾರು ಎರಡು ತಿಂಗಳು ಚಕ್ಕರ್. ಮೆಡಿಕಲ್ ಸರ್ಟಿಫಿಕೇಟ್ ಕೊಟ್ಟರೂ ಪರೀಕ್ಷೆಗೆ ಕೂಡಿಸುವುದಿಲ್ಲ ಅನ್ನುವಂಥ ವಿಚಿತ್ರ ಕಾಲೇಜು ಅದು. ನಾನು ಮತ್ತೆ ಕಾಲೇಜಿಗೆ ಹೊರಟೆ. ಹುಷಾರಿಲ್ಲದ ಮಗನನ್ನು ಒಬ್ಬಳೇ ಸಂಭಾಳಿಸುವುದು ಸಾಧ್ಯವಿಲ್ಲ ಅಂತ ಗಂಡನನ್ನೂ ಜೊತೆಗೆ ಕರೆದೆ. ಅದೇ ನಾನು ಮಾಡಿದ ತಪ್ಪು! ಯಂಡಮೂರಿಯ ಕಾದಂಬರಿಯ ಹಾಗೆ ಹೇಳಬೇಕೆಂದರೆ ಆ ತಪ್ಪು ಏನೆಂಬುದು ನನಗೆ ಸರಿಯಾಗಿ ಅಲ್ಲಿಂದ ಒಂದು ಘಂಟೆ ಹತ್ತು ನಿಮಿಷ ಮೂವತ್ತ ಮೂರು ಸೆಕೆಂಡುಗಳ ನಂತರ ತಿಳಿಯಿತು!!

ಪ್ರಿನ್ಸಿಪಾಲ್ ಇದ್ದ ರೂಮಿಗೆ ಹೋಗಿ ಯಥಾಪ್ರಕಾರ ದ್ರಾಬೆ ಮುಖದಲ್ಲಿ ನಿಂತೆವು. ಆತನಿಗೋ ಜಗತ್ತಿನ ಎಲ್ಲಾ ವಿದ್ಯಾರ್ಥಿಗಳೂ ಕಳ್ಳರೇ ಅನ್ನುವ ನಂಬಿಕೆ. ನಾವು ಹಾಸ್ಪಿಟಲ್‌ಗೆ ಅಡ್ಮಿಟ್ ಆದ ರೆಕಾರ್ಡ್ಸ್ ತೋರಿಸಿದರೂ 'ಆ ಥರ ರೆಕಾರ್ಡ್ಸ್ ಪ್ರೊಡ್ಯೂಸ್ ಮಾಡುವುದು ಕಷ್ಟವೇನಿಲ್ಲ' ಅಂದು ಬಿಟ್ಟರು ಹೃದಯ ಹೀನನಂತೆ. ನನಗೆ ಯಾಕೋ ತುಂಬಾ ಸಂಕಟವಾಗಿ, ಹೋಗಿ 'ಇಲ್ಲ ಸರ್, ಸುಳ್ಳು ಸರ್ಟಿಫಿಕೇಟ್ ಈ ರೀತಿಯದ್ದೆಲ್ಲಾ ತೋರಿಸಲು ನನ್ನಿಂದ ಆಗುವುದಿಲ್ಲ, ಇದು ನಿಜದ್ದು' ಅಂದೆ. ಅಷ್ಟರಲ್ಲಿ ನನ್ನ ಪತಿದೇವ ಕಣಕ್ಕಿಳಿದ. 'ಸಾರ್, ಅಟೆಂಡೆನ್ಸ್ ಎಷ್ಟು ಇರ್ಬೇಕು ಸಾರ್ ಮಿನಿಮಮ್ಮು?' ಅಂದ. ಆತ 85% ಅಂದರು ಚುಟುಕಾಗಿ. ನನ್ನ ಗಂಡ ತೋಳು ಮಡಚಿ 'ಸಾರ್, ಇದು ತೀರಾ ಜಾಸ್ತಿಯಾಯ್ತು. ಎಂಭತ್ತೈದು ಪರ್ಸೆಂಟ್ ಅಂದ್ರೆ ಅದು ಹೇಗೆ ಮೇಂಟೇಯ್ನ್ ಮಾಡಕ್ಕೆ ಸಾಧ್ಯ ಹೇಳಿ' ಅಂತ ವಾದಕ್ಕೆ ನಿಂತ. ಆ ಪ್ರಿನ್ಸಿಪಾಲ್ ಕ್ಷಣ ಕಾಲ ಬೆಪ್ಪಾದರು. ಈ ರೀತಿ ಹೇಳುವ ಅಪ್ಪನನ್ನು ಮೊದಲ ಸಲ ಆತ ನೋಡುತ್ತಿದ್ದರು ಅನ್ನಿಸುತ್ತದೆ! ಅಲ್ಲಿಂದ ಮುಂದೆ ನನ್ನ ಗಂಡನ ಅದ್ಭುತ ವಾಗ್ವೈಖರಿ ಮುಂದುವರೆಯಿತು. ''ನಾವು ಓದ್ತಿರುವಾಗ ನಮ್ಗೆ 75% ಮಿನಿಮಮ್ ಇತ್ತು ಸಾರ್. ನಮಗೆ ನೆಟ್ಟಗೆ 60% ಕೂಡಾ ಇರ್ತಿರಲಿಲ್ಲ, ಆಗೆಲ್ಲ ಈ ಥರ ಇರ್ಲಿಲ್ಲ ಸಾರ್. ಆರಾಮವಾಗಿ ಫೈನ್ ಕಟ್ಟಿದ್ರೆ ಅಟೆಂಡೆನ್ಸ್ ಸಿಗ್ತಿತ್ತು. ನಿಮಗೆ ನೆನಪಿದ್ಯಾ ಸಾರ್, ಆಗ ಒಂದು ಸೂರ್ಯಗ್ರಹಣ ಆಗಿತ್ತು... ನಾವು ಎಕ್ಸಾಮ್ ಮಿಸ್ ಮಾಡಿ ಸೂರ್ಯಗ್ರಹಣ ನೋಡಕ್ಕೆ ಹೋಗಿದ್ವಿ. ಪರೀಕ್ಷೆ ಏನು ಸಾರ್ ಮತ್ತೆ ಬರತ್ತೆ, ಪೂರ್ತಿ ಸೂರ್ಯಗ್ರಹಣ ಸಿಗಕ್ಕೆ ಸಾಧ್ಯಾನಾ? ಪರೀಕ್ಷೆಗೇ ಹೆದರದ

ನಾವು ಇನ್ನು ಕ್ಲಾಸನ್ನ ನೆಟ್ಟಗೆ ಅಟೆಂಡ್ ಮಾಡ್ತೀವಾ ನೀವೇ ಹೇಳಿ'' ಅಂದ. ಪ್ರಿನ್ಸಿಪಾಲ್ ಮುಖದಲ್ಲಿ ಸಿಟ್ಟು ತಾಂಡವವಾಡತೊಡಗಿತು. 'ನಮ್ಮ ಕಾಲೇಜಲ್ಲಿ ದುಡ್ಡು ತಗೊಂಡು ಅಟೆಂಡೆನ್ಸ್ ಕೊಡೋ ಅಭ್ಯಾಸ ಎಲ್ಲ ಇಲ್ಲ' ಅಂತ ಗಡುಸಾಗಿ ಹೇಳಿದರೆ ಈ ಮನುಷ್ಯ ಅಲ್ಲಿಗೂ ನಿಲ್ಲಿಸದೇ 'ಸಾರ್, ಅದೆಲ್ಲಾ ಇರಬೇಕು. ಮಕ್ಳಿಗೆ ಏನಾದರೊಂದು ಆಪ್ಷನ್ ಇರಬೇಕು ಅಲ್ವಾ?' ಅಂದ!!

ನಾನು ಇನ್ನು ಸುಮ್ಮನಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಅಂತಂದುಕೊಂಡು ನನ್ನ ಪಕ್ಕದಲ್ಲಿ ಕೂತಿದ್ದವನ ಕಾಲನ್ನು ಮೆತ್ತಗೆ ತುಳಿದೆ 'ದಯವಿಟ್ಟು ಬಾಯಿ ಮುಚ್ಚು ಮಾರಾಯಾ' ಅಂತ ಎಚ್ಚರಿಸುವಂತೆ. ಅವನ ತಗುಲುತ್ತಿದ್ದ ನನ್ನ ಕಾಲುಗಳ ಹತ್ತಿರದಿಂದ ಅವನ ಕಾಲನ್ನು ದೂರ ಸರಿಸಿ ಕೂತ! ಅಷ್ಟರಲ್ಲಿ ಅವರು 'ಈಗಿನ ಮಕ್ಕಳಿಗೆ ಒಂಚೂರೂ ಡಿಸಿಪ್ಲೀನ್ ಇಲ್ಲ, ಏನಿಲ್ಲ. ಕಾಲೇಜಿಗೆ ಮೊಬೈಲ್ ತರಬೇಡಿ ಅಂದ್ರೆ ತರ್ತಾರೆ...' ಇನ್ನೂ ಅವರ ಮಾತು ಮುಗಿಯುವ ಮುಂಚೆಯೇ ನನ್ನ ಗಂಡ 'ಸಾರ್ ನಾವು ಟೆಕ್ನಾಲಜಿಯ ಪೂರ್ತಿ ಉಪಯೋಗ ಪಡ್ಕೋಬೇಕು. ಮೊಬೈಲ್ ಕೈಲಿ ಇಲ್ಲಾಂದ್ರೆ ಎಮರ್ಜೆನ್ಸಿಲಿ ಫೋನ್ ಮಾಡೋದು ಹೇಗೆ ಹೇಳಿ' ಅಂದ. ಭಗವಂತಾ ಕಾಪಾಡೋ, ಇವನ ಬಾಯನ್ನ ಹೇಗಾದರೂ ಮುಚ್ಚಿಸೋ ಅಂತ ನಾನು ಮನಸ್ಸಿನಲ್ಲೇ ಬಾಯಿ ಬಡಿದುಕೊಳ್ಳಲು ಶುರುಮಾಡಿದೆ. ಪ್ರಿನ್ಸಿಪಾಲ್ 'ಅದಕ್ಕೇ ನಮ್ಮ ಕಾಲೇಜಲ್ಲಿ ಮೂಲೆ ಮೂಲೆಗೂ ಪಬ್ಲಿಕ್ ಫೋನ್ ಹಾಕ್ಸಿದೀವಿ. ಅಲ್ಲಿಂದ ಮಾಡಬಹುದಲ್ಲ' ಅಂದರೆ ಈತ 'ಸಾರ್ ಎಮರ್ಜೆನ್ಸಿ ಬಂದು ತಲೆ ತಿರುಗಿ ಬಿದ್ರೆ ಆಗ ಫೋನ್ ಬೂತ್ ಹುಡುಕಕ್ಕೆ ಆಗತ್ತಾ ನೀವೇ ಹೇಳಿ. ಇದಕ್ಕೆಲ್ಲಾ ನೀವು ಸ್ವಲ್ಪ ಕನ್ಸಿಡರೇಷನ್ ತೋರಿಸಬೇಕು...' ಅಂತ ಹೆಂಗೆ ಪಾಯಿಂಟ್ ಹಾಕ್ದೆ ನೋಡು ಅನ್ನುವಂತೆ ಹೆಮ್ಮೆಯಿಂದ ನೋಡಿದ. ನಾನು ಹಿಂದೆ ನಿಂತಿದ್ದ ಮಗನ ಮುಖ ನೋಡಿದೆ. ಅದು ಕಪ್ಪಿಟ್ಟು ಹೋಗಿತ್ತು! ನನಗೆ ಈಗ ಇವನ ಬಾಯಿ ಹೇಗಾದರೂ ಮುಚ್ಚಿಸದಿದ್ದರೆ ಸಾಧ್ಯವೇ ಇಲ್ಲ ಅನ್ನಿಸಿ ಅವನ ಕಾಲನ್ನು ನನ್ನ ಕಾಲಿನಿಂದ ಹುಡುಕಿ ಒಂದಿಷ್ಟು ನೋವಾಗುವ ಹಾಗೆ ಜೋರಾಗಿ ಒದ್ದೆ. 'ಕಾಲು ಆ ಕಡೆ ಇಟ್ಕೋ' ಅಂದ ನನ್ನ ಕಡೆ ತಿರುಗಿ. ಅಲ್ಲಿಗೆ ನನಗೆ ಖಾತರಿಯಾಯ್ತು ಇವನಿಗೆ ಸಧ್ಯಕ್ಕೆ ಏಳುವ ಉದ್ದೇಶವಿಲ್ಲ ಅಂತ. ನಾನು ಎದ್ದು ನಿಂತು 'ಸರ್, ಥ್ಯಾಂಕ್ ಯೂ' ಅನ್ನುತ್ತ ಹೊರಗೆ ಬಂದೇ ಬಿಟ್ಟೆ. ನಾವಿಬ್ಬರೂ ಹೊರಟ ಮೇಲೆ ವಿಧಿಯಿಲ್ಲದೇ ನನ್ನ ಗಂಡನೂ ಹಿಂಬಾಲಿಸಿದ.

ಅಯ್ಯೋ! ಆ ವರ್ಷ ಅವನ ಹಾಲ್‌ಟಿಕೆಟ್ ಕೈಗೆ ತರಿಸಿಕೊಳ್ಳುವಷ್ಟರಲ್ಲಿ ನರಕ ದರ್ಶನವಾಗಿ ಹೋಯ್ತು. ಎಲ್ಲ ಕಾಲಕ್ಕೂ ಬುದ್ಧಿ ಬಂದಿರಬಹುದು, ಈ ವರ್ಷ ಬಂದಿರಬಹುದು ಅಂತ ಕಲ್ಪನೆಯಲ್ಲಿ ಅವನ ಜೊತೆ ಹೋಗಿ ಹೋಗಿ ನರಳಿದ ಮೇಲೆ ಗೊತ್ತಾಯ್ತು 'ಇಷ್ಟು ವರ್ಷ ಬಾರದ ಬುದ್ಧಿ ಇನ್ನೆಂದೂ ಬರುವುದು ಕಷ್ಟ' ಅಂತ!! ಅಲ್ಲಿಂದ ಮುಂದೆ ನಾನು ಮತ್ತು ನನ್ನ ಮಗ ಮತ್ತೆ ನಮ್ಮದೊಂದು ಪಾರ್ಟಿ ಕಟ್ಟಿಕೊಂಡು, ನನ್ನ ಗಂಡನಿಗೆ ತಿಳಿಯದಂತೆ ಗುಟ್ಟಿನಲ್ಲಿ ಎಲ್ಲ ಕಾರಸ್ಥಾನಗಳನ್ನು ನಡೆಸಲು ಶುರುಮಾಡಿದೆವು ಅನ್ನುವಲ್ಲಿಗೆ ಜಗತ್ತಿನ ಬಿಲೀವ್ ಇಟ್ ಓರ್ ನಾಟ್ ಕತೆಯೊಂದು ಮುಗಿಯುತ್ತದೆ...!!

# ಯುಗ ಯುಗಾದಿ ಕಳೆದರೂ.....

• ಗೋಪಾಲಿ

ದಕ್ಷಿಣ ಭಾರತದವರಿಗೆ ಉಗಾದಿ (ಯುಗಾದಿ ಎಂದೂ ಹೇಳುತ್ತಾರೆ) ಎಂದರೆ ಹೊಸ ವರ್ಷದ ಆರಂಭ. ಸಂಸ್ಕೃತದ ಯುಗದ ಆರಂಭ ಎನ್ನುವ ಅರ್ಥ ಬರುವ ಪದದಿಂದ ಉಗಾದಿ ಶಬ್ದ ಹುಟ್ಟಿದೆ. ಹಿಂದೂ ಪಂಚಾಂಗ/ಕ್ಯಾಲೆಂಡರಿನ ಪ್ರಕಾರ ಹೊಸ ವರ್ಷದ ಮೊದಲ ದಿನವೇ ಈ ಹಬ್ಬ - ಚಾಂದ್ರಮಾನ ಉಗಾದಿ ಅಂದರೆ ವರ್ಷದ ಮೊದಲ ತಿಂಗಳಾದ ಚೈತ್ರ ಮಾಸದ ಮೊದಲ ದಿವಸ ಪಾಡ್ಯವೇ ಈ ಹಬ್ಬ (ಚೈತ್ರ ಶುದ್ಧ ಪಾಡ್ಯಮಿ). ಸಾಮಾನ್ಯವಾಗಿ ಉಗಾದಿ ಹಬ್ಬವು ಮಾರ್ಚ್ ಕೊನೆಯ ವಾರದಲ್ಲಿ ಅಥವಾ ಏಪ್ರಿಲ್‌ನ ಮೊದಲ ವಾರದಲ್ಲಿ ಬರುತ್ತದೆ. ಮಹಾರಾಷ್ಟ್ರದಲ್ಲಿ ಉಗಾದಿಯನ್ನು ಗುಡಿ ಪಾಡವಾ ಎಂದು ಆಚರಿಸುತ್ತಾರೆ. ಆಂಧ್ರ ಹಾಗೂ ಕರ್ನಾಟಕದಲ್ಲಿ ಇದು ಉಗಾದಿ. ಮಾರವಾಡಿಗಳಿಗೆ ಇದು ತಪ್ನಾ, ಸಿಂಧಿಗಳಿಗೆ ಚೇತೀ ಚಾಂದ್, ಮಣಿಪುರಿಗಳಿಗೆ ಈ ಹಬ್ಬ ಸಜಿಬು ನೋಂಗ್ಮಾ ಪನ್ಬಾ ಆದರೆ ಪಂಜಾಬಿನಲ್ಲಿ ಇದು ಬೈಸಾಖಿ... ತಮಿಳುನಾಡಿನಲ್ಲಿ ಸೌರಮಾನ ಉಗಾದಿ ಆಚರಣೆ ಇದೆ. ಅಲ್ಲಿ ಈ ಹಬ್ಬ ಏಪ್ರಿಲ್ ಮಧ್ಯದಲ್ಲಿ ಬರುತ್ತದೆ.

ಉಗಾದಿ ಅಂದ ಕೂಡಲೇ ಮೊದಲು ನೆನಪಿಗೆ ಬರುವುದು - ನಮ್ಮ ಚಿಕ್ಕಂದಿನ ನೆನಪುಗಳು. ಹಬ್ಬದ ಹಿಂದಿನ ದಿವಸವೇ ತೋಟದಿಂದ ಬಿಡಿಸಿಕೊಂಡು ಬಂದಿರುತ್ತಿದ್ದ ಮಾವಿನ ಎಲೆಯ ರೆಂಬೆಗಳು, ತೋರಣಕ್ಕೆ ಎಲೆ ಬೇಕಿದ್ದರೂ ಅಲ್ಲೇ ಎಲೆ ಬಿಡಿಸಿಕೊಂಡು ಬರುವ ಬದಲಿಗೆ ರೆಂಬೆಗಳನ್ನೇ ತಂದಿಡುತ್ತಿದ್ದರು. ಅದನ್ನು ಮಾರನೆಯ ದಿವಸ ಬೆಳಿಗ್ಗೆ ಓರಣವಾಗಿ ಕಿತ್ತು ಜೋಡಿಸಿ ತೋರಣ ಕಟ್ಟುವುದು ಮನೆಯ ಹೆಂಗಸರು ಗಂಡಸರು ಸೇರಿ ಮಾಡುತ್ತಿದ್ದ ಕೆಲಸ. ಮನೆಯ ಅಂಗಳದಲ್ಲಿ ದೊಡ್ಡ ರಂಗೋಲಿ.. ವಾರ ಮೊದಲೇ ಮನೆಗೆ ಸುಣ್ಣ ಬಣ್ಣದ ಅಲಂಕಾರ ವಾಗಿರುತ್ತಿತ್ತು. ಹೊಲಗದ್ದೆಯ ಮಾಲೀಕರು ರಾಸುಗಳಿಗೆ ಅಲಂಕಾರ ಮಾಡಿದರೆ ರಾಸುರಹಿತರಾದ ನಾವು ಅವುಗಳನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದೆವು. ಬಾಲ್ಯದ ಮೊದಲ ನೆನಪು ಅಂದರೆ ಎಣ್ಣೆ ಸ್ನಾನ. ಉಗಾದಿ ಹಬ್ಬದ ದಿವಸ ಶುರುವಾಗುವುದೇ ಎಣ್ಣೆ ಸ್ನಾನ ಅಥವಾ ಅಭ್ಯಂಜನದಿಂದ. ಮನೆಯಲ್ಲಿನ ಹಿರಿಯ ಅಜ್ಜನಿಂದ ಹಿಡಿದು ಚಿಕ್ಕ ಕೈಗೂಸಿಗೂ ಅವತ್ತು ಎಣ್ಣೆ ಸ್ನಾನ ಕಡ್ಡಾಯ! ಹಿರಿಯರಿಗೆ ಮೊದಲು ನಿಮ್ಮ ಟರ್ಮ್ ಈ ಸ್ನಾನಕ್ಕೆ. ಸುಡುತ್ತಿರುವ ಬಿಸಿ ನೀರಿನ ಧಾರೆ ನಿಮ್ಮ ಮೇಲೆ ಬೀಳುತ್ತಿರುವಂತೆ ಸೀಗೆಪುಡಿ ನಿಮ್ಮ ಕಣ್ಣು ಹೊಕ್ಕು ಉರಿ ಉಂಟು ಮಾಡುತ್ತಿರುವಂತೆ ನಿಮಗೆ ತಿಳಿಯದ ಹಾಗೆ ಗಂಟಲಿನಿಂದ ಜೋರು ಶಬ್ದದೊಂದಿಗೆ ನೀವು ಅಳುವ ಸದ್ದು ಇಡೀ ವಠಾರಕ್ಕೇ ಕೇಳಿಸುತ್ತಿತ್ತು! ವಠಾರದವರು ಆಗಾಗ್ಗೆ ಬಂದು ಇಣಿಕಿ ಅಚ್ಚಮ್ಮಾ ಬೋರಲು ಹಾಕ್ಕೊಳ್ಳಿ, ಅಚ್ಚಮ್ಮಾ ಎದೆ ಮೇಲೆ ಸೀಗೆಕಾಯಿ ಹಚ್ಚಿ, ಏ ಮುಂಡೇದೇ ಅದ್ಯಾಕೆ ಹಾಗೆ ಗಂಟಲು ಕಿತ್ತು ಹೋಗೋ ಹಾಗೆ ಕೂಕ್ಕೋತೀಯೋ ಅಂತೆಲ್ಲಾ ನಿಮಗೆ ಬೈದು ಸಮಾಧಾನ ಮಾಡುವವರೇ. ಮಿಕ್ಕ ದಿವಸಗಳು

ಬಡ್ಕೋತೀಯೋ, ಬೊಮ್ಮಡ ಹೊಡೀಬೇಡೋ ಅನ್ನುತ್ತಿದ್ದವರು ಇವತ್ತು ಮಾತ್ರಾ ಆ ಶಬ್ದ ಪ್ರಯೋಗಿಸರು! (ಬೆಳೆದ ಮೇಲೆ ಇವೆಲ್ಲಾ ಕೆಟ್ಟ ಶಬ್ದಗಳು, ಹಬ್ಬದ ದಿವಸ ಉಪಯೋಗಿಸುವಂತಹದ್ದು ಅಲ್ಲ ಎಂದು ತಿಳಿಯಿತು....) ಇಡೀ ವಠಾರ ನಿಮಗೆ ಶತೃವಾಗಿ ತೋರುತ್ತಿತ್ತು. ನಂತರ ಬಚ್ಚಲಿನಿಂದ ಆಚೆ ಬಂದು ಕಣ್ಣು ತಿಕ್ಕುತ್ತಾ ಅಮ್ಮನ ಸೆರಗಿನ ಮರೆಯಿಂದ ಹೊರಬಂದು ಅಡಿಗೆಮನೆಯ ಮೂಲೆಯಲ್ಲಿ ಕೂತುಕೊಳ್ಳುತ್ತಿದ್ದಿರಿ. ದೇವರಿಗೆ ನೈವೇದ್ಯ ಮಾಡಲು ಅವತ್ತು ನಿಮ್ಮ ಮನೆಯಲ್ಲಿ ಒಬ್ಬಟ್ಟು! ನೈವೇದ್ಯ ಮಾಡುವ ಮೊದಲು ನೀವು ಅದನ್ನು ತಿನ್ನುವ ಹಾಗಿಲ್ಲ. ಆದರೆ ಅಮ್ಮ ಇದನ್ನೆಲ್ಲಾ ಮೊದಲೇ ಯೋಚಿಸಿರುತ್ತಿದ್ದಳು. ಹಿಂದಿನ ದಿವಸವೇ ನಿಮಗೋಸ್ಕರ ಎಂದೇ ಒಬ್ಬಟ್ಟು ಮಾಡಿ ಅದನ್ನು ಬೇರೆಯದೇ ಡಬರಿಯಲ್ಲಿ ಮುಚ್ಚಿ ಇಟ್ಟಿರುತ್ತಿದ್ದಳು. ಮೂಲೆಯಲ್ಲಿ ನಿಮ್ಮನ್ನೂ ನಿಮ್ಮ ರೀತಿಯೇ ಕಣ್ಣು ಉಜ್ಜುತ್ತಾ ಮೂಗಿನಲ್ಲಿ ಸೊರ ಸೊರ ಎನ್ನುತ್ತಾ ಕೂತಿರುತ್ತಿದ್ದ ಅಕ್ಕ, ತಂಗಿ, ಅಣ್ಣ, ತಮ್ಮ ಎಲ್ಲರಿಗೂ ಡಬರಿಯಿಂದ ಒಬ್ಬಟ್ಟು ತೆಗೆದು, ಬಾಳೆ ಎಲೆ ಹಾಸಿದ ತಟ್ಟೆಯ ಮೇಲೆ ಅದನ್ನು ಹಾಕಿ ನಿಮ್ಮ ಕೈಗಳಿಗೆ ಅವು ಬರುತ್ತಿತ್ತು. ಅದರ ಮೇಲೆ ಮೂಲೆಯ ಜಾಡಿಯಿಂದ ಮೊಗೆದು ಹಾಕುತ್ತಿದ್ದ ಮರಳು ಮರಳಿನ ತುಪ್ಪ.... ನಂತರ ಅದರ ಮೇಲೆ ಸುರಿಯುತ್ತಿದ್ದ ಗಟ್ಟಿ ಹಾಲು ಅದೆಷ್ಟು ಒಬ್ಬಟ್ಟು ಹೊಟ್ಟೆಗೆ ಸೇರುತ್ತಿತ್ತೋ ಲೆಕ್ಕ ಇಟ್ಟವರು ಯಾರು? ಅವತ್ತಿನ ಒಬ್ಬಟ್ಟಿನ ವಿಶೇಷಣವೂ ಬೇರೆ. ಬೇರೆ ದಿವಸಗಳಲ್ಲಿ ಕಾಯಿ ಒಬ್ಬಟ್ಟಾದರೆ ಅವತ್ತು ಬೇಳೆಯ ಒಬ್ಬಟ್ಟು.. ಆಹಾ ಆ ಕಾಲ ಹೇಗಿತ್ತು ಅನಿಸುತ್ತಿದೆಯೇ.

ಇದರ ನಂತರ ಆದರೆ ಆಟಕ್ಕೆ ಅಥವಾ ಮನೆಯಲ್ಲಿ ಅಪ್ಪ ಮಾಡುತ್ತಿದ್ದ ಪೂಜೆ ನೋಡಲು ಕಾಯುತ್ತಿದ್ದಿರಿ. ಮಡಿಪಂಚೆ ಉಟ್ಟ ಅಪ್ಪ ಮೈಗೆಲ್ಲಾ ಮುದ್ರೆ ಒತ್ತಿಕೊಂಡು ಥೇಟ್ ಮಧ್ವಾಚಾರ್ಯರು ಕಂಡ ಹಾಗೇ ಕಾಣಿಸುತ್ತಿದ್ದರು. ದೇವರ ಮನೆಯಲ್ಲಿ ಅವರು ಕೂತು ದೇವರ ಪೆಟ್ಟಿಗೆಯಿಂದ ಸಾಲಿಗ್ರಾಮ ಆಚೆ ತೆಗೆದು ದೇವರುಗಳನ್ನು ವಸ್ತ್ರದಿಂದ ಒರೆಸಿ ಒರೆಸಿ ಮಂತ್ರ ಹೇಳುತ್ತಾ ಹೇಳುತ್ತಾ ಪೂಜೆ ಮಾಡುವುದನ್ನು ನೋಡುವುದೇ ನಿಮಗೊಂದು ಖುಷಿ ಆಗ. ಪಂಚಾಂಗವನ್ನು ಪೀಠದ ಮೇಲಿರಿಸಿ ಅದಕ್ಕೂ ಪೂಜೆ. ಕೊಂಚ ಮಟ್ಟಿನ ಪಂಚಾಂಗ ಶ್ರವಣದ ನಂತರ ಮಿಕ್ಕಿದ್ದು ಸಂಜೆ ಓದಿವಂತ್ರಿ ಈಗ ಊಟಕ್ಕೇಳಿ ಹೊತ್ತಾಯಿತು.... ಅಂತ ಅಮ್ಮ ಊಟಕ್ಕೆಬ್ಬಿಸುತ್ತಿದ್ದಳು. ಪೂಜೆಯ ನಂತರ ಮನೆಯಲ್ಲಿ ಎಲ್ಲರನ್ನೂ ಕರೆದು ಬೆಳ್ಳಿ ಬಟ್ಟಲಿನಿಂದ ಎರಡೇ ಎರಡು ಬೆರಳಿನಿಂದ ತೆಗೆತೆಗೆದು ಬೇವು ಬೆಲ್ಲ ಆರಿಸಿ ಆರಿಸಿ ನೀಡುತ್ತಿದ್ದರು. ನಂತರ ಎಲ್ಲರಿಗೂ ತೀರ್ಥ. ಅದಾದ ನಂತರ ಊಟ. ಊಟದ ವಿಶೇಷವೂ ಬೇರೆ ರೀತಿ. ಈ ಹಬ್ಬಕ್ಕೆ ಎಂದೇ ವಿಶೇಷವಾದ ತಿಂಡಿ ತಿನಿಸು – ಒಬ್ಬಟ್ಟು, ಮಾವಿನ ಕಾಯಿ ಚಿತ್ರಾನ್ನ, ಗಸಗಸೆ ಪಾಯಿಸ, ಆಲೂ ಗೆಡ್ಡೆ ಬಜ್ಜಿ... ಅವತ್ತಿನ ವಿಶೇಷ!

ನಾವು ಬೆಳೆದ ಮೇಲೆ ಮೂಲೆಯಲ್ಲಿನ ರೇಡಿಯೋದಲ್ಲಿ ಈ ದಿವಸ ಮಾತ್ರಾ ಒಂದು ಹಾಡು ಪ್ರಸಾರವಾಗುತ್ತಲೇ ಇತ್ತು – ಯುಗ ಯುಗಾದಿ ಕಳೆದರೂ ಉಗಾದಿ ಮತ್ತೆ ಮತ್ತೆ ಬರುತಿದೆ... ಈ ಹಾಡು! ಈಗಲೂ ಹಾಡಿನ ಗುಂಗು ತಲೆಯಲ್ಲಿ ಹುದುಗಿ ಹೋಗಿದೆ.

# ನೋಸ್ ಬುಕ್

● ಸಿ.ಆರ್. ಸತ್ಯ

ಇತ್ತೀಚೆಗೆ ಸೋಷಿಯಲ್ ಸೈಟ್ ಫೇಸ್‌ಬುಕ್‌ಗೆ ಪೈಪೋಟಿಯಾಗಿ ನಮ್ಮ ಹುಬ್ಬಳ್ಳಿಯ ಐ.ಟಿ. ಪ್ರತಿಭೆ ಗೀರಿಶ್ ಮಾಗುದಾರ್ (23 ವಯಸ್ಸು - ವರ್ಷಕ್ಕೆ 12 ಕೋಟಿ ಸಂಬಳ) ಸ್ಥಾಪಿಸಿದ ನೋಸ್ ಬುಕ್ ಸೈಟು ಈಗ ಎಲ್ಲರಿಗೂ ಫೇವರೆಟ್ ಆಗಿದೆ. ಅದರಲ್ಲಿ ನಡೆದ ಕೆಲವು ಸಂಭಾಷಣೆಯ ತುಣುಕುಗಳನ್ನು ಕೆಳಗೆ ಡೌನ್ ಲೋಡ್ ಮಾಡಿದೀನಿ: ನಿಮಗೆ ಸ್ಯಾಂಪಲ್ ತರಹ ಓದೋದಕ್ಕೆ!

ಪ್ರವೀಣಾ (ಮೆಲ್ ಬೋರ್ನ್): ಹಾಯ್ ಗೈಸ್! ಹೇಗಿದ್ದೀರಾ? ನನ್ನ ಕಡೆ ಇಂದ ಒಂದು ಫೆಂಟಾಸ್ಟಿಕ್ ನ್ಯೂಸ್ ಕಣ್ರೇ. ನಮ್ಮತ್ತೆ ಇಲ್ಲಿಗೆ ವಿಸಿಟಿಂಗ್ ಅಂತ ಬಂದಿದ್ದಾರಲ್ಲಾ - ತುಂಬಾ ಗೊರಕೆ ಹೊಡೀತಾರೇ! ನೆನ್ನೆ ರಾತ್ರಿ ಅವರ ಮೂಗು ಬೊಟ್ಟಿನ ತಿರುಪು ಲೂಸ್ ಇತ್ತು ಅಂತ ಕಾಣುತ್ತೆ. ಒಂದು ಸಲ ಜೋರಾಗಿ ಗೊರಕೆ ಬಂದಾಗ ಮೂಗು ಬೊಟ್ಟೇ ಮೇಲಕ್ಕೆ ಹಾರಿ ಬಿಡ್ತು! ಬಿಲೀವ್ ಮಿ, ವಜ್ರದ್ದು ಕಣ್ರೆ. ದೇವರ ದಯೆಯಿಂದ ಅವರ ಬಾಯಲ್ಲೇ ವಾಪಸ್ ಬಂದು ಬಿದ್ದು ಅವರಿಗೆ ಎಚ್ಚರ ಆಗಿ ಹೋಯ್ತು! ಇವತ್ತು ಬೆಳಗ್ಗೆ ಬ್ರೇಕ್ ಫಾಸ್ಟ್ ಟೇಬಲ್‌ನಲ್ಲಿ ಈ ಕತೆ ಕೇಳ್ತಾ ಭಾರಿ ಮಜಾ ಬಂತು.

**ನೀವೂ ಸೇರ್ಕೋತೀರಾ??**

ಕಾಮಿನಿ (ವಾಷಿಂಗ್ಟನ್): ಟು ಹೆಲ್ ವಿತ್ ಅತ್ತೇಸ್ ಮೂಗು. ನನ್ನ ಗಂಡನ ಮೂಗಿನ ವಿಷಯ ಹೇಳ್ತೀನಿ ಕೇಳು. ಕಳೆದ ನಾಲ್ಕು ದಿನಗಳಿಂದ ಅವನ ಮೂಗಿನ ತುದಿ ಕೆಂಪಾಗಿ ಅದರ ಟೆಂಪರೇಚರ್ರೂ 100 ಡಿಗ್ರೀಸ್ ಅಷ್ಟು ಇತ್ತು. ಇಲ್ಲಿಯ ಸ್ನೋ ಸ್ಟಾರ್ಮ್‌ನಲ್ಲೂ ಬಿಸಿ ಇತ್ತು. ಇವತ್ತು ಬೆಳಿಗ್ಗೆ ನಾರ್ಮಲ್‌ಗೆ ಇಳಿದಿದೆ. ಮನುಷ್ಯ ಸ್ವಲ್ಪ ನಕ್ಕಿದ ಬೇರೆ. ಯಾಕೆ ಗೊತ್ತಾ? ನಾನು ನಾಲ್ಕು ದಿನಗಳು ಸಿಯಾಟಲ್ಗೆ ನಮ್ಮ ಕಂಪೆನಿ ಕಾನ್‌ಫರೆನ್ಸ್‌ಗೆ ಹೋಗಿದ್ದೆ. ಅಡುಗೆ ಮನೆ ಕೆಲಸ, ಮಕ್ಕಳ ಸ್ಕೂಲ್ ಡ್ಯೂಟೀ, ಗಾರ್ಬೇಜ್ ಎಸೆಯೋದೂ ಎಲ್ಲಾ ಅವನ ಮೇಲೇ ಬಿತ್ತಲ್ಲಾ ಅದಕ್ಕೇ!

ಸಂಗೀತಾ (ಬಾಸ್ಟನ್): ಸ್ನೋ ಸ್ಟಾರ್ಮ್ ಅಂದ್ರೆ ಜ್ಞಾಪಕಕ್ಕೆ ಬಂತು. ನನ್ನ ಬಾಸ್‌ಗೆ ಮೂಗು ಉದ್ದ ಕಣ್ರೇ - ಆರಿಂಚು ಹತ್ತತ್ರ - ನಾರ್ವೇ ಇಂದ ಬಂದಿದ್ದಾನೆ. ಅವರೆಲ್ಲರಿಗೂ ಉದ್ದದ ಮೂಗು. ಇಲ್ಲಿ ಮೆಟ್ ವಾರ್ನಿಂಗ್ ಕೊಟ್ಟಿದ್ದರೂ, ಬೆಳಿಗ್ಗೆ ಜಾಗಿಂಗ್ ಮಾಡ್ತೀನೀ ಅಂತ ಹೋಗೀ ಅವನ ಮೂಗಿಗೆ ಫ್ರಾಸ್ಟ್ ಬೈಟ್ ಆಗಿ ಈಗ ಲೀವ್‌ನಲ್ಲಿ ಇದಾನೆ!

ಮೈನ (ಬೀಜಿಂಗ್): ನನ್ನ ಬಾಸ್‌ಗೆ ಅಂತಹ ಪ್ರಾಬ್ಲಮ್ ಬರೋದೋ ಇಲ್ಲಾ ಬಿಡ್ರೇ. ಯಾತಕ್ಕೆ ಗೊತ್ತಾ? ಅವನು ಮಂಗೋಲಿಯನ್! ಈ ಜನಕ್ಕೆ ಮೂಗುಗಳೇ ಇರೋಲ್ಲಾ. ಅಂದ ಹಾಗೆ, ಲೇ ರಾಣೀ, ಸೂಯೆಜ್ ಕೆನಾಲ್‌ನಲ್ಲೂ ಪನಾಮಾ ಕೆನಾಲ್‌ನಲ್ಲೂ ನ್ಯಾವಲ್ ಬ್ಲಾಕೇಡ್ ಆಗಿತ್ತಲ್ಲ, ಈಗ ಹೇಗಿದೆ ಪರಿಸ್ಥಿತಿ...?

ರಾಣಿ (ಫ್ರಾಂಕ್ ಫರ್ಟ್): ಅಯ್ಯೋ, ಹಾರ್ರಿಡ್, ಕಣೇ. ಅದೆಂತಹ ನೆಗಡಿ ಅಂತ್ಯಾ...? ಎರಡು ಕೆನಾಲ್‌ಗಳೂ ಬ್ಲಾಕ್ ಆಗಿ ಒಂದು ವಾರವೇ ಆಗಿತ್ತು. ಇವತ್ತು ಬಲಗಡೇದು ಸ್ವಲ್ಪ ತೆಕ್ಕೊಂಡಿದೆ. ಉಸಿರು ಆಡ್ತಾ ಇದೀನಿ. ಗೈಸ್, ಐ ರಿಯಲೀ ಮಿಸ್ಸ್ ಅಮೃತಾಂಜನ್!

ಆಶಾ (ಸಿಂಗಾಪುರ್): ನಮ್ಮ ಕನ್ನಡ ಸಂಘಕ್ಕೆ ಹಿಂದೂಸ್ತಾನಿ ಗಾಯಕಿ ನವಿಲು ಬಾಯಿ ಅವರನ್ನ ಕರೆಸಿದ್ವಿ. ಸಿಂಗಪೂರದಲ್ಲಿ ಬಂದಿಳಿದ ತಕ್ಷಣವೇ ಅವರಿಗೆ ನೆಗಡಿ ಆಗೋದೇ! ಒಂದು ಕೈಲಿ ಮೂಗು ಮುಚ್ಚಿಕ್ಕೊಂಡು, ಇನ್ನೊಂದು ಕೈಲಿ ತಾಳಾ ಹಾಕ್ತಾ ವಚನದಲ್ಲಿ ನಾಮಾಮೃತ ತುಂಬಿ ಅಂತಾ ಹಾಡು ಹೇಳೋಕ್ಕೆ ಹೊರಟಾಗ, ಈಕೆ ಮೂಗಿನಲ್ಲಿ ಏನೇನು ತುಂಬಿದ್ಯೋ ಅಂತಾ ನಮ್ಮಗಳ ಯೋಚನೆ ಆಗಿತ್ತು....

**ಆಕೆ**
**ನನ್ನ ಗಂಡ ಸ್ವಲ್ಪ ಹನುಮಂತನ ಬುದ್ಧಿಯವರು ಕಣೆ**

**ಈಕೆ**
**ಯಾಕೆ ಹಾಗಂತೀಯ**

**ಆಕೆ**
**ಇನ್ನೇನ್ ಮತ್ತೆ ಹೂ ತಗೊಂಡ್ ಬನ್ನಿ ಅಂದ್ರೆ ಹೂ ಮಾರೋಳ್ನೇ ಕರ್ಕೊಂಡ್ ಬರೋ ಬುದ್ಧಿ ಅವರ್ದು**

ಪಿಂಕಿ (ಪ್ಯಾರಿಸ್): ಯಾ ನೋ ವಾಟ್? ನನ್ನ ಅತ್ತೆ ಮಾವ ಇಲ್ಲಿಗೆ ಬಂದಿದಾರೆ ಕಣ್ರೆ. ನೆನ್ನೆ ಐಫಲ್ ಟವರ್ ಮೇಲಕ್ಕೆ ಕರೆದುಕೊಂಡು ಹೋದ್ವಿ. ಮೇಲಕ್ಕೆ ಹೋಗೋ ಲಿಫ್ಟ್‌ನ ಬಾಗಿಲುಗಳು ಇನ್ನೇನು ಮುಚ್ಚುತ್ವೆ ಅನ್ನೋ ಸಮಯಕ್ಕೆ – ಎಲ್ಲರಿಗೂ ಕೇಳೊ ಹಾಗೇ – ನನ್ನ ಮಗ, ''ಕೇರ್ ಫುಲ್ ಅಜ್ಜಾ. ಹಿಂದೆ ಬನ್ನಿ. ಬಾಗಿಲಲ್ಲಿ ನಿಮ್ಮ ಮೂಗು ಸಿಕ್ಕಿ ಹಾಕಿಕೊಳ್ಳುತ್ತೆ!!'' ಅಂತ ಜೋರಾಗೇ ಕೂಗ್ಬುಟ್ಟ. ದೇವರ ದಯೆಯಿಂದ, ಅಲ್ಲಿದ್ದ ಇನ್ಯಾರಿಗೂ ನಮ್ಮ ಭಾಷೆ ಗೊತ್ತಾಗಲಿಲ್ಲ, ಬದುಕಿ ಕೊಂಡ್ವಿ!

ಡಿಂಪಿ (ಸಾನ್ ಡಿಯಾಗೋ): ಹಾಯ್ ಗೈಸ್! ಇಲ್ಲಿದೊಂದು ನ್ಯೂಸ್ ಕೇಳಿ. ಇಲ್ಲಿ ಒಬ್ಬಳು ಮದುವೆ ಆದ ಮಾರನೇ ದಿನಾನೇ ಡೈವೋರ್ಸ್‌ಗೆ ಪೆಟಿಶನ್ ಮಾಡಿದಳು. ಜಡ್ಜ್ ಏನಾಯ್ತು ಅಂತ ಕೇಳಿದಕ್ಕೆ, ಅವಳು ''ನನ್ನ ಗಂಡನ ಮೂಗು ತುಂಬಾ ಉದ್ದ. ನನಗೆ ಅವನ ಜೊತೆ ಬದುಕೋದಕ್ಕೆ ಸಾಧ್ಯವೇ ಇಲ್ಲಾ'' ಅಂತ ಅಂದಳು. ''ಈ ವಿಷಯ ಮದುವೇಗೆ ಮುಂಚೇನೇ ಡೇಟಿಂಗ್ ಟೈಮ್‌ನಲ್ಲಿ ನಿನಗೆ ತಿಳೀಲಿಲ್ಲವೇ?'' ಅಂತ ಜಡ್ಜ್ ಕೇಳಿದ್ದಕ್ಕೆ, ''ಎಸ್ ಯುವರ್ ಆನರ್, ಗೊತ್ತಿತ್ತು. ಆದರೆ ಅವನು ಮದುವೆಗೆ ಮುಂಚೆ ಪ್ಲಾಸ್ಟಿಕ್ ಸರ್ಜರಿ ಮಾಡ್ಸೊಂಡು ಎರಡು ಇಂಚು ಇಳಿಸ್ತೀನಿ ಅಂತ ಪ್ರಾಮಿಸ್ ಮಾಡಿದ್ದ. ಇವತ್ತು ನೋಡಿದ್ರೆ, ಅವನ ಮೂಗು ಒರಿಜಿನಲ್ ಉದ್ದದಲ್ಲೇ ಇದೆ!'' ಅಂತ ವಾದಿಸಿದಳು. ಅದಕ್ಕೆ ಜಡ್ಜ್ – ಅವಳೂ ಹೆಂಗಸೇ – ನಾನೂ ನಿನ್ನ ತರಹಾನೇ ಜೀವನದಲ್ಲಿ ಮೋಸ ಹೋಗಿದ್ದೀನಿ – ಅಂತ ಅನುಕಂಪ ತೋರಿಸಿ, ಅವಳಿಗೆ ಡೈವೋರ್ಸ್ ಕೊಟ್ಟಿದ್ದೂ ಅಲ್ಲದೆ, ಅವಳಿಗೆ 50,000 ಡಾಲರ್ ಕಾಂಪನ್ಸೇಷನ್ನೂ ಅವಾರ್ಡ್ ಮಾಡಿದ್ಲು. ಗಾಡ್ ಬ್ಲೆಸ್ ಹಿಸ್ ನೋಸ್!

ನೀಲಾ (ನ್ಯೂಜರ್ಸಿ): ಕೇಳ್ರೇ, ಮೊನ್ನೆ ಆದ ಹ್ಯಾಲೋವೀನ್ ಡೇ ದಿನ, ನನ್ನ ಗಂಡನ ಬಾಸ್ ಒಂದು ಅಡಿ ಉದ್ದದ ಪೇಪರ್ ಮೂಗನ್ನ ಸಿಕ್ಕಿಸಿಕೊಂಡು ಪಾರ್ಟೀಲಿ ಓಡಾಡ್ತಿದ್ದ. ನನ್ನ ಮಗಳು ಸುಮ್ಮನೆ ಇರಲಾರದೆ, ಹಾಯ್ ಲಾಂಗ್ ನೋಸ್, ಇಟ್ ಸೂಟ್ಸ್ ಯು ಸೋ ಫೈನ್! ಅಂತ ಜೋರಾಗೇ ಕೂಗ್ಬಿಟ್ಲು ಕಣ್ರೇ. ಗಾಡ್ ನೋಸ್, ನಾಳೆ ಇಂದ ನನ್ನ ಗಂಡ ಬೇರೆ ಕೆಲಸ ಹುಡುಕ್ಬೇಕೋ ಏನೋ!

ಜಲಜಾಕ್ಷಿ (ಬೆಂಗಳೂರು): ಓಕೇ, ಓಕೇ, ಸ್ವಲ್ಪ ಲೋಕಲ್ ನ್ಯೂಸ್ ಇದೆ ಕೇಳಿ. ಬೆಳಗ್ಗೆ ಹೊತ್ತು ನಾನು ವಾಕಿಂಗ್ ಹೋಗೋವಾಗ, ಹೊಯ್ಸಳಾ ವ್ಯಾನ್‌ನಿಂದ ಪೋಲೀಸ್‌ನವರು ಲೌಡ್ ಸ್ಪೀಕರ್‌ನಲ್ಲಿ ಏನು ಹೇಳ್ತಿರ್ತಾರೆ ಗೊತ್ತಾ? ''ಹೆಂಗಸರೇ ಹುಷಾರ್! ಇಲ್ಲಿ ಮೂಗು ಬೊಟ್ಟು ಕಳ್ಳರಿದ್ದಾರೆ. ಚಿನ್ನ, ವಜ್ರದ ಮೂಗುತಿಗಳಿಗೆ ಕೈ ಹಾಕಿ ಎಳೆದಾಗ ಕೆಲವೊಮ್ಮೆ ನಿಮ್ಮ ಮೂಗೇ ಕಳ್ಳರ ಕೈಗೆ ಕಳಚಿಕೊಂಡು ಬರಬಹುದು. ಮೂಗು ಬೊಟ್ಟನ್ನು – ಸಾಧ್ಯವಾದರೆ – ಮೂಗನ್ನೇ ಮನೆಯಲ್ಲಿ ಇಟ್ಟು ಬನ್ನಿ!'' ಅಂತ!

ಡಿಂಪಲ್ (ಚಿಕಾಗೋ): ಸೋ ಕ್ಯೂಟ್! ಐ ಮೀನ್, ಬೆಂಗಳೂರ್ ಪೋಲೀಸ್ನವರು!

ಜಲಜಾಕ್ಷಿ(ಬೆಂಗಳೂರು): ಆಮೇಲೆ, ಬೆಂಗಳೂರಿನಲ್ಲಿ ಇನ್ನೊಂದು ಕ್ರೇಜ್ ಶುರು ಆಗಿದೆ ಕಣ್ರೇ. ಇಲ್ಲೀ ತನಕ ಒಂದೂವರೆ ಲಕ್ಷ ರೂಪಾಯಿಗೆ ಮಂಡಿ ರೀಪ್ಲೇಸ್‌ಮೆಂಟ್ ಅಂತ ಮಾಡ್ತಾ ಇದ್ರಲ್ಲಾ, ಅದೇ ರೀತಿ ಈಗ ಕೆಲವರು ಅರ್ಧ ಲಕ್ಷಕ್ಕೆ ಮೂಗ್ ರೀಪ್ಲೇಸ್ ಮೆಂಟ್ ಅಂತ ಶುರು ಮಾಡ್ಕೊಂಡಿದ್ದಾರೆ. ಮೂಗಿನ ಶೇಪ್ ಚೆನ್ನಾಗಿ ಇಲ್ಲದೇ ಇದ್ದರೆ, ಈಗ ಒಂದೇ ದಿನದಲ್ಲಿ ಮೂಗನ್ನ ಬದಲಾಯಿಸಬಹುದು!

ಡಿಂಪಲ್ (ಚಿಕಾಗೋ): ಸೋ ಕ್ಯೂಟ್! ಬಟ್, ಹುಶಾರಾಗಿರೀ! ಅವರಲ್ಲಿ ಕೆಲವರು ಚೈನೀಸ್ ಮೇಕ್ ಡೂಪ್ಲಿಕೇಟ್ ಮೂಗುಗಳನ್ನು ಇಟ್ಟಿರ್ತಾರಂತೆ. ನಮ್ಮ ಅತ್ತೆ ಇ-ಮೈಲ್ ಮಾಡಿದ್ರು. ಅವರು ಅರ್ಧಲಕ್ಷ ತೆತ್ತು ಬೇರೇ ಮೂಗನ್ನ ಹಾಕಿಸ್ಕೊಂಡು ಬಂದ ದಿನವೇ ನೆಗಡಿ ಬಂತು... ಜೋರಾಗಿ ಸೀನಿದಾಗ ಮೂಗೇ ಕೈಗೆ ಬಂತು! ಫಾರ್ಚುನೇಟ್ ಕಣೇ, ಅವರ ವಾರಂಟಿ ಕಾರ್ಡ್ ಇಟ್ಕೊಂಡಿದ್ದರು. ಫ್ರೀ ಆಗೇ ಬೇರೇ ಮೂಗನ್ನ ಹಾಕಿಸ್ಕೊಂಡರು. ಏನೋ ಸ್ವಲ್ಪ ಫಿಟ್ಟಿಂಗ್ ಚಾರ್ಜ್ ಕೊಟ್ರಂತೆ, ಅಷ್ಟೆ. ಏನೇ ಹೇಳು, ಈಗ ಅವರ ಮುಖ ಸ್ವಲ್ಪ ನೋಡೋ ಹಾಗೆ ಆಯ್ತು ಕಣೆ.

ಕಾಂತಿ (ಮಾಂಟ್ರೇಲ್): ಏನೇ ಜಲಜಾಕ್ಷಿ, ಇತ್ತೀಚೆಗೆ ಇಂಡಿಯಾ ಸುದ್ದಿ ಅಂದರೆ ಬರೀ ರೇಪ್, ಮಚ್ಚು ಲಾಂಗು ಇದೇ ಆಗಿಹೋಗಿದ್ಯಲ್ಲೇ?... ಸೋ ಬ್ಯಾಡ್!

ಜಲಜಾಕ್ಷಿ (ಬೆಂಗಳೂರು): ಏನ್ಮಾಡೋದು? ಮೊನ್ನೆ ಪದ್ಮನಾಭನಗರದಲ್ಲಿ ಯಾವನೋ ಹೆಂಡ್ತಿ ಮೂಗನ್ನೇ ಕತ್ತರಿಸಿಬಿಟ್ಟ ಕಣೇ. ಯಾತಕ್ಕೆ ಅಂತ ಪೋಲೀಸ್ ಕೇಳಿದ್ದಕ್ಕೆ, ''ಮತ್ತೆ ಇನ್ನೇನು ಮಾಡಲಿ? ನಾನು ಏನು ವಿಷಯ ಮಾತಾಡಿದ್ರೂ, ಮಧ್ಯ ಮೂಗು ಹಾಕ್ಕೊಂಡು ಬರ್ತಾಳೆ, ಅದಕ್ಕೇ'' ಅಂತ ಉತ್ತರ ಕೊಟ್ಟ. ಇದಕ್ಕೆ ಪೋಲೀಸ್ ತಾನೇ ಏನು ಮಾಡೋಕ್ಕೆ ಆಗುತ್ತೆ ಹೇಳು. ಅವಳದೂ ತಪ್ಪಿದೆ ಅನ್ನಿಸುತ್ತೆ.

ರೂಪಿ (ಪಾಲ್ ಆಲ್ಟೋ): ಹಲೋ ಗರ್ಲ್ಸ್! ನಿಮಗೆಲ್ಲಾ ಇನ್ನೊಂದು ಗುಡ್ ನ್ಯೂಸ್. ಇಲ್ಲಿ, ಹಾರ್ವರ್ಡ್ ರಿಸರ್ಚ್ ಸೆಂಟರ್‌ನಲ್ಲಿ ಒಬ್ಬ ಈ.ಎನ್.ಟಿ. ಸರ್ಜನ್ ಗಂಡಸರನ್ನು ಕಂಟ್ರೋಲ್ ಮಾಡೋಕ್ಕೆ, ಒಂದು ಇನ್ವಿಸಿಬಲ್ ಮೂಗುದಾರಾನ ಕಂಡುಹಿಡಿದಿದ್ದಾನಂತೆ. ನಿಮ್ಮೂರಿನಲ್ಲಿ ಎಮ್ಮೆ ಹಸುಗಳಿಗೆ ಅವುಗಳು ಹೋಗೋ ದಿಕ್ಕುಗಳನ್ನ ಕಂಟ್ರೋಲ್ ಮಾಡೋಕ್ಕೆ ಹಾಕಲ್ವೇ? ಅದೇ ತರಹ! ಹೆಂಡ್ತೀನೂ ಈಗ ಪಾರ್ಟಿ ಅಂತಹ ಟೈಮ್‌ನಲ್ಲಿ ಯಾರಿಗೂ ತಿಳಿಯದ ಹಾಗೆ ಈ ದಾರಾನ ಗಂಡನ ಮೂಗಿಗೆ ಕಟ್ಟಿ, ಅವನು ಯಾರ ಕಡೆ ನೋಡ್ತಾನೆ, ಯಾವ ದಿಕ್ಕಿಗೆ ಹೋಗ್ತಾನೆ ಅನ್ನೋದೆಲ್ಲಾ ಕಂಟ್ರೋಲ್ ಮಾಡಬಹುದಂತೆ...

ಜಲಜಾಕ್ಷಿ (ಬೆಂಗಳೂರು): ಲೇ, ಲೇ, ರೂಪಿ, ಪ್ಲೀಸ್, ಅದು ವಾಲ್ಮಾರ್ಟ್‌ನಲ್ಲಿ ಸೇಲ್‌ಗೆ ಬಂದರೆ, ನನಗೊಂದು ಪೀಸ್ ಕೊಂಡ್ಕೊಂಡು ಯಾರಾದರೂ ಈ ಕಡೆ ಬಂದ್ರೆ ನನಗೆ ಕಳಿಸಿಕೊಡೆ. ಆ ಕಡೆ ಹೋಗೋರ ಹತ್ತಿರ, ನಾನು ಡಾಲರ್‌ನಲ್ಲೇ ಪೇಮೆಂಟ್ ಕಳಿಸ್ತೀನಿ...

ರೂಪಿ (ಪಾಲ್ ಆಲ್ಟೋ): ಓಕೇ! ಲೆಟ್ ಅಸ್ ಸೈನ್ ಆಫ್ ಗರ್ಲ್ಸ್!! ನೆಕ್ಸ್ಟ್ ಟೈಮ್ ದೆನ್!! ಬೈ, ಬೈ!!!

## ಚಿಂತೆ

ಒಬ್ಬ ವ್ಯಕ್ತಿ ಯಾವಾಗಲೂ ಚಿಂತೆ ಮಾಡಿಕೊಳ್ಳುತ್ತಿದ್ದ. ಅನುಗಾಲವೂ ಚಿಂತೆ ಈ ಜೀವಕೆ ಎಂಬುದು ಈತನನ್ನು ಕುರಿತೇ ರಚಿಸಲಾಗಿದೆ ಎಂದು ಹೇಳಬಹುದಿತ್ತು. ಒಂದು ದಿನ ಅವನು ಈ ಚಿಂತೆ ಮಾಡಲು ಒಬ್ಬನನ್ನು ನೇಮಿಸಿದರೆ ಹೇಗೆ ಎಂದು ಯೋಚಿಸಿ (ಚಿಂತಿಸಿ?) ಅದಕ್ಕಾಗಿ ಜಾಹೀರಾತು ನೀಡಿದ. ಭಾರಿ ಪಗಾರ, ಮನೆ, ಕಾರ್ ಎಲ್ಲವೂ ಕೊಡುತ್ತೇನೆ ಎಂದು ಅದರಲ್ಲಿ ಬರೆದಿತ್ತು.

ಸಂದರ್ಶನಕ್ಕೆ ಬಂದ ವ್ಯಕ್ತಿ ಸಾರ್, ಇಷ್ಟೊಂದು ಸಂಬಳ ಸವಲತ್ತು ಹೇಗೆ ಕೊಡಲು ಸಾಧ್ಯ? ಎಂದು ಕೇಳಿದ.

'ಅದು ನಿನ್ನ ಚಿಂತೆ ಇನ್ನು ಮುಂದೆ ಎಂದ' ಇವನು.

# ನೈಟಿ ಮತ್ತು ನೊಬೆಲ್

• ಪ್ರಶಾಂತ್ ಆಡೂರ್

**ಈ** ನೈಟಿ ಕಂಡ ಹಿಡದವಂಗ ನೊಬೆಲ್ ಬಹುಮಾನ ಯಾಕ ಕೊಡಬಾರದು ಅಂತ ಅನಸಲಿಕತ್ತದ. ನಾ ಹೇಳಿದ್ದ ಹೆಣ್ಣ ಮಕ್ಕಳದ ನೈಟಿ ಮತ್ತು ಗಂಡಸರದ ನೈಂಟಿ ಅಲ್ಲಾ. ಹಂಗ ನೈಂಟಿ (ಅಲ್ಕೋಹಾಲ) ಕಂಡ ಹಿಡದಂವಾ ವಿಜ್ಞಾನಿ, ಅವಂಗ ನೊಬೆಲ್ ಸಿಕ್ಕ ಸಿಕ್ಕಿರತದ ಆ ಮಾತ ಬ್ಯಾರೆ, ಆದರ ನೈಟಿ ಕಂಡ ಹಿಡದಂವಾ ಅವನಕಿಂತಾ ಮಹಾಜ್ಞಾನಿ ಅಂತ ನನಗ ಅನಸ್ತದ. ಅಲ್ಲಾ ಇವತ್ತ ನಮ್ಮೆಲ್ಲಾರ ಮನ್ಯಾಗಿನ ಹೆಣ್ಣ ಮಕ್ಕಳ ದೇಹ ಮತ್ತ ಜೀವನದಾಗ ಹಾಸು ಹೊಕ್ಕಿರುವ ಈ ನೈಟಿ ಕಂಡ ಹಿಡಿದಂವಂಗ ನೊಬೆಲ್ ಕೊಡಲಿಲ್ಲಾಂದ್ರ ಹೆಂಗ ಅಂತೇನಿ. ಇದರಂಥಾ ಅಗದಿ ಕಂಫಾರ್ಟೇಬಲ್ ಮತ್ತ ಮಲ್ಟಿ ಪರ್ಪಸ್ ಗಾರ್ಮೆಂಟ ನಾ ಎಲ್ಲೂ ಕೇಳಿಲ್ಲಾ, ನೋಡಿಲ್ಲಾ.

**ನೈಂಟಿ ಅಂತ ಕಂಫರ್ಟಬಲ್ ಮತ್ತು ಮಲ್ಟಿ ಪರ್ಪಸ್ ಗಾರ್ಮೆಂಟ್ ಬೇರೊಂದಿದೆಯೇ?**

ಅಲ್ಲಾ, ಈಗ ಎಲ್ಲಾ ಬಿಟ್ಟ ಒಮ್ಮಿಂದೊಮ್ಮೆಲೆ ನನಗ ನೈಟಿ ಯಾಕ ನೆನಪಾತಪಾ ಅಂದರ, ನಿನ್ನೆ ಸಂಜಿ ಮುಂದ ನಾ ಸಾಕಾಗಿ ಆಫೀಸದಿಂದ ಮನಿಗೆ ಬರೋದ ತಡಾ, ನನ್ನ ಹೆಂಡತಿ ತಯಾರಾಗಿ ಗೇಟದಾಗ ನಿಂತಿದ್ಲು.

''ಯಾಕವಾ, ಎಲ್ಲಿಗ್ಗೊ ಹೊಂಟದಲಾ ಸವಾರಿ?'' ಅಂದೆ.

''ನೀವ ಬರೋ ಹಾದಿನ ಕಾಯ್ಕೋತ ನಿಂತಿದ್ದೆ, ಲಗೂನ ಕೈ ಕಾಲ ತೊಳ್ಕೊಂಡ ಬರ್ರಿ, ದುರ್ಗದ ಬೈಲಗೆ ಹೋಗಿ ನೈಟಿ ತೊಗೊಂಡ ಬರೋಣು'' ಅಂದ್ಲು.

ಹಕ್ಕ್, ಒಂದ ವಾರಾನ ಗಟ್ಟಲೇ ದುಡದ ಸಾಕಾಗೆದ, ಇವತ್ತ ಹೆಂಗಿದ್ರೂ ಶನಿವಾರ, ಒಂದ ನೈಂಟಿ ಹೊಡದ ಮನ್ಯಾಗ ಆರಾಮ ಇದ್ರಾತು ಅಂದ್ರ ಇಕೆ ಎಲ್ಲಿದ ಹೊತ್ತಿಲ್ಲದ ಹೊತ್ತಿನಾಗ ನೈಟಿ ತಂದಳಲೇ ಅಂತ ನಾ ತಲಿಕೆಟ್ಟ ''ನೈಟಿ ಇಲ್ಲಾ ಗಿಟಿ ಇಲ್ಲಾ, ನಂಗ ಸಾಕಾಗೇದ ಹೋಗಲೇ'' ಅಂದೆ. ಆಕಿಗ ನಾ ಹಂಗ ಅಂದಿದ್ದ ಕೇಳಿ ಪಿತ್ತ ನೆತ್ತಿಗೇರತ ಕಾಣತದ ''ಲಗ್ನ ಆದ ಹೊಸ್ತಾಗಿ ನಂಗ ವರ್ಷಾ ಎರೆಡೆರಡ ನೈಟಿ ಕೊಡಸ್ತೇನಿ ಅಂದಿದ್ರಿ, ಈಗ ನೋಡಿದ್ರ ಒಂದ ನೈಟಿಗೂ ಗತಿ ಇಲ್ಲದಂಗ ಆಗೇದ'' ಅಂತ ಬಾಗಲದಾಗ ನಿಂತ ಊರ ಮಂದಿಗೆ ಕೇಳೊ ಹಂಗ ಒದರಲಿಕತ್ತಳು.

ನಾ ''ಲೇ, ನಿನ್ನೌನ, ನೀ ಒಳಗ ಬಂದ ಬೇಕಾರ ಇದ್ದದ್ದ ನೈಟಿನೂ ಹರಕೊಂಡ ಒದರ. ರಸ್ತೆದಾಗ ನಿಂತ ಒದರಿ ನನ್ನ ಮರ್ಯಾದಿ ಕಳಿಬ್ಯಾಡಾ'' ಅಂತ ಆಕಿನ್ನ ಒಳಗ ಜಕ್ಕೊಂಡ ಹೋದೆ.

ನನ್ನ ಹೆಂಡತಿಗೆ ನೈಟಿದ ಭಾಳ ಹುಚ್ಚರಿಪಾ, ಅಕಿಗೆ ಮನ್ಯಾಗ ಹಾಕ್ಕೊಳ್ಳಿಕ್ಕೆ ಒಂದ, ರಾತ್ರಿ ಹಾಕ್ಕೊಂಡ ಕಳಿಲಿಕ್ಕೆ ಒಂದ, ಹಂಗ ಒಣ್ಯಾಗ ಹಾಲ ತರಲಿಕ್ಕೆ ಬ್ಯಾರೆ, ಒಂದ ಚೂರ ದೂರ ಹೋಗಿ ಅಂಗಡ್ಯಾಗಿಂದ ಸಣ್ಣ-ಪುಟ್ಟ ಸಾಮಾನ ತರಲಿಕ್ಕೆ ಒಂದ, ಊರಿಗೆ-ಕೇರಿಗೆ ಹೋದರ ಬ್ಯಾರೆ ನೈಟಿ. ಹಿಂಗ ಒಟ್ಟ ಅಕಿಗೆ ಒಂದ ನಾಲ್ಕ ಐದ ಟೈಪ್ ನೈಟಿ ಬೇಕ. ಒಂದ ಮಾತನಾಗ ಹೇಳಬೇಕ ಅಂದರ ಅಕಿ ಇಡಿ ಜೀವನಾನ ನೈಟಿ ಮ್ಯಾಲೆ ಕಳಿಬೇಕ ಅನ್ನೊ ವಿಚಾರದೊಕಿ. ಇನ್ನ ಹಂತಾಕಿಗೆ ಎಷ್ಟ ನೈಟಿ ಕೊಡಸಿದರು ಕಡಮಿನ ಬಿಡ್ರಿ. ಅಷ್ಟರಾಗ ಮುಸರಿ ತಿಕ್ಕಲಿಕ್ಕೆ, ಅರಬಿ ಒಗಿಲಿಕ್ಕೆ ಬ್ಯಾರೆ ನೈಟಿನ ಮತ್ತ, ಆ ನೈಟಿ ಅಂತೂ ಇಷ್ಟ ಖಮ್ಮಗ ಇರ್ತದ ಅಲಾ! ಅಯ್ಯಯ್ಯ... ಹೇಳೊ ಹಂಗ ಇಲ್ಲಾ.

ಮೊನ್ನೆ ಒಂದ ಸರತೆ ನಮ್ಮ ಮನಿಗೆ ಬಂದವರ ಒಬ್ಬರು ಹಿತ್ತಲದಾಗ ಹಣಿಕಿ ಹಾಕಿ, ನನ್ನ ಹೆಂಡತಿ ನೈಟಿ ಮ್ಯಾಲೆ ಭಾಂಡೆ ತಿಕ್ಕೋತ ಕೂತದ್ದ ನೋಡಿದರು. ಅವರು ಅಕಿ ನೈಟಿ ಹಣೇಬರಹ ನೋಡಿ ಅಕಿನ್ನ ಗೊತ್ತ ಹಿಡಿಲಿಲ್ಲಾ, ಒಳಗ ಬಂದ ನಮ್ಮವಗ ''ಯಾಕ ಕೆಲಸದೊಕಿ ಭಾಳ ಲೇಟಾಗಿ ಬರ್ತಾಳ ಏನ್ ನಿಮ್ಮ ಮನಿಗೆ'' ಅಂತ ಅಂದ್ರು, ಏನ್ಮಾಡ್ತೀರಿ? ಇದ ಅಕಿ ಹಾಕ್ಕೊಂಡಿದ್ದ ನೈಟಿ ಪ್ರಭಾವ.

ಆದರೂ ಏನ ಅನ್ನರಿ ಇದರಂತಾ ಮೋಸ್ಟ್ ಕಂಫಾರ್ಟೇಬಲ್ ಗಾರ್ಮೆಂಟ ಹೆಣ್ಣ ಮಕ್ಕಳಿಗೆ ಮತ್ತೊಂದ ಇಲ್ಲಾ. ನೀವ ಏನ ಅನ್ರಿ ಈ ನೈಟಿ ಕಂಡ ಹಿಡದದ್ದ ನಮ್ಮ ಹೆಣ್ಣಮಕ್ಕಳಿಗೆ ಭಾರಿ ಅನುಕೂಲ ಆಗೇದ. ಹಂಗ ನೊಬೆಲ್ ಬಹುಮಾನ ತೊಗೊಬೇಕು ಅಂದರ ಯು ಮಸ್ಟ್ ಮೇಕ್ ಆ್ಯನ್ ಇಂಪೋರ್ಟೆಂಟ್ ಕಾಂಟ್ರಿಬ್ಯೂಷನ್ ಇನ್ ದ ಫೀಲ್ಡ್ ಆಫ್ ಕೆಮಿಸ್ಟ್ರಿ, ಫಿಸಿಕ್ಸ್, ಲಿಟರೇಚರ್, ಪೀಸ್ ಆಂಡ್ ಫಿಸಿಯೋಲಜಿ ಆರ್ ಮೆಡಿಸಿನ್ ಅಂತ ಹೇಳ್ತಾರ, ಇದಕ್ಕ ಇನ್ ದ ಫೀಲ್ಡ್ ಆಫ್ ವುಮನ್ ಒಂದ ಜೋಡಸಿ ಈ ನೈಟಿ ಹೆಣ್ಣ ಮಕ್ಕಳ ಫೀಲ್ಡ್ ಒಳಗ ಭಾಳ ಇಂಪಾರ್ಟೇಂಟ ಕಾಂಟ್ರೇಬ್ಯುಶನ್ ಮಾಡೆದ ಅಂತ ಇದನ್ನ ಕಂಡ ಹಿಡದವರಿಗೆ ಹುಡುಕಿ ಹಿಡದ ನೊಬೆಲ್ ಕೊಡಲೇಬೇಕು ಅನ್ನೋದ ನನ್ನ ವಿಚಾರ.

ಹಂಗರ ಈ ನೈಟಿ ಕಂಡ ಹಿಡದವರರ ಯಾರು ಅಂತ ನಾ ಮೊನ್ನೆ ಎಷ್ಟ ಗೂಗಲ್ ಸರ್ಚ್ ಮಾಡಿದರು ಇದರ ಬಗ್ಗೆ ಮಾಹಿತಿ ಸಿಗಲಿಲ್ಲಾ. ಯಾಕಂದರ ನಮ್ಮ ಹೆಣ್ಣಮಕ್ಕಳ ಎಷ್ಟ ಪುರತಾನವಾದವರಲಾ, ಅಷ್ಟ ನೈಟಿನೂ ಪುರತಾನವಾದದ್ದು. ನಂಗ ಆಮ್ಯಾಲೆ ಅನಸಲಿಕತ್ತು ಸುಮ್ಮನ 'ಈ ನೈಟಿ ಕಂಡ ಹಿಡದವರಿಗೆ ಕಂಡ ಹಿಡದು ನೊಬೆಲ್ ಕೊಡೊದಕಿಂತಾ, ಈ ನೈಟಿ ಒಳಗ ಒಂದೊಂದ ಕೆಲಸಕ್ಕ ಒಂದಂದ ಟೈಪ್ ನೈಟಿ ಅಂತ ಕಂಡ ಹಿಡದ ನನ್ನ ಹೆಂಡತಿಗೆರ ಯಾವದರ ಅವಾರ್ಡ್ ಕೊಡಬೇಕು ಅಂತ.

ಹಿಂಗಾಗಿ ಡಿಸೆಂಬರ್ ಹತ್ತ, ನೊಬೆಲ್ ಬಹುಮಾನ ವಿತರಣಾ ಸಮಾರಂಭ. ಜಗತ್ತಿನಾಗ ಬ್ಯಾರೆ ಬ್ಯಾರೆ ಕ್ಷೇತ್ರದಾಗ ಸಾಧನೆ ಮಾಡಿವರಿಗೆಲ್ಲಾ ನೊಬೆಲ್ ಕೊಡ್ತಾರ. ನಾನೂ ನನ್ನ ಹೆಂಡತಿಗೆ ಅರಿಸಿನ ಕುಂಕುಮ ಹಚ್ಚಿ ಒಂದ ಜೋಡಿ ನೈಟಿ ಕೊಡಬೇಕು ಅಂತ ಮಾಡೇನಿ. ಯಾಕಂದರ ಈ ಹೆಣ್ಣ ಮಕ್ಕಳಿಗೆ ನೈಟಿ ನೊಬೆಲನಷ್ಟ ಅಮೂಲ್ಯವಾದ ಪುರಸ್ಕಾರ ಅಂತ ನನಗೆ ಗ್ಯಾರಂಟಿ ಅದ.

# ಸಂಗೀತ ಮತ್ತು ಹಾಸ್ಯ

• ಕೃಷ್ಣ ಸುಬ್ಬರಾವ್

ಎಲ್ಲರನ್ನು ರಂಜಿಸುವ, ತೃಪ್ತಿಕೊಡುವ ಆರೋಗ್ಯ ಹೆಚ್ಚಿಸುವ ಶಕ್ತಿ ಸಂಗೀತಕ್ಕೆ ಹಾಗು ಹಾಸ್ಯಕ್ಕಿದೆ. ಮನಸ್ಸಿಗೆ ಮುದ, ನೆಮ್ಮದಿ, ಶಾಂತಿ, ಹುಮ್ಮಸ್ಸು, ಉತ್ಸಾಹ ಬಯಸುವರೆಲ್ಲರು ಎದುರು ನೋಡುವುದು ಒಳ್ಳೆಯ ಸಂಗೀತ ಮತ್ತು ಒಳ್ಳೆಯ ಹಾಸ್ಯ. ಹಾಸ್ಯ ನಮ್ಮ ಮಾತಿನ ಶೃತಿಯಾಗಬೇಕು. ಆಲಾಪನೆಯಾಗಲಿ, ಕೃತಿಯಾಗಲಿ, ಸ್ವರ ಪ್ರಸ್ತಾರವಾಗಲಿ ಎಲ್ಲದರಲ್ಲೂ ಇರಬೇಕು. ಆದರೆ ಹಿನ್ನಲೆಯಲ್ಲಿ ಇರಬೇಕು ಇರದಂತೆ ಇರಬೇಕು.

ಅನೇಕ ಪ್ರಖ್ಯಾತ ಸಂಗೀತಗಾರರಲ್ಲಿ ಅದ್ಭುತ ಹಾಸ್ಯಪ್ರಜ್ಞೆ ಇತ್ತು. ಅನೇಕ ಸನ್ನಿವೇಶಗಳಲ್ಲಿ, ಸಂಗೀತ ಕಚೇರಿಗಳಲ್ಲಿ ಅದನ್ನು ಸವಿಯುವ ಭಾಗ್ಯದಕ್ಕಿತು. ಅಂತಹ ಕೆಲವು ಸಂದರ್ಭಗಳನ್ನು ಸವಿಯೋಣಾ, ಬನ್ನಿ.

ಸಂಗೀತ ಸಭಾಗಳನ್ನು ನಡೆಸುವ ಕಾರ್ಯದರ್ಶಿಯೊಬ್ಬರಿಗೆ ಸಂಸ್ಥೆ ನಡೆಸುವ ಜವಾಬ್ದಾರಿ ಬಿತ್ತು. ಸಂಗೀತಾಸಕ್ತರಿಗೇನೂ ಕೊರತೆಯಿಲ್ಲದಿದ್ದರೂ ಆರ್ಥಿಕ ಮುಗ್ಗಟ್ಟು ಎಲ್ಲರೂ ಎದುರಿಸಬೇಕಾಗಿದ್ದ ಕಾಲ. ಈಗಿನ ಕಾಲದ ಹಾಗೆ ಧಾರಾಳ ಮನಸ್ಸಿನ ಪ್ರಾಯೋಜಕರು ಸಿಗುತ್ತಿರಲಿಲ್ಲ. ಹೀಗಾಗಿ ಒಬ್ಬ ಹಿಂದೂಸ್ತಾನಿ ವಿದ್ವಾಂಸರ ಬಳಿ ಬಂದು ''ನಿಮ್ಮ ಗಾಯನ ಏರ್ಪಡಿಸುವ ಅದಮ್ಯ ಆಸೆ ನಮ್ಮದು ಆದರೆ ನಮ್ಮದು ಬಡಸಂಸ್ಥೆ, ಇತ್ತಿಚೆಗಷ್ಟೆ ಅಸ್ತಿತ್ವಕ್ಕೆ ಬಂದಿದೆ. ತಮ್ಮಂಥ ವಿದ್ವಾಂಸರ ಉದಾರ ಪ್ರೋತ್ಸಾಹದಿಂದ ಬೆಳೆದು ಬಾಳಬೇಕಾಗಿದೆ...'' ಎಂದು ಪೀಠಿಕೆ ಹಾಕಿದರು. ಅದಕ್ಕೆ ಉತ್ತರವಾಗಿ ''ಸುತ್ತಿಬಳಸಿ ಆಲಾಪನೆ ಮಾಡದೆ ನೇರವಾಗಿ ವಿಷಯಕ್ಕೆ ಬನ್ನಿ. ಒಟ್ಟಿನಲ್ಲಿ ನನ್ನಿಂದ 'ಭೂಪ್' ಕಚೇರಿಯೊಂದು ಆಗಬೇಕು ಅಂತಿರಾ?'' ಎಂದು ಕೇಳಿದರು. ಕಾರ್ಯದರ್ಶಿಗೆ ಅರ್ಥವಾಗಲಿಲ್ಲ ''ಅಂದರೆ?'' ಎಂದು ಪ್ರಶ್ನಿಸಿದರು.

'ಭೂಪ್' ರಾಗದ ಹೆಸರು ಕೇಳಿರಬೇಕಲ್ಲವೆ. ಅದರಲ್ಲಿ ಮಧ್ಯಮ ಮತ್ತು ನಿಷಾದ ಅಂದರೆ 'ಮ' ಮತ್ತು 'ನಿ' ಸ್ವರಗಳು ವರ್ಜ್ಯ. ಹೀಗಾಗಿ 'ಭೂಪ್' ರಾಗದಲ್ಲಿ 'ಮ,ನಿ' ಮನಿ ಇರೊಲ್ಲ, ಆಯ್ತು ಬರ್ತೀನಿ ಎಂದರಂತೆ ಗವಾಯಿಗಳು.

ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಒಬ್ಬರು ಆನಂದ ಭೈರವಿ ರಾಗದ ಕೀರ್ತನೆಯಲ್ಲಿ ''ತ್ಯಾಗರಾಜಯೋಗ ವೈಭವಂ, ರಾಜಯೋಗ ವೈಭವಂ, ಯೋಗ ವೈಭವಂ ಭವಂ, ವಂ ಎಂಬುದಾಗಿ ಹಾಡುತ್ತ ಚಪ್ಪಾಳೆ ಗಿಟ್ಟಿಸಿಕೊಂಡರಂತೆ. ಆಗ ಟೈಗರ್ ವಂದಾಚಾರ್ಯರು (ಸುಪ್ರಸಿದ್ಧ ಗಾಯಕರು) ವಂದನಾರ್ಪಣೆ ಮಾಡುವಾಗ ''ನಾನು ಹೇಳುವುದೇನಿದೆ ಇದು ಒಳ್ಳೆ ಸಂಗೀತ ಕೇಳಿದ್ದೀರಿ ನಿಮ್ಮ ಪರವಾಗಿ ಕಲಾವಿದರಿಗೆ ನಮಸ್ಕಾರಂ, ಸ್ಕಾರಂ, ರಂ... ಎಂದು ತಾವು ಮೊದಲಿನ ಒಂದೊಂದು ಅಕ್ಷರವನ್ನು ಬಿಟ್ಟು ಅಕ್ಷರ ಚಮತ್ಕಾರ ತೋರಿಸಿ ಇನ್ನೂ ಹೆಚ್ಚಿನ ಚಪ್ಪಾಳೆ ಗಿಟ್ಟಿಸಿಕೊಂಡರಂತೆ.''

ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್‌ಗೆ (ನಾಲ್ವಡಿ) ಒಮ್ಮೆ ಒಂದು ಒಳ್ಳೆ ಆಲೋಚನೆ ಬಂದಿತು. ಸಂಗೀತ ವಿದ್ವಾಂಸರಿಗೆ ಸಂಗೀತ ಬಿಟ್ಟರೆ ಬೇರೆ ಪ್ರಪಂಚವೇ ಇಲ್ಲ. ಬೇರೆ ಬೇರೆ ವಿಷಯಗಳಲ್ಲಿ ಆಸಕ್ತಿ ಉತ್ಸಾಹಗಳನ್ನು ಮೂಡಿಸಬೇಕೆಂದು ನಿರ್ಧಾರ ಮಾಡಿ ದರ್ಬಾರ್‌ಭಕ್ಷಿ ಸಹಾಯಕರಾಗಿದ್ದ ಅನಂತಸ್ವಾಮಿಯವರನ್ನು ಕರೆಸಿ ''ನೋಡಿ ಈ ಸಂಗೀತಗಾರರನ್ನು ಎರಡು ಟೀಮ್ ಮಾಡಿ ಒಂದು ಫುಟ್‌ಬಾಲ್ ಪಂದ್ಯವನ್ನು ಏರ್ಪಡಿಸು'' ಎಂದು ರಾಜಾಜ್ಞೆ ಮಾಡಿದರಂತೆ. ಅದರಂತೆ ಪಂದ್ಯ ಏರ್ಪಾಡಾಯಿತು. ಆಟವಾಡುತ್ತಿದ್ದಾಗ ಒಬ್ಬ ಸಂಗೀತ ವಿದ್ವಾಂಸರು ''ಅಲ್ಲ ಮಹಾರಾಜರಿಗೆ ಏನು ದರಿದ್ರ ಬಂದಿದೆ ಇಷ್ಟೊಂದು ಜನಕ್ಕೆ ಒಂದೇ ಚೆಂಡನ್ನು ಕೊಟ್ಟು ನಮ್ಮನಮ್ಮಲ್ಲೇ ಜಗಳವಾಡುವ ಹಾಗೆ ಮಾಡಿದ್ದಾರೆ, ಇನ್ನೊಂದೆರಡು ಚೆಂಡು ಕೊಡುವುದಕ್ಕೆ ಆಗುವುದಿಲ್ಲವೆ?'' ಎಂದು ಕೇಳಿದರಂತೆ.

ಪಿಟೀಲು ಚೌಡಯ್ಯನವರು ಒಮ್ಮೆ ತಮ್ಮ ರೆಕಾರ್ಡಿಂಗ್ ಮುಗಿಸಿ ಮೈಸೂರು ಆಕಾಶವಾಣಿಯಿಂದ ಹೊರಗೆ ಬರುತ್ತಿದ್ದರಂತೆ. ಅಲ್ಲೊಂದು ಮೇಕೆ ಮರಿ ಹುಲ್ಲು ತಿನ್ನುತ್ತಾ ನಿಂತಿತ್ತು. ಅದನ್ನು ಸವರುತ್ತಿದ್ದಾಗ ಎದುರಗಡೆ ಇದ್ದ ಗೋಟುವಾದ್ಯ ನಾರಾಯಣಯ್ಯಂಗಾರ್ ಚೌಡಯ್ಯನವರ ಕಾಲೆಳೆಯಲು ''ಏನಿದು ಚೌಡಯ್ಯನವರೇ ಹೊಸ ವಾದ್ಯದ ಮೇಲೆ ಪ್ರಯೋಗ ಮಾಡುತ್ತಿದ್ದಂತಿದೆ'' ಎಂದರು. ತಕ್ಷಣ ಚೌಡಯ್ಯನವರು ''ಇದೇ ಕಣಯ್ಯ ಗೋಟು (ಗೋಟ್) ವಾದ್ಯ'' ಎಂದು ಅವರ ಬಾಯಿಮುಚ್ಚಿಸಿದರಂತೆ.

ಸಂಗೀತದಿಂದ ಗಿಡಗಳು ಬೆಳೆಯುತ್ತವೆ ಎಂದು ಪ್ರತಿಪಾದಿಸುತ್ತಿದ್ದ ಚೌಡಯ್ಯನವರು ಒಮ್ಮೆ ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಎಸ್. ಕೃಷ್ಣಮೂರ್ತಿಯವರಿಗೆ ''ನೋಡು ಎರಡು ನಿಂಬೆ ಸಸಿ ನೆಟ್ಟಿದ್ದೇನೆ. ಒಂದು ಈ ಕಿಟಕಿಯ ಎದುರಿನಲ್ಲಿದೆ ಇನ್ನೊಂದು ಬಲತುದಿಯಲ್ಲಿದೆ. ನಾನು ಸಂಗೀತ ಅಭ್ಯಾಸ ಮಾಡುವಾಗ ಕಿಟಕಿ ತೆಗೆದಿರುತ್ತೇನೆ. ಕಿಟಕಿಯ ಎದುರಿನಲ್ಲಿರುವ ನಿಂಬೆ ಗಿಡ ಹೇಗೆ ಬೆಳೆದಿದೆ ನೋಡು ಒಳ್ಳೆ ರಸತುಂಬಿದ ಹಣ್ಣುಗಳು ಆದರೆ ಬಲತುದಿಯಲ್ಲಿರುವ ಸಸಿ ಹಾಗೆ ಬಾಡಿ ಹೋಗಿದೆ'' ಎಂದು ತಮ್ಮ ವಾದವನ್ನು ಸಮರ್ಥಿಸಿಕೊಂಡರಂತೆ. ಆಗ ಕಿಲಾಡಿ ಕೃಷ್ಣಮೂರ್ತಿಯವರು ಕೇಳಿದ ತುಂಟ ಪ್ರಶ್ನೆ. ''ನೀವು ಪಿಟೀಲು ನುಡಿಸುವಾಗ ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿತ್ತು?''

''ಕತ್ತೆ ಬಡವ, ನನ್ನ ಸಂಗೀತದ ಗಾಳಿ ಬೀಸಿ ಆ ಗಿಡ ಸುಟ್ಟು ಹೋಗಿದೆ ಎಂದು ನಿನ್ನ ಮಾತಿನ ಅರ್ಥವೆ?'' ಎಂದು ಬೆನ್ನಿನ ಮೇಲೆ ಮೃದುವಾಗಿ ಹೊಡೆದರಂತೆ.

ಸಂಗೀತಗಾರ ಎಂ.ಡಿ. ರಾಮನಾಥನ್ ಅವರದು ಅಸಾಧಾರಣ ವಿನೋದ ಪ್ರಜ್ಞೆ. ಅವರದು ವಂಡರ್‌ಕಣ್ಣು ಅರ್ಥಾತ್ ಮಾಲಗಣ್ಣು. ಅವರ ಬಗ್ಗೆ ಹೇಳಿಕೊಳ್ಳುತ್ತಾ ''ಒಂದು ವೇಳೆ ನಾನೇನಾದರು ಪರೀಕ್ಷೆಯ ಹಾಲ್‌ನಲ್ಲಿ ಇನ್‌ವಿಜಿಲೇಟರ್ ಆದರೆ ವಿದ್ಯಾರ್ಥಿಗಳಿಗೆ ತುಂಬ ಕಷ್ಟವಾಗುತ್ತೆ. ಅವರು ಕಾಪಿ ಹೊಡೆಯಲು ಸಾಹಸಪಡಬೇಕು. ನನ್ನ ದೃಷ್ಟಿ ಕಾಶಿವಿಶ್ವನಾಥನ್ ಮೇಲಿದೆ ಎಂದು ಮೋಸ ಹೋಗಿ ರಾಮೇಶ್ವರಂ ಸಿಕ್ಕಿ ಬೀಳುತ್ತಾನೆ ಕಾಪಿ ಹೊಡೆಯುವಾಗ...'' ಎಂದು ತಮ್ಮನ್ನು ತಾವೇ ಹಾಸ್ಯದ ವಸ್ತುವನ್ನಾಗಿ ಮಾಡಿಕೊಳ್ಳುತ್ತಿದ್ದರು.

ವಿದ್ವಾಂಸ ಅರಿಯಾಕುಡ್ಲೆ ರಾಮಾನುಜ ಅಯ್ಯಂಗಾರ್ ಹಿಂದೊಮ್ಮೆ 'ದರ್ಬಾರ್' ರಾಗ ಪ್ರಸ್ತಾಪ ಮಾಡುತ್ತಿದ್ದಾಗ 'ನಾಯಕಿ' ರಾಗ ಒಮ್ಮೆ ಮಧ್ಯೆ ಇಣುಕಿ ಹೋಯಿತು. ಅದನ್ನು ಗಮನಿಸಿದ ಒಬ್ಬ ಹಿರಿಯರು ಕಚೇರಿ ಮುಗಿದ ಮೇಲೆ ''ಎನ್ನ ಇದು 'ದರ್ಬಾರಲೆ' 'ನಾಯಕಿ' ಒಂದುಡ್ತು'' ಎಂದರಂತೆ. ಅದಕ್ಕೆ ಪ್ರತಿಕ್ರಿಯಿಸುತ್ತಾ ರಾಮಾನುಜ ಅಯ್ಯಂಗಾರ್ ''ದರ್ಬಾರಲೆ ನಾಯಕಿ ಇಲ್ಲಾದೆ ಎಪ್ಪಡಿ?'' ಎಂದು ನಕ್ಕರಂತೆ.

ನಟಿ:
ಏನ್ಸಾರ್ ಈ ಸಿನಿಮಾದಲ್ಲಿ ತುಟಿಗೆ ತುಟಿ ಬೆರೆಸೋ ಸೀನ್ ತುಂಬಾ ಇದೆ ಅಂತ ಹೇಳಿದ್ರಿ

ನಿರ್ದೇಶಕ:
ಇತ್ತಲ್ಲ ಮೇಡಂ, ನೀವು ಅಮ್ಮಾ ಅಮ್ಮಾ ಅಂತ ಒರಲಿ ಅಳ್ತಾ ಇರೋ ಸೀನಲ್ಲೆಲ್ಲ ನಿಮ್ಮ ತುಟಿಗಳು ಒಂದಕ್ಕೊಂದು ಬೆರೆತ್ಕೊಂಡಿದ್ವಲ್ಲ.

ಮಹಾರಾಜಪುರಂ ವಿಶ್ವನಾಥ ಅಯ್ಯರ್ ರವರ ಕಚೇರಿ ನಡೆಯುತ್ತಿತ್ತು. ಪಕ್ಕವಾದ್ಯ ನುಡಿಸುತ್ತಿದ್ದ ಪಿಟೀಲುವಾದಕ ತನಗೆ ಇಷ್ಟ ಬಂದಂತೆ ಎರ್ರಾಬಿರ್ರಿ ನುಡಿಸುತ್ತಿದ್ದನಂತೆ. ಅಯ್ಯರ್ ಅವರು ಉಪಾಯವಾಗಿ ಸಮಯ ಸಾಧಿಸಿ ಪೀಟಿಲುವಾದಕನ 'ಕಮಾನ್'ನ್ನು ತೆಗೆದು ಜಮಖಾನದ ಕೆಳಗೆ ತೂರಿಸಿಬಿಟ್ಟು ತಮ್ಮ ಕಚೇರಿಯನ್ನು ಮುಂದುವರಿಸಿಬಿಟ್ಟರಂತೆ. ಪಕ್ಕವಾದ್ಯ ಕಲಾವಿದ ಕಕ್ಕಾಬಿಕ್ಕಿ. ಕಡೆಯಲ್ಲಿ ಅವನ ಪಿಟೀಲಿನ ಕಮಾನನ್ನು ಅವನಿಗೆ ಕೊಟ್ಟು ಅವನ ಸಹಕಾರಕ್ಕಾಗಿ ವಿಶೇಷ ವಂದನೆ ಅರ್ಪಿಸಿದರಂತೆ.

ಒಬ್ಬ ಪ್ರಸಿದ್ಧ ಸಂಗೀತವಿದ್ವಾಂಸರಿಗೆ ಎರಡು ಸಂಸಾರವಿತ್ತೆಂಬ ವಿಷಯ ಒಂದು ಬಹಿರಂಗ ಗುಟ್ಟಾಗಿತ್ತು. ಆಹ್ವಾನ ಸ್ವೀಕರಿಸುವ ಮುನ್ನವೆ ಆ ವಿದ್ವಾಂಸರು ಸಂಘಟಿತರಿಗೆ ''ನೀವು ನನಗೆ ಕೊಡುವ ಸಂಭಾವನೆಯನ್ನು ಎರಡು ಸಮಭಾಗ ಮಾಡಿ ಎರಡು ಕವರ್‌ನಲ್ಲಿಟ್ಟು ಕೊಡಬೇಕು'' ಎಂದು ಹೇಳುತ್ತಿದ್ದರಂತೆ. ಕಚೇರಿ ಮುಗಿದು ಸನ್ಮಾನ ಸ್ವೀಕರಿಸುವಾಗ ಸಂಘಟಿತರಿಗೆ ತಮ್ಮ ಕೈನ ಎರಡು ಬೆರಳನ್ನು ತೋರಿಸುತ್ತಾ ''ಎರಡು ಕವರ್ ಇದೇ ತಾನೆ?'' ಎಂದು ಎಲ್ಲರೆದುರು ಖಚಿತ ಪಡಿಸಿಕೊಳ್ಳುತ್ತಾ ಎಲ್ಲರನ್ನು ನಗಿಸುತ್ತಿದ್ದರಂತೆ.

ಚಂಬೈ ವೈದ್ಯನಾಥ ಅಯ್ಯರ್‌ಗೆ ಪಕ್ಕವಾದ್ಯ ಮೃದಂಗ ನುಡಿಸುವ ಕಲಾವಿದ ಒಮ್ಮೆ ನಾಪತ್ತೆ. ಸಭೆಗೆ ಬಂದ ಒಬ್ಬ ಉದಯೋನ್ಮುಖ ಕಲಾವಿದನಿಗೆ ಅವಕಾಶಕೊಡಬೇಕೆಂದು ಕೇಳಿಕೊಂಡಾಗ ಅಯ್ಯರ್ ಒಪ್ಪುತ್ತಾರೆ. ಆ ಹುಡುಗನ ತಂದೆ ಸಂತೋಷದಿಂದ ಹಿಗ್ಗಿ ಹೀರೆಕಾಯಿಯಾದರು. ಆದರೆ ಅಷ್ಟಕ್ಕೆ ತೃಪ್ತರಾಗದೆ ಎದ್ದು ನಿಂತು ಚಂಬೈಯವರಿಗೆ ಒಂದು ಮನವಿ ಮಾಡಿದರು. ''ನಮ್ಮ ಹುಡುಗನಿಗೆ ತನಿ ನುಡಿಸಲು ಅವಕಾಶ ಕಲ್ಪಿಸಬೇಕು'' ಅದಕ್ಕೆ ಅಯ್ಯರ್ ಅವರು ''ತನಿಯಾ? ಇದುವರೆಕ್ಕುಂ ತನಿಯಾದಾನೇ ವಾಶಿತ್ತಾನ್?'' (ಇದುವರೆಗೂ ತನಿಯಾಗಿ ಅಂದರೆ ಅವನ ಮನಸ್ಸಿಗೆ ಬಂದಂತೆ ತಾನೆ ಅವನು ನುಡಿಸಿದ್ದು!) ಎಂದರಂತೆ.

ಒಮ್ಮೆ ಜೈಲಿನಲ್ಲಿ ಶಾಸ್ತ್ರೀಯ ಸಂಗೀತ ಕಚೇರಿ ಏರ್ಪಾಟಾಗಿತ್ತು. ಆದರಿಂದ ಖೈದಿಗಳಿಗೆ ಮನರಂಜನೆ ಸಿಕ್ಕಿರಬಹುದು. ಮನಪರಿವರ್ತನೆಯೂ ಆಗಿರಬಹುದೆಂದು ಜೈಲ್‌ರನ್ನು ಕೇಳಿದಾಗ ''ಅದೇನೊ ಗೊತ್ತಿಲ್ಲ. ಆದರೆ ನಮಗೆ ಉಪಯೋಗವಿದೆ. ಮೂರು ಖೈದಿಗಳು ಆ ಸಂಗೀತ ಕೇಳಲಾರದೆ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. 'ಏರೋಪ್ಲೇನ್'ಗೂ ಬಗ್ಗದವರು ಸಂಗೀತಕ್ಕೆ ಶರಣಾಗಿದ್ದಾರೆ!''

ಒಬ್ಬ ಕಿರುಕಲಾವಿದನನ್ನು ಒಂದು ಸಮಾರಂಭಕ್ಕೆ ಕಚೇರಿಯನ್ನು ಮಾಡಲು ಆಹ್ವಾನಿಸಲಾಯಿತು. ವೇದಿಕೆಯ ಮೇಲೆ ಒಂದು ಕಡೆ ಕುರ್ಚಿಯಲ್ಲಿ ಒಬ್ಬ ಹಿರಿಯರು ಕಪ್ಪುಕನ್ನಡಕ ಧರಿಸಿ ಕುಳಿತಿದ್ದರು. ಅವರೇ ಆ ಸಮಾರಂಭದ ಕೇಂದ್ರಬಿಂದು ಎಂದು ಹೇಳಬೇಕಾಗಿಲ್ಲ. ಅವರಿಗೆ ಇಷ್ಟವಾದ ರಾಗಗಳು, ಕೃತಿಗಳು ಹಾಡಬೇಕೆಂದು ಮನವಿ ಬಂತು. ತುಂಬು ಉತ್ಸಾಹದಿಂದ ಒಂದೂವರೆ ತಾಸು ಸಂಗೀತ ಕಚೇರಿ ನಡೆಯಿತು. ತದನಂತರ ಪುಷ್ಕಳ ಭೋಜನವಿತ್ತು. ಊಟ ಮಾಡುತ್ತಿರುವಾಗ ಸಂಗೀತ ಕಲಾವಿದ ಪಕ್ಕದಲ್ಲಿದ್ದ ಹಿರಿಯರನ್ನು ''ಸಾರ್ ಅಲ್ಲಿ ವೇದಿಕೆ ಮೇಲೆ ಕುಳಿತ ವ್ಯಕ್ತಿ ಸಂಗೀತ ಪ್ರಿಯರೆಂದು ಅವರಿಗಿಷ್ಟವಾದ ರಾಗಗಳನ್ನು ನನ್ನ ಕೈಲಿ (ಬಾಯಲ್ಲಿ) ಹಾಡಿಸಿದ್ದೇನೋ ಸಂತೋಷ ಆದರೆ ಆ ಹಿರಿಯರು ಒಮ್ಮೆಯೂ ತಲೆ ಅಲ್ಲಾಡಿಸಲಿಲ್ಲ. ಅವರಿಗೆ ನನ್ನ ಸಂಗೀತ ಇಷ್ಟವಾಯಿತೊ ಇಲ್ಲವೊ ತಿಳಿಯಲಿಲ್ಲ?'' ಎಂದು ಕೇಳಿದಾಗ

''ಅದು ಗೊತ್ತಾಗುವುದು ಹೇಗೆ?'' ಎಂಬುತ್ತರ ಆಶ್ಚರ್ಯ ತಂದಿತು. ಹಾಗಾದರೆ ಅವರಿಗೆ ಕಿವಿ ಕೇಳಿಸುವುದಿಲ್ಲವೆ?'' ಎಂದು ಕೇಳಿದಾಗ

''ಅಯ್ಯೋರಾಮ ಅವರು ಜೀವಂತವಾಗಿದ್ದರೆ ತಾನೇ ಅವರ ಅಭಿಪ್ರಾಯ ಕೇಳುವುದು...'' ಎಂದಾಗ ಬಾಯಲ್ಲಿದ್ದ ಚಿರೋಟಿ ಚೂರು ಹೊರಗೆ ಬಂತು!

ದೇವರುಗಳಿಗೆ ಬೆಳ್ಳಿ ಅಥವಾ ಚಿನ್ನದ ನಾಮ ಹಾಕಿರುತ್ತಾರೆ. ಕೈಲಾಸಂ ಒಮ್ಮೆ ಒಬ್ಬ ಪೂಜಾರಿ ಆ ಬೆಳ್ಳಿ ನಾಮವನ್ನು ಕದ್ದು ಹೆಂಡ ಕುಡಿಯುವಾಗ ''ನಿನ್ನ ನಾಮ ಎಂಥ ರುಚಿರಾ...'' ಎಂಬ ಕೃತಿಯನ್ನು ಹಾಡಿದ ವಿಷಯ ಹೇಳಿದ್ದರು.

ಸಂಗೀತ ಮತ್ತು ಹಾಸ್ಯಕ್ಕೆ ಹೋಲಿಕೆಯಿದ್ದರು ಒಂದು ಮುಖ್ಯವಾದ ವ್ಯತ್ಯಾಸವಿದೆ. ಸಂಗೀತದಲ್ಲಿ ನಮಗೆ ತಿಳಿದಿರುವ ರಾಗ, ಕೃತಿ ಹಾಡಿದಾಗ ಹೆಚ್ಚು ಹೆಚ್ಚು ಆನಂದ ಪಡುತ್ತೇವೆ. ''ಆಡಿಸಿದಳು ಯಶೋಧಾ'' – ಹಾಡನ್ನು ಎಷ್ಟು ಕೇಳಿದರೂ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಆದರೆ ಹಾಸ್ಯದಲ್ಲಿ? ಒಮ್ಮೆ ಕೇಳಿದ ಜೋಕನ್ನು ಎರಡನೆ ಬಾರಿ ಕೇಳಿಸಿಕೊಳ್ಳಲು ಇಷ್ಟಪಡುವುದಿಲ್ಲ. ಸಂಗೀತಗಾರರನ್ನು ಕಂಡರೆ ಹಾಸ್ಯಗಾರರಿಗೆ ಹೊಟ್ಟೆ ಉರಿ ಇರೋದು ಸಹಜ.

# ಛೀ.....ಕಳ್ಳಾ!

● ಕುಮುದಾ ಪುರುಷೋತ್ತಮ್

ಬಹಳ ದಿನಗಳ ಬಳಿಕ ಚಿಕ್ಕಪ್ಪ ಚಿಕ್ಕಮ್ಮನೊಡನೆ ನಮ್ಮೊಡನೆ ನಾಲ್ಕು ದಿನವಿದ್ದು ಹೋಗಲು ಬಂದಿದ್ದರು. ಮೊದಲಿನಿಂದಲೂ ಇಬ್ಬರಿಗೂ ನನ್ನಮೇಲೆ ಹೆಚ್ಚಿನ ಪ್ರೀತಿ ವಿಶ್ವಾಸ. ಚಿಕ್ಕಪ್ಪ ಸ್ವಭಾವತಃ ಬಲು ಸರಸಿ. ಅವರಿದ್ದೆಡೆ ಹಾಸ್ಯಚಟಾಕಿಗಳು, ನಗು ಇರಲೇಬೇಕು. ಅವರ ಸಹವಾಸದಲ್ಲಿ ನಾಲ್ಕುದಿನ ನಾಲ್ಕು ಕ್ಷಣವೆನಿಸಿತು.

ಐದನೆಯ ಬೆಳಿಗ್ಗೆ ತಮ್ಮ ಮನೆಗೆ ಹೊರಟು ನಿಂತರು. ತಾಂಬೂಲದೊಡನೆ ಉಡುಗೊರೆ ನೀಡಿ ಕಾಲಿಗೆ ನಮಸ್ಕರಿಸಿದ್ದಾಯಿತು. ಕಾಯುತ್ತಿದ್ದ ಆಟೋವಿಗೆ ಸಾಮಾನು ತುಂಬುವ ಮೊದಲು ನನ್ನ ಕರ್ತವ್ಯ ಮಾಡಿದೆ. ‘‘ಚಿಕ್ಕಮ್ಮ, ನಿಮ್ಮೆಲ್ಲಾ ಸಾಮಾನುಗಳೂ ಇಟ್ಕೊಂಡಿದ್ದೀರಾ ತಾನೇ?’’ ಹೀಗೆ ಕೇಳಲು ಕಾರಣವಿತ್ತು.

ನಾನು ಹೋದಲ್ಲೆಲ್ಲಾ ನನ್ನದೊಂದು ಸಾಮಾನನ್ನು ಮರೆತು ನೆನಪಿನ ಕಾಣಿಕೆಯಾಗಿ ಬಿಟ್ಟುಬರುವುದು. ಮನೆಯಲ್ಲಿ ತಮಾಷೆಯ ವಿಷಯವಾಗಿ ಎಲ್ಲರ ಗೇಲಿಗೆ ತುತ್ತಾಗುತ್ತಿದ್ದೆ. ‘‘ನೀನು ಹೇಳಿದ್ದು ಒಳ್ಳೇದಾಯ್ತು ಕಣೇ. ಮತ್ತೊಮ್ಮೆ ಹೋಗಿ ನೋಡ್ಕೊಂಡು ಬಂದು ಬಿಡ್ತೀನಿ’’ ಎಂದು ಒಳಹೊಕ್ಕು ಬಂದು ಆಟೋ ಏರಿದರು. ವಿದಾಯ ಹೇಳಿ ನನ್ನ ಎಂದಿನ ಕಾರ್ಯದಲ್ಲಿ ತೊಡಗಿದೆ.

ಸ್ನಾನಕ್ಕೆ ಹೋದ ಮನೆ ಯಜಮಾನರು ಬಾತ್‌ರೂಮಿನಿಂದಲೇ ಬೊಬ್ಬೆ ಹಾಕಿದರು. ‘‘ನನ್ನ ಸಾಮಾನುಗಳು ಮುಟ್ಟಬೇಡಿ ಅಂತ ಬಡ್ಕೊಂಡ್ರೂ ಕೋಣನ ಮುಂದೆ ಕಿಂದ್ರಿ ಬಾರಿಸಿದ್ಹಂಗೆ ಆಗಿದೆ. ಯಾವ ಸಾಮಾನೂ ಇಟ್ಟ ಜಾಗ್ದಲ್ಲಿ ಇರೋಲ್ಲ. ನೀನೂ ಇದ್ದೀ ಮನೇಲಿ ದಂಡಕ್ಕೆ. ಸ್ವಲ್ಪವೂ ಏನು ಎತ್ತ ಅಂತ ನೋಡೊಲ್ಲಾ.’’

‘‘ನನ್ಮೇಲ್ಯಾಕ್ರಿ ರೇಗ್ತೀರ? ನಾನೇನು ಮಾಡ್ದೆ?’’ ಬಾಗಿಲ ಹೊರಗಿನಿಂದ ನಾನೂ ಬೊಬ್ಬೆ ಹಾಕಿದೆ.

‘‘ಏನೂ ಮಾಡಿಲ್ಲ ಅಂತ್ಲೇ ಹೇಳಿದ್ದು. ಮಾಡಿದ್ದಿದ್ರೆ ಚೆನ್ನಾಗಿರೋದು. ನೀನು ನನ್ನ ಸಾಮಾನುಗಳ ಬಗ್ಗೆ ಕಾಳಜಿ ವಹಿಸಿದ್ರೆ ಈ ಪರಿಸ್ಥಿತಿ ಬರ್ತಾ ಇರ್ಲಿಲ್ಲ.’’

‘‘ಯಾವ ಸಾಮಾನು?’’

‘‘ನನ್ನ ಸೋಪು ಡಬ್ಬ ಇಲ್ಲಿಲ್ಲ. ನಾನು ಆ ಹರ್‌ಬಲ್ ಸಾಬೂನು ಬಿಟ್ಟು ಬೇರೆ ಉಪಯೋಗಿಸೋದಿಲ್ಲಾಂತ ನಿನಗೆ ಗೊತ್ತು. ಈಗಿಲ್ಲಿ ಕಾಣಸ್ತಿಲ್ಲಾ, ನೀನು ತೊಗೊಂಡ್ಯಾ?’’

‘‘ನಾನು ಬುದ್ಧಿ ತಿಳಿದಾಗ್ಲಿಂದ ಮೈಸೂರು ಸ್ಯಾಂಡಲ್ ಬಿಟ್ಟು ಬೇರೆ ಹಚ್ಚಿಲ್ಲ. ನಿಮ್ಮ ಆ ಗಬ್ಬುನಾಥದ ಸೋಪು ನಾನ್ಯಾಕೆ ಮುಟ್ಲಿ?’’

''ಲೋ ಗುಂಡ, ನೀ ತೊಗೊಂಡ್ಯೇನೋ?'' ತನ್ನ ಪಾಡಿಗೆ ರೂಮಿನಲ್ಲೇನೋ ಮಾಡುತ್ತಿದ್ದ ಪುತ್ರರತ್ನನಿಗೆ ಕೂಗು ಹಾಕಿದರು.

''ಒಂದು ಘಮವಿಲ್ಲ ಮೃದುತ್ವ ಇಲ್ಲ. ನಿನ್ನ ಹರ್ಬಲ್ ಸೋಪು ಯಾವ್ನೋನಿಗೆ ಬೇಕು?'' ಗುಂಡ ಅಲ್ಲಿಂದಲೇ ಘರ್ಜಿಸಿದ.

''ಇನ್ನು ನನ್ನ ಸರದಿ. ನನ್ನ ಮೇಲೆ ಆಪಾದನೆ ಹೊರಸ್ತೀಯಾಂತ ನಂಗೆ ಗೊತ್ತು. ನಾನು ನಿನ್ನ ಸೋಪು ಮುಟ್ಟಿಲ್ಲಾ.'' ಜಾಣೆ ವಿಶಾಲಿ ತಾನು ಕುಳಿತಲ್ಲಿಂದ ಕೂಗು ಹಾಕಿದಳು.

''ಮನೇಲಿರೋದು ನಾವಿಬ್ಬರು ನಮ್ಗೆಬ್ಬರು. ನಾವು ನಾಲ್ಕು ಜನರೂ ಇಲ್ಲಾಂತ ಆದ್ಮೇಲೆ ಇನ್ಯಾರು ತೊಗೋಳಿಕ್ಕೆ ಸಾಧ್ಯ?''

''ಅಪ್ಪಾ, ಯಾರೂಂತ ನನ್ಗೆ ಗೊತ್ತಾಯ್ತು. ಬಂದಿದ್ರಲ್ಲಾ ಅಮ್ಮನ ಚಿಕ್ಕಪ್ಪ ಚಿಕ್ಕಮ್ಮ. ಅವ್ರಲ್ಲೊಬ್ರು ಇಲ್ಲ ಇಬ್ರೂ ಸೇರಿ ಪ್ಲಾನ್ ಮಾಡಿ ಹೊಡ್ಕೊಂಡು ಹೋಗಿದ್ದಾರೆ.'' ಸೀನ ರೂಮಿನಿಂದ ಬರುತ್ತಾ ತನ್ನ ಚುರುಕು ಬುದ್ಧಿ ತೋರಿಸಿದ.

''ಹೌದು. ಸೀನ ಹೇಳೋದು ಸರಿ ಅನ್ಸತ್ತೆ. ಇನ್ಯಾರೂ ಬಂದೇ ಇಲ್ಲಾ. ಯಾವ ಹುತ್ತದಲ್ಲಿ ಯಾವ ಹಾವಿರತ್ತೋ ಏನೋ. ನಾವು ನಮ್ಮ ಹುಷಾರಿನಲ್ಲಿ ನಾವಿರ್ಬೇಕು.'' ಸದಾ ಕಾದಾಡುವ ಅಪ್ಪ ಮಗ ಇದೊಂದು ವಿಷಯದಲ್ಲಿ ಒಂದಾಗಿ ನನ್ನನ್ನು ಎದುರಿಸಿದರು.

''ಅವರ್ಯಾಕ್ರೀ ತೊಗೋತಾರೆ? ಅವ್ರಿಗೇನು ಕಮ್ಮಿಯಾಗಿದೆ? ಇಂತಹ ನೂರು ಸೋಪು ತೊಗೊಂಡು ನಿಮ್ಮ ಮುಖದ್ಮೇಲೆ ಬಿಸಾಕ್ತಾರೆ'' ವೀರಾವೇಶದಿಂದ ಹೇಳಿದೆ.

''ಅವ್ರಿಗೆ ಕಡಿಮೆಯಾಗಿದೆ ಅಂತ ತೊಗೊಳ್ಳಲ್ಲಮ್ಮ. ಕೆಲವರಿಗೆ ಅದೊಂದು ಖಾಯಿಲೆ. ಹೋಗಿ ಬಂದಲ್ಲೆಲ್ಲಾ ತಮ್ಮ ಉಪಯೋಗಕ್ಕೆ ಬರ್ಲಿಬಿಡ್ಲಿ ಕಂಡದ್ದೆಲ್ಲಾ ತಮ್ಮ ಚೀಲಕ್ಕೆ ಸೇರಸ್ಕೋತಾರೆ. ಅವ್ರಿಗೆ ಅದೊಂದು ಚಟ. ಅದಕ್ಕೆ ಚಿಕಿತ್ಸೆ ಇದೆ.'' ವಿಶಾಲಿ ತನ್ನ ಜ್ಞಾನ ಭಂಡಾರದಿಂದ ಮುತ್ತೊಂದನ್ನು ಹೆಕ್ಕಿ ತೆಗೆದು ಹರಿಯಬಿಟ್ಟಳು!

ನನಗೂ ರೋಷ ಉಕ್ಕಿತು. ತಕ್ಷಣ ಚಿಕ್ಕಪ್ಪನಿಗೆ ಫೋನ್ಮಾಡಿ ಅವರಲ್ಲವೆಂದು ಸಾಬೀತು ಪಡಿಸಲು ಮುಂದಾದೆ. ಆದರೆ ನಡೆದದ್ದೇ ಬೇರೆ.

''ಹಲೋ ಚಿಕ್ಕಮ್ಮಾ. ಇನ್ನೇನಿಲ್ಲ..... ನಮ್ಮ ಬಚ್ಚಲು ಮನೇಲಿ ನಿಮ್ಮಳಿಯನ ಹರ್ಬಲ್ ಸೋಪು ಕಾಣ್ತಿಲ್ಲಾ. .....ಮತ್ತೇ ....ಮತ್ತೇ ಅವ್ರು ಅದಿಲ್ದೆ ಸ್ನಾನ್ವೇ ಮಾಡೊಲ್ಲ. ಅಂಗ್ಡೀಲಿ ಬೇರೆಸ್ಟಾಕ್ ಇಲ್ಲ ಅಂದ್ರಂತೆ. ತಪ್ಪು ತಿಳೀಬೇಡಿ. ಅದೇನಾದ್ರೂ ನಿಮ್ಮ ಸಾಮಾನಿನ ಜೊತೆ ಸೇರಿದ್ಯಾ?''

''ಇಲ್ಲಕಣೇ. ನಿಮ್ದು ಯಾವ್ದೂ ನಾವು ತಂದಿಲ್ಲ. ನಾವು ಹೊರಡುವಾಗ ನೀನು ಜ್ಞಾಪಿಸಿದ್ದು ಒಳ್ಳೇದಾಯ್ತು. ಬಾತ್ರೂಮಿನಲ್ಲಿ ಹೋಗಿ ನೋಡ್ತೀನಿ. ನನ್ನ ಹಸಿರು ಸೋಪಿನ ಡಬ್ಬಿ ಅಲ್ಲೇ ಇದೆ! ಎತ್ತಿ ಚೀಲಕ್ಕೆ ಹಾಕ್ಕೊಂಡೆ.''

''ಚಿಕ್ಕಮ್ಮಾ, ನಿಮ್ಮಳಿಯಂದೂ ಹಸಿರು ಡಬ್ಬಿಯಲ್ಲಿದ್ದ ಸೋಪೇ. ಒಂದ್ಸಲ ಚೀಲ್ದಲ್ಲಿದ್ಯಾ ಅಂತ ನೋಡ್ತೀರಾ?'' ಉಗುಳು ನುಂಗುತ್ತಾ ಕೇಳಿದೆ. ಎರಡೇ ನಿಮಿಷ. ಚಿಕ್ಕಪ್ಪ

ಲೈನಿನಲ್ಲಿದ್ದರು. ''ಅವ್ಳ ಚೀಲದಲ್ಲಿ ಎರಡು ಒಂದೇ ಥರ ಇರೋ ಡಬ್ಬಿ ಇದ್ಯಂತೆ. ಒಂದರಲ್ಲಿ ಗಬ್ಬುನಾಥದ ಸೋಪು ಇದ್ಯಂತೆ. ಅದು ನಿಮ್ದೇ ಇರ್ಬೇಕು. ತನ್ನದು ಅಂತ ತಂದ್ಬಿಟ್ಟಿದ್ದಾಳೆ. ಇನ್ನುಮೇಲೆ ನಾವು ಬಂದಾಗ ಹೊರಡೋಕ್ಕೆ ಮುಂಚೆ ಒಮ್ಮೆ ನಮ್ಮ ಸಾಮಾನೆಲ್ಲಾ ಸೆಕ್ಯೂರಿಟಿ ಚೆಕ್ ಮಾಡ್ಬಿಡಮ್ಮಾ'' ಎಂದು ನಡೆದದ್ದಕ್ಕೆ ನಗೆ ಲೇಪನ ಮಾಡಿದರು ಸರಸಿ ಚಿಕ್ಕಪ್ಪ.

★★★

ಮಾವಯ್ಯಂದು ಮತ್ತೊಂದು ಪರಿ. ಹೋದಲ್ಲೆಲ್ಲಾ ಏನಾದರೂ ಮರೆತು ಬಂದು ಅತ್ತೆಯಿಂದ ಉಗಿಸಿಕೊಳ್ಳುತ್ತಿದ್ದರು. ಪಾಪ. ಕೈ ಹಿಡಿದವಳಾದರೂ ಎಷ್ಟೊಂತ ಉಗಿಸಿಕೊಂಡಾರು? ಒಂದು ಅಮೃತ ಘಳಿಗೆಯಲ್ಲಿ ಇನ್ನು ಮುಂದೆ ಯಾವುದನ್ನೂ ಕಳೆದು ಬರೊಲ್ಲಾ ಎಂದು ಮನಸಿನಲ್ಲೇ ಪ್ರಮಾಣ ಮಾಡಿಕೊಂಡರು.

ಒಮ್ಮೆ ರಾಯರ ಮಠದಲ್ಲಿ ಪ್ರವಚನ ಕೇಳಲು ಹೋದವರು ಸುರಿಯುವ ಮಳೆಯಲ್ಲಿ ಛತ್ರಿ ಹಿಡಿದು ಸ್ವಲ್ಪವೂ ನೆನೆಯದೆ ಮನೆಗೆ ಬಂದರು. ಛತ್ರಿ ಮಡಿಸಿ ಮೂಲೆಯಲ್ಲಿಟ್ಟು ಹೆಮ್ಮೆ ಇಂದ ಅತ್ತೆಗೆ ಹೇಳಿದರು.

''ಮರೆತು ಬಂದರೆ ಬೈತೀ. ಮರೀದೇ ಬಂದ್ರೆ ಹೋಗಳೋದೇ ಇಲ್ಲಾ. ಇವತ್ತು ಮರೀದೇ ಛತ್ರಿ ತಂದಿದ್ದೀನಿ. ಗಮನಿಸಿದೆಯಾ?''

''ಛತ್ರೀನಾ? ನೀವು ಇಂದು ತೊಗೊಂಡೇ ಹೋಗಿರ್ಲಿಲ್ಲಾ. ಇದ್ಯಾರ್ದು?'' ಕೇಳುತ್ತಾ ಗೂಟದತ್ತ ಬೆರಳು ತೋರಿದರು. ಅಲ್ಲಿ ಮಾವಯ್ಯನ ಛತ್ರಿ ಬೆಚ್ಚಗೆ ನೇತಾಡುತ್ತಿತ್ತು!

''ಹಾಗಾದ್ರೆ ನಾ ತಂದದ್ದು ಯಾರ್ದು?''

''ನಂಗೇನ್ಗೊತ್ತು? ಯಾರ್ದೋ ಕದ್ದು ತಂದಿದ್ದೀರ.''

''ಹಾಗೆಲ್ಲಾ ಹೇಳ್ಬೇಡ. ನಾನೆಲ್ಲಾದ್ರೂ ಕಳ್ತನ ಮಾಡ್ತೀನಾ? ಈಗ್ಲೇ ಹೋಗಿ ಯಾರ್ದೂಂತ ಕೇಳಿ ಕೊಟ್ಟು ಬರ್ತೀನಿ.''

''ಹಾಗೆಲ್ಲಾದ್ರೂ ಮಾಡಿಗೀಡೀರಿ. ಅವ್ರು ಎಂಥಾವ್ರೋ ಏನೋ. ನಾಕು ಮಂದೀನ ಸೇರ್ಸಿ ನಾಕು ಬಿಗಿದ್ರೆ ಏನು ಮಾಡ್ತೀರಿ? ಏನು ಬೇಡ.'' ಸುಮ್ನೆ ಇದ್ಬಿಡಿ ಎಂದರು ಅತ್ತೆ.

ಕಥೆ ಅಲ್ಲಿಗೇ ಮುಗಿಯಲಿಲ್ಲ, ಮಾವಯ್ಯ ಹೀಗೆಯೇ ಮರೆತು ತನ್ನದೆಂದು ತಂದ ಚಪ್ಪಲಿ, ಪೆನ್ನುಗಳು, ಚೀಲಗಳು, ಬಾಚಣಿಗೆ, ಕನ್ನಡಕ ಇತ್ಯಾದಿಗಳನ್ನು ಅತ್ತೆ ಜೋಪಾನವಾಗಿ ಪ್ರತ್ಯೇಕ ಅಲಮಾರಿಯಲ್ಲಿಟ್ಟು (ಥೇಟ್ ಪೋಲೀಸ್ ಸ್ಟೇಷನಲ್ಲಿ ಕಳ್ಳಮಾಲಿಡುವಂತೆ) ಮಾವಯ್ಯನ ಮಾನ ಕಾಪಾಡುತ್ತಿದ್ದಾರೆ!

★★★

ಮೇಷ್ಟ್ರು ಮೊಪೆಡ್ ಏರಿ ಬಂದು ಮನೆ ಮುಂದೆ ನಿಲ್ಲಿಸಿದರು. ಬಾಗಿಲ ಬಳಿ ಕುಳಿತು ಅಕ್ಕಿ ಆರಿಸುತ್ತಿದ್ದ ಸಾವಿತ್ರಕ್ಕ ಕಿಸಕ್ಕನೆ ನಕ್ಕರು.

''ನಮ್ಮ ಗುರು ಹೇಳಿದ್ದು ಸರಿ.''

‘‘ಏನು ಹೇಳ್ದ ನಿನ್ನ ಕುಮಾರ ಕಂಠೀರವ?’’

‘‘ಅಣ್ಣ ಮೊಪೆಡ್ನಲ್ಲಿ ಬರೋ ಬದ್ಲು ನಡಕೊಂಡು ಬಂದ್ರೆ ಬೇಗ ಮನೆ ಸೇರ್ತಾರೆ ಅಂದ.’’

‘‘ಅವನ್ಗೇನು ಹೇಳೋಕ್ಕೆ. ಬಿಸಿ ರಕ್ತ ಹೇಳ್ತಾನೆ. ನಾನು ಜೋರಾಗಿ ಓಡ್ಸಿ ಏನಾದ್ರು ಹೆಚ್ಚು ಕಮ್ಮಿ ಆದ್ರೆ? ಮೊದ್ಲೇ ಹಳೇ ಗಾಡಿ. ಹುಶಾರಾಗಿರ್ಬೇಕು.’’

ಸೈಕಲ್ ತುಳಿಯುತ್ತಲೇ ಅರ್ಧ ಆಯಸ್ಸು ಕಳೆದಿದ್ದ ಮೇಷ್ಟ್ರು ಸಾಲಸೋಲ ಮಾಡಿ ಸೆಕೆಂಡ್ ಹ್ಯಾಂಡ್ ಗಾಡಿ ಖರೀದಿಸಿದ್ದರು. ಓಡಿಸಿದರೆ ನಲುಗಿ ಹೋಗುತ್ತದೇನೋ ಎಂಬಂತೆ ನಡೆಸಿಕೊಂಡೇ ಹೋಗಿ ಬಂದು ಮಾಡುತ್ತಾ ಕೇರಿಯವರ ಹಾಸ್ಯದ ವಸ್ತುವಾಗಿದ್ದರು. ಆಟವಾಡಿಬಂದ ಗುರು ತಂದೆಯನ್ನು ಕೇಳಿದ್ದ.

‘‘ಅಣ್ಣಾ, ಇನ್ನೊಂದು ಗಾಡಿ ತೊಗೊಂಡ್ಯಾ?’’

‘‘ಇದರ ಸಾಲ ತೀರಿದ್ರೆ ಸಾಕು ಅಂತಿರೋವಾಗ ಇನ್ನೊಂದು ಗಾಡಿ ಯಾರಾದ್ರು ತೊಗೋತಾರೇನೋ ಪೆದ್ದ ಭಡವಾ?’’

‘‘ಮತ್ತೆ ಬೇರೆ ಗಾಡಿ ತಂದಿದ್ದೀ?’’

‘‘ಬೇರೆ ಅಲ್ಲಾ. ಅದು ನಂದೇ. ಸರಿಯಾಗಿ ನೋಡು.’’

‘‘ನೋಡಿಯೇ ಹೇಳಿದ್ದು. ನಮ್ಮ ಗಾಡಿ ನಂಬರ್ರು 4466. ಇದ್ರ ನಂಬರ್ರು 6644.’’ ಹೋಗಿ ನೋಡಿದ ಮೇಷ್ಟ್ರು ಗಾಬರಿಯಾದ್ರು. ‘‘ಹೌದು ಕಣೋ. ಇದು ನನ್ನ ಗಾಡಿನೇ ಅಲ್ಲಾ. ಆದ್ರೆ ನನ್ನ ಕೀಯಲ್ಲಿ ಅದ್ಹೇಗೆ ಓಪನ್ ಆಯ್ತು?’’

‘‘ಅಣ್ಣ, ನಿಂಗೆ ಗೊತ್ತಿಲ್ವಾ? ಒಂದು ಮೊಪೆಡ್ ಕೀಯಲ್ಲಿ ಇನ್ನೊಂದನ್ನು ಓಪನ್ ಮಾಡಬಹುದಂತೆ. ನನ್ನ ಫ್ರೆಂಡು ಹೇಳ್ತಿದ್ದ. ಅವನ ಅಪ್ಪ ಸ್ಕೂಟರ್ ಮೆಕ್ಯಾನಿಕ್ಕು. ಅವ್ನಿಗೆಲ್ಲಾ ಗೊತ್ತು.’’

‘‘ಅಯ್ಯೋ ದೇವ್ರೆ, ಈಗೇನು ಮಾಡೋದು?’’ ದಿಕ್ಕು ತೋಚದ ಮೇಷ್ಟ್ರು ತಲೆ ಮೇಲೆ ಕೈ ಹೊತ್ತು ಕುಳಿತರು. ಸಾವಿತ್ರಕ್ಕ ಚುರುಕಾದರು.

‘‘ನೀವೆಲ್ಲೆಲ್ಲಿ ಹೋಗಿದ್ರಿ ಜ್ಞಾಪಿಸಿಕೊಳ್ಳಿ.’’

‘‘ಶಾಲೆಯಿಂದ ಹೊರಟು ಬ್ಯಾಂಕಿಗೆ ಹೋಗಿ ಸಂಬಳದ ಚೆಕ್ ಖಾತೆಗೆ ಕಟ್ಟಿ ಸೀದಾ ಮನೆಗೆ ಬಂದೆ.’’

‘‘ಅಣ್ಣಾ, ಹಾಗಾದ್ರೆ ನೀನು ಬ್ಯಾಂಕಿನಲ್ಲಿ ನಿನ್ನ ಗಾಡಿ ಬಿಟ್ಟು ಇನ್ಯಾರದ್ದೋ ಲಪಟಾಯಿಸಿಕೊಂಡು ಬಂದಿದ್ದೀ.’’ ವಾಕ್ಯ ಮುಗಿಸುವ ಮುನ್ನ ಬೆನ್ನಮೇಲೆ ಬಿತ್ತೊಂದು ಗುದ್ದು ಸಾವಿತ್ರಕ್ಕನಿಂದ.

‘‘ದೇವ್ರಂತ ತಂದೇನ ಲಪಟಾಯಿಸಿದ್ದಾರೆ ಅಂತೀಯೇನೋ? ಮತ್ತೊಬ್ಬರ ವಸ್ತು ಲಪಟಾಯಿಸೊ ಅಷ್ಟು ಧೈರ್ಯವಾದ್ರೂ ಅವರಿಗೆಲ್ಲಿದೆ? ಪಾಪ ಸಾಧು ಪ್ರಾಣಿ.’’

‘‘ಹೌದೌದು, ಅಣ್ಣ ಈಗ ಮಾಡಿರೋದು ಕಳ್ಳತನ ಅಲ್ವಾ? ಈ ಗಾಡಿಯನ್ನ ಬ್ಯಾಂಕಿಗೆ ತೊಗೊಂಡು ಹೋಗ್ಲಿ ಗೊತ್ತಾಗತ್ತೆ. ಇದ್ರ ಮಾಲೀಕ ಪೋಲೀಸಿಗೆ ದೂರು ಕೊಟ್ಟೇ ಇರ್ತಾನೆ.

ಅಲ್ಲಿ ಜನರ ಚಲನವಲನದ ಮೇಲೆ ಕಣ್ಣು ಇಟ್ಟಿರ್ತಾರೆ. ಅಣ್ಣ ಗಾಡಿಜೊತೆ ಅವರ ಕಣ್ಣೆಗೇನಾರಾ ಬಿದ್ರೆ ಮೊದ್ಲು ನಾಲ್ಕು ತದುಕಿ ಆಮೇಲೆ ಏನು ಎತ್ತ ಅಂತ ವಿಚಾರಿಸ್ತಾರೆ.''

ತದುಕುವ ದೃಶ್ಯ ಊಹಿಸಿಕೊಂಡೇ ಮೇಷ್ಟ್ರು ಬೆವರಿದರು. ಅಪ್ಪನ ಸ್ಥಿತಿ ಕಂಡ ಮಗರಾಯ ತಾನು ಸಾರಥ್ಯ ವಹಿಸಿಕೊಂಡ.

''ಅಪ್ಪಾ, ಯೋಚಿಸಬೇಡ. ನಾನಿದ್ದೀನಿ. ಸರಿಯಾಗಿ ರಾತ್ರಿ ಹನ್ನೆರಡು ಗಂಟೆಗೆ ಬ್ಯಾಂಕಿನ ಹತ್ರ ಹೋಗೋಣ. ಆಗ ಯಾರೂ ಇರೋಲ್ಲ. ಈ ಗಾಡೀನ ಅಲ್ಲಿ ಬಿಟ್ಟು ನಮ್ದು ತರೋಣ.''

''ಹೌದು ಕಣ್ರೀ. ನಮ್ಮ ಗುರೂಗೆ ನಿಮ್ಗಿಂತ ವ್ಯವಹಾರ ಜ್ಞಾನ ಹೆಚ್ಚು. ಅವನು ಹೇಳಿದಂತೆ ಮಾಡಿ.'' ಸಾವಿತ್ರಕ್ಕ ಶಿಫಾರಸ್ಸು ಮಾಡಿದರು.

ರಾತ್ರಿ ಹನ್ನೆರಡಕ್ಕೆ ತಂದೆ ಮಗನ ಮೆರವಣಿಗೆ ಹೊರಟಿತು. ಅವರ ದುರದೃಷ್ಟಕ್ಕೆ ಅಂದೇ ಪೋಲೀಸರಿಂದ ನಕಾಬಂದಿ. ಪೋಲೀಸಪ್ಪ ಕೈತೋರಿ ನಿಲ್ಲಿಸಿದ. ಮೇಷ್ಟ್ರನ್ನು ಗುರ್ತಿಸಿ ಹಲ್ಲು ಕಿರಿದ. ''ನಾನ್ಸಾರ್ ಭೋಜಣ್ಣ. ನಿಮ್ಮ ಕೈನಲ್ಲಿ ಏಟು ತಿಂದು ಮುಂದೆ ಬಂದೋನು, ಕಳ್ಳಕಾಕರು ಓಡಾಡೋ ಟೇಮ್ನಾಗೆ ನೀವೇನೂ ಇತ್ಕಡೆ ಸವಾರೀ? ದರೋಡೆ ಮಾಡೋಕಲ್ಲಾ ತಾನೇ?'' ಜೋಕ್ ಹೊಡೆದ. ಪಾಪ ಮೇಷ್ಟ್ರು ಪೂರಾ ನಡುಗಿಹೋದರು. ಇವನ್ಯಾಕೆ ತನ್ನನ್ನು ಕಳ್ಳಕಾಕರ ಜೊತೆ ಸೇರಿಸಿ ಮಾತಾಡುತ್ತಿದ್ದಾನೆ! ತಾನು ಗಾಡಿ ಕದ್ದು ತಂದದ್ದು ಗೊತ್ತಾಗಿದೆಯಾ? ಬಾಯ್ಕಟ್ಟಿದಂತಾಗಿ ಶ್ರಮಪಟ್ಟು ಬಾಯಿಬಿಟ್ಟರೆ ಬಂದದ್ದು ಬರೀ ಬ್ಬೆಬ್ಬೆಬ್ಬೆ. ಗುರು ಆಪದ್ಬಾಂದವನಂತೆ ಮುನ್ನುಗ್ಗಿ ಬಾಯಿಬಿಟ್ಟ. ''ಅಂಕಲ್, ನಂಗೆ ವಿಪ್ರೀತ ಹೊಟ್ಟೆನೋವು ಅಂತ ಅಣ್ಣ ಆಸ್ಪತ್ರೆಗೆ ಕರ್ಕೊಂಡು ಹೋಗ್ತಿದ್ದಾರೆ.''

ಅವನಿಂದ ಬಿಡುಗಡೆ ಹೊಂದಿ ಬ್ಯಾಂಕ್ ತಲುಪಿದರು. ಕಾವಲಿರಬೇಕಾದವ ಮುಸುಕುಬೀರಿ ಗೊರಕೆ ಹೊಡೆಯದೆ ಹೊದಿಕೆ ಸರಿಸಿ ಕೂಗು ಹಾಕಿದ. ''ಯಾರ್ರೀ, ಈಗ ಬ್ಯಾಂಕು ಮುಚ್ಚಿದೆ ಅಂತ ಗೊತ್ತಿಲ್ವಾ? ನಾಳೆ ಬನ್ನಿ.'' ಮತ್ತೆ ಗುರುವಿನ ಪ್ರವೇಶವಾಯಿತು. ''ವಾಚ್ಮ್ಯಾನ್ ಅಂಕಲ್, ನಂಗೆ ಹೊಟ್ಟೆ ನೋವು ಆಸ್ಪತ್ರೆಗೆ ಹೊರ್ಟಿದ್ದೇವೆ. ಬಾತ್ರೂಮಿಗೆ ಹೋಗ್ಬೇಕು. ಅರ್ಜೆಂಟ್. ಜೊತೇಗೆ ಬರ್ತಿರಾ? ಕತ್ಲು.''

ಪಾಪ ಚಿಕ್ಕ ಹುಡುಗ. ಅವನೂ ಅಷ್ಟೇ ವಯಸ್ಸಿನ ಹುಡುಗನ ತಂದೆ. ವಾಚ್ಮ್ಯಾನ್ ಗುರು ಜೊತೆ ಹಿಂಭಾಗಕ್ಕೆ ಹೋದ. ಮೇಷ್ಟ್ರು ಗಾಡಿ ಬದಲಾಯಿಸಿಕೊಂಡರು. ತಂದೆ ಮಗ ಮನೆ ದಾರಿ ಹಿಡಿದರು.

ಈಗಲೂ ಒಮ್ಮೊಮ್ಮೆ ಮೇಷ್ಟ್ರು ಪೋಲೀಸಪ್ಪ ಹಿಂಬಾಲಿಸಿ ಬಂದು ಕೈಗೆ ಕೋಳ ತೊಡಿಸಿದಂತೆ ಸ್ವಪ್ನ ಕಂಡು ಬೆಚ್ಚಿ ಮೇಲೆದ್ದು ಬಿಡುವುದಿದೆ.

★★★

ಮೇಲಿನ ಮೂರೂ ಪ್ರಸಂಗಗಳಲ್ಲಿ ಕಳ್ಳತನವಾಗಿದ್ದರೂ ಮಾಡಿದವರ್ಯಾರೂ ಕಳ್ಳರಲ್ಲ. ಅವರನ್ನು ಒಮ್ಮೆ ''ಛೀ.....ಕಳ್ಳಾ'' ಎಂದು ಒಮ್ಮೆ ಅಣಕಿಸಿ ಸುಮ್ಮನಿದ್ದುಬಿಟ್ಟರೆ ಹೇಗೆ?

# ಒಬ್ಬ ಕನಾ ಕಥೆ

● ಎಂ.ಕೆ. ಭಾಸ್ಕರ ರಾವ್

ಅದೆಲ್ಲ ಆ ಕಾಲದ ಮಾತು ಎಂದರೆ ಶತಮಾನಗಳ ಹಿಂದೆ ಎಂದರ್ಥವಲ್ಲ. ಶತಮಾನದ ಹಿಂದೆ ಎನ್ನುವುದು ಮಾತ್ರ ಖರೇ ಖರೇ ಸತ್ಯ. ಹಾಲಿ ಪೀಳಿಗೆಯ ಬಹುತೇಕರು ಹಿಂದಿನ ಶತಮಾನ ಕಂಡವರು. ಅಂಥವರಲ್ಲಿ ನಮ್ಮ ಕಥಾನಾಯಕನೂ (ಕನಾ) ಒಬ್ಬ.

ಇಳಿ ವಯಸ್ಸಿನಲ್ಲಿರುವ ಯಾರಿಗೇ ಆದರೂ ಉಕ್ಕುವ ಯೌವನದ ದಿನಗಳಲ್ಲಿ ಕಂಡ ಕಂಡ ಹುಡುಗಿಯರಲ್ಲಿ ತನ್ನಷ್ಟಕ್ಕೇ ಅನುರಕ್ತನಾಗಿ ಬಿಡುವ ಚಪಲ. ಆ ಕಾರಣಕ್ಕೋ ಏನೋ, ಚಪಲ ಚೆನ್ನಿಗರಾಯ (ಚಚೆ) ಪದಗುಚ್ಛ ಹುಟ್ಟಿಕೊಂಡಿದ್ದು. ಅವನೂ ಆ ಕಾಲದಲ್ಲಿ ಚಚೆ ಆಗಿದ್ದ. ರೈಲಿನಲ್ಲಿ ಸಂಚರಿಸುವಾಗ, ಬಸ್‌ನಲ್ಲಿ ಪ್ರಯಾಣಿಸುವಾಗ; ಪಾಯಿಂಟ್ ಟು ಪಾಯಿಂಟ್ ಪ್ರಯಾಣಿಕರನ್ನು ಎರಡು ರೂಪಾಯಿಗೆ ಹತ್ತಿಳಿಸುತ್ತಿದ್ದ ಆಟೋದಲ್ಲಿ ಕುಳಿತಾಗ ಯಾರಾದರೂ ಸುಂದರಿ ಪಕ್ಕದಲ್ಲಿ ಬಂದು ಕೂರಬಾರದೇ ಮೈಕೈ ತಗುಲಿಸಬಾರದೇ ಎಂಬಂಥ ಕನಸುಗಳನ್ನೇ ಕಾಣುತ್ತಿದ್ದ. ತಪ್ಪೇನಿದೆ ಅಲ್ಲವಾ? ಪಕ್ಕದಲ್ಲಿ ಪುರುಷ ಪ್ರಯಾಣಿಕರು ಬಂದು ಕುಳಿತರೆ ಮಾತ್ರ ಒಳಗೊಳಗೇ ಸಿಡುಕುತ್ತಿದ್ದ. ಅಪ್ಪಿ ತಪ್ಪಿ ಅಜ್ಜಿ ಬಂದು ಕುಳಿತರೆ ದೇವರಿಗೇ ಹಿಡಿ ಹಿಡಿ ಶಾಪ ಹಾಕುತ್ತಿದ್ದ. ನಖ ಶಿಖಾಂತ ನಿಗಿನಿಗಿ ಉರಿಯುತ್ತಿದ್ದ.

**'ಯಾರೋ ಬಂದು ಮೇಡಂ ಬಂದರು' ಎಂದರು. ಎಲ್ಲರೂ ಬಾಗಿಲತ್ತ ನೋಡಿದರು ಇವನೂ. ಹಾಗೆ ನೋಡಿದವನೇ ಕುಡಿಯಲು ನೀರು ಬೇಕು ಎಂದು ಕೈಸನ್ನೆ ಮಾಡಿದ. ಏಕೆ?**

ಇಂಥವರಿಗೂ ಒಂದಲ್ಲ ಒಂದು ಬಾರಿ ಅದೃಷ್ಟ ಒಲಿಯುತ್ತದೆ ಅಥವಾ ಅದೃಷ್ಟ ಒದ್ದು ಬರುತ್ತದೆ ಎನ್ನುತ್ತಾರಲ್ಲ ಹಾಗಾಯಿತು. ರಾತ್ರಿ ಬಸ್‌ನಲ್ಲಿ ಶಿವಮೊಗ್ಗಕ್ಕೆ ಆತ ಹೊರಟಿದ್ದ. ಟೂ ಪ್ಲಸ್ ಟೂ ಸೀಟಿನ ಬಸ್ ಜಮಾನಾ ಆಗಷ್ಟೇ ಆರಂಭವಾಗಿತ್ತು. ಅವನ ಪಕ್ಕದ ಸೀಟು ಕಾಲಿ. ಇಡೀ ಬಸ್‌ನಲ್ಲಿ ಅದೊಂದೇ ಕಾಲಿ ಸೀಟು. ಕೊನೆಯ ಬಸ್ಸು ಬೇರೆ. ಕನಸು ಕಾಣಲು ಅಷ್ಟು ಸಾಕು. ಈತ ಮನಸ್ಸಿನಲ್ಲಿ ಮಂಡಿಗೆ ಮೆಲ್ಲಲು ಶುರುಹಚ್ಚಿಕೊಂಡ. ಮನದಾಸೆ ಈಡೇರಿದರೆ ಕಾಯಿ ಒಡೆಸುವುದಾಗಿ ಹರಕೆ ಕೂಡಾ ಹೊತ್ತಿರಲು ಸಾಕು. ತನ್ನ ರೂಪಕ್ಕೆ, ಯೌವನಕ್ಕೆ, ವಯಸ್ಸಿಗೆ, ಒಡಲಾಳದ ಆಸೆಗೆ ಅನುರೂಪದ, ಸಮಾನ ಮನಸ್ಕ ಸುಂದರಿಯನ್ನೇ ಕಳಿಸು ದೇವರೇ ಎಂದು ವರಾತ ಹಿಡಿದ. ಬೀಚಿಯವರ ಮಾನಸ ಪುತ್ರ ತಿಮ್ಮನಿಗೆ ದೇವರು ವರ ಕೊಡಲು ಆಗದಿದ್ದರೇನಂತೆ ಇವನಿಗೆ ಕೊಟ್ಟ.

ಇನ್ನೇನು ಬಸ್ಸು ಹೊರಡಬೇಕು, ಓಡೋಡುತ್ತ ಆ ರಭಸದಲ್ಲಿ ಮಾಂಸಲ ಕುಲುಕುತ್ತ ಬಂದ ಏರು ಜವ್ವನದ ತರುಣಿ ಬಸ್ ಏರುವ ಯತ್ನ ಮಾಡುತ್ತಲೇ ಸೀಟು ಇದೆಯಾ ಎಂದು

ಕಂಡಕ್ಟರನಲ್ಲಿ ಕೇಳಿದರು. ಬಸ್ ಡರ್ ಡರ್ ಎನ್ನುತ್ತ ಹೌದು ಅಲ್ಲ ಎಂಬಂತೆ ಚಲಿಸಲಾರಂಭವಾಗಿತ್ತು. ಒಂದೇ ಸೀಟಿದೆ ಅಡ್ಜಸ್ಟ್ ಮಾಡಿಕೊಳ್ಳುವುದಾದರೆ ಬನ್ನಿ ಎಂದ ಆತ. ಅಡ್ಜಸ್ಟ್ ಎಂಬ ಶಬ್ದ ಇವನ ಪಾಲಿಗೆ ಕರ್ಣ ರಸಾಯನ. ಹೆಣ್ಣುಗ್ಗಳಿಗಾಗಿ ಕರಗುವ ಇವನ ಹೃದಯ ಸುಮ್ಮನೆ ಕೂತು ನೋಡಗೊಡಲಿಲ್ಲ. ಡ್ರೈವರ್ ಹಿಂದಿನ ಸೀಟಿನಲ್ಲೇ ಇದ್ದ ಆತ ಧಿಗ್ಗನೆ ಎದ್ದು ಭಾರದ ಆ ಎರಡೂ ಚೀಲ ಎತ್ತಿಕೊಂಡು ಲಗ್ಗೇಜ್ ಜಾಗದಲ್ಲಿಟ್ಟು ಥ್ಯಾಂಕ್ಸ್ ಎಂಬ ಶಬ್ದಕ್ಕೆ ಕಾದ.

ಅಂಥದ್ದೇನೂ ಪ್ರತಿಕ್ರಿಯೆ ಬರಲಿಲ್ಲ, ಬೇಸರಗೊಂಡ. ಆಕೆಗೋ ಟಿಕೆಟ್ ತೆಗೆದುಕೊಳ್ಳುವ ಧಾವಂತ. ಬಸ್ಸು ಅತ್ತ ಇತ್ತ ವಾಲುತ್ತ ಹೊರಟಿತ್ತು. ತಾನೂ ಅತ್ತ ಇತ್ತ ವಾಲುತ್ತ ಸಮತೋಲನ ಕಾಯ್ದುಕೊಳ್ಳುತ್ತ ಪರ್ಸ್‌ನಿಂದ ಹಣ ತೆಗೆದು ಟಿಕೆಟ್ ಜೊತೆಗೆ ಚಿಲ್ಲರೆ ಪಡೆದು ಸೀಟು ಎಲ್ಲಿ ಎಂದು ವಿಚಾರಿಸಿಕೊಂಡು ಇವನ ಪಕ್ಕ ಕುಳಿತು ಸೆರಗಿನಿಂದ ಗಾಳಿ ಹಾಕಿಕೊಳ್ಳುತ್ತ ಇನ್ನೊಂದು ಸ್ವಲ್ಪ ಗಾಜನ್ನು ಸರಸ್ತೀರಾ ಪ್ಲೀಸ್ ಎಂದಾಗ ಇವನ ಕೈಗೆ ಸ್ವರ್ಗವೇ ತುಂಡರಿಸಿ ಬಿದ್ದಷ್ಟು ಆನಂದ. ಥ್ಯಾಂಕ್ಸ್ ಕೂಡಾ ಹೇಳದ ಈಯಮ್ಮ ಇಷ್ಟಾದರೂ ಬಾಯಿ ಬಿಟ್ಟಿತಲ್ಲ ಎಂದು ಜನ್ಮ ಸಾರ್ಥಕ ಭಾವದಲ್ಲಿ ಗಾಜು ಸರಿಸಿದ.

ಜೋರು ಗಾಳಿಗೆ ಅವಳ ಸೀರೆ ಸೆರಗು ಬಿರಿಬಿರಿ ಹಾರಾಡುತ್ತಿತ್ತು. ವಾರೆ ನೋಟ ಬೀರಿದ. ಎಷ್ಟು ಸಾಧ್ಯವೋ ಅಷ್ಟೂ ಕಣ್ಣು ಪಾಪೆಗಳೆರಡನ್ನೂ ನೋವಾದರೂ ಸಹಿಸಿಕೊಂಡು ಎಡ ಮೂಲೆಗೆ ತಳ್ಳಿದ. ಮುಖ ಮೈಮಾಟ ಮೋಹಾಗಿದೆ ಎನ್ನಿಸಿತು. ದೇವರು ಇಷ್ಟೆಲ್ಲಾ ಬೇಗ ವರ ಕೊಡುವಷ್ಟು ಉದಾರಿಯಾದನಲ್ಲ ಎಂದು ಖುಷಿಯಾದ. ಬಸ್ಸು ಹೊರಟು ಹತ್ತೇ ನಿಮಿಷ; ಇನ್ನೂ ಮಲ್ಲೇಶ್ವರ ದಾಟಿತ್ತೋ ಇಲ್ಲವೋ. ವಿಂಡೋ ಸೀಟಿನಲ್ಲಿ ನಾನು ಕೂರಲಾ; ಸೆಖೆ ತಡೆಯೋಕೆ ಆಗ್ತಾ ಇಲ್ಲ ಎಂದು ಮೆಲ್ಲಗೆ ಆಪ್ತ ಸ್ವರದಲ್ಲಿ ಆಕೆ ಕೇಳಿದಾಗ ತನ್ನ ಋಣದಲ್ಲಿ ಬಿದ್ದಳೆಂದು ಭಾವಿಸಿದ.

ಈ ಕೋರಿಕೆಗೇ ಕಾಯುತ್ತಿದ್ದವನಂತೆ ಕೂತಿದ್ದ ಕನಾ, ಬನ್ನಿಬನ್ನಿ ಕೂರಿಕೂರಿ.... ಅಷ್ಟೂ ಮಾಡದಿದ್ದರೆ ಮನುಷ್ಯರಾಗಿದ್ದೇನು ಸಾರ್ಥಕ ಹೇಳಿ ಅಲ್ವ, ಇಷ್ಟಕ್ಕೂ ಯಾವ ಸೀಟಿನಲ್ಲಿ ಕೂತರೇನು, ಹೋಗಬೇಕಾದ ಸ್ಥಳ ಸೇರೋದು ಮುಖ್ಯ ಅಲ್ವಾ... ಹಲ್ಲು ಕಿರಿದ. ಅದನ್ನೊಂದು ಮನುಷ್ಯತ್ವ ಅಂತಾರಾ... ಎನ್ನುತ್ತ ಉತ್ಸಾಹದ ಔದಾರ್ಯ ತೋರಿದ. ಆಕೆ ಕೂತಿದ್ದ ಸೀಟಿನತ್ತ ಜಾರಿದ. ಆಕೆ ಮಾತ್ರ ತುಟಿ ಬಿಚ್ಚಲಿಲ್ಲ; ಹರಶಿವ ಎನ್ನಲಿಲ್ಲ, ತನ್ನ ಕಾಲುಗಳನ್ನು ಸವರಿಕೊಂಡು ವಿಂಡೋ ಸೀಟಿಗೆ ಆಕೆ ಹೋದಾಗ ಸೀರೆಯ ಸ್ಪರ್ಶ ಸುಖದಲ್ಲಿ ವಿಲಿವಿಲಿ ಒದ್ದಾಡಿದ. ಕಾಲು ಕಾಲು ಸೋಂಕಿದ ಸಂಭ್ರಮದಲ್ಲಿ ತೇಲಾಡಿದ. ಕೂತವಳೇ ತುಂಬ ಉಪಕಾರವಾಯ್ತು ಥ್ಯಾಂಕ್ಸ್ ಎಂದಾಗ ಇನ್ನು ಮುಂದಿನ ಮಾತುಕತೆಗೆ ಅಡ್ಡಿ ಇಲ್ಲ ಎಂದು ಸ್ವಯಂ ಭರವಸೆ ತಳೆದ. ಕಳೆದ ಬಾರಿಯ ಪ್ರಯಾಣದಲ್ಲಿ ವಾಂತಿ ಬರುತ್ತದೆ ಎಂದು ಗೋಗರೆದ ಸಹ ಪ್ರಯಾಣಿಕರಿಗೆ ವಿಂಡೋ ಸೀಟು ಬಿಟ್ಟುಕೊಡಲು ನಿರಾಕರಿಸಿದ ಕೊನೆಯ ಸಾಲಿನ ಸೀಟಿಗೆ ಹೋಗಿ ಎಂದು ಜಬರ್ದಸ್ತು ಮಾಡಿದ ತನ್ನ ನಡವಳಿಕೆ ಮನದೊಳಗೇ

ವ್ಯಂಗ್ಯವಾಡಿದರೂ ಮನುಷ್ಯನಾದವನಿಗೆ ತನ್ನದೇ ಆದ ಆಯ್ಕೆ ಇರುತ್ತದೆ ಎಂದು ಒಳಗೇ ವಾದ ಮಂಡಿಸಿದ.

ಗಾಜನ್ನು ಪೂರ್ತಾ ತೆಗೆದು ಭರಭರ ಗಾಳಿಗೆ ಮೈಯೊಡ್ಡಿದ ಆಕೆ ಯಶವಂತಪುರ ದಾಟುವ ವೇಳೆಗೆಲ್ಲ ತೂಕಡಿಕೆ ಶುರು ಮಾಡಿದ್ದಳು. ಇವನಿಗೋ ನಿದ್ರೆ ಹಾಗಿರಲಿ; ಅದರ ಸುಳಿವೂ ಇರಲಿಲ್ಲ. ಚಂಡಮಾರುತಕ್ಕೆ ಸಿಕ್ಕಿದ ತರಗೆಲೆಯಂತೆ ಅದು ಹಾರಿ ಹೋಗಿತ್ತು. ಬೆಳಗ್ಗೆ ಶಿವಮೊಗ್ಗದಲ್ಲಿ ಸಾಕಷ್ಟು ಕೆಲಸವಿದೆ; ಬಸ್‌ನಲ್ಲೇ ನಿದ್ರೆ ಮಾಡುತ್ತೇನೆಂದು ಅಮ್ಮನಿಗೆ ಹೇಳಿ ಬಂದಿದ್ದವನಿಗೆ ನಿದ್ರೆ ಬರುವುದೂ ಬೇಡವಾಗಿತ್ತು. ತುಮಕೂರು ಇನ್ನೂ ಅಷ್ಟು ದೂರ ಇದೆ ಎನ್ನುವಾಗಲೇ ಗಾಢ ನಿದ್ರೆಗೆ ಆಕೆ ಜಾರಿದ್ದಳು. ಅವಳು ಈಗ ತನ್ನ ಮೈ ಮೇಲೆ ಬೀಳಬಹುದು; ವಾಲಬಹುದು ಎಂಬ ಆಸೆಯಲ್ಲಿ ಪದೇ ಪದೇ ರೋಮಾಂಚನಗೊಂಡ. ನಿದ್ರೆಗೆ ಜಾರಿದವಳು ಸಾಮಾನ್ಯವಾಗಿ ಪಕ್ಕ ಕುಳಿತವರ ಭುಜದ ಮೇಲೆ ತಲೆ ಹೇರುವುದು ಸಾಮಾನ್ಯ, ಇವಳೂ ಹಾಗೆ ಮಾಡಬಹುದು ಎಂದು ಕಾದೇ ಕಾದ. ಊಹೂಂ ಆಕೆ ಮಾತ್ರ ಮಿಸುಕಲಿಲ್ಲ.

> **ಮ್ಯಾಚ್ ಫಿಕ್ಸ್**
>
> ಏನಾದ್ರೂ ಮಾಡಿ ಈ ಮ್ಯಾಚ್ ಗೆಲ್ಲಬೇಕು ಹೋಗಿ ಹೊಸಾ ಬಾಲ್ ತಗೊಂಬಾ ಅಂತ ಐನೂರು ರೂಪಾಯಿ ಕೊಟ್ಟು ಸುಬ್ಬುನ ಕಳಿಸಿದರೆ ಅವನು ಹೊಸ ಬಾಲ್ ತರಲೇ ಇಲ್ಲ. ಯಾಕೋ ಅಂತ ಕೇಳಿದರೆ ಮ್ಯಾಚ್ ಗೆಲ್ಲೋಕೆ ಹೊಸಾ ಬಾಲ್ ಏನೂ ಬೇಡ, ಐನೂರು ರೂಪಾಯ್ನ ನಾನು ಅಂಪೈರ್‌ಗೆ ಕೊಟ್ಟಿದೀನಿ ಅಂದ.

ಆಗೊಮ್ಮೆ ಈಗೊಮ್ಮೆ ಹೊಂಡ ತಗ್ಗು ದಿಣ್ಣೆ ಎಂದು ಬಸ್ಸು ಕುಲುಕಿದರೂ; ಜೋರಾಗಿ ಬ್ರೇಕ್ ಹಾಕಿದರೂ ಈಯಮ್ಮ ಮಾತ್ರ ಕುಲುಕಾಡದೆ ಅಕ್ಕಿ ಮೂಟೆಯಂತೆ ಕೂತಿದ್ದು ಇವನಿಗೆ ಬೇಸರ ತಂದಿತು. ಬಸ್ಸು ಎಡಕ್ಕೆ ವಾಲಿ ಈಕೆ ತನ್ನ ಮೈಮೇಲೆ ಬೀಳುವಂತಾಗಬಾರದೇ ಎಂದು ಬೇಡಿಕೊಂಡ. ಒಂದೆರಡು ತಾಸಿನ ಹಿಂದಷ್ಟೇ ಕೃಪೆ ತೋರಿದ ದೇವರು ಇಷ್ಟು ಬೇಗ ಕೈಕೊಟ್ಟನೇ ಎಂದು ಕೈಕೈ ಹಿಸುಕಿಕೊಂಡ. ಯೋಚಿಸಿ ಯೋಚಿಸಿ ಮಂಡೆ ಬಿಸಿ ಹೆಚ್ಚಿತೇ ಹೊರತೂ ಪ್ರಯೋಜನವಾಗಲಿಲ್ಲ.

ನಿದ್ರೆ ಬಂದವನಂತೆ ತಾನೇ ಏಕೆ ನಟಿಸಿ ಆಕೆಯತ್ತ ವಾಲಬಾರದು.... ತಲೆಯನ್ನು ಆಕೆಯ ಭುಜದ ಮೇಲೇಕೆ ಊರಬಾರದು....? ಯೋಚನೆ ಹೊಳೆದಿದ್ದೇ ತಡಾ ಯುರೇಕಾ ಎಂದು ಬೀಗಿದ. ಹೌದು ನಿದ್ರೆ ಎನ್ನುವುದು ನಿಸರ್ಗ ಕ್ರಿಯೆ. ಯಾರೂ ಆ ಸ್ಥಿತಿಯಲ್ಲಿ ಹದ್ದು ಮೀರೋಲ್ಲ, ಮೈಕೈ ತಾಗಿಸಿದರೆ ಅದು ನಿದ್ರಾವಸ್ಥೆಯ ಒಂದು ಕ್ರಮ ಎಂಬ ಸಮರ್ಥನೆಗೆ ತನ್ನಿಂತಾನೇ ಜಾರಿದ. ನಿದ್ರೆ ನಾಟಕಕ್ಕೆ ಮುಂದಾದ.

ಬಸ್ ತುಂಬಾ ಕತ್ತಲು. ಆದರೂ ನಿದ್ರೆ ಎಂದರೆ ಕಣ್ಮುಚ್ಚಬೇಕಲ್ಲ. ಕಣ್ಮುಚ್ಚಿದ ಮರು ದಿವಸದ ಕೆಲಸ ನೆನಪಾಯಿತು. ಹೌದು, ಮಣಿಪಾಲದಿಂದ ಮೇಡಂ ಇಂದೇ ಬಂದಿರುತ್ತಾರೆ. ಬೆಳಗ್ಗೆ ಹತ್ತಕ್ಕೆಲ್ಲ ಸಭೆ ಕರೆದಿದ್ದಾರೆ, ಬೆಳಗ್ಗೆ ಮತ್ತೊಮ್ಮೆ ಫೈಲುಗಳ ಮೇಲೆ ಕಣ್ಣಾಡಿಸಿ ಏನೇ ಕೇಳಿದರೂ ಉತ್ತರಕ್ಕೆ ತಡಕಾಡದಂತೆ ಸಜ್ಜಾಗಿರಬೇಕೆಂದುಕೊಂಡ. ಇವಳಂತೂ ಮೈಮೇಲೆ

ಬೀಳುವವಳಲ್ಲ, ತಾನು ಬೀಳುವುದೂ ಸರಿ ಹೋಗಲಿಕ್ಕಿಲ್ಲ ಎಂದು ಸಿಗದ ದ್ರಾಕ್ಷಿ ಹುಳಿ ಗಾದೆ ನೆನಪಿಸಿಕೊಂಡ. ಅದ್ಯಾವಾಗ ನಿದ್ರೆ ಹತ್ತಿತೋ ಅವನಿಗೂ ಗೊತ್ತಾಗಲಿಲ್ಲ.

ಭದ್ರಾವತಿ ಎಂದು ಕಂಡಕ್ಟರ್ ಕೂಗಿದಾಗ ಇವನೂ ಎಚ್ಚರಗೊಂಡ. ಆಕೆ ಅಷ್ಟು ಹೊತ್ತಿಗೆಲ್ಲ ಸೆರಗು ಸರಿಪಡಿಸಿಕೊಂಡು ಕೂದಲು ನೇವರಿಸಿಕೊಂಡು ಇಳಿಯಲು ಸಿದ್ಧವಾಗಿದ್ದಳು. ಬಸ್ ನಿಲ್ದಾಣದಲ್ಲಿ ನಿಂತಾಕ್ಷಣವೇ ಮತ್ತದೇ ರಿವರ್ಸ್ ಸ್ಥಿತಿಯಲ್ಲಿ ಕಾಲು ಸವರಿಕೊಂಡು, ಸೀರೆಯಿಂದ ಹೊಸೆಯುತ್ತ ಇವನನ್ನು ದಾಟಿದಳು. ಒಂಚೂರು ಹೆಲ್ಪ್ ಮಾಡ್ತೀರಾ, ಬ್ಯಾಗ್ ಇಳಿಸಿಕೊಡುತ್ತೀರಾ ಎಂದು ಉತ್ತರಕ್ಕೆ ಕಾಯದೆ ಬಗಿಲಿನತ್ತ ಸಾಗಿದಳು.

ಈತ ಸಾಕು ಪ್ರಾಣಿಯಂತೆ ಆಕೆ ಹೇಳದಂತೇ ಮಾಡಿದ. ಬ್ಯಾಗುಗಳೆರಡನ್ನೂ ಕೆಳಕ್ಕೆ ನಿಂತಿದ್ದ ಆಕೆಯ ಕೈಗೆ ಒಪ್ಪಿಸಿದ. ಮುಖಭಾವದಲ್ಲಿ ಏನೂ ವ್ಯತ್ಯಾಸ ತೋರದ ಆಕೆ ಥ್ಯಾಂಕ್ಸ್ ಎಂಬ ಶಬ್ದ ಉದುರಿಸಿ ಆಟೋದತ್ತ ಸಾಗಿದಳು. ಈತ ಮತ್ತೆ ಕುಳಿತ. ಇನ್ನು ನಿದ್ರೆಗೆ ಸಮಯವೂ ಇರಲಿಲ್ಲ. ಆಕೆ ಯಾರಾಗಿರಬಹುದು ಎಂಬ ಯೋಚನೆ ಕ್ಷಣ ಬಂದು ಹೋಯಿತು. ಅತ್ತ ಶಿವಮೊಗ್ಗ ಬಂತು.

ಹತ್ತಕ್ಕೆ ಸರಿಯಾಗಿ ಜ್ಯೂಯೆಲ್ಸ್ ಗಾರ್ಡನ್ ಹೋಟೆಲಿನ ಕಾನ್ಫರೆನ್ಸ್ ಹಾಲ್‌ನಲ್ಲಿ ತೂರಿಕೊಂಡ. ಇವನಂತೆ ಅನೇಕ ಜನ ಫೀಲ್ಡ್ ಆಫೀಸರುಗಳು ಬಂದಿದ್ದರು. ಮಾತು ಕಥೆ ಉಭಯ ಕುಶಲೋಪರಿ, ಕೇಸರೀ ಬಾತು ಉಪ್ಪಿಟ್ಟು, ಯಾರೋ ಬಂದು ಮೇಡಂ ಬಂದರು ಎಂದರು. ಎಲ್ಲರೂ ಬಾಗಿಲತ್ತ ನೋಡಿದರು ಇವನೂ. ಹಾಗೆ ನೋಡಿದವನೇ ಪಕ್ಕದ ಕುರ್ಚಿಯನ್ನು ಹಿಡಿದು ಸಾವರಿಸಿಕೊಂಡು ಕುಳಿತ. ಏನಾಯಿತು ಎಂದು ಗೆಳೆಯರು ಕೇಳಿದಾಗ ಕುಡಿಯಲು ನೀರು ಬೇಕು ಎಂದು ಕೈಸನ್ನೆ ಮಾಡಿದ.

---

## ಹೇಗಿರಬೇಕು?

ಒಂದು ವಿವಾಹಿಕ ಕೇಂದ್ರಕ್ಕೆ ಒಬ್ಬ ಭೇಟಿ ನೀಡಿ ತನಗೊಂದು ಹುಡುಗಿ ಬೇಕಾಗಿದೆ ಎಂದ.

'ಎಂತಹ ಹುಡುಗಿ ಬೇಕು?'

'ಲಕ್ಷಣವಾಗಿರಬೇಕು, ಹಾಸ್ಯಪ್ರಜ್ಞೆ ಇರಬೇಕು, ಜ್ಞಾನವಂತೆ ಆಗಿರಬೇಕು, ಹಾಡು ನೃತ್ಯ ಬರಬೇಕು, ನಾನು ಮನೆಯಲ್ಲಿರುವಾಗ ನನ್ನ ಜತೆಗೇ ಇರಬೇಕು, ನನಗೆ ಬೇಕಾದಾಗ ಒಳ್ಳೆಯ ಕತೆ ಹೇಳಬೇಕು, ನಾನು ವಿಶ್ರಾಂತಿ ಪಡೆಯುವ ಸಮಯದಲ್ಲಿ ಸದ್ದಿಲ್ಲದೆ ಇರಬೇಕು...'

'ಗೊತ್ತಾಯಿತು ಬಿಡಿ ನಿಮಗೆ ಬೇಕಾಗಿರುವುದು ಒಂದು ಟೀವಿ.'

## ಟ್ರೀಟ್...!


ಕೆಜೆಪಿ ಗೋಡೌನ್‌ನಲ್ಲಿ ಇದ್ದ ಕಾಯಿಯೆಲ್ಲಾ ಖಾಲಿ ಆಯ್ತು!
ನೀವು ವಾಪಸ್ ಬರ್ತಿರೋದಕ್ಕೆ ಕೊಟ್ಟಿರೋ ಈ 'ಟ್ರೀಟ್' ತುಂಬಾ ಚೆನ್ನಾಗಿದೆ... ಸರ್...
ಕಾಯಿ ಹೋಳಿಗೆ
ಕೊಬ್ರಿ ಮಿಠಾಯಿ
ಕಾಯಿ ಪಾಕ
ಕಾಯಿ ಕಡುಬು
ಕಾಯಿ ಪಾಯಸ
ಕಾಯಿ ಚಟ್ನಿ

## ಲೋಕಪಾಲ್...


ಸುದ್ದಿ
ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಲೋಕಪಾಲ್ ಬಿಲ್ ಪಾಸ್
ಲೋಕಸಭೆಯಲ್ಲಿ ಬಿಲ್ ಪಾಸ್ ಆಯ್ತು...ಅದು 'ಲೋಕಪಾಲ್'... ಅಲ್ವೇನಪ್ಪಾ?
ಹೌದು ವೆರಿ ಗುಡ್...
!?
ಸುದ್ದಿ
ಹಾಗಿದ್ರೆ ರಾಜ್ಯಸಭೆಯಲ್ಲಿ ಬಿಲ್ ಪಾಸ್ ಆದ್ರೆ ಅದು 'ರಾಜ್ಯಪಾಲ್' ಆಗ್ಬೇಕಲ್ವಾ?